ಅಧ್ಯಾಯ 1ರ 70ನೇ ಶ್ಲೋಕದಲ್ಲಿ ಇದೇ ರೀತಿಯ ಉಲ್ಲೇಖವಿದೆ. ಈ ಪುಸ್ತಕದ ಪ್ರಕಾಶನದ ನಂತರ ಬಿ.ಬಿ. ದತ್ತ ಮತ್ತು ಎ.ಎನ್. ಸಿಂಗ್‌ರವರು ಜೈನ ಗಣಿತ ಶಾಲೆಗೆ ಇನ್ನೊಂದು ಚಾಲನ ಶಕ್ತಿಯನ್ನು ನೀಡಿದರು ಮತ್ತು ಕಪಾಡಿಯಾರವರೂ ಸಹ ಈ ಸಾಹಸಕ್ಕೆ ಸೇರ್ಪಡೆಯಾದರು. ಬಿ.ಬಿ.ದತ್ತಾರವರ ದಿ ಜೈನಾ ಸ್ಕೂಲ್ ಆಫ್ ಮ್ಯಾಥಮ್ಯಾಟಿಕ್ಸ್, ಬಿ.ಸಿ.ಎಂ.ಎಸ್ 21, 115-145, 1949 ಮತ್ತು ಮ್ಯಾಥಮ್ಯಾಟಿಕ್ಸ್ ಆಫ್ ನೇಮಿಚಂದ್ರ, ಜೈನಾ ಆಂಟಿಕ್ವೆರಿ, 1, 2 25-44, 1935 ಹಾಗೂ ಎಚ್.ಆರ್. ಕಪಾಡಿಯಾರವರು, ಶ್ರೀಪತಿಯವರ ಗಣಿತ ತಿಲಕಕ್ಕೆ (ಬಿ. ಐ. ಸಂಪುಟ 1, 1937) ಬರೆದಿರುವ ಮುನ್ನುಡಿಯನ್ನು ನೋಡಿ. ಧವಲ ಮತ್ತು ಯತಿವೃಷಭಾಚಾರ್ಯರ ತಿಲೋಯಪಣ್ಣತ್ತಿಗಳ ಸಾರಾಂಶವಾಗಿರುವ ನೇಮಿಚಂದ್ರರ ಗೊಮ್ಮಟಸಾರ ಹಾಗೂ ತ್ರಿಲೋಕಸಾರಗಳ ಗಣಿತದ ಬಗ್ಗೆ ಕೆಲವು ಲೇಖನಗಳನ್ನು ದತ್ತರವರು ಪ್ರಕಟಿಸಿದ್ದಾರೆ. ಆದರೆ ಗೊಮ್ಮಟಸಾರದ ಕರ್ಣಾಟಕ ವೃತ್ತಿ ಮತ್ತು ಲಬ್ಧಿಸಾರದ ದೂಂಢಾರೀ ಟೀಕೆಗಳಲ್ಲಿ ಇದಕ್ಕೂ ಹೆಚ್ಚಿನ ಮಾಹಿತಿಗಳಿವೆ ಎಂದು ಪತ್ತೆಹಚ್ಚಲಾಗಿದೆ. ಇಷ್ಟಲ್ಲದೆ ಧವಲಕೃತಿಯಲ್ಲಿರುವ ಗಣಿತವನ್ನು ಎ.ಎನ್. ಸಿಂಗ್‌ರವರು ಸಮೀಕ್ಷೆ ಮಾಡಿದ್ದಾರೆ. (ಮ್ಯಾಥಮ್ಯಾಟಿಕ್ಸ್ ಆಫ್ ಧವಲ-1, ಧವಲ ಟೆಕ್ಟ್ಸ್, ಸಂಪುಟ 4, ಅಮರಸ್ತಿ, V, XXI, 1942 ಹಾಗೂ ಹಿಸ್ಟರಿ ಆಫ್ ಮ್ಯಾಥಮ್ಯಾಟಿಕ್ಸ್ ಇನ್ ಇಂಡಿಯಾ ಫ್ರಂ ಜೈನಾ ಸೋರ್ಸಸ್, ಜೈನಾ ಆಂಟಿಕ್ವೆರಿ, 16-2, 55-69, 1950) ದತ್ತ, ಸಿಂಗ್, ಕಪಾಡಿಯಾ, ಸರಸ್ವತಿ, ಜೈನ್, ಜಾ, ಗುಪ್ತ ಮತ್ತಿತರರಿಂದ ಜೈನ ಗಣಿತಶಾಲೆಯಲ್ಲಿ ಈ ರೀತಿ ಕೆಲಸವು ಮುಂದುವರೆಯುತ್ತಾ ಬಂದಿತು. ಭಾರತದ ಹೊರಗಿನವರಾದ ಅಲೆಕ್ಸಾಂಡರ್ ವೊಲೊರ್ಡೊಸ್ಕಿ, ತಕಾವೊ ಹಯಾಷಿ ಮತ್ತು ಯೊಕಿಯೊ ಚಾಷಿರವರು ಈ ಶಾಲೆಯನ್ನು ಉಲ್ಲೇಖಿಸಿ ಕೆಲವು ಲೇಖನಗಳನ್ನು ಬರೆದಿದ್ದಾರೆ. ಕೆಲವು INSA ಪ್ರಾಜೆಕ್ಟ್‌ಗಳೂ ಸಹ (1984-88) ಈ ದಿಸೆಯಲ್ಲಿವೆ.

ಈ ದಿಗಂಬರ ಜೈನ ಗಣಿತಶಾಲೆಯ ಸೇರ್ಪಡೆಗೆ ಕಾರಣವೇನೆಂದರೆ-ಆಚಾರ್ಯ ಭದ್ರಬಾಹು (ಕ್ರಿ.ಶ. 4ನೇ ಶತಮಾನ) ರವರು ಮೌರ್ಯ ಚಕ್ರವರ್ತಿ ಚಂದ್ರಗುಪ್ತರಿಗೆ ದಿಗಂಬರ ದೀಕ್ಷೆಯನ್ನು ನೀಡಿದ ನಂತರ ತಮ್ಮ 12,000 ಶಿಷ್ಯರೊಂದಿಗೆ ಉಜ್ಜಯಿನಿಯಿಂದ ದಕ್ಷಿಣ ಭಾರತಕ್ಕೆ ಹೊರಟಿದ್ದು ಮತ್ತು ಕರ್ನಾಟಕದ ಶ್ರವಣಬೆಳಗೊಳದಲ್ಲಿರುವ ಚಂದ್ರಗಿರಿಯಲ್ಲಿ ಈ ಮೌರ್ಯ ಚಕ್ರವರ್ತಿಯೊಂದಿಗೆ 12 ವರ್ಷಗಳ ಕಾಲ ಪ್ರತ್ಯೇಕವಾಗಿದ್ದುದು. ರಾಯ್ಚೂರವರ ಭದ್ರಬಾಹು ಕಥಾದಲ್ಲಿ ಮತ್ತು ಇದರ ನಂತರ ಅಥವಾ ಹಿಂದಿನ ಕರ್ನಾಟಕದ ಶಾಸನಗಳಲ್ಲಿ ಇದು ಖಚಿತವಾಗಿದೆ (ಎಪಿಗ್ರಾಫಿಕಾ ಕರ್ನಾಟಕಾ, ಶ್ರವಣಬೆಳಗೊಳ, ಕನ್ನಡ ಅಧ್ಯಯನ ಸಂಸ್ಥೆ,



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



ಮೈಸೂರು 1973 ಹಾಗೂ ಪಿ.ಬಿ.ದೇಸಾಯಿಯವರ ಜೈನಿಸಮ್ ಇನ್ ಸೌತ್ ಇಂಡಿಯಾ ಅಂಡ್ ಸಮ್ ಜೈನಾ ಎಪಿಗ್ರಾಫ್ಸ್, ಷೋಲಾಪುರ, 1957 ನೋಡಿ). ಭದ್ರಬಾಹುವಿಗೆ 14 ಪೂರ್ವಗಳ ಹಾಗೂ ಮೌರ್ಯ ಚಕ್ರವರ್ತಿಗೆ (ಈಗ ಪ್ರಭಾಚಂದ್ರ) 10 ಪೂರ್ವಗಳ ಪರಿಚಯವಿದ್ದಿತು. ಕರ್ಮಸಿದ್ಧಾಂತವು ಎರಡನೆಯ ಮತ್ತು ಐದನೆಯ ಪೂರ್ವಗಳಲ್ಲಿದೆ. ಇದಕ್ಕೆ ಘನಾಕ್ಷರೀ ಮತ್ತು ಹೀನಾಕ್ಷರೀಗಳ ತಿಳುವಳಿಕೆಯ ಅವಶ್ಯಕತೆ ಇದೆ. ಇವುಗಳನ್ನು ಪುಷ್ಪದಂತ ಮತ್ತು ಭೂತಬಲಿಯವರು ಚೆನ್ನಾಗಿ ತಿಳಿದುಕೊಂಡಿದ್ದರು. ಇವರ ಗುರುಗಳಾದ ಧರಸೇನರು ಇವರನ್ನು ಈ ವಿಷಯದಲ್ಲಿ ಪರೀಕ್ಷಿಸಿಯೂ ಇದ್ದರು. ಇದು ಭಾಷೆಯ ವ್ಯಾಕರಣ ಭಾಗ ಮತ್ತು ಕರ್ಮಸಿದ್ಧಾಂತದ ಗಣಿತ ವಿವರಗಳ ಸಾಂಕೇತಿಕ ಭಾಗವಾಗಿದ್ದಿರಬಹುದು. ವೀರಸೇನರ ಶಿಷ್ಯರಾದ ಜಿನಸೇನರು ತಮ್ಮ ಆದಿಪುರಾಣದಲ್ಲಿ ಆದಿನಾಥರ ಇಬ್ಬರು ಪುತ್ರಿಯರಾದ ಬ್ರಾಹ್ಮೀ ಮತ್ತು ಸುಂದರಿಯರನ್ನು ಉಲ್ಲೇಖಿಸಿದ್ದಾರೆ. ಆದಿನಾಥರು ಬ್ರಾಹ್ಮಿಗೆ ಅಕ್ಷರವನ್ನು ಎಡಗಡೆಯಿಂದ ಬಲಗಡೆಗೆ ಹಾಗೂ ಗಣಿತಕ್ಕಾಗಿ ಸುಂದರಿಗೆ ಅಕ್ಷರವನ್ನು ಬಲಗಡೆಯಿಂದ ಎಡಗಡೆಗೆ ಬೋಧಿಸಿದ್ದರು. ಈ ಮಹಾಗ್ರಂಥಗಳ ಕಥೆಗಳಿಂದ ಕರ್ಮಸಿದ್ಧಾಂತದ ತಿಳುವಳಿಕೆಗೆ ಬೇರೆಯೇ ಅಕ್ಷರಗಳು ಇದ್ದುವೆಂದು ಸೂಚಿತವಾಗುತ್ತದೆ. ನಿರ್ದಿಷ್ಟ, ಟ್ರಾನ್ಸ್‌ಫೆನೈಟ್ ಮತ್ತು ಅನಿರ್ದಿಷ್ಟ ಎಂಬ ಸಂಖ್ಯಾ ವಿಂಗಡಣೆಯಲ್ಲದೆ, ದೊಡ್ಡ ಸಂಖ್ಯೆಗಳ ಬಳಕೆಗೆ ಕರ್ಮಸಿದ್ಧಾಂತದ ನಿರ್ದಿಷ್ಟ ಆರಂಭ ಸ್ಥಾನ ಪದ್ಧತಿಯಲ್ಲಿ (ಸಾಂಕೇತಿಕ) ಸ್ಥಾನ ಬೆಲೆಯನ್ನು ಬರೆಯಲು ಒಂದು ಪದ್ಧತಿಯ ಅವಶ್ಯಕತೆಯಿತ್ತು. ಈ ರೀತಿ, ನಮ್ಮ ಕೈಗೆ ಬಂದ ವಿಷಯಗಳ ಮಹತ್ವವು, ಶಾಲೆಯ ಖಗೋಳಶಾಸ್ತ್ರದ ಭಾಗವನ್ನು ಬಿಟ್ಟು, ಭದ್ರಬಾಹುವಿನ ಕಾಲದಿಂದ ಗಣಿತದ (ಚಲನೆಯ) ಮೂಲವನ್ನು ಸೂಚಿಸುತ್ತದೆ. ಮೌರ್ಯ ಚಂದ್ರಗುಪ್ತನ ಮೊಮ್ಮಗನಾದ ಅಶೋಕ ಚಕ್ರವರ್ತಿಯು ಪ್ರಥಮ ಬಾರಿಗೆ ಭಾರತದಾದ್ಯಂತ ಬ್ರಾಹ್ಮೀಯನ್ನು ಬರೆದನು. ಇದಕ್ಕೆ ಮೊದಲು ಮೆಘಾಸ್ಥಾನಿಗಳ ಪ್ರಕಾರ, ಭಾರತದಲ್ಲಿ ಯಾವ ಲಿಪಿಯೂ ಇರಲಿಲ್ಲ. ಲಿಪಿಯಿಲ್ಲದೆಯೇ ಜನರು ಹಾಗೂ ಆಡಳಿತವು ಕೇವಲ ನೆನಪಿನಿಂದ ನಡೆದುಕೊಂಡು ಬರುತ್ತಿತ್ತು. ಶ್ರುತ ಮತ್ತು ಸ್ಮೃತಿ ಪದಗಳು ಇದನ್ನು ಸೂಚಿಸುತ್ತವೆ. ನಿಜವಾಗಿ ಗಣಿತದ ನಿರ್ವಹಣೆಗೆ ಸಂಕೇತ ಪದ್ಧತಿಯ ಅವಶ್ಯಕತೆ ಇತ್ತು. ಪೂರ್ವಗಳ ಜ್ಞಾನವಿದ್ದ 12ನೇ ಅಂಗವಾದ ದಿಟ್ಟಿವಾಯವು ಕಳೆದುಹೋಗಿದೆ ಎಂದು ಹೇಳಲಾಗಿದೆ. ಏಕೆಂದರೆ ಇದನ್ನು ಕಂಡುಹಿಡಿದ ತಪಸ್ವಿಗಳ ನಿಸ್ವಾರ್ಥ ಧರ್ಮನಿಷ್ಠೆಯ ಕಾರಣದಿಂದ ಭಾರತದ ಲಿಪಿಗಳ ಮೂಲದ ಇತಿಹಾಸವು ಕಳೆದುಹೋಗಿದೆ. ಕರ್ಮಸಿದ್ಧಾಂತದ ಕೃತಿಗಳಾದ ದೃಷ್ಟಿವಾದವು ಈ ಭಾಗವನ್ನು ಅವುಗಳ ಗಣಿತ ತತ್ವಗಳ ಕಾರಣದಿಂದ ಅಧ್ಯಯನ ಮಾಡಲು ಆಗಿರಲಿಲ್ಲ ಮತ್ತು ಶತಮಾನಗಳವರೆಗೆ ಅಜ್ಞಾತವಾಗಿದ್ದವು. ಅವುಗಳ ಗಣಿತದ ನಿಜವಾದ ಅರಿವಿಲ್ಲದ ಕಾರಣ ಅಲ್ಸ್‌ಡಾರ್ಫ್‌ರವರು, ಸಮಸ್ಯೆಯ ಮೂಲದ ಬಗ್ಗೆ ಯೋಚಿಸಿರಲಿಲ್ಲ (ಜರ್ಮನ್ ಸ್ಕಾಲರ್ಸ್ ಇನ್ ಇಂಡಿಯಾ, ಸಂಪುಟ 1, 1973 ನೋಡಿ).

ಮಹಾವೀರಾಚಾರ್ಯರ ಗಣಿತಸಾರಸಂಗ್ರಹವು ಜೈನ ಗಣಿತಶಾಲೆಯ ಕೇಂದ್ರ ಬಿಂದುವಿನಂತೆ ಸುತ್ತುವರೆದಿತ್ತು. ಮಹಾವೀರನನ್ನು ನೀಡ್‌ಹ್ಯಾಮ್‌ರವರು ಈ ರೀತಿ ಉಲ್ಲೇಖಿಸಿದ್ದಾರೆ.

1. (ಈಗಾಗಲೇ ಚಿಯು ಚಂಗ್‌ನಲ್ಲಿ ಕೊಟ್ಟಿರುವ) ಚಂಗ್‌ರವರು ಭಾಗಾಹಾರದ ಆಧುನಿಕ ಸೂತ್ರಕ್ಕೆ ಉದಾಹರಣೆಗಳನ್ನು ಕೊಟ್ಟಿದ್ದರು. ಇದು 9ನೇ ಶತಮಾನದ ಮಹಾವೀರ ಮುಂತಾದ ಭಾರತೀಯರಿಗೆ ತಿಳಿದಿತ್ತು. ಆದರೆ ನಂತರ ಇದನ್ನು ಸ್ಟೀಫೆಲ್‌ರವರು ಪುನಃ ಕಂಡುಹಿಡಿಯುವವರೆಗೆ ಕೈಬಿಡಲಾಯಿತು (Science and Civilization in China, volume 3, Cambridge 1959, page 35).

2. 4ನೇ ಶತಮಾನದಿಂದ ಈಚೆಗೆ ಎಲ್ಲ ಭಾರತೀಯ ಗಣಿತಜ್ಞರ ಬಳಿ 10ರ ಘಾತಗಳಿಗೆ ಪದಗಳಿದ್ದವು. ಉದಾಹರಣೆಗೆ, ಆರ್ಯಭಟ (+476), ಮಹಾವೀರ (+830), ಭಾಸ್ಕರ (+1119 ಇಂದ 1178 ರವರೆಗೆ), ನಾರಾಯಣ (+1356).

3. ಜೈನಾದವರು ಸಂಖ್ಯೆಗಳ ವರ್ಗಮೂಲ ಸಮಸ್ಯೆಗಳಿಗೆ ಅಷ್ಟೇನೂ ಮಹತ್ವ ಕೊಟ್ಟಿದ್ದಂತೆ ತೋರುವುದಿಲ್ಲ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



ಆದರೆ ಮಹಾವೀರ, ಭಾಸ್ಕರ ಮುಂತಾದ ಭಾರತೀಯರಿಗೆ ಇದು ತಿಳಿದಿತ್ತು. Complex ಅಥವಾ imaginary ಸಂಖ್ಯೆಗಳ ಲಕ್ಷಣಗಳನ್ನು ಐರೋಪ್ಯ ದೇಶದಲ್ಲಿ 17ನೇ ಶತಮಾನದವರೆಗೂ ಯಾರೂ ಗಮನಿಸಿರಲಿಲ್ಲ.

4. ಭಾರತ ಹಾಗೂ ಪ್ರಾಚೀನ ಈಜಿಪ್ಟ್‌ಗಳಲ್ಲಿ "Rule of False Position" ತರಹದ ನಿಯಮವು ಗೊತ್ತಿದ್ದಂತೆ ತೋರುತ್ತದೆ. (10ನೇ ಶತಮಾನಕ್ಕೆ ಹಿಂದಿನ ಬಕ್ಷಾಲಿ ಹಸ್ತಪ್ರತಿ). ಚಿಯು ಚಂಗ್ ಷುರವರ, ಬ್ರಹ್ಮಗುಪ್ತರ ಹಾಗೂ ಮಹಾವೀರರ ಸಮಸ್ಯೆಗಳಲ್ಲಿ ಎದ್ದುಕಾಣುವಂತಹ ಸಾಮ್ಯತೆಗಳಿವೆ.

5. ಅನಿರ್ಧಾರಿತ ಸಮೀಕರಣಗಳಿರುವ, ಹೆಚ್ಚು ಕಡಿಮೆ ಒಂದೇ ರೀತಿಯಾಗಿರುವ (The Hundred Fowls) ಲೆಕ್ಕವು ಮೊದಲು ಚಂಗ್ ಚಿಯು ಚ್ಯೆನ್ ಸುಯನ್ ಚಿಂಗ್ (+ 500) ರಲ್ಲಿ ನಂತರ ಮಹಾವೀರರಲ್ಲಿ (+830) ಹಾಗೂ ಭಾಸ್ಕರ (+1200) ರಲ್ಲಿ ಬರುತ್ತವೆ.

ಮಹಾವೀರಾಚಾರ್ಯರು, ಜಿನಮಹಾವೀರನಿಗೆ ವಂದಿಸಿ, ತಮ್ಮ ಆಶ್ರಯರಾಜ, ಚಕ್ರಿಕಾಭಂಜನ (ಜನನ-ಮರಣಗಳೆಂಬ ಚಕ್ರವನ್ನು ನಾಶಪಡಿಸುವವ) ಕ್ರಿ.ಶ. 814 (ಅಥವಾ 815)ರಿಂದ 877 (ಅಥವಾ 878) ರವರೆಗೆ ರಾಜ್ಯವಾಳಿದ, ಸಾಮಾನ್ಯವಾಗಿ ಅಮೋಘವರ್ಷ ನೃಪತುಂಗನೆಂದು ಕರೆಯಲ್ಪಡುವ ರಾಜನ ಹಿರಿತನವನ್ನು ಕೊಂಡಾಡಿದ್ದಾನೆ. ಬ್ರಹ್ಮಗುಪ್ತರ ಹಾಗೂ ಮಹಾವೀರಾಚಾರ್ಯರ ಕೃತಿಗಳನ್ನು ಹೋಲಿಸಿ ನೋಡಿದಾಗ, ಮಹಾವೀರಾಚಾರ್ಯರಿಗೆ ಬ್ರಹ್ಮಗುಪ್ತರ ಕೃತಿಯ ಪರಿಚಯವಿದ್ದು ಅದನ್ನು ಉತ್ತಮಗೊಳಿಸಿರಬಹುದೆಂದು ರಂಗಾಚಾರ್ಯರು ಭಾವಿಸಿದ್ದಾರೆ. ಮಹಾವೀರರ ಅಂಕಗಣಿತದ ಕ್ರಿಯೆಗಳ ವಿಂಗಡಣೆಯು ಸರಳವಾಗಿದೆ. ಅವರ ನಿಯಮಗಳು ಪೂರ್ಣವಾಗಿವೆ ಮತ್ತು ಅವರು ವಿಶ್ಲೇಷಣೆ ಹಾಗೂ ಲೆಕ್ಕಗಳಿಗೆ ಅಧಿಕ ಸಂಖ್ಯೆಯ ಉದಾಹರಣೆಗಳನ್ನು ನೀಡಿದ್ದಾರೆ.

ಮಹಾವೀರಾಚಾರ್ಯರ ಕೃತಿಯ ಪರಿಚಯವು ಭಾಸ್ಕರಾಚಾರ್ಯರಿಗೆ ಇತ್ತೇ ಇಲ್ಲವೇ ಎಂಬುದನ್ನು ರಂಗಾಚಾರ್ಯರಿಗೂ ಹೇಳಲು ಸಾಧ್ಯವಾಗಿಲ್ಲ. ಮಹಾವೀರಾಚಾರ್ಯರು ಜೈನರಾಗಿದ್ದರಿಂದ ಭಾಸ್ಕರಾಚಾರ್ಯರು ಅವರ ಬಗ್ಗೆ ಸಾಕಷ್ಟು ಗಮನ ಹರಿಸಿಲ್ಲ ಅಥವಾ ಜೈನ ಗಣಿತಜ್ಞರ ಖ್ಯಾತಿ 12ನೇ ಶತಮಾನದಲ್ಲಿ ದೂರದ ಉತ್ತರದವರೆಗೆ ಹರಡಿಲ್ಲದೇ ಇರುವ ಸಾಧ್ಯತೆ ಇದೆ. ಮಹಾವೀರಾಚಾರ್ಯರ ಕೃತಿಯು ದಕ್ಷಿಣ ಭಾರತದಲ್ಲಿ ಎಲ್ಲರಿಗೂ ತಿಳಿದಿತ್ತು ಮತ್ತು ಪ್ರಶಂಸೆಗೆ ಪಾತ್ರವಾಗಿತ್ತು. ಗಣಿತಸಾರಸಂಗ್ರಹವನ್ನು 11ನೇ ಶತಮಾನದಲ್ಲಿ ಪಾವಲೂರಿ ಮಲ್ಲಣ್ಣ ಎಂಬುವರು ತೆಲುಗು ಭಾಷೆಗೆ ಅನುವಾದಿಸಿದ್ದರು.

ಡೇವಿಡ್ ಐಗನೆ ಸ್ಮಿತ್‌ರವರು ಮಹಾವೀರರ ಕಾಲವನ್ನು ಸುಮಾರು ಕ್ರಿ. ಶ. 850 ಎಂದು ನಿಗದಿಪಡಿಸಿದ್ದಾರೆ. ಭಾಸ್ಕರರ ಬೀಜಗಣಿತದಂತೆ ಗಣಿತಸಾರಸಂಗ್ರಹದಲ್ಲಿ 9 ಅಧ್ಯಾಯಗಳಿವೆ ಎಂದು ಸ್ಮಿತ್‌ರವರು ಗಮನಿಸಿದ್ದಾರೆ. ಬ್ರಹ್ಮಗುಪ್ತರ ಕುಟ್ಟಕಕ್ಕಿಂತ ಒಂದು ಅಧ್ಯಾಯ ಇದರಲ್ಲಿ ಹೆಚ್ಚಾಗಿದೆ. ಆದರೆ ಸ್ಮಿತ್‌ರವರು ಈ ಅಧ್ಯಾಯದ ಸಂಖ್ಯೆಗೆ ಯಾವ ಮಹತ್ವವನ್ನು ನೀಡಲಿಲ್ಲ. ಏಕೆಂದರೆ ಅಧ್ಯಾಯಗಳು ಸಮಾನಾಂತರವಾಗಿಲ್ಲ. ಬ್ರಹ್ಮಗುಪ್ತರ ಗಣಿತ ಮತ್ತು ಭಾಸ್ಕರರ ಲೀಲಾವತಿಯ ಕೆಲವು ವಿಷಯಗಳು ಗಣಿತಸಾರಸಂಗ್ರಹದಲ್ಲಿ ಇವೆ. ಇದನ್ನೆಲ್ಲಾ ಗಮನಿಸಿದ ಸ್ಮಿತ್‌ರವರು ಭಾರತದ ಮೇಲೆ ಗ್ರೀಕ್ ಬೀಜಗಣಿತದ ಪ್ರಭಾವ ಸಾಕಷ್ಟಿತ್ತೆಂಬುದಕ್ಕೆ ಯಾವ ಪುರಾವೆಯೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಬೀಜಗಣಿತದ ಮೇಲೆ ಬರೆದಿರುವ ಯಾವ ಭಾರತೀಯ ಲೇಖಕನ ಕೃತಿಯಲ್ಲೂ ಸ್ಮಿತ್‌ರವರ ಲೆಕ್ಕಗಳಾಗಲೀ ಅಥವಾ ಅವರ ಸಂಕೇತಗಳ ಸುಳಿವಾಗಲೀ ಇಲ್ಲ. ಇದಕ್ಕೆ ತದ್ವಿರುದ್ಧವಾಗಿ, ಹಿಂದೂ ಕೃತಿಗಳು ತಮ್ಮದೇ ಆದಂತಹ ಒಂದು ವಿಶಿಷ್ಟ ಶೈಲಿಯನ್ನು ಹೊಂದಿದ್ದವು ಎಂಬುದಾಗಿ ಸ್ಮಿತ್‌ರವರು ಅಭಿಪ್ರಾಯಪಟ್ಟಿದ್ದಾರೆ.

ಬ್ರಹ್ಮಗುಪ್ತ ಮತ್ತು ಮಹಾವೀರರಿಬ್ಬರೂ ಚರ್ತುಭುಜದ ಕ್ಷೇತ್ರಫಲಕ್ಕಾಗಿ $\sqrt{(s-a)\,(s-b)\,(s-c)\,(s-d)}$, ಸೂತ್ರವನ್ನು ಕೊಡುತ್ತಾರೆ. ಆದರೆ ಯಾರೂ ಇದು ಚಕ್ರೀಯ ಆಕೃತಿಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು ಗಮನಿಸುವುದಿಲ್ಲ. ಅಹಂಸ್‌ನ "Egyptial treatise" ನಲ್ಲಿ ಲಭ್ಯವಿದ್ದ, ತ್ರಿಕೋನ ಮತ್ತು ಚರ್ತುಭುಜದ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



ಕ್ಷೇತ್ರಫಲಗಳಿಗೆ ಅದೇ ತಪ್ಪಾದ ನಿಯಮಗಳನ್ನು ಬ್ರಹ್ಮಗುಪ್ತ ಮತ್ತು ಮಹಾವೀರರು ಉಪಯೋಗಿಸುತ್ತಾರೆ. ಗ್ರೀಕರು ಬಹಳ ಕಾಲದಿಂದ ಇದನ್ನು ತಪ್ಪೆಂದು ತೋರಿಸುತ್ತಿದ್ದಾರೆ. ಆದರೆ, ಮಹಾವೀರರು ತ್ರಿಕೋನ ಹಾಗೂ ಚತುರ್ಭುಜಗಳ ಕ್ಷೇತ್ರಫಲಕ್ಕೆ ಸರಿಯಾದ ನಿಯಮಗಳನ್ನು ಕೊಟ್ಟಿದ್ದರು. ಚತುರ್ಭುಜವು ಚಕ್ರೀಯವಾಗಿರಬೇಕೆಂದು ಮಾತ್ರ ಹೇಳಿರಲಿಲ್ಲ. ಪರಿಧಿಯ ಹಾಗೂ ವ್ಯಾಸದ ಅನುಪಾತಕ್ಕೆ ಬ್ರಹ್ಮಗುಪ್ತ ಮತ್ತು ಮಹಾವೀರರು 3ನ್ನು ಮತ್ತು $\sqrt{10}$ ನ್ನು ಹತ್ತಿರದ ಬೆಲೆಯನ್ನಾಗಿ ಬಳಸಿದ್ದಾರೆ. ಇಬ್ಬರಿಗೂ ಆರ್ಕಿಮಿಡಿಸ್ ಅಥವಾ ಹಿರಾನ್‌ರವರ ಕಾರ್ಯಗಳ ಅರಿವಿರಲಿಲ್ಲ. ಒಟ್ಟಾರೆ, ಸ್ಮಿತ್‌ರವರಿಗೆ ಭಾರತದ ರೇಖಾಗಣಿತವು ಗ್ರೀಕ್‌ನವರಿಗಿಂತ ಹೆಚ್ಚು ಬ್ಯಾಬಿಲೋನಿಯನ್‌ನಂತೆ ಕಂಡುಬಂದಿತು.

ಮಹಾವೀರಾಚಾರ್ಯರನ್ನು ಶ್ರೇಷ್ಠ ಗಣಿತಜ್ಞರಲ್ಲಿ ಒಬ್ಬರೆಂದು ಪರಿಗಣಿಸಲಾಗಿತ್ತು. ಇವರು ಲೋಕದ ಎಲ್ಲ ಚರಾಚರ ವಸ್ತುಗಳು ಗಣಿತವಿಲ್ಲದೆ ಇರುವುದಿಲ್ಲವೆಂದು ಹೇಳಿದ್ದಾರೆ. ಇವರು ಸಾಂಕೇತಿಕ ಸ್ಥಾನಗಳಿಗಾಗಿ 24 ಹೆಸರುಗಳನ್ನು ಕೊಟ್ಟಿದ್ದಾರೆ. ಆದರೆ ತಿಲೋಯಪಣ್ಣತ್ತಿಯಲ್ಲಿ (ಅಧ್ಯಾಯ 4, ಶ್ಲೋಕ ಸಂಖ್ಯೆ 277-283) ಇದನ್ನು $(84)^{31}$ $(10)^{90}$ ರವರೆಗೆ ಕೊಡಲಾಗಿದೆ. ಕಡೆಯದು ಅಚಲಾತ್ಮವಾಗಿದೆ. ಕಪಾಡಿಯಾರವರು ಸೂರ್ಯಪ್ರಜ್ಞಪ್ತಿ ಮುಂತಾದವುಗಳಲ್ಲಿ ಸಾಂಕೇತಿಕ ಸ್ಥಾನಗಳನ್ನು 194 ರವರೆಗೆ ಉಲ್ಲೇಖಿಸಿದ್ದಾರೆ. ವಿಶ್ವಮಾಪನದಿಂದ ಕಾಲದ ಅಳತೆಯ ಸಾಂಕೇತಿಕ ಸ್ಥಾನದ ಬೇರ್ಪಡೆಯು ಒಂದು ವಿಶಿಷ್ಟವಾಗಿದೆ. ಇದು ಮಹಾವೀರಾಚಾರ್ಯರಿಗೆ ಚೆನ್ನಾಗಿ ತಿಳಿದಿತ್ತು. ಸಮಕಾಲೀನರ ಗಣಿತವನ್ನು ವಿಸ್ತೃತಗೊಳಿಸಿ ಒಂದು ಹೊಸ ವಿಧವಾದ ಗಣಿತವನ್ನು ತಯಾರಿಸಿದರು. ಇವರಿಂದ ಉಲ್ಲೇಖಿತವಾದ ಸಂಖ್ಯಾ ಪದವು ಧವಲ ಹಾಗೂ ತಿಲೋಯಪಣ್ಣತ್ತಿಗಳ ಅನೇಕ ಶ್ಲೋಕಗಳಲ್ಲಿ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ, ಮಹಾವೀರರು ರತ್ನವನ್ನು ಮೂರು ಎಂದು ತೆಗೆದುಕೊಂಡರೆ ಬೇರೆಯವರು ಇದನ್ನು ಐದನ್ನಾಗಿ ಬಳಸಿದ್ದಾರೆ. ಮಹಾವೀರರು ಉಪಯೋಗಿಸಿರುವ ಪುನ್ನಗ, ಭಾಯ, ಕರ್ಮನ್, ತನು ಮುಂತಾದವುಗಳಲ್ಲಿನ ಸಾಮಾನ್ಯ ಸಂಖ್ಯೆಗಳೂ ಸಹ ಬೇರೆಯಾಗಿವೆ.

ಮಹಾವೀರರು **ಕಪಾಟ ಸಂಧಿ** ಎಂಬ ವಿಧಾನವನ್ನು ಹೇಳಿದ್ದಾರೆ. ಆದರೆ ಅದರ ವಿವರಗಳನ್ನು ನೀಡಿಲ್ಲ (ಆಂಗ್ಲ ಸಂಪುಟ, 9), ಇವರು ತಿರ್ಯಕ್ ಗುಣನಕ್ಕೆ ಹೋಲುವ ವಜ್ರಾಪವರ್ತನ ವಿಧಾನ ಅಥವಾ ತಸ್ಥವಿಧಾನವನ್ನು ಹೇಳಿದ್ದಾರೆ. ಲಬ್ಧಿಸಾರದ ಟೀಕೆಗಳಲ್ಲಿರುವಂತೆ, ಮಹಾವೀರಾಚಾರ್ಯರು ಸಾಮಾನ್ಯ ಅಪವರ್ತನಗಳನ್ನು ತೆಗೆದು ಭಾಗಿಸುವ ವಿಧಾನವನ್ನು ತಿಳಿಸಿದ್ದಾರೆ. ವರ್ಗಮಾಡುವುದರಲ್ಲಿ ಶ್ರೀಧರನಿಗಿಂತ ಹೆಚ್ಚು ವಿವರಗಳನ್ನು ನೀಡಿದ್ದಾರೆ. ಇದೇ ರೀತಿ ಘನಮಾಡುವುದನ್ನೂ ಸಹ ಬಹಳ ಅಚ್ಚುಕಟ್ಟಾಗಿ ವಿವರಿಸಿದ್ದಾರೆ.

ವರ್ಗಮೂಲವನ್ನು ಕಂಡುಹಿಡಿಯುವ ವಿಧಾನವು ಶ್ರೀಧರ, ಮಹಾವೀರ, ಶ್ರೀಪತಿ ಮತ್ತು ಆರ್ಯಭಟರ ಕೃತಿಗಳಲ್ಲಿ ಒಂದೇ ರೀತಿಯಾಗಿದೆ. ಪುರಾತನ ಜೈನ ಪುಸ್ತಕಗಳಲ್ಲಿ, ಉದಾಹರಣೆಗೆ, $\pi$ ನ ಬೆಲೆಯನ್ನು $\sqrt{10}$ ಎಂದು ತೆಗೆದುಕೊಳ್ಳಲಾಗಿತ್ತು. ತೋದರಮಲ್ಲರು ತಮ್ಮ ತ್ರಿಲೋಕಸಾರದ ಟೀಕೆಯಲ್ಲಿ ವರ್ಗಮೂಲ ಹಾಗೂ ಘನಮೂಲಗಳನ್ನು ಕಂಡುಹಿಡಿಯಲು ಕೊಡುವ ವಿಧಾನವು ಗಣಿತಸಾರಸಂಗ್ರಹದಲ್ಲಿರುವುದೇ ಆಗಿದೆ.

ಶ್ರೀಧರ ಮತ್ತು ಮಹಾವೀರರು 6 ಜಾತಿಯ ಭಿನ್ನರಾಶಿಗಳನ್ನು ತಿಳಿಸಿದ್ದಾರೆ. ಧವಲದಲ್ಲಿ ಭಿನ್ನರಾಶಿಗಳ ಬಗ್ಗೆ ಇನ್ನೂ ಹೆಚ್ಚು ವಿವರಗಳಿವೆ. ಕರ್ಮಸಿದ್ಧಾಂತದ ಕೃತಿಗಳಲ್ಲಿ ಮಹಾವೀರರ "Rule-of-three" ಯನ್ನು ಸಾಮಾನ್ಯ ಪದಗಳಾದ ಪ್ರಮಾಣ, ಫಲ, ಇಚ್ಛಾಗಳಿಗೆ ಆಗಾಗ್ಗೆ ಬಳಸಲಾಗಿದೆ. ಜೈನ ಕೃತಿಗಳಲ್ಲಿ ಲಬ್ಧ ಪದವನ್ನೂ ಸಹ ಕೊಡಲಾಗಿದೆ. ಅತಿ ಕ್ಲಿಷ್ಟವಾದ ವಾಣಿಜ್ಯ ಲೆಕ್ಕಗಳನ್ನು ಬಿಡಿಸುವ ಸಲುವಾಗಿ ನಿಯಮಗಳನ್ನು ಕೊಟ್ಟಿದ್ದಾರೆ.

"The Rule of False Position" ಬಗ್ಗೆ, ಮಹಾವೀರಾಚಾರ್ಯರು ಶ್ರೀಧರನಂತೆಯೇ ಅನೇಕ ವಿಧವಾದ ಲೆಕ್ಕಗಳನ್ನು ನೀಡಿ, **ಇಷ್ಟಕರ್ಮ** ಎಂಬ ಈ ನಿಯಮವನ್ನು ಅವುಗಳಿಗೆ ಬಳಸುತ್ತಾರೆ. ವಿಲೋಮಗತಿ ವಿಧಾನವೂ ಇವರಿಂದ ಉಪಯೋಗಿಸಲ್ಪಟ್ಟಿದೆ. ಅನಂತರ ಇವರು ಅನೇಕ ಜಾತಿಯ ವರ್ಗ ಸಮೀಕರಣಗಳ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



ಬಿಡಿಸುವಿಕೆಯಿರುವ ಮಿಶ್ರ ಲೆಕ್ಕಗಳ ಬಗ್ಗೆ ಗಮನಹರಿಸಿದ್ದಾರೆ. ಶೂನ್ಯ ಗಣಿತದ ವಿಷಯವಾಗಿ, ಮಹಾವೀರರು ಯಾವುದೇ ಸಂಖ್ಯೆಯು ಶೂನ್ಯದಿಂದ ಭಾಗಿಸಲ್ಪಟ್ಟಾಗ ವ್ಯತ್ಯಾಸವಾಗುವುದಿಲ್ಲ ಎಂದು ಹೇಳಿದ್ದಾರೆ. ಬೇರೆಯವರು ಅದನ್ನು ಈ ರೀತಿ ಗುರುತಿಸಿಲ್ಲ. ಒಂದು ಸಂಖ್ಯೆಯನ್ನು ಯಾವ ಸಂಖ್ಯೆಯಿಂದಲೂ ಭಾಗಿಸದೇ ಇರುವಾಗ ಅದು ಖಂಡಿತವಾಗಿ ಹಾಗೆಯೇ ಉಳಿಯುತ್ತದೆ ಎಂಬ ತರ್ಕದಿಂದ ಈ ನಿಯಮವು ಬಂದಿರಬಹುದು.

ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಹಾರ ಮುಂತಾದ ಅನೇಕ ಗಣಿತ ಕ್ರಿಯೆಗಳಲ್ಲಿ ನಿಯಮಗಳು ಎಲ್ಲ ಗಣಿತಜ್ಞರಲ್ಲೂ ಒಂದೇ ರೀತಿಯಾಗಿವೆ. ಮಹಾವೀರರು ಸತತ ರೇಖಾ ಸಮೀಕರಣಗಳಿಗೆ ಹಲವಾರು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಇವರು ನೀಡಿರುವ ಬಡ್ಡಿಯ ಮೇಲಿನ ಕೆಲವು ಲೆಕ್ಕಗಳಿಂದ ಅನೇಕ ಅಜ್ಞಾತ ಸಂಖ್ಯೆಗಳಿರುವ ಸರಳ ಹಾಗೂ ವರ್ಗ (ಸತತವಾದ) ಸಮೀಕರಣಗಳು ಉತ್ಪನ್ನವಾಗುತ್ತವೆ. ಇವುಗಳನ್ನು ಬಿಡಿಸಲು ಇವರು ಬೇರೆಯೇ ನಿಯಮಗಳನ್ನು ನೀಡಿದ್ದಾರೆ. ಇವರಿಗೆ ವರ್ಗಸಮೀಕರಣಕ್ಕೆ ಎರಡು ಮೂಲಗಳು ಇರುತ್ತವೆ ಎಂದು ತಿಳಿದಿತ್ತು. ಗುಣೋತ್ತರ ಶ್ರೇಣಿಗಳ ಸಂಬಂಧದಲ್ಲಿ ಇವರು ಕೆಲವು ಹೆಚ್ಚಿನ ಘಾತಗಳಿರುವ ಸರಳ ಸಮೀಕರಣಗಳನ್ನು ಪರಿಗಣಿಸಿದ್ದಾರೆ. ಇವರಿಗೆ ಕುಟ್ಟೀಕಾರದ ಬಗ್ಗೆ ವಿಶೇಷ ಒಲವಿತ್ತು. ಈ ಕ್ರಿಯೆಯಲ್ಲಿ ಬಳಸಲಾದ ಪದಗಳೆಂದರೆ : ಭಾಗಾಹಾರ, ಶೇಷ, ಕ್ಷೇಪ, ಭಾಜ್ಯ, ಗುಣಾಕಾರ ಮತ್ತು ಫಲ.

ಅಕರಣೇಗತ ತ್ರಿಕೋನಗಳ ಸಂಬಂಧದಲ್ಲಿ, ಮಹಾವೀರರು $x^2 + y^2 = z^2$ ಸಮೀಕರಣಕ್ಕೆ ಪೂರ್ಣಾಂಕಗಳಿರುತ್ತವೆಂದು ಹೇಳಿದ್ದಾರೆ. ಡೈಫಂಟಸ್ $m$ ಮತ್ತು $n$ ನಿಂದ ಒಂದು ಲಂಬತ್ರಿಕೋನವಾಗುತ್ತದೆ ಎಂದಿದ್ದರೆ, ಮಹಾವೀರರು $m$ ಮತ್ತು $n$ ನಿಂದ ಚರ್ತುಭುಜ ಅಥವಾ ಆಯತವಾಗುತ್ತದೆ ಎಂದಿದ್ದಾರೆ. ಇಲ್ಲಿ ಕ್ರಿಯೆಯು "ಜನ್ಯ" ಮತ್ತು ಬಳಸಲಾದ ಸಂಖ್ಯೆಗಳನ್ನು ಬೀಜಸಂಖ್ಯಾ ಅಥವಾ ಬೀಜ ಎಂದು ಕರೆಯಲಾಗಿದೆ ($92\frac{1}{2}$, $111\frac{1}{2}$, ಅಧ್ಯಾಯ 7, ಗಣಿತಸಾರಸಂಗ್ರಹ). ಮೇಲಿನ ಭುಜ, ಪಾದ ಮತ್ತು ಕರ್ಣಗಳು ಕ್ರಮವಾಗಿ $m - n$, $2mn$, $m + n$ ಗಳಾಗಿವೆ. ಇವರು $x^2 + a^2 = z^2$ ಸಮೀಕರಣಕ್ಕೆ ಉತ್ತರವನ್ನೂ ಸಹ ಕೊಟ್ಟಿದ್ದಾರೆ. ಒಂದು ಕೊಟ್ಟಿರುವ ಕರ್ಣ ಇರುವ ಲಂಬ ತ್ರಿಕೋನದ ಉತ್ತರಕ್ಕಾಗಿ, ಇವರು ಸಮೀಕರಣ $x^2 + y^2 = c^2$ ಮೂಲಕ ಮೂರು ನಿಯಮಗಳನ್ನು ನೀಡಿದ್ದಾರೆ ($95\frac{1}{2}$, $97\frac{1}{2}$, $122\frac{1}{2}$, ಅಧ್ಯಾಯ 7, ಗಣಿತಸಾರಸಂಗ್ರಹ).

ಆನಂತರ ಮಹಾವೀರರು, ಕ್ಷೇತ್ರಫಲವು ಒಂದು ಭುಜದ, ಕರ್ಣದ ಅಥವಾ ಪರಿಧಿಯ ಅಥವಾ ಇವೆರಡರಲ್ಲಿ ಎರಡು ಅಥವಾ ಹೆಚ್ಚಿನ ಸಂಖ್ಯೆಗಳ ಸಂಯೋಗಗಳ ಗುಣಕ ಅಥವಾ ಉಪಗುಣಕವಾಗಿರುವ ಅಕರಣೇಗತ ಆಯತಗಳನ್ನು ಕಂಡುಹಿಡಿಯಲು ಬಯಸಿದರು. ಇದು $x^2 + y^2 = z^2$ ಮತ್ತು $mx + ny + pz = rxy$ (ಇಲ್ಲಿ $r \neq 0$, $m$, $n$ ಗಳು ಅಕರಣೇಗತ ಸಂಖ್ಯೆಗಳಾಗಿವೆ) ಸಮೀಕರಣಗಳನ್ನು ಬಿಡಿಸುವಿಕೆಗೆ ಸಮವಾಗಿದೆ ($112\frac{1}{2}$, $115\frac{1}{2}$, $117\frac{1}{2}$, ಅಧ್ಯಾಯ 7, ಗಣಿತಸಾರಸಂಗ್ರಹ).

ಭುಜಗಳು ಮತ್ತು ಕ್ಷೇತ್ರಫಲಗಳಿರುವ ಲೆಕ್ಕಗಳ ಸಂಬಂಧದಲ್ಲಿ ಇವರು ಈ ಕೆಳಗಿನ ಸಮೀಕರಣಗಳಿಗೆ ನಿಯಮಗಳನ್ನು ಕೊಟ್ಟಿದ್ದಾರೆ.

$x^2 + y^2 = z^2$, $rx + sy + tz = A$ (ಇಲ್ಲಿ $r$, $s$, $t$ $A$ ಗಳು ಗೊತ್ತಿರುವ ಅಕರಣೇಗತ ಸಂಖ್ಯೆಗಳಾಗಿವೆ).

ಕೆಲವು ನಿಬಂಧನೆಗಳೊಂದಿಗೆ ಮಹಾವೀರರು ಆಯತಗಳ ಜೋಡಿಗಳನ್ನು ಕಂಡುಹಿಡಿಯುತ್ತಾರೆ. ಇದಕ್ಕಾಗಿ ಇವರು ಈ ಕೆಳಗಿನ ಸಮೀಕರಣಗಳಿಗಾಗಿ ನಿಯಮವನ್ನು ನೀಡಿದ್ದಾರೆ.

$2m(x + y) = 2n(u + v)$, $pxy = quv$, ಇಲ್ಲಿ $m$, $n$, $p$, $q$, ಗಳು ಗೊತ್ತಿರುವ ಪೂರ್ಣಾಂಕಗಳಾಗಿವೆ ($131\frac{1}{2}$ -133, ಅಧ್ಯಾಯ 7, ಗಣಿತಸಾರಸಂಗ್ರಹ).

ಹೆಚ್ಚಿನ ವಿವರಗಳಿಗೆ ಬಿ.ಬಿ.ದತ್ತರವರ ಲೇಖನ (on Mahāvīra's solution of rational triangles and quadrilaterals, B.C.M.S. XX, 1928, p.267-294) ಹಾಗೂ ದತ್ತ ಮತ್ತು ಸಿಂಗ್‌ರವರ ಪುಸ್ತಕ History of Hindu Mathematics, Bombay, 1962 ಒಳ್ಳೆಯ ಮಾರ್ಗದರ್ಶನ ನೀಡುತ್ತವೆ. ಆರ್.ಸಿ. ಗುಪ್ತ ಮತ್ತು ತಕಾವೊ ಹಯಾಷಿಯವರೂ ಸಹ ಅಳತೆಯ ಬಗ್ಗೆ ಮಹಾವೀರರು ನೀಡಿರುವ ನಿಯಮಗಳಿಗೆ ಸರಿಯಾದ ವಿಶ್ಲೇಷಣೆಯನ್ನು ಮಾಡಿದ್ದಾರೆ.

1. R.C. Gupta, An Ancient Approximate Rule for the Area of a Polygon, Gaṇita Bhārati, 12 3-4, 1970, 108-112 (955, Vii, 39)



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



2. R.C. Gupta, on Some Rules from Jaina Mathematics, ibid, 1987, 18-26 (955, vii, 43), Tiloyapaṇṇatti IV, 240)

3. R.C. Gupta, Sino-Indian Interaction and the great Chinese Buddhist, Astronomer-Mathemetica, I=History (A.D. 687-727) ibid (GSS. 259, Hindi Edition).

4. R,C. Gupta, Rectification of Ellipse from Mahāvīra to Ramanujan, ibid, 15, 1-4, 1993, 14-40, )GSS, vii, 21, 22, 63. 64, 163).

ಕೆ.ಸಿ. ಶುಕ್ಲಾರವರು, ದತ್ತ ಮತ್ತು ಸಿಂಗ್‌ರವರ ಹಿಂದೂ ಜಾಮಿಟ್ರಿಯನ್ನು ಮರುಪರಿಶೀಲಿಸಿದ್ದಾರೆ. ಇದರಲ್ಲಿ ಮಹಾವೀರರ ಕಾರ್ಯವನ್ನು ಇತರ ಲೇಖಕರ ಕಾರ್ಯದೊಂದಿಗೆ ಹೋಲಿಸಿ ನೋಡಲಾಗಿದೆ. (I J H S, 15, 2, November. 1978, 121-188). ಇತ್ತೀಚೆಗೆ ಶುಕ್ಲಾರವರು ಶ್ರೀಧರನನ್ನು ಮಹಾವೀರನ ನಂತರದವನೆಂದು ಹೇಳಿದ್ದಾರೆ. ಇದಕ್ಕೆ ಮೊದಲು ದತ್ತ ಮತ್ತು ಸಿಂಗ್‌ರವರು ಶ್ರೀಧರನನ್ನು ಮಹಾವೀರನಿಗಿಂತಲೂ ಮೊದಲಿಗನೆಂದು ಹೇಳಿದ್ದರು (circa 750 A.D.) ಇದನ್ನು ಗಣಿತಭಾರತಿಯಲ್ಲಿ (9-1-4, 1987, 54-56) ಆರ್.ಸಿ. ಗುಪ್ತಾರವರು ಚರ್ಚಿಸಿದ್ದಾರೆ.

ಮಹಾವೀರಾಚಾರ್ಯರ ಕೃತಿಯು ಒಬ್ಬ ಜಿನಭಕ್ತನದೆಂದು ಧಾರಾಳವಾಗಿ ಹೇಳಬಹುದು. ಪರಿಭಾಷೆಯ ಮೇಲಿನ ಸಂಜ್ಞಾ ಎಂಬ ಅಧ್ಯಾಯವನ್ನು ಈ ಕೆಳಗೆ ತಿಳಿಸಿರುವ ಎರಡು ಶ್ಲೋಕಗಳಿಂದ ಮುಕ್ತಾಯಮಾಡುತ್ತಾರೆ. ಇವುಗಳಿಂದ ಗಣಿತಜ್ಞರು ಆಗಮಗಳ ಹೆಚ್ಚಿನ ಅಧ್ಯಯನ ಮಾಡಲು ಉತ್ತೇಜಿತರಾಗಬಲ್ಲರು.

लघुकरणोहापोहानालस्यग्रहणधारणोपायैः ।
व्यक्तिकराङ्कविशिष्टैर्गणकोऽष्टाभिर्गुणैज्ञेयः ।। ६९ ।।
इति संज्ञा समासेन भाषिता मुनिपुङ्गवैः ।
विस्तरेणागमाद्वेधं वक्तव्यं यदितः परम् ।। ७० ।।

ಭಾಷಾಂತರ : 69. ಮುಂದೆ ಹೇಳುವ ಎಂಟು ಗುಣಗಳಿಂದ - ಕೆಲಸದಲ್ಲಿ ಶೀಘ್ರವಿಧಾನ, ಅಪೇಕ್ಷಿತ ಫಲವು ದೊರೆಕಿಬಿಡಬಹುದು ಎಂಬ ಮುಂದಾಲೋಚನೆ ದಡ್ಡತನದಿಂದ ಸ್ವಾತಂತ್ರ್ಯ, ಸರಿಯಾಗಿ ಗ್ರಹಿಸುವುದು, ಧಾರಣಶಕ್ತಿ ಮತ್ತು ಗೊತ್ತಿಲ್ಲದಿರುವ ಸಂಖ್ಯೆಗಳನ್ನು ಗೊತ್ತುಮಾಡುವಂತೆ ಮಾಡುವಂತಹ ಸಂಖ್ಯೆಗಳನ್ನು ಪಡೆಯುವ ಗುಣ ಹಾಗೂ ಕೆಲಸದಲ್ಲಿ ಹೊಸ ಮಾರ್ಗವನ್ನು ಅಳವಡಿಸುವಿಕೆ - (ಈ ಗುಣಗಳಿಂದ) ಒಬ್ಬ ಅಂಕಗಣಿತಜ್ಞನನ್ನು ಗುರುತಿಸಲಾಗುತ್ತದೆ.

70. ಮಹಾಮುನಿಗಳು ಪರಿಭಾಷೆಯನ್ನು ಹೀಗೆ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಮುಂದೆ ಏನನ್ನು ವಿವರವಾಗಿ ಹೇಳಬೇಕಾಗಿದೆಯೋ ಅದನ್ನು ವಿಜ್ಞಾನವನ್ನು ಅಭ್ಯಾಸಮಾಡಿಯೇ ತಿಳಿಯಬೇಕಾಗಿದೆ.

ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ಪ್ರಕಟವಾಗುತ್ತಿರುವ ಈ ಗಣಿತಸಾರಸಂಗ್ರಹವು, ಪ್ರಾಧ್ಯಾಪಕರಾದ ಪದ್ಮಾವತಮ್ಮನವರ ಸತತ ಪರಿಶ್ರಮದ ಫಲವಾಗಿದೆ. ಇವರು ಗಣಿತ ಶಾಸ್ತ್ರದಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದಾರೆ. ಈಗ್ಗೆ ಕೆಲವು ವರ್ಷಗಳ ಹಿಂದೆ ನಾನು ಅವರನ್ನು ಮೈಸೂರಿನಲ್ಲಿ ಭೇಟಿಮಾಡುವ ಅವಕಾಶ ಒದಗಿತ್ತು. ಆಗ ಅವರು ಕೈಗೆತ್ತಿಕೊಂಡಿರುವ ಕಾರ್ಯದ ಬಗ್ಗೆ ದೀರ್ಘವಾಗಿ ಚರ್ಚಿಸಿದ್ದೆವು. ಆಂಗ್ಲ ಹಾಗೂ ಹಿಂದೀ ಭಾಷೆಗಳ ಪ್ರಕಟಣೆಗಳು ಮುಗಿದು ಬಹಳ ಕಾಲವಾಗಿದೆ. ಈ ಪ್ರಕಟಣೆಯನ್ನು, "ಗಣಿತಶಾಸ್ತ್ರದ ಜ್ಞಾನವಿಲ್ಲದವರಿಗೆ ತನ್ನ ಸಂಸ್ಥೆಗೆ ಪ್ರವೇಶವಿಲ್ಲ" ಎಂಬ ಪ್ಲೇಟೋವಿನ ಸಂಸ್ಥೆಯ ನಿಬಂಧನೆಯನ್ನು ಪ್ರಶಂಸಿಸುವವರು ನಿಜಕ್ಕೂ ಸ್ವಾಗತಿಸುತ್ತಾರೆ.

ಜನವರಿ 2000
ಜಬ್ಬಲ್‌ಪುರ

ಎಲ್.ಸಿ. ಜೈನ್



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



# PREFACE

Mathematics is one of the important branches of science from time immemorial. Being an inseparable part of science, it has retained its previlaged place as **Queen of all Sciences.** The contribution of Indian mathematicians towards the development of mathematics is unique and valuable. Zero was first introduced in place value system of notations by Indians. Apart from this the nearest value 3.1416 of $\pi$ was also given first by Indians. The contributions of ancient Indian mathematicians Āryabhaṭa, Bhāskara, Brahmagupta, Mahāvīrācārya and Bhāskarācārya are world famous even today. The unprecedented research work on Hindu mathematics was persued by B.B.Datta and A.N.Singh for several years. Apart from their source book "History of Hindu Mathematics" volumes 1 and 2, several research papers were published in various research journals, magazines and felicitation volumes. Their work was ultimately revised on the topics of Hindu algebra, geometry and trigonometry by K.S. Shukla. Later on various authors working on History of Science in India have contributed to important projects, research papers and books organised by the Indian National Science Academy at its History of Science Division (vide specifically Bose.D.M., Sen. S.N. and Subbarayappa.B.V.; A Concise History of Science in India, New Delhi, 1971, vide also the set of Indian Journal of History of Science).

Research works in Number Theory of Srinivasa Ramanujan who died at an early age are of immense magnitude. There are many famous Indian mathematicians who belong to this list. For the development of mathematics many Jain mathematicians have continuously contributed. It is percieved among common people that mathematics is difficult to learn. The skill of explaining such difficult material in simple and exact forms is one of the specialities of Jaina mathematicians. Tattvārthādhigama sūtra, Sthānaṅga sūtra, Jambūdvīpa Prajñapti, Tiloyapaṇṇaṭṭi, Kṣetrasamāsa and Gaṇitasārasaṅgraha are important ancient Jaina mathematical works.

Mahāvīrācārya (C.9th century A.D.) was a famous mathematician from the Jaina School who is counted among the wellknown scholars Āryabhaṭa (C.5th century A.D), Varāhamihira (C. 6th century A.D.) and Brahmagupta (C. 7th century A.D.). Not much is known about his life. According to the literature available he hailed from Karnataka. He enjoyed the patronage of the Rashtrakūṭa king Amoghavarsha Nṛupatunga, who ruled in Mānyakheṭa (South India) from 815 A.D. to 877 A.D. The period of Nṛupatuṅga's rule was well known for political stability and the development of art and culture. Amoghavarsha was himself a poet. The poetic work **Kavirājamārga** is his valuable contribution. But scholars opined that the real author of this work is not Nṛupatuṅga but Srivijaya who was his court poet. Jinasena, who was the author of famous work Pārśvābhyudaya used to preach Nṛupatuṅga regarding religious matters. In due course, Nṛupatuṅga after renunciating his kingdom became a Jaina ascetic. This is confirmed by his own Sanskrit work **Praśnottaramālika.**

Mahāvīrācārya was the author of the Sanskrit work Gaṇitasārasaṅgraha = (GSS), which is on elementary mathematics. It is a collection of mathematics of his time from the Jaina Āgama Scriptures and provides a valuable source of History of ancient Indian mathematics.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## The Way Gaṇitasārasaṅgraha Came to Light

Professor M. Rangācārya was appointed as a Professor of Sanskrit and Comparative Philology in the Presidency College at Madras. He also took charge of the office of the Government Oriental Manuscripts Library. The director of Public Instruction G.H. Stuart directed Rangācārya to find out whether there were any manuscripts. If so to publish the same with an English translation and notes. Rangācārya first found three incomplete manuscripts of Mahāvīrācārya's GSS.

Out of the three manuscripts, one is written on paper in Grantha Characters with a running commentary in Sanskrit. The other two are palm-leaf manuscripts in Kanarese Characters, which contain a brief statement in the Kanarese language of the figures relating to the various illustration problems as also of the answers to these same problems.

At the instance of G.H. Stuart, Rangācārya tried to get more manuscripts from other places and finally succeeded in getting two more manuscripts. One was from the Government Oriental Library at Mysore. This is a transcription on paper in Kanarese Characters of an original palm-leaf manuscript. It contains the whole of the work with a short commentary in Kannada by Vallabha. The other, that is, the fifth manuscript is also a transcription on paper in Kanarese Characters on a palm-leaf manuscript found in the Jain Math at Mudbidri (South Canara). This manuscript also contains the whole work and gives a brief statement of the problems and their answers.

After carefully studying and examining these five manuscripts Rangācārya was successful in translating GSS into English and in writing short notes wherever necessary. The Madras Government published this valuable work in 1912.

Dr. D.E. Smith, Professor of mathematics, Teacher's College, Columbian University, New York has written an introduction to this book. In fact, he had read a paper on GSS at the Fourth International Congress of Mathematicians held at Rome in April 1908. We quote a few lines from Smith's introduction to GSS which enrich its value.

I. "It would seem a simple matter to compare the treatises of the three or four great algebraists and to note the similarities and differences. When this is done, however, the result seems to be that the works of Brahmagupta, Mahāvīrācārya and Bhāskara may be described as similar in spirit but entirely different in detail. For example, all of these writers treat of the areas of polygons but Mahāvīrācārya is the only one to make any point of those that are re-entrant. All of these touch upon the area of a segment of a circle but all give different rules. The so called janya operator (p.209) is akin to work found in Brahmagupta and yet none of the problems is the same. The shadow problems, primitive cases of trigonometry and gnomonics suggest a similarity among these three great writers and yet those of Mahāvīrācārya are much better than the one to be found either in Brahmagupta or Bhāskara and no questions are duplicated".

II. "Prof. Rangācārya has by his great contribution to the History of Mathematics confirmed the view already taking rather concrete form that India developed an algebra of her own; that this algebra was set forth by several writers all imbued with the same spirit but all reasonably independent of one another; that India influenced Europe in the matter of algebra more than it was influenced in return. His labours have revealed to the world a writer almost unknown to European scholars and a work that is in many respects the most scholarly of any to be found in Indian mathematical literature".



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**Translators / Commentators of GSS**

Vallabha (Daivajña-Vallabha) has written commentaries both in Kannada and Telugu for GSS. Pāvalurimallanna has translated GSS into Telugu. From D.Pingree it is clear that a commentary by Varadaraja and a Rajasthani translation by Amichandra (in 1842) are also there. L.C.Jain edited and translated GSS into Hindi in 1963 and this was published by Jain Samskriti Samrakṣaka Sangha, Sholapur.

**Other Works of Mahāvīrācārya**

Different research scholars have agreed that Mahāvīrācārya is also the author of the following four works.

1. Ṣaṭṭrimśika (Ṣaṭṭrimśatika)
2. Jyotiṣapaṭala
3. Kṣetra gaṇita
4. Chattīsapūrva Uttara Pratisaha

**1. Ṣaṭṭrimśika**

On the different copies of Śaṭṭrimśatika available, the title "Chattīsi ṭīka" is also there. Its first mention was made in 1957 by Kāsalivāla[1]. According to him, one copy of Ṣaṭṭrimśatika is available at Digambar Jain Mandir, Toliyan, Jaipur. Based on Kāsalival's information, Agrawal has made the following statement in 1964.

"Mahāvīrācārya is not only the author of Gaṇitasārasaṅgraha but is also the author of the valuable works Jyotiṣa paṭala, Ṣaṭrimṣika etc."

Agrawal has also written "only algebra is discussed in Ṣaṭṭrimśika".

Based on Kāsalival's information Ambalal Shah[3] has mentioned this work in 1969. But Agrawal has not made any mention of it in his Ph.D thesis[4] (1972). Taking the summary of Agrawal's article, R.C.Gupta (1974) has stated Ṣaṭṭrimśika as one of the works of Mahāvīrācārya.

It is clear from the copy (No 465, the other copy No. 46 is not Ṣaṭṭrimśika) available at Toliyan Jain Mandir, Jaipur that the following five chapters are contained in it.

1. Parikarma Vyavahāra
2. Kalā Savarṇa Vyavahāra
3. Prakīrṇaka Vyavahāra
4. Trairāśika Vyavahāra
5. Varga Saṅkalitānayana Sūtra, Ghana Saṅkalitānayana Sūtra.

Out of these five chapters, the first four are the first five chapters of the Gaṇitasārasaṅgraha. The last, that is, the fifth chapter is different from GSS. In the beginning of this fifth chapter the following statement is given

"श्री वीतरागाय नमः छः छत्तीसमेतेन सकल 8, भिन्न जाति 6, प्रकीर्णक 10, त्रैराशिक 4, इंत्ता छत्तीस में बुदुवीराचार्यारू, पेल्हगणितवनु माधवचन्द्र त्रैविद्याचार्यारू शोध सिदरागि शोध्य सारसंग्रह मेनिसिकोबुंदु। वर्गसंकलितानयनसूत्र।"

---

1. Rājāsthān Ki Jain Shāstr Bhandaro ki Grantha Sūchi, Sri Mahāvīrji Atishaya Kṣetra, Sri Mahavirji, p.148.
2. Mahāvīrācārya ki Jain Gaṇit ko Jain den, Siddhānta Bhāskara, Āra, 24-1, 1967, p.42-43.
3. Jain Sāhity ka Brhad Itihas, part 65.
4. Abstract Appeared in Digest of Indological Studies, Vol.III, 1964, part 2, p.622-623.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



From the above it is clear that based on GSS of Mahāvīrācārya, Madhava Candra Traividya (c.11th Century A.D) has compiled this. The same Madhava Candra Traividya has written a commentary in the Trilokasāra. Actually the present form of Ṣaṭṭrimśika is not the one described by Mahāvīrācārya. It is quite possible that Mahāvīrācārya might have compiled such a work whose subject-matter is equivalent to the first five chapters of GSS and in extending this work along with footnotes, Madhava Candra Traividya might have compiled Ṣaṭṭrimśika.

### 2. Jyotiṣa Paṭala

"Jyotiṣa Paṭala" was first quoted as a work of Mahāvīrācārya by Nemichandra Shastri[1] in 1950. This was given by him in his Catalogue[2] of Mathematical and Astrological matters available at different Jain Libraries. But this is not of much value since this Catalogue does not contain the names of the Libraries.

Agrawal in his article has not only accepted this work as due to Mahāvīrācārya but also has written as follows, "Jyotiṣa Paṭala deals with planets, stars, shape and size, movement, position and number of stars. Although Jyotiṣa Paṭala is not available completely, from the available information it is clear that the Gaṇitasārasaṅgraha is used for Astronomy in this work."

But Shastri (1974) in his book has stated that this work is not available. Why does this controversy exist ? It is quite likely that this work must be in some Library. Otherwise Shastri would not have mentioned this.

### 3. Kṣetra Gaṇita

In 1980, Jyoti Prasad Jain[3] has given credit to Mahāvīrācārya for the work "Kṣetra Gaṇita". No other person has mentioned about this work. The already stated second copy (No.466) of Ṣaṭṭrimśika available at Toliyan Jain Mandir, Jaipur begins with "Atha kṣetragaṇita" and it completely deals with kṣetragaṇita. Also the available incomplete copies of GSS contain either "Ṣaṭṭrimśika" or the seventh chapter of "Kṣetra Gaṇita". Are the manuscripts which contain seventh chapter, the commentary of "Kṣetra Gaṇita"? This is a problem to be discussed.

### 4. Chattīsa Pūrva Prati Uttara Pratisaha

In 1950 itself, Nemichandra Shastri[4] has stated "Chattīsa Pūrva Prati Uttara Pratisaha" as a work of Mahāvīrācārya. He has also mentioned its availability in some of the Libraries but has not quoted the names of these Libraries. In 1980, Jyoti Prasad Jain also has accepted this work as due to Mahāvīrācārya, but Agrawal, Gupta etc. have not made any mention of it. What are the original verses for the commentaries on chattīsa, pūrva-chattīsa and uttara chattīsa, which are available at different Libraries? Are they not based on the (at present) unavailable work?

Mahāvīrācārya occupies a unique place in Indian mathematics. His contribution towards imaginary numbers, least common multiples, number of combinations, solutions

---

1. Bharatiya Jyotiş ka Pośak Jain Jyotiş Sāhity, Varṇi Abhinandan Granth Sāgar, 1950, p.470-484.
2. Tīrthaṅkar Mahāvīra aur unki Ācārya Paramapara, Jain Vidvad, Parisad, Sagar, 1974.
3. Rashṭrakūṭa yug ka Jain Sāhity Samvardhan mein yogdan, Siddhāntācārya Kailaschand Abhinandan Granth, Rewa, 1980, p.273-280.
4. Bharatiya Jyotiş ka Pośak Jain Jyotiş Sāhity, Varṇi Abhinandan Granth Sāgar, 1950, p.470-484.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



of algebraic equations and applications of algebra to Janya Vyavahāra and in determining the area of many strange or unfamiliar figures, are of immense magnitude. Each one who reads GSS will definitely become interested in mathematics.

Since Mahāvīrācārya happens to be from Karnataka, the motherland of Kannada, there is a need for the publication of a Kannada version of Gaṇitasārasaṅgraha so that Kannadigas may enjoy the beauty of the mathematics contained in GSS. I have the satisfaction that I could provide this for Kannadigas. My Sanskrit knowledge is limited. Hence my Kannada translation is based on the English and Hindi versions. I am too small in the literary world of Kannada. As such there may be some mistakes in the translation for which we apologise among the scholars.

In Chapter VIII, Verses 9-11$\frac{1}{2}$ we have deviated from the original English translation of Rangācārya and added the better translation of B.Datta and A.N.Singh (Hindu Geometry, revised by K.S.Shukla, Indian Journal of History of Science, 15, 1980, p.217). The reason for this change is clearly explained by R.C.Gupta (Mahāvīrācārya's Rule for the volume of Frustum-like Solids, Aligarh Journal of Oriental Studies, 3 No.1, 1980, p.31-38). He says that the translation of Rangācārya and repeated by L.C.Jain is not proper because it supposes that the rule contemplates only the two extreme-sections of the solid while actually any number of sections can be contemplated using the new translation. We have also changed the foot-notes of verses 9-11$\frac{1}{2}$ as well as verses 13$\frac{1}{2}$-18$\frac{1}{2}$ and added the one given by R.C.Gupta for the same reason.

Paramapūjya Swasti Sri Sri Devendrakīrthi Bhaṭṭāraka Mahāswamy of Sri Hombuja Jain Math gave suitable suggestions, improvements and guidance at every stage of the publication of this book. Apart from this he has published this book through Sri Siddhāntakīrti Granthamāla. I extend my revered salutations to him for this sacred work.

I am deeply indebted to Professer L.C.Jain, Jablapur for his continuous encouragement from the beginning to the end of the translation work of this book and also for writing the introduction.

I express my gratitude to Professors G.T. Narayana Rao, M.Sc (Mathematics), Sri K.B. Sadananda, M.Sc - Co-editor, Kuvempu Kannada Adhyayana Saṁsthe, Mysore University and Sri. A.M. Adiraju,M.A (Kannada) who have thoroughly read the manuscripts of Kannada translation and foot notes and gave many valuable suggestions.

I will be failing in my duty if I don't remember the help rendered by Late Vidwan Dr. M.C.Shanthamurthy,M.A,Ph.D, Reader, Department of Sanskrit, Mysore University in reading the manuscript of English transliteration of the original Sanskrit work. The book in hindi on Mahāvīrācārya authored by Dr. Anupam Jain was quite useful for me to write the preface. I am highly thankful to him for giving this book to me.

I am highly thankful to Sri.Harish and Sri.M.R.Lakshmikanth Prasad of computer-Graphics who incorporated all the corrections pointed out repeatedly in the manuscript and prepared the book with beautiful D.T.P composing. I can never forget the service of Sri Ramnath Gupta of Gupta Binding and Printing works who took the entire responsibility of printing and binding work of this book.

I am grateful to my family members Sri. D.Padma Kumar, Dr. D.P.Jayanth and Sri. D.P.Anand who continuously co-operated and encouraged me in all respects.

**FEBRUARY, 2000**
**MYSORE**

**PADMAVATHAMMA**



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



# ಪ್ರಸ್ತಾವನೆ

ಗಣಿತಶಾಸ್ತ್ರವು ಅನಾದಿಕಾಲದಿಂದ ಆಧುನಿಕ ಕಾಲದಲ್ಲಿಯೂ ಸಹ ವಿಜ್ಞಾನದ ಒಂದು ಪ್ರಮುಖ ಪ್ರಾಕಾರವೆಂದು ಪ್ರಖ್ಯಾತಿ ಪಡೆದಿದೆ. ಇದು ವಿಜ್ಞಾನದ ಒಂದು ಅವಿಭಾಜ್ಯ ಅಂಗವಾಗಿದ್ದುವಿಜ್ಞಾನದ ಮಹಾರಾಣಿ ಎಂಬ ತನ್ನದೇ ಆದಂತಹ ವಿಶಿಷ್ಟವಾದ ಸ್ಥಾನವನ್ನು ಉಳಿಸಿಕೊಂಡಿದೆ. ಗಣಿತಶಾಸ್ತ್ರದ ಮುನ್ನಡೆಗೆ ಭಾರತೀಯ ಗಣಿತಜ್ಞರು ನೀಡಿರುವ ಕೊಡುಗೆ ಅಪಾರವಾದದ್ದು ಹಾಗೂ ಅಪೂರ್ವವಾದದ್ದು. ಸೊನ್ನೆಯನ್ನು ಪ್ರಪ್ರಥಮವಾಗಿ ಪರಿಚಯಿಸಿದವರು ಭಾರತೀಯರು. ಇದಲ್ಲದೆ $\pi$ ನ ಸಮೀಪ ಬೆಲೆಯಾದ ೩.೧೪೧೬ ನ್ನು ನಿರೂಪಿಸಿದವರೂ ಸಹ ಭಾರತೀಯರೇ ಎನ್ನುವುದು ನಿಜವಾಗಿಯೂ ನಾವೆಲ್ಲಾ ಹೆಮ್ಮೆಪಡುವಂತಹ ಸಂಗತಿ. ಪ್ರಾಚೀನ ಭಾರತೀಯ ಗಣಿತಜ್ಞರಾದ ಆರ್ಯಭಟ, ಭಾಸ್ಕರ, ಬ್ರಹ್ಮಗುಪ್ತ, ಮಹಾವೀರಾಚಾರ್ಯ, ಭಾಸ್ಕರಾಚಾರ್ಯ ಮತ್ತಿತರರ ಕೊಡುಗೆಗಳು, ಇಂದಿಗೂ ಸಹ ವಿಶ್ವವಿಖ್ಯಾತವಾಗಿವೆ.

ಬಿ.ಬಿ. ದತ್ತ ಮತ್ತು ಎ.ಎನ್. ಸಿಂಗ್‌ರವರು ಅನೇಕ ವರ್ಷಗಳ ಕಾಲ ಹಿಂದೂ ಗಣಿತಶಾಸ್ತ್ರದ ಮೇಲೆ ಅದ್ವಿತೀಯವಾದ ಸಂಶೋಧನೆಯನ್ನು ಮಾಡಿದರು. ಅವರ ಪುಸ್ತಕಗಳಾದ "ಹಿಸ್ಟರಿ ಆಫ್ ಹಿಂದೂ ಮ್ಯಾಥಮ್ಯಾಟಿಕ್ಸ್ (ಸಂಪುಟ ೧ ಮತ್ತು ೨)" ಗಳಲ್ಲದೆ ಇನ್ನೂ ಅನೇಕ ಸಂಶೋಧನಾ ಲೇಖನಗಳು ವಿವಿಧ ನಿಯತಕಾಲಿಕೆಗಳಲ್ಲಿ ಮತ್ತು ಅಭಿನಂದನಾ ಗ್ರಂಥಗಳಲ್ಲಿ ಪ್ರಕಟಗೊಂಡಿವೆ. ಅವರ ಕೃತಿಯನ್ನು ಅಂತಿಮವಾಗಿ ಕೆ.ಎಸ್. ಶುಕ್ಲಾರವರು ಹಿಂದೂ ಬೀಜಗಣಿತ, ರೇಖಾಗಣಿತ ಮತ್ತು ತ್ರಿಕೋನಮಿತಿಗಳ ಮೇಲಿನ ವಿಷಯಗಳಲ್ಲಿ ಪರಿಷ್ಕರಿಸಿದ್ದಾರೆ. ಇದಾದ ನಂತರ, ಭಾರತದ ವಿಜ್ಞಾನದ ಇತಿಹಾಸದ ಬಗ್ಗೆ ಕೆಲಸ ಮಾಡುತ್ತಿರುವ ಅನೇಕ ವಿದ್ವಾಂಸರು, ವಿಜ್ಞಾನದ ಇತಿಹಾಸ ವಿಭಾಗಕ್ಕೆ ಸಂಬಂಧಿಸಿದ ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿಯಿಂದ ನಿಯೋಜಿತವಾಗಿರುವ ಪ್ರಮುಖ ಯೋಜನೆಗಳಿಗೆ, ಸಂಶೋಧನಾ ಲೇಖನಗಳಿಗೆ ಮತ್ತು ಪುಸ್ತಕಗಳಿಗೆ ಉತ್ತಮವಾದ ಕಾಣಿಕೆಯನ್ನು ನೀಡಿದ್ದಾರೆ. (ಡಿ.ಎಮ್. ಬೋಸ್, ಎಸ್.ಎನ್. ಸೆನ್ ಮತ್ತು ಬಿ.ವಿ. ಸುಬ್ಬರಾಯಪ್ಪ ಇವರ "ಎ ಕನ್‌ಸೈಸ್ ಹಿಸ್ಟರಿ ಆಫ್ ಸೈನ್ಸ್ ಇನ್ ಇಂಡಿಯಾ", ನವದೆಹಲಿ, ೧೯೭೧ ಮತ್ತು ಇಂಡಿಯನ್ ಜರ್ನಲ್ ಆಫ್ ಹಿಸ್ಟರಿ ಆಫ್ ಸೈನ್ಸ್‌ನ ನಿಯತಕಾಲಿಕೆಗಳನ್ನು ನೋಡಿ).

ಗಣಿತ ವಿಜ್ಞಾನವೆಂಬ ಗಗನದಲ್ಲಿ ಧ್ರುವತಾರೆಯಂತೆ ಪ್ರಜ್ವಲಿಸಿ ಅತ್ಯಮೋಘವಾದ ಕಾಣಿಕೆಯನ್ನು ನೀಡಿ ಅತ್ಯಲ್ಪಕಾಲದಲ್ಲೇ ಗತಿಸಿಹೋದ ಶ್ರೀನಿವಾಸ ರಾಮಾನುಜನರ ಗಣಿತಶಾಸ್ತ್ರದ ಸಂಶೋಧನೆಗಳು ಚಿರನೂತನವಾಗಿವೆ. ಇಂತಹ ಪ್ರಸಿದ್ಧ ಪುರುಷರ ಪರಂಪರೆಗೆ ಇನ್ನೂ ಹಲವಾರು ಪ್ರಖ್ಯಾತರಾದ ಭಾರತೀಯ ಗಣಿತಜ್ಞರು ಸೇರಿದ್ದಾರೆ. ಗಣಿತಶಾಸ್ತ್ರವನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯಲು ಹಲವಾರು ಜೈನ ಗಣಿತಜ್ಞರು ನಿರಂತರವಾಗಿ ಸೇವೆ ಸಲ್ಲಿಸಿರುವರು. ಗಣಿತವು ಉಕ್ಕಿನ ಕಡಲೆಯಂತೆ ಕಠಿಣವಾದದ್ದು ಎಂಬ ಪ್ರತೀತಿ ಜನಸಾಮಾನ್ಯರಲ್ಲಿ ಪ್ರಚಲಿತವಾಗಿದೆ. ಇಂತಹ ಕಷ್ಟಕರವಾದ ವಿಷಯವನ್ನು ಆದಷ್ಟು ಸರಳವಾಗಿ, ಸುಲಭವಾಗಿ ಮತ್ತು ನಿಖರವಾಗಿ ವಿವರಿಸುವ ಒಂದು ಚಾತುರ್ಯವು ಜೈನ ಗಣಿತಜ್ಞರ ವಿಶೇಷವಾಗಿದೆ. ತತ್ವಾರ್ಥಾಧಿಗಮ ಸೂತ್ರ, ಸ್ಥಾನಾಂಗ ಸೂತ್ರ, ಜಂಬೂದ್ವೀಪ ಪ್ರಜ್ಞಪ್ತಿ, ತಿಲೋಯಪಣ್ಣತ್ತಿ, ಕ್ಷೇತ್ರಸಮಾಸ ಮತ್ತು ಗಣಿತಸಾರಸಂಗ್ರಹ - ಇವುಗಳು ಪ್ರಮುಖವಾದ ಜೈನರ ಪ್ರಾಚೀನ ಗಣಿತ ಗ್ರಂಥಗಳು.

ಮಹಾವೀರಾಚಾರ್ಯರು ಪ್ರಖ್ಯಾತರಾದ ಆರ್ಯಭಟ (ಕ್ರಿ.ಶ. ೪೭೬), ವರಾಹಮಿಹಿರ (ಕ್ರಿ.ಶ. ೬ನೇ ಶತಮಾನ) ಮತ್ತು ಬ್ರಹ್ಮಗುಪ್ತ (ಕ್ರಿ.ಶ. ೬೨೮) ಇವರುಗಳ ನಂತರ ಬಂದ ಸುಪ್ರಸಿದ್ಧ ಗಣಿತಜ್ಞ. ಇವರ ವೈಯಕ್ತಿಕ ಜೀವನದ ಬಗ್ಗೆ ಹೆಚ್ಚಿಗೆ ಏನೂ ತಿಳಿದಿಲ್ಲ. ಲಭ್ಯವಿರುವ ಮಾಹಿತಿಗಳ ಪ್ರಕಾರ, ಇವರು ಕರ್ನಾಟಕದವರಾಗಿದ್ದು, ದಕ್ಷಿಣ ಭಾರತದ (ಗುಲ್ಬರ್ಗಾ ಹತ್ತಿರವಿರುವ) ಮಾನ್ಯಖೇಟದಲ್ಲಿ ಕ್ರಿ.ಶ. ೮೧೫ ರಿಂದ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



೮೭೮ ರವರೆಗೆ ದೊರೆಯಾಗಿದ್ದ ರಾಷ್ಟ್ರಕೂಟದ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿದ್ದವರು. ನೃಪತುಂಗನ ಕಾಲದಲ್ಲಿ ಸಮೃದ್ಧಿ, ರಾಜಕೀಯ ಸ್ಥಿರತೆ ಮತ್ತು ಕಲೆ, ಸಾಹಿತ್ಯಗಳ ಬೆಳವಣಿಗೆಯು ಉಚ್ಛ್ರಾಯಸ್ಥಿತಿಯಲ್ಲಿದ್ದವು. ಈತನು ಒಳ್ಳೆಯ ಸಾಹಿತಿಯೂ ಆಗಿದ್ದನು. ಕವಿರಾಜಮಾರ್ಗ ಎಂಬ ಕಾವ್ಯಶಾಸ್ತ್ರ ಗ್ರಂಥವು ನೃಪತುಂಗನ ಅತ್ಯಮೂಲ್ಯ ಕೊಡುಗೆಯಾಗಿದೆ. ಆದರೆ ವಿದ್ವಾಂಸರು ಈ ಕಾವ್ಯದ ನಿಜವಾದ ಕರ್ತೃ ನೃಪತುಂಗನ ಆಸ್ಥಾನಕವಿಯಾಗಿದ್ದ ಶ್ರೀ ವಿಜಯನೇ ಹೊರತು ನೃಪತುಂಗನಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸುಪ್ರಸಿದ್ಧ ಕೃತಿ ಪಾರ್ಶ್ವಾಭ್ಯುದಯದ ಕರ್ತೃ ಜಿನಸೇನರು ನೃಪತುಂಗನಿಗೆ ಧರ್ಮ ಬೋಧನೆಯನ್ನು ಮಾಡುತ್ತಿದ್ದರು. ಕಾಲಕ್ರಮದಲ್ಲಿ, ನೃಪತುಂಗನು ತನ್ನ ಎಲ್ಲಾ ರಾಜ್ಯವನ್ನು ತ್ಯಜಿಸಿ, ಜೈನ ಸಾಧುವಾದನು ಮತ್ತು ಧ್ಯಾನಕ್ಕಾಗಿ ಕಾಡಿಗೆ ಹೊರಟುಹೋದನು. ಇದು ಅವನದೇ ಸಂಸ್ಕೃತ ಕೃತಿಯಾದ ಪ್ರಶ್ನೋತ್ತರಮಾಲಿಕಾ ದಿಂದ ಖಚಿತವಾಗುತ್ತದೆ.

ಮಹಾವೀರಾಚಾರ್ಯರು ಸರಳಗಣಿತದ ಸಂಸ್ಕೃತ ಕೃತಿಯಾದ ಗಣಿತಸಾರಸಂಗ್ರಹದ ಕರ್ತೃ. ಇದು ಅವರ ಕಾಲದ ಗಣಿತದ ಸಂಕಲನವಾಗಿದೆ. ಅಲ್ಲದೆ ಇದು ಪ್ರಾಚೀನ ಭಾರತೀಯ ಗಣಿತಶಾಸ್ತ್ರಕ್ಕೆ ಒಂದು ಅಮೂಲ್ಯವಾದ ಮೂಲಗ್ರಂಥವಾಗಿದೆ. ಗಣಿತಸಾರಸಂಗ್ರಹವು ಬಹಳ ದಿನಗಳವರೆಗೆ ಲಭ್ಯವಿರಲಿಲ್ಲ.

## ಗಣಿತಸಾರಸಂಗ್ರಹ ಬೆಳಕಿಗೆ ಬಂದ ದಾರಿ

ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಸಂಸ್ಕೃತ ಮತ್ತು ಭಾಷಾ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿದ್ದ ಎಂ. ರಂಗಾಚಾರ್ಯರು ಅಲ್ಲಿನ ಸರ್ಕಾರಿ ಪುರಾತತ್ವಹಸ್ತಪ್ರತಿಗಳ ಗ್ರಂಥಾಲಯದ ಕಾರ್ಯಭಾರವನ್ನೂ ಸಹ ವಹಿಸಿಕೊಂಡರು. ಸಾರ್ವಜನಿಕ ಶಿಕ್ಷಣದ ನಿರ್ದೇಶಕರಾಗಿದ್ದ ಜಿ.ಎಚ್. ಸ್ಪ್ರವರ್ಟ್‌ರವರು, ಹಿಂದೂ ಗಣಿತಶಾಸ್ತ್ರ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲುವಂತಹ ಯಾವುದಾದರೂ ಹಸ್ತಪ್ರತಿಗಳಿವೆಯೇ ಎಂದು ಪತ್ತೆಮಾಡಿ ಹಾಗೇನಾದರೂ ಇದ್ದರೆ ಅವುಗಳನ್ನು ಆಂಗ್ಲಭಾಷೆಗೆ ಅನುವಾದಿಸಿ ಟಿಪ್ಪಣಿ ಸಹಿತ ಪ್ರಕಟಿಸಿ ಎಂದು ರಂಗಾಚಾರ್ಯರಿಗೆ ಆದೇಶವನ್ನಿತ್ತರು. ರಂಗಾಚಾರ್ಯರಿಗೆ ಮೊದಲು ಮಹಾವೀರಾಚಾರ್ಯರ ಗಣಿತಸಾರಸಂಗ್ರಹದ ಮೂರು ಅಪೂರ್ಣ ಹಸ್ತಪ್ರತಿಗಳು ದೊರೆತವು.

ಮೂರು ಹಸ್ತಪ್ರತಿಗಳಲ್ಲಿ ಒಂದು ಕಾಗದದ ಮೇಲೆ ಬರೆದಿದ್ದ ಗ್ರಂಥ ಲಿಪಿಯಾಗಿತ್ತು. ಇದರಲ್ಲಿ ಸಂಸ್ಕೃತ ಟೀಕೆಯೂ ಸಹ ಇತ್ತು. ಉಳಿದೆರಡು, ಕನ್ನಡ ಭಾಷೆಯಲ್ಲಿ ಬರೆದಿದ್ದ ಓಲೆಗರಿ ಹಸ್ತಪ್ರತಿಗಳಾಗಿದ್ದವು. ಇವುಗಳಲ್ಲಿ, ವಿವಿಧ ಲೆಕ್ಕಗಳಿಗೆ ಸಂಬಂಧಿಸಿದ ಚಿತ್ರಗಳು ಹಾಗೂ ಕನ್ನಡ ಭಾಷೆಯಲ್ಲಿ ಇದೇ ಲೆಕ್ಕಗಳಿಗೆ ಉತ್ತರಗಳೂ ಸಹ ಇವೆ.

ಈ ಹಸ್ತಪ್ರತಿಗಳು ಅಪೂರ್ಣವಾಗಿದ್ದ ಕಾರಣ ಸ್ಪ್ರವರ್ಟ್‌ರವರ ಆದೇಶದ ಮೇರೆಗೆ, ರಂಗಾಚಾರ್ಯರು ಇತರ ಸ್ಥಳಗಳಿಂದ ಹೆಚ್ಚಿನ ಹಸ್ತಪ್ರತಿಗಳನ್ನು ಪಡೆಯಲು ಪ್ರಯತ್ನಿಸಿ ಕಡೆಗೆ ಇನ್ನೂ ಎರಡು ಹಸ್ತಪ್ರತಿಗಳನ್ನು ಪಡೆದರು. ಒಂದು ಹಸ್ತಪ್ರತಿಯು ಮೈಸೂರಿನ ಸರ್ಕಾರಿ ಪುರಾತತ್ವ ಗ್ರಂಥಾಲಯಕ್ಕೆ ಸೇರಿತ್ತು. ಇದು ಓಲೆಗರಿಯ ಮೂಲಹಸ್ತಪ್ರತಿಯಿಂದ ಕನ್ನಡ ಲಿಪಿಗೆ ಕಾಗದದ ಮೇಲೆ ಮಾಡಿದ ನಕಲಾಗಿತ್ತು. ಇದರಲ್ಲಿ ಸಂಪೂರ್ಣ ಕೃತಿಯ ಜೊತೆಗೆ ವಲ್ಲಭರವರ ಕನ್ನಡದ ಟೀಕೆಯೂ ಸಹ ಇದ್ದಿತು. ಇನ್ನೊಂದು, ಅಂದರೆ ಐದನೆಯ ಹಸ್ತಪ್ರತಿಯು ದಕ್ಷಿಣ ಕನ್ನಡದ ಮೂಡಬಿದರಿಯ ಜೈನಮಠದಿಂದ ದೊರೆತದ್ದು. ಇದೂ ಕೂಡ ಓಲೆಗರಿಯ ಹಸ್ತಪ್ರತಿಯಿಂದ ಕನ್ನಡ ಭಾಷೆಗೆ ಕಾಗದದ ಮೇಲೆ ಮಾಡಿದ ನಕಲಾಗಿತ್ತು. ಇದರಲ್ಲೂ ಸಹ ಪೂರ್ಣ ಕೃತಿಯು ಇದ್ದು, ಲೆಕ್ಕಗಳ ಸಂಕ್ಷಿಪ್ತ ಹೇಳಿಕೆ ಮತ್ತು ಅವುಗಳ ಉತ್ತರಗಳಿದ್ದವು.

ಈ ಎಲ್ಲಾ ಐದು ಹಸ್ತಪ್ರತಿಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಿದ ಮೇಲೆ ರಂಗಾಚಾರ್ಯರು,



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



ಗಣಿತಸಾರಸಂಗ್ರಹದ ಆಂಗ್ಲ ಭಾಷಾನುವಾದವನ್ನು ಟಿಪ್ಪಣಿ ಸಹಿತ ಸಿದ್ಧಗೊಳಿಸಿದರು. ಈ ಅಮೂಲ್ಯವಾದ ಕೃತಿಯನ್ನು ಮದ್ರಾಸ್ ಸರ್ಕಾರವು ೧೯೧೨ ರಲ್ಲಿ ಪ್ರಕಟಿಸಿತು.

ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದಿರುವವರು ಡಾ|| ಡಿ.ಇ.ಸ್ಮಿತ್, ಗಣಿತಶಾಸ್ತ್ರ ಪ್ರಾಧ್ಯಾಪಕರು, ಟೀಚರ್ಸ್ ಕಾಲೇಜು, ಕೊಲಂಬಿಯಾ ವಿಶ್ವವಿದ್ಯಾನಿಲಯ, ನ್ಯೂಯಾರ್ಕ್. ಈ ಕೃತಿಯು ಪ್ರಕಟವಾಗುವ ಮೊದಲೇ, ಇದರ ಹಸ್ತಪ್ರತಿಗಳನ್ನು ಪರಿಶೀಲಿಸಿದ್ದ ಡಾ|| ಸ್ಮಿತ್‌ರವರು, ೧೯೦೮ ರಲ್ಲಿ ರೋಮ್‌ನಲ್ಲಿ ನಡೆದ ಗಣಿತಶಾಸ್ತ್ರಜ್ಞರ ನಾಲ್ಕನೆಯ ಅಂತರರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಗಣಿತಸಾರಸಂಗ್ರಹದ ಮೇಲೆ ಒಂದು ಸಂಶೋಧನಾತ್ಮಕ ಲೇಖನವನ್ನು ಮಂಡಿಸಿದ್ದಾರೆ. ಸ್ಮಿತ್‌ರವರ ಮುನ್ನುಡಿಯಿಂದ, ಗಣಿತಸಾರಸಂಗ್ರಹದ ಮೌಲ್ಯವನ್ನು ಎತ್ತಿತೋರಿಸುವ ಕೆಲವು ಆಯ್ದಭಾಗದ ಕನ್ನಡ ಭಾಷಾಂತರವನ್ನು ಉದ್ಧರಿಸುತ್ತೇನೆ.

೧. ಮೂರು ಅಥವಾ ನಾಲ್ಕು ಪ್ರಸಿದ್ಧ ಬೀಜಗಣಿತಜ್ಞರ ಕೆಲಸಗಳನ್ನು ಹೋಲಿಸುವುದು ಮತ್ತು ವ್ಯತ್ಯಾಸಗಳನ್ನು ಗುರುತಿಸುವುದು ಸುಲಭದ ವಿಷಯವಾಗಿ ತೋರಬಹುದು. ಇದನ್ನು ಮಾಡಿದಾಗ, ಬ್ರಹ್ಮಗುಪ್ತ, ಮಹಾವೀರಾಚಾರ್ಯ ಮತ್ತು ಭಾಸ್ಕರರ ಕೆಲಸಗಳು ಒಂದೇ ರೀತಿಯಾಗಿದ್ದಂತೆ ತೋರಿದರೂ, ವಿವರಣೆಗಳಲ್ಲಿ ಸಂಪೂರ್ಣ ಬೇರೆಯಾಗಿವೆ. ಉದಾಹರಣೆಗೆ ಎಲ್ಲರೂ ವೃತ್ತದ ಖಂಡದ ಕ್ಷೇತ್ರಫಲವನ್ನು ಚರ್ಚಿಸುತ್ತಾರೆ, ಆದರೆ ಎಲ್ಲರೂ ಬೇರೆ ಬೇರೆ ನಿಯಮಗಳನ್ನು ಕೊಡುತ್ತಾರೆ. ಛಾಯಾ ಲೆಕ್ಕಗಳು, ತ್ರಿಕೋನಮಿತಿ ಇತ್ಯಾದಿಗಳು, ಈ ಮೂರು ಪ್ರಸಿದ್ಧ ಬರಹಗಾರರಲ್ಲಿ ಒಂದೇ ರೀತಿ ತೋರಿದರೂ ಮಹಾವೀರಾಚಾರ್ಯರದು, ಬ್ರಹ್ಮಗುಪ್ತ ಅಥವಾ ಭಾಸ್ಕರರ ಕೃತಿಗಿಂತ ಉತ್ತಮವಾಗಿದೆ ಅಲ್ಲದೆ ಯಾವ ಪ್ರಶ್ನೆಯೂ ಪುನರಾವೃತಿಯಾಗಿಲ್ಲ.

೨. ಪ್ರೊಫೆಸರ್ ರಂಗಾಚಾರ್ಯರು ಗಣಿತಶಾಸ್ತ್ರ ಇತಿಹಾಸದ ತಮ್ಮ ಈ ಕೊಡುಗೆಯಿಂದ, ಭಾರತವು ತನ್ನದೇ ಆದ ಬೀಜಗಣಿತವನ್ನು ಅಭಿವೃದ್ಧಿಪಡಿಸಿದೆ ಎಂಬ ಅಭಿಪ್ರಾಯವನ್ನು ಖಚಿತಪಡಿಸಿದ್ದಾರೆ. ಬೀಜಗಣಿತದ ವಿಷಯದಲ್ಲಿ ಯೂರೋಪಿನ ಮೇಲೆ ಭಾರತದ ಪ್ರಭಾವ, ಭಾರತದ ಮೇಲೆ ಯೂರೋಪಿನ ಪ್ರಭಾವಕ್ಕಿಂತ ಅಧಿಕವಾಗಿತ್ತು. ಅವರ (ರಂಗಾಚಾರ್ಯರ) ಶ್ರಮವು, ಯೂರೋಪಿನ ವಿದ್ವಾಂಸರಿಗೆ ತಿಳಿದೇ ಇಲ್ಲದ ಒಬ್ಬ ಲೇಖಕನನ್ನು ಪ್ರಪಂಚಕ್ಕೆ ತಿಳಿಯಪಡಿಸಿದಂತಾಗಿದೆ. ಅಲ್ಲದೆ ಭಾರತೀಯ ಗಣಿತಶಾಸ್ತ್ರಸಾಹಿತ್ಯಕ್ಕೆ ಒಂದು ಉತ್ತಮ ಕಾಣಿಕೆಯನ್ನು ನೀಡಿದಂತಾಗಿದೆ.

## ಗಣಿತಸಾರಸಂಗ್ರಹದ ಅನುವಾದಕರು ಹಾಗೂ ಟೀಕಾಕಾರರು

ವಲ್ಲಭ (ದೈವಜ್ಞ-ವಲ್ಲಭ) ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಗಣಿತಸಾರಸಂಗ್ರಹಕ್ಕೆ ಟೀಕೆಗಳನ್ನು ಬರೆದಿದ್ದಾರೆ. ಪಾವಲೂರಿ ಮಲ್ಲಣ್ಣನವರು ಗಣಿತಸಾರಸಂಗ್ರಹವನ್ನು ತೆಲುಗು ಭಾಷೆಗೆ ಭಾಷಾಂತರಿಸಿದ್ದಾರೆ. ಡಿ. ಪಿಂಗ್ರಿಯವರ ಕೃತಿಯಿಂದ ಗಣಿತಸಾರಸಂಗ್ರಹಕ್ಕೆ ವರದರಾಜರ ಟೀಕೆಯೂ ಅಮಿಚಂದ್ರರ ರಾಜಸ್ಥಾನೀ ಭಾಷಾಂತರವೂ (೧೮೪೨) ಇರುವುದು ತಿಳಿದುಬರುತ್ತದೆ. ಎಲ್.ಸಿ. ಜೈನ್‌ರವರು ಗಣಿತಸಾರಸಂಗ್ರಹವನ್ನು ಹಿಂದಿ ಭಾಷೆಗೆ ಅನುವಾದ ಮಾಡಿದ್ದಾರೆ ಮತ್ತು ಇದನ್ನು ಶೋಲಾಪುರ ಜೈನ ಸಂಸ್ಕೃತಿ ಸಂರಕ್ಷಕ ಸಂಘದವರು ೧೯೬೩ ರಲ್ಲಿ ಪ್ರಕಟಿಸಿದ್ದಾರೆ.

## ಮಹಾವೀರಾಚಾರ್ಯರ ಇತರ ಕೃತಿಗಳು

ಮಹಾವೀರಾಚಾರ್ಯರು ಈ ಕೆಳಗೆ ತಿಳಿಸಿರುವ ನಾಲ್ಕು ಕೃತಿಗಳ ಕರ್ತೃವೂ ಸಹ ಆಗಿದ್ದಾರೆಂದು ಅನೇಕ ಸಂಶೋಧಕರು ಒಪ್ಪಿಕೊಂಡಿದ್ದಾರೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



೧. ಷಟ್‌ತ್ರಿಂಶಿಕಾ (ಷಟ್‌ತ್ರಿಂಶತಿಕಾ)

೨. ಜ್ಯೋತಿಷಪಟಲ

೩. ಕ್ಷೇತ್ರಗಣಿತ

೪. ಚತ್ತೀಸಪೂರ್ವ ಉತ್ತರ ಪ್ರತಿಸಹ

೧. **ಷಟ್‌ತ್ರಿಂಶಿಕಾ :** ಲಭ್ಯವಿರುವ ಷಟ್‌ತ್ರಿಂಶಿಕಾದ ಬೇರೆ ಬೇರೆ ಪ್ರತಿಗಳಲ್ಲಿ "ಚತ್ತೀಸೀ ಟೀಕಾ" ಎಂಬ ನಾಮಾಂಕಿತವೂ ಸಹ ಇದೆ. ಇದನ್ನು ಮೊದಲು ೧೯೫೭ ರಲ್ಲಿ ಉಲ್ಲೇಖಿಸಿದವರು ಕಾಸಲೀವಾಲ್[೧]. ಅವರ ಪ್ರಕಾರ ಷಟ್‌ತ್ರಿಂಶಿಕಾದ ಒಂದು ಪ್ರತಿ ಜಯಪುರದ ಟೋಲಿಯಾಂನ ದಿಗಂಬರ ಜೈನ ಮಂದಿರದಲ್ಲಿದೆ. ಕಾಸಲೀವಾಲರ ಸೂಚನೆಯ ಆಧಾರದ ಮೇಲೆ, ಅಗ್ರವಾಲ್[೨]ರು ೧೯೬೪ ರಲ್ಲಿ ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ.

"ಮಹಾವೀರಾಚಾರ್ಯರು ಗಣಿತಸಾರಸಂಗ್ರಹದ ಜೊತೆಗೆ ಜ್ಯೋತಿಷಪಟಲ, ಷಟ್‌ತ್ರಿಂಶಿಕಾ ಮುಂತಾದ ಅಮೂಲ್ಯವಾದ ಗ್ರಂಥಗಳ ಕರ್ತೃವೂ ಸಹ ಆಗಿದ್ದಾರೆ. ಷಟ್‌ತ್ರಿಂಶಿಕಾದಲ್ಲಿ ಕೇವಲ ಬೀಜಗಣಿತ ಮಾತ್ರ ಚರ್ಚಿಸಲ್ಪಟ್ಟಿದೆ".

ಕಾಸಲೀವಾಲರ ಸೂಚನೆಯ ಆಧಾರದ ಮೇಲೆ ಅಂಬಾಲಾಲ್ ಷಾ[೩]ರವರು ಷಟ್‌ತ್ರಿಂಶಿಕಾವನ್ನು ೧೯೬೯ ರಲ್ಲಿ ಉಲ್ಲೇಖಿಸಿದ್ದಾರೆ. ಅಗ್ರವಾಲ್[೪]ರ ಲೇಖನದ ಸಾರಾಂಶದಿಂದ ೧೯೭೪ ರಲ್ಲಿ ಆರ್.ಸಿ. ಗುಪ್ತಾರವರೂ ಸಹ ಷಟ್‌ತ್ರಿಂಶಿಕಾವನ್ನು ಮಹಾವೀರಾಚಾರ್ಯರ ಕೃತಿಯೆಂದು ತಿಳಿಸಿದ್ದಾರೆ.

ಜಯಪುರದ ಟೋಲಿಯಾಂ ಜೈನ ಮಂದಿರದಲ್ಲಿ ಲಭ್ಯವಿರುವ ಷಟ್‌ತ್ರಿಂಶಿಕಾದ ಪ್ರತಿಯಿಂದ (ಸಂಖ್ಯೆ ೪೬೫) ಇದರಲ್ಲಿ ಮುಂದೆ ತಿಳಿಸಿರುವ ಐದು ಅಧ್ಯಾಯಗಳಿವೆ ಎಂಬುದು ಸ್ಪಷ್ಟವಾಗುತ್ತದೆ.

೧. ಪರಿಕರ್ಮ ವ್ಯವಹಾರ

೨. ಕಲಾಸವರ್ಣ ವ್ಯವಹಾರ

೩. ಪ್ರಕೀರ್ಣಕ ವ್ಯವಹಾರ

೪. ತ್ರೈರಾಶಿಕ ವ್ಯವಹಾರ

೫. ವರ್ಗಸಂಕಲಿತಾನಯನ ಸೂತ್ರ, ಘನಸಂಕಲಿತಾನಯನ ಸೂತ್ರ.

ಈ ಐದು ಅಧ್ಯಾಯಗಳಲ್ಲಿ ಮೊದಲನೆಯ ನಾಲ್ಕು, ಗಣಿತಸಾರಸಂಗ್ರಹದ ಮೊದಲನೆಯ ಐದು ಅಧ್ಯಾಯಗಳಾಗಿವೆ. ಕಡೆಯ ಅಂದರೆ ಐದನೆಯ ಅಧ್ಯಾಯ ಮಾತ್ರ ಬೇರೆಯಾಗಿದೆ. ಈ ಐದನೆಯ ಅಧ್ಯಾಯದ ಆರಂಭದಲ್ಲಿ ಮುಂದೆ ತಿಳಿಸಿರುವ ಹೇಳಿಕೆಯಿದೆ.

"श्री वीतरागाय नमः (छः) छत्तीसमेतेन सकल 8, भिन्न जाति 6, प्रकीर्णक 10, त्रैराशिक 4, इत्ता छत्तीस में बुद्धवीराचार्यारू, पेल्हगणितवनु माधवचन्द्र त्रैविद्याचार्यारू शोध सिदरागि शोध्य सारसंग्रह मेनिसिकोबुद्धु। वर्गसंकलितानयनसूत्र।"

ಮೇಲಿನ ಹೇಳಿಕೆಯಿಂದ, ಮಹಾವೀರಾಚಾರ್ಯರ ಗಣಿತಸಾರಸಂಗ್ರಹವನ್ನು ಆಧಾರವಾಗಿ ಇಟ್ಟುಕೊಂಡು, ಮಧ್ವಚಂದ್ರ ತ್ರೈವಿದ್ಯರು (ಕ್ರಿ.ಶ. ೧೧ ನೇ ಶತಮಾನ) ಇದನ್ನು ರಚಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

---

೧. ರಾಜಸ್ಥಾನ್ ಕಿ ಜೈನ್ ಶಾಸ್ತ್ರ ಭಂಡಾರೋ ಕೀ ಗ್ರಂಥಸೂಚೀ-೫, ಶ್ರೀ ಮಹಾವೀರಜೀ ಅತಿಶಯಕ್ಷೇತ್ರ, ಶ್ರೀಮಹಾವೀರಜೀ

೨. ಮಹಾವೀರಾಚಾರ್ಯ ಕೀ ಜೈನ್ ಗಣಿತ್ ಕೊ ಜೈನ್‌ದೇನ್, ಸಿದ್ಧಾಂತ ಭಾಸ್ಕರ, ಆರ ೨೪-೧, ೧೯೬೭, ಪುಟ ೪೨-೪೭.

೩. ಜೈನ್ ಸಾಹಿತ್ಯ್ ಕಾ ಬೃಹದ್ ಇತಿಹಾಸ್, ಪಾರ್ಟ್ ೫, ಪಾರ್ಶ್ವನಾಥ್ ವಿದ್ಯಾಶ್ರಮ್ ಶೋಧ ಸಂಸ್ಥಾನ್, ವಾರಣಾಸಿ ೧೯೬೫, ಪುಟ ೧೬೦-೧೬೬.

೪. ಅಬ್‌ಸ್ಟ್ರಾಕ್ಟ್ ಅಪಿಯರ್ಡ್ ಇನ್ ಡೈಜಸ್ಟ್ ಆಫ್ ಇಂಡಲಾಜಿಕಲ್ ಸ್ಟಡೀಸ್, ಸಂಪುಟ ೩, ಭಾಗ ೨, ೧೯೬೪.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



ಈಗ ಲಭ್ಯವಿರುವ ಷಟ್‌ತ್ರಿಂಶಿಕಾವು ಮಹಾವೀರಾಚಾರ್ಯರಿಂದ ವಿವರಿಸಲ್ಪಟ್ಟಿಲ್ಲ. ಗಣಿತಸಾರಸಂಗ್ರಹದ ಮೊದಲನೆಯ ಐದು ಅಧ್ಯಾಯಗಳು ವಸ್ತುವಿಷಯವಾಗಿರುವಂತಹ ಇನ್ನೊಂದು ಕೃತಿಯನ್ನು ಮಹಾವೀರಾಚಾರ್ಯರು ರಚಿಸಿದ್ದು ಇದನ್ನು ಪಾದ ಟಿಪ್ಪಣಿಗಳೊಂದಿಗೆ ಮುಂದುವರಿಸಿ ಮಧ್ವಚಂದ್ರ ತ್ರೈವಿದ್ಯರು ಷಟ್‌ತ್ರಿಂಶಿಕಾವನ್ನು ರಚಿಸಿರುವ ಸಾಧ್ಯತೆಗಳಿವೆ.

## ೨. ಜ್ಯೋತಿಷ ಪಟಲ

"ಜ್ಯೋತಿಷ ಪಟಲ" ವನ್ನು ಮಹಾವೀರಾಚಾರ್ಯರ ಕೃತಿಯೆಂದು ೧೯೫೦ ರಲ್ಲಿ ಮೊದಲು ನೇಮಿಚಂದ್ರಶಾಸ್ತ್ರಿಗಳು ಉಲ್ಲೇಖಿಸಿದರು. ಇದನ್ನು ಅವರು ಬೇರೆ ಬೇರೆ ಜೈನ ಗ್ರಂಥಾಲಯಗಳಲ್ಲಿ ಲಭ್ಯವಿರುವ ಗಣಿತ ಮತ್ತು ಜ್ಯೋತಿಷ ವಿಷಯಗಳ ಸೂಚಿಯಲ್ಲಿ ಕೊಟ್ಟಿದ್ದಾರೆ. ಆದರೆ ಇದರಲ್ಲಿ ಗ್ರಂಥಾಲಯಗಳ ಹೆಸರುಗಳು ಇಲ್ಲದಿರುವುದರಿಂದ ಅಂತಹ ಉಪಯೋಗವಾಗುವುದಿಲ್ಲ.

ತಮ್ಮ ಲೇಖನದಲ್ಲಿ ಅಗ್ರವಾಲರು ಜ್ಯೋತಿಷ ಪಟಲವನ್ನು ಮಹಾವೀರಾಚಾರ್ಯರ ಕೃತಿಯೆಂದು ಒಪ್ಪಿಕೊಂಡಿರುವುದಲ್ಲದೆ ಮುಂದೆ ತಿಳಿಸಿರುವ ಹೇಳಿಕೆಯನ್ನಿತ್ತಿದ್ದಾರೆ.

"ಜ್ಯೋತಿಷ ಪಟಲವು ಗ್ರಹಗಳು, ನಕ್ಷತ್ರಗಳು, ಅವುಗಳ ಚಲನೆ, ಸ್ಥಾನ ಮತ್ತು ನಕ್ಷತ್ರಗಳ ಸಂಖ್ಯೆಯ ವಿಷಯದಲ್ಲಿದೆ. ಜ್ಯೋತಿಷ ಪಟಲವು ಸಂಪೂರ್ಣವಾಗಿ ದೊರೆತಿಲ್ಲವಾದರೂ ಸಿಕ್ಕಿರುವ ಮಾಹಿತಿಗಳಿಂದ ಈ ಕೃತಿಯಲ್ಲಿ ಗಣಿತಸಾರಸಂಗ್ರಹವನ್ನು ಖಗೋಳ ಶಾಸ್ತ್ರಕ್ಕಾಗಿ ಬಳಸಿರುವುದು ಸ್ಪಷ್ಟವಾಗಿದೆ."

ಆದರೆ ಶಾಸ್ತ್ರಿಗಳು ತಮ್ಮ ಪುಸ್ತಕದಲ್ಲಿ ಜ್ಯೋತಿಷ ಪಟಲವು ಲಭ್ಯವಿಲ್ಲ ಎಂದಿದ್ದಾರೆ. ಈ ವಿರೋಧಾಭಾಸವೇಕೆ ? ಈ ಕೃತಿಯು ಯಾವುದಾದರೂ ಒಂದು ಗ್ರಂಥಾಲಯದಲ್ಲಿ ಇರುವ ಸಾಧ್ಯತೆ ಇದೆ. ಇಲ್ಲದಿದ್ದರೆ ಶಾಸ್ತ್ರಿಗಳು ಇದನ್ನು ಉಲ್ಲೇಖಿಸುತ್ತಿರಲಿಲ್ಲ.

## ೩. ಕ್ಷೇತ್ರಗಣಿತ

೧೯೮೦ ರಲ್ಲಿ ಜ್ಯೋತಿಪ್ರಸಾದ್ ಜೈನ್[೨] ರವರು ಕ್ಷೇತ್ರಗಣಿತವನ್ನು ಮಹಾವೀರಾಚಾರ್ಯರ ಕೃತಿಯೆಂದು ತಿಳಿಸಿದ್ದಾರೆ. ಬೇರೆ ಯಾರೂ ಇದರ ಬಗ್ಗೆ ಹೇಳಿಲ್ಲ. ಈಗಾಗಲೇ ತಿಳಿಸಿರುವ ಜಯಪುರದ ಟೋಲಿಯಾಂ ಜೈನಮಂದಿರದಲ್ಲಿ ಲಭ್ಯವಿರುವ ಷಟ್‌ತ್ರಿಂಶಿಕಾದ ಎರಡನೇ ಪ್ರತಿ (ನಂ. ೪೬೬) ಯು "ಅಥಕ್ಷೇತ್ರಗಣಿತಂ" ನಿಂದ ಆರಂಭವಾಗುತ್ತದೆ ಮತ್ತು ಇದು ಸಂಪೂರ್ಣವಾಗಿ ಕ್ಷೇತ್ರಗಣಿತದ ವಿಷಯದಲ್ಲಿದೆ. ದೊರೆತಿರುವ ಗಣಿತಸಾರಸಂಗ್ರಹದ ಅಪೂರ್ಣವಾದ ಪ್ರತಿಗಳಲ್ಲಿ "ಷಟ್‌ತ್ರಿಂಶಿಕಾ" ಅಥವಾ "ಕ್ಷೇತ್ರಗಣಿತ" ದ ಏಳನೆಯ ಅಧ್ಯಾಯವಿದೆ. ಏಳನೆಯ ಅಧ್ಯಾಯವಿರುವ ಹಸ್ತಪ್ರತಿಗಳು, ಒಂದು ವೇಳೆ "ಕ್ಷೇತ್ರಗಣಿತ" ದ ಟೀಕೆಗಳಾಗಿರಬಹುದೇ? ಇದು ವಿಚಾರಣೆ ಮಾಡಬೇಕಾದ ವಿಷಯ.

## ೪. ಚತ್ತೀಸಪೂರ್ವ ಪ್ರತಿ ಉತ್ತರ ಪ್ರತಿಸಹ

೧೯೫೦ ರಲ್ಲೇ ನೇಮಿಚಂದ್ರ ಶಾಸ್ತ್ರಿಗಳು"ಚತ್ತೀಸಪೂರ್ವ ಪ್ರತಿ ಉತ್ತರ ಪ್ರತಿಸಹ" ವನ್ನು ಮಹಾವೀರಾಚಾರ್ಯರ ಕೃತಿಯೆಂದು ತಿಳಿಸಿದ್ದಾರೆ. ಅವರು ಈ ಕೃತಿಯು ಕೆಲವು ಗ್ರಂಥಾಲಯಗಳಲ್ಲಿ ಲಭ್ಯವಿದೆ

---

೧. ತೀರ್ಥಂಕರ್ ಮಹಾವೀರ್ ಔರ್ ಉನ್‌ಕೀ ಆಚಾರ್ಯ ಪರಂಪರಾ ಭಾಗ ೪, ಜೈನ್ ವಿದ್ವದ್ ಪರಿಷದ್, ಸಾಗರ, ೧೯೭೪.

೨. ರಾಷ್ಟ್ರಕೂಟ ಯುಗ್‌ಕಾ ಜೈನ್ ಸಾಹಿತ್ಯ ಸಂವರ್ಧನ್‌ಮೆ ಯೋಗದಾನ್, ಸಿದ್ಧಾಂತಾಚಾರ್ಯ, ಕೈಲಾಸಚಂದ್ ಅಭಿನಂದನ್ ಗ್ರಂಥ್, ರೀವಾ, ೧೯೮೦, ಪುಟ ೧೭೩-೨೮೦.

೩. ಭಾರತೀಯ ಜ್ಯೋತಿಷ್ ಕಾ ಪೋಷಕ್ ಜೈನ್ ಜ್ಯೋತಿಷ್ ಸಾಹಿತ್ಯ್, ವರ್ಣೀ ಅಭಿನಂದನ ಗ್ರಂಥ ಸಾಗರ, ಸಾಗರ, ೧೯೫೦, ಪುಟ ೪೭೦-೪೮೪.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



ಎಂದು ಹೇಳಿದ್ದಾರೆ. ಆದರೆ ಗ್ರಂಥಾಲಯಗಳ ಹೆಸರುಗಳನ್ನು ತಿಳಿಸಿಲ್ಲ. ೧೯೮೦ ರಲ್ಲಿ ಜ್ಯೋತಿಪ್ರಸಾದ್ ಜೈನ್‌ರವರೂ ಸಹ ಈ ಕೃತಿಯನ್ನು ಮಹಾವೀರಾಚಾರ್ಯರದ್ದೆಂದು ಒಪ್ಪಿಕೊಂಡಿದ್ದಾರೆ.

ಆದರೆ ಅಗ್ರವಾಲರು, ಗುಪ್ತಾ ಮುಂತಾದವರು ಇದರ ಬಗ್ಗೆ ಏನನ್ನೂ ಹೇಳಿಲ್ಲ. (ಬೇರೆ ಬೇರೆ ಗ್ರಂಥಾಲಯಗಳಲ್ಲಿ ಲಭ್ಯವಿರುವ ಚತ್ತೀಸ, ಪೂರ್ವ ಚತ್ತೀಸ ಮತ್ತು ಉತ್ತರ ಚತ್ತೀಸಗಳ ಟೀಕೆಗಳಿಗೆ ಆಧಾರವಾಗಿರುವ ಮೂಲ ಶ್ಲೋಕಗಳೇನು? (ಸಧ್ಯಕ್ಕೆ) ಅಲಭ್ಯವಾಗಿರುವ ಕೃತಿಯ ಮೇಲೆ ಆಧಾರವಾಗಿಲ್ಲವೇ?

ಮಹಾವೀರಾಚಾರ್ಯರು ಭಾರತೀಯ ಗಣಿತಶಾಸ್ತ್ರದಲ್ಲಿ ಒಂದು ಉತ್ತಮ ಸ್ಥಾನವನ್ನು ಪಡೆದಿದ್ದಾರೆ. ಊಹಾಸಂಖ್ಯೆಗಳು, ಲಘುತಮ ಸಾಮಾನ್ಯ ಅಪವರ್ತನ, ವಿಕಲ್ಪಗಳ ಸಂಖ್ಯೆ, ಬೀಜಗಣಿತವನ್ನು ಜನ್ಯವ್ಯವಹಾರಗಳಲ್ಲಿ ಬಳಸುವಿಕೆ ಹಾಗೂ ಅನೇಕ ಅಪರಿಚಿತ (ಅಪರೂಪ) ಆಕೃತಿಗಳ ಕ್ಷೇತ್ರಫಲಗಳನ್ನು ಕಂಡುಹಿಡಿಯುವಿಕೆ-ಮುಂತಾದವುಗಳಿಗೆ ಮಹಾವೀರಾಚಾರ್ಯರ ಕೊಡುಗೆ ಅಪಾರವಾಗಿದೆ. ಗಣಿತಸಾರಸಂಗ್ರಹವನ್ನು ಓದಿದ ಪ್ರತಿಯೊಬ್ಬರೂ ಗಣಿತಶಾಸ್ತ್ರದ ಬಗ್ಗೆ ನಿಸ್ಸಂದೇಹವಾಗಿಯೂ ಒಲವನ್ನು ಬೆಳೆಸಿಕೊಳ್ಳುತ್ತಾರೆ.

ಮಹಾವೀರಾಚಾರ್ಯರು ಕನ್ನಡ ಭಾಷೆಯ ತಾಯ್ನಾಡಾಗಿರುವ ಕರ್ನಾಟಕದವರಾಗಿದ್ದುದರಿಂದ, ಕನ್ನಡಿಗರು ಗಣಿತಸಾರಸಂಗ್ರಹದ ಸೌಂದರ್ಯವನ್ನು ಸವಿಯಲು ಇದರ ಕನ್ನಡ ಭಾಷಾಂತರದ ಅಗತ್ಯವಿತ್ತು. ಇದನ್ನು ಕನ್ನಡಿಗರಿಗೆ ಒದಗಿಸಿಕೊಟ್ಟಿದ್ದೇನೆ ಎಂಬ ತೃಪ್ತಿ ನನಗಿದೆ. ಆದರೆ ನಾನು ಕನ್ನಡ ಸಾಹಿತ್ಯ ಲೋಕದಲ್ಲಿ ಬಹಳ ಅಲ್ಪಳು. ಆದಕಾರಣ ಭಾಷಾಂತರದಲ್ಲಿ ಹಲವು ನ್ಯೂನತೆಗಳಿರಬಹುದು. ಇದನ್ನು ಪರಿಗಣಿಸಿ ಸಹೃದಯರು ನನ್ನನ್ನು ಕ್ಷಮಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಾಯ ೮ ರ 9-11$\frac{1}{2}$ ಶ್ಲೋಕಗಳಲ್ಲಿ ರಂಗಾಚಾರ್ಯರ ಮೂಲ ಅನುವಾದವನ್ನು ಬದಲಿಸಿ ಬಿ. ದತ್ತಾ ಹಾಗೂ ಎ.ಎನ್. ಸಿಂಗ್ (ಹಿಂದೂ ಜಾಮಿಟ್ರಿ, ರಿವೈಸ್ಡ್ ಬೈ ಕೆ.ಎಸ್. ಶುಕ್ಲಾ, ಇಂಡಿಯನ್ ಜರ್ನಲ್ ಆಫ್ ಹಿಸ್ಟರಿ ಆಫ್ ಸೈನ್ಸ್, 15, 1980, ಪುಟ 217) ರವರ ಉತ್ತಮ ಭಾಷಾಂತರವನ್ನು ಕೊಟ್ಟಿದ್ದೇವೆ. ಈ ಬದಲಾವಣೆಗೆ ಕಾರಣವೇನೆಂದು ಆರ್.ಸಿ. ಗುಪ್ತಾ (ಮಹಾವೀರಾಚಾರ್ಯಸ್ ರೂಲ್ ಫಾರ್ ದಿ ವಾಲ್ಯೂಮ್ ಆಫ್ ಫ್ರುಸ್ಟಮ್-ಲೈಕ್ ಸಾಲಿಡ್ಸ್, ಆಲಿಗರ್ ಜರ್ನಲ್ ಆಫ್ ಓರಿಯಂಟಲ್ ಸ್ಟಡೀಸ್, 3, ನಂ. 1, 1980, 31-38) ರವರ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಅವರು, "ರಂಗಾಚಾರ್ಯರ ಮತ್ತು ಇದನ್ನೇ ಪುನರಾವರ್ತಿಸಿರುವ ಎಲ್.ಸಿ. ಜೈನ್‌ರವರ ಭಾಷಾಂತರಗಳು ಅಷ್ಟೊಂದು ಸಮರ್ಪಕವಾಗಿಲ್ಲ. ಏಕೆಂದರೆ, ಇದು ಘನದ (ಮೇಲಿನ ಮತ್ತು ಪಾದದ) ಎರಡು ಅಂತಿಮ ಛೇದಗಳನ್ನು ಮಾತ್ರ ಉದ್ದೇಶಿಸುತ್ತದೆ. ಆದರೆ ಹೊಸ ಭಾಷಾಂತರದಿಂದ ಛೇದಗಳ ಸಂಖ್ಯೆ ಎಷ್ಟು ಬೇಕಾದರೂ ಆಗಿರಬಹುದು" ಎಂದು ಹೇಳಿದ್ದಾರೆ. ಇದೇ ಕಾರಣಕಾಗಿ 9-11$\frac{1}{2}$ ಹಾಗೂ 13$\frac{1}{2}$-18$\frac{1}{2}$ ಶ್ಲೋಕಗಳ ಪಾದ-ಟಿಪ್ಪಣಿಗಳನ್ನೂ ಸಹ ತೆಗೆದು, ಅವುಗಳ ಬದಲಿಗೆ ಗುಪ್ತಾರವರು ಕೊಟ್ಟಿರುವ ಉದಾಹರಣೆಗಳನ್ನು ಸೇರಿಸಿದ್ದೇವೆ.

ಶ್ರೀ ಹೊಂಬುಜ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಶ್ರೀ ಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ಈ ಪುಸ್ತಕ ಪ್ರಕಟಣೆಯ ಪ್ರತಿಹಂತದಲ್ಲೂ ಸೂಕ್ತ ಸೂಚನೆ, ಸಲಹೆ ಹಾಗೂ ಮಾರ್ಗದರ್ಶನ ನೀಡಿದ್ದಾರೆ. ಅಲ್ಲದೆ ಶ್ರೀ ಸಿದ್ಧಾಂತಕೀರ್ತಿ ಗ್ರಂಥಮಾಲೆಯ ವತಿಯಿಂದ ಪುಸ್ತಕವನ್ನು ಪ್ರಕಟಿಸಿದ್ದಾರೆ. ಈ ಸತ್ಕಾರ್ಯವನ್ನು ಮಾಡಿರುವ ಇವರಿಗೆ ನನ್ನ ಭಕ್ತಿಪೂರ್ವಕವಾದ ನಮನಗಳು.

ಈ ಪುಸ್ತಕದ ಅನುವಾದ ಕಾರ್ಯದ ಆರಂಭದಿಂದ ಅಂತಿಮ ಹಂತದವರೆಗೆ ಅವಿರತವಾಗಿ ಪ್ರೋತ್ಸಾಹಿಸಿದ ಹಾಗೂ ಪೀಠಿಕೆಯನ್ನು ಬರೆದುಕೊಟ್ಟಿರುವ ಪ್ರೊಫೆಸರ್ ಎಲ್.ಸಿ. ಜೈನ್, ಜಬ್ಬಲ್‌ಪುರ ಇವರಿಗೆ ನಾನು ಚಿರಋಣಿಯಾಗಿದ್ದೇನೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



ಕನ್ನಡ ಅನುವಾದ ಹಾಗೂ ಟಿಪ್ಪಣಿಗಳ ಹಸ್ತಪ್ರತಿಯನ್ನು ಕೂಲಂಕುಷವಾಗಿ ಓದಿ ಹಲವಾರು ಸಲಹೆಗಳನ್ನಿತ್ತ ಶ್ರೀ ಜಿ.ಟಿ. ನಾರಾಯಣರಾವ್ ಎಂ.ಎಸ್ಸಿ. (ಗಣಿತ ಶಾಸ್ತ್ರ) ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹ-ಸಂಪಾದಕರಾಗಿದ್ದ ಶ್ರೀ ಕೆ.ಬಿ. ಸದಾನಂದ, ಎಂ.ಎಸ್ಸಿ ಮತ್ತು ಶ್ರೀ ಎ.ಎಂ. ಆದಿರಾಜ್, ಎಂ.ಎ (ಕನ್ನಡ) ಇವರುಗಳಿಗೆ ನಾನು ಆಭಾರಿಯಾಗಿದ್ದೇನೆ.

ಸಂಸ್ಕೃತದ ಆಂಗ್ಲಭಾಷೆಯ ಲಿಪ್ಯಂತರವನ್ನು ಓದಿ ಸಹಕರಿಸಿದ ದಿವಂಗತ ವಿದ್ವಾನ್ ಡಾ ॥ಎಂ.ಸಿ. ಶಾಂತಮೂರ್ತಿ, ಎಂ.ಎ.ಪಿ.ಎಚ್.ಡಿ, ರೀಡರ್, ಸಂಸ್ಕೃತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ನಾನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಡಾ ॥ ಅನುಪಮ್ ಜೈನ್‌ರವರು ಮಹಾವೀರಾಚಾರ್ಯರನ್ನು ಕುರಿತು ಹಿಂದಿ ಭಾಷೆಯಲ್ಲಿ ಬರೆದಿರುವ ಪುಸ್ತಕವು ನನಗೆ ಪ್ರಸ್ತಾವನೆ ಬರೆಯಲು ಬಹಳ ಸಹಾಯವಾಯಿತು. ಈ ಪುಸ್ತಕವನ್ನು ನೀಡಿದ ಇವರಿಗೆ ನನ್ನ ನಮನಗಳು.

ಅನೇಕ ಬಾರಿ ಕರಡುಗಳಲ್ಲಿ ಸೂಚಿಸಿದ ತಿದ್ದುಪಡಿಗಳನ್ನು ಸ್ವಲ್ಪವೂ ಬೇಸರಿಸದೆ ಸರಿಪಡಿಸಿ ಈ ಗ್ರಂಥದ ಸುಂದರ ಡಿ.ಟಿ.ಪಿ. ಕಂಪೋಸಿಂಗ್ ಮಾಡಿಕೊಟ್ಟ ಕಂಪ್ಯೂಟರ್ ಗ್ರಾಫಿಕ್ಸ್‌ನ ಶ್ರೀ ಎಚ್. ಹರೀಶ್ ಮತ್ತು ಶ್ರೀ ಎಂ.ಆರ್. ಲಕ್ಷ್ಮೀಕಾಂತ್ ಪ್ರಸಾದ್ ಇವರುಗಳಿಗೆ ನನ್ನ ವಂದನೆಗಳು. ಮುದ್ರಣ ಹಾಗೂ ಬೈಂಡಿಂಗ್ ಕೆಲಸದ ಪ್ರತಿ ಹಂತದಲ್ಲೂ ಸಂಪೂರ್ಣ ಹೊಣೆಹೊತ್ತ ಗುಪ್ತ ಬೈಂಡಿಂಗ್ ಮತ್ತು ಪ್ರಿಂಟಿಂಗ್ ವರ್ಕ್ಸ್‌ನ ಮಾಲೀಕರಾದ ಶ್ರೀ ರಾಮನಾಥ ಗುಪ್ತರವರ ಸೇವೆಯನ್ನು ನಾನು ಎಂದಿಗೂ ಮರೆಯುವಂತಿಲ್ಲ.

ಈ ಗ್ರಂಥದ ಕಾರ್ಯದಲ್ಲಿ ಸರ್ವವಿಧದಲ್ಲಿಯೂ ಸಹಕರಿಸಿ ಪ್ರೋತ್ಸಾಹಿಸಿದ ಮನೆಮಂದಿಯವರಾದ ಶ್ರೀ ಡಿ. ಪದ್ಮಕುಮಾರ್, ಡಾ॥ಡಿ.ಪಿ. ಜಯಂತ್ ಮತ್ತು ಶ್ರೀ ಡಿ.ಪಿ. ಆನಂದ್ ಇವರುಗಳಿಗೆ ನಾನು ಚಿರಋಣಿಯಾಗಿದ್ದೇನೆ.

ಫೆಬ್ರುವರಿ, ೨೦೦೦
ಮೈಸೂರು

ಪದ್ಮಾವತಮ್ಮ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri

# गणितसारसङ्ग्रहः

CC-0. Gurukul Kangri Collection, Haridwar

Digitized by Arya Samaj Foundation Chennai and eGangotri



# CONTENTS


**संज्ञाधिकार :**

| | |
|---|---|
| मङ्गलाचरणम् | 1 |
| गणितशास्त्रप्रशंसा | 4 |
| संज्ञा | 8 |
| क्षेत्रपरिभाषा | 8 |
| कालपरिभाषा | 10 |
| धान्यपरिभाषा | 11 |
| सुवर्णपरिभाषा | 12 |
| लोहपरिभाषा | 13 |
| परिकर्मनामानि | 15 |
| धनर्णशून्यविषयकसामान्यनियमाः | 15 |
| सख्यासंज्ञा | 16 |
| स्थाननामानि | 18 |
| गणकगुणनिरूपणम् | 19 |

**परिकर्मव्यवहार :**

| | |
|---|---|
| प्रत्युत्पन्नः | 21 |
| भागहारः | 28 |
| वर्गः | 31 |
| वर्गमूलम् | 35 |
| घनः | 37 |
| घनमूलम् | 41 |
| सङ्कलितम् | 45 |
| व्युत्कलितम् | 73 |

**कालसवर्णव्यवहार :**

| | |
|---|---|
| भिन्नप्रत्युत्पन्नः | 81 |
| भिन्नभागहारः | 83 |
| भिन्नवर्गवर्गमूलघनघनमूलानि | 85 |
| भिन्नसङ्कलितम् | 88 |
| भिन्नव्युत्कलितम् | 102 |
| कलासवर्णषड्जातिः | 106 |
| भागजतिः | 106 |




CC-0. Gurukul Kangri Collection, Haridwar

Digitized by Arya Samaj Foundation Chennai and eGangotri




प्रभागभागभागजाती ..... ..... ..... 131
भागानुबन्धजातिः ..... ..... ..... 137
भागापवाहजातिः ..... ..... ..... 143
भागमातृजातिः ..... ..... ..... 151

**प्रकीर्णकव्यवहार :**
भागजातिशेषजाती ..... ..... ..... 157
मूलजातिः ..... ..... ..... 169
शेषमूलजातिः ..... ..... ..... 172
द्विरग्रशेषमूलजातिः ..... ..... ..... 175
अंशमूलजातिः ..... ..... ..... 178
भागसंवर्गजातिः ..... ..... ..... 183
ऊनाधिकांशवर्गजातिः ..... ..... ..... 185
मूलमिश्रजातिः ..... ..... ..... 187
भिन्नदृश्यजातिः ..... ..... ..... 190

**त्रैराशिकव्यवहार :**
त्रैराशिकः ..... ..... ..... 194
गतिनिवृत्तिः ..... ..... ..... 202
पञ्चसप्तनवराशिकाः ..... ..... ..... 202

**मिश्रकव्यवहार :**
सङ्क्रमणसूत्रम् ..... ..... ..... 213
पञ्चराशिकविधिः ..... ..... ..... 214
वृद्धिविधानम् ..... ..... ..... 221
प्रक्षेपकुट्टीकारः ..... ..... ..... 256
वल्लिकाकुट्टीकारः ..... ..... ..... 274
विषमकुट्टीकारः ..... ..... ..... 293
सकलकुट्टीकारः ..... ..... ..... 294
सुवर्णकुट्टीकारः ..... ..... ..... 322
विचित्रकुट्टीकारः ..... ..... ..... 346
श्रेढीबद्धसङ्कलितम् ..... ..... ..... 394

**क्षेत्रगणितव्यवहार :**
Since, in stanza 82, the choice of $a$ and $n$ are left to our option, the problem of finding out $a$, $n$ and $b$ from the given value of $S_{anb}$ which, being the *sarva-miśradhana*, is equal to $S + a + n + b$, resolves itself easily to the finding out of $b$ from any given value of $S_b$ in the manner above explained.

ಇಲ್ಲಿ ಯ " *ಉತ್ತರ-ಮಿಶ್ರಧನ*ವಾಗಿವೆ, ಅಂದರೆ ಯ +ಬ ಆಗಿದೆ ಮತ್ತು ಮುಂದೆ *ಗಚ್ಛ-ಮಿಶ್ರಧನ ಯ"*-
ಅಂದರೆ ಯ + ನ ವನ್ನು ಕೊಟ್ಟಿದ್ದರೆ ನ ದ ಬೆಲೆಯನ್ನು ಕಂಡುಹಿಡಿಯಬಹುದು. ಏಕೆಂದರೆ
ಯ = ಅ + (ಅ + ಬ) + (ಅ + ೨ಬ) +.....ನ ಪದಗಳವರೆಗೆ ಆಗಿದ್ದರೆ, ಆಗ
ಯ "' = (ಅ + ೧) + (ಅ + ೧ + ಬ) + (ಅ + ೧ + ೨ಬ) +.....ನ ಪದಗಳವರೆಗೆ ಆಗುತ್ತದೆ.

೮೨ ನೇ ಶ್ಲೋಕದಲ್ಲಿ ಅ ಮತ್ತು ನ ಗಳ ಆಯ್ಕೆಯನ್ನು ನಮ್ಮ ಇಚ್ಛೆಗೆ ಬಿಟ್ಟಿರುವುದರಿಂದ ಕೊಟ್ಟಿರುವಂತಹ (ಯ + ಅ + ನ + ಬ ಕ್ಕೆ ಸಮವಾದ) *ಸರ್ವ-ಮಿಶ್ರಧನ*ದಿಂದ ಅ, ನ ಮತ್ತು ಬ ಗಳನ್ನು ಕಂಡುಹಿಡಿಯುವ ಪ್ರಶ್ನೆಯು, ಯಾವುದಾದರೂ ಕೊಟ್ಟಿರುವಂತಹ ಯ " ಬೆಲೆಯಿಂದ, ಮೇಲೆ ವಿವರಿಸಿದ ರೀತಿಯಲ್ಲಿ ಬ ವನ್ನು ಕಂಡುಹಿಡಿಯುವುದಕ್ಕೆ ಸಮಾನವಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

द्वित्रिकपञ्चदशाग्रा चत्वारिंशन्मुखादिमिश्रधनम्। तत्र प्रभवं प्रचयं गच्छं सर्वं च मे ब्रूहि ॥८३॥
दृष्टधनाद्युत्तरतो द्विगुणत्रिगुणद्विभागत्रिभागादीष्टधनाद्युत्तरानयनसूत्रम् -

---

## Atroddeśakaḥ

**83.** Dvitrikapañcadaśāgrā catvāriṁśanmukhādimiśradhanam, tatra prabhavaṁ pracayaṁ gacchaṁ sarvaṁ ca me brūhi.

Dṛṣṭadhanādyuttarato dviguṇatriguṇadvibhāgatribhāgādīṣṭadhanādyuttarānayanasūtram-

---

## *Examples in illustration thereof*

**83.** Forty exceeded by 2, 3, 5 and 10, represents (in order) the *ādi-miśradhana* and the other (*miśradhanas*). Tell me what (respectively) happens in these cases to be the first term, the common difference, the number of terms and all (these three).

The rule for finding out, from the known sum, first term and common difference (of a given series in arithmetical progression), the first term and the common difference (of another series), the optionally chosen sum (whereof) is twice, three times, half, one-third or some such (multiple or fraction of the known sum of the given series) :

---

## ಉದಾಹರಣೆಗಳಿಂದ ವಿಶ್ಲೇಷಣ

ಉಃ. ೪೦ ಕ್ಕೆ ೨, ೩, ೫ ಮತ್ತು ೧೦ ನ್ನು ಸೇರಿಸಿದರೆ ಅವುಗಳು ಕ್ರಮವಾಗಿ *ಆದಿ-ಮಿಶ್ರಧನ* ಮತ್ತು ಇತರ *ಮಿಶ್ರಧನ*ಗಳಾಗುತ್ತವೆ. ಈ ಪ್ರಕರಣಗಳಲ್ಲಿ, ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ, ಪದಗಳ ಸಂಖ್ಯೆ ಮತ್ತು ಈ ಎಲ್ಲಾ ಮೂರು ಏನಾಗುತ್ತವೆ ಎಂದು ನನಗೆ ಹೇಳು.

ಕೊಟ್ಟಿರುವ ಕಲನಶ್ರೇಣಿಯ ಗೊತ್ತಿರುವ ಮೊತ್ತ, ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳಿಂದ ಬೇರೊಂದು ಶ್ರೇಣಿಯಲ್ಲಿ ಇಚ್ಛಾನುಸಾರವಾಗಿ ಆರಿಸಿದ ಮೊತ್ತವು ಕೊಟ್ಟಿರುವ ಶ್ರೇಣಿಯ ಗೊತ್ತಿರುವ ಮೊತ್ತದ ಎರಡರಷ್ಟು, ಮೂರರಷ್ಟು, ಅರ್ಧಭಾಗ, ಮೂರನೆಯ ಒಂದು ಭಾಗ ಅಥವಾ ಇಂತಹ ಮೊತ್ತದ ಗುಣಕ ಅಥವಾ ಅಪವರ್ತ್ಯವಾಗಿರುತ್ತದೋ, ಅಂತಹ ಶ್ರೇಣಿಯ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳನ್ನು ಕಂಡುಹಿಡಿಯಲು ನಿಯಮ :

---

**83.** The problem expressed in plainer terms is :
(1) Find out $a$ when $S_a = 42$, $b = 3$ and $n = 5$. (2) Find out $b$, when $S_b = 43$, $a = 2$ and $n = 5$.
(3) Find out $n$ when $S + n = 45$, $a = 2$ and $b = 3$. And
(4) Find out $a$, $b$ and $n$ when $S + a + b + n = 50$.

ಉಃ. ಸುಲಭವಾಗಿ ಹೇಳುವುದಾದರೆ ಈ ಲೆಕ್ಕವು ಹೀಗಾಗುತ್ತದೆ.
(೧) *ಯ* ' = ೪೨, *ಬ* = ೩ ಮತ್ತು *ನ* = ೫ ಆದಾಗ *ಅ* ವನ್ನು ಕಂಡುಹಿಡಿ. (೨) *ಯ* " = ೪೩, *ಅ* = ೨ ಮತ್ತು *ನ* = ೫ ಆದಾಗ *ಬ* ವನ್ನು ಕಂಡುಹಿಡಿ. (೩) *ಯ* + *ನ* = ೪೫, *ಅ* = ೨ ಮತ್ತು *ಬ* = ೩ ಆದಾಗ *ನ* ವನ್ನು ಕಂಡುಹಿಡಿ ಮತ್ತು (೪) *ಯ* + *ಅ* + *ಬ* + *ನ* = ೫೦ ಆದಾಗ *ಅ*, *ಬ* ಮತ್ತು *ನ* ಗಳನ್ನು ಕಂಡುಹಿಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



दृष्टविभक्तेष्टधनं द्विष्ठं तत्प्रचयताडितं प्रचयः ।
तत्प्रभवगुणं प्रभवो [1]गुणभागस्येष्टवित्तस्य ॥ ८४ ॥

---

**84.** Dṛṣṭavibhakteṣṭadhanaṁ dviṣṭaṁ tatpracayatāḍitaṁ pracayaḥ, tatprabhavaguṇaṁ prabhavo guṇabhāgasyeṣṭavittasya.

---

**84.** Put down in two places (for facility of working) the chosen sum as divided by the known (i.e., the given) sum; this (quotient) when multiplied by the (known) common difference gives the (required) common difference and that (same) quotient when multiplied by the (known) first term gives the (required) first term of (the series of which) the sum is either a multiple or a fraction (of the known sum of the given series).

---

ಆಳ. ಸರಳತೆಗಾಗಿ, ಆರಿಸಿದ ಮೊತ್ತವನ್ನು ಕೊಟ್ಟಿರುವ ಮೊತ್ತದಿಂದ ಭಾಗಿಸಿ ಎರಡು ಸ್ಥಾನಗಳಲ್ಲಿ ಇಡುತ್ತೇವೆ. ಗೊತ್ತಿರುವ ಸಾಮಾನ್ಯ ವ್ಯತ್ಯಾಸದಿಂದ ಈ ಭಾಗಲಬ್ಧವನ್ನು ಗುಣಿಸಿದರೆ (ಬೇಕಾದ) ಸಾಮಾನ್ಯ ವ್ಯತ್ಯಾಸವು ಸಿಗುತ್ತದೆ ಮತ್ತು ಇದೇ ಭಾಗಲಬ್ಧವನ್ನು ಗೊತ್ತಿರುವ ಪ್ರಥಮ ಪದದಿಂದ ಗುಣಿಸಿದರೆ ಬೇಕಾದ ಪ್ರಥಮ ಪದವು ಲಭಿಸುತ್ತದೆ. (ಇಲ್ಲಿ ಶ್ರೇಣಿಯ ಮೊತ್ತವು ಕೊಟ್ಟಿರುವ ಶ್ರೇಣಿಯ ಗೊತ್ತಿರುವ ಮೊತ್ತದ ಗುಣಕ ಅಥವಾ ಅಪವರ್ತ್ಯವಾಗಿರುತ್ತದೆ.)

---

1. M गुणभागाश्चुत्तरेच्छायाः

**84.** Symbolically, $a_1 = \frac{S_1}{S} a$, $b_1 = \frac{S_1}{S} b$, where $S_1$, $a_1$ and $b_1$ are the sum, the first term and the common difference, in order, of the series whose sum is chosen. Given the sums of two series, the ratio between the two first terms and that between the two common differences need not always be $\frac{S_1}{S}$. The solution here given is hence applicable only to certain particular cases.

ಆಳ. ಸಾಂಕೇತಿಕವಾಗಿ, ಅ$_1$ = $\frac{\text{ಯ}_1}{\text{ಯ}}$ ಅ, ಬ$_1$ = $\frac{\text{ಯ}_1}{\text{ಯ}}$ ಬ, ಇಲ್ಲಿ ಯ$_1$, ಅ$_1$ ಮತ್ತು ಬ$_1$ ಗಳು ಕ್ರಮವಾಗಿ ಯಾವ ಶ್ರೇಣಿಯಲ್ಲಿ ಮೊತ್ತವನ್ನು ಆರಿಸಲಾಗಿದೆಯೋ ಅಂತಹ ಶ್ರೇಣಿಯ ಮೊತ್ತ, ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳಾಗಿವೆ. ಎರಡು ಶ್ರೇಣಿಗಳ ಮೊತ್ತವನ್ನು ಕೊಟ್ಟಾಗ, ಎರಡು ಪ್ರಥಮ ಪದಗಳ ಅನುಪಾತ ಮತ್ತು ಎರಡು ಸಾಮಾನ್ಯ ವ್ಯತ್ಯಾಸಗಳು ಯಾವಾಗಲೂ $\frac{\text{ಯ}_1}{\text{ಯ}}$ ಆಗಬೇಕಾಗಿಲ್ಲ. ಇಲ್ಲಿ ಕೊಟ್ಟಿರುವ ಉತ್ತರವು ಕೇವಲ ಕೆಲವು ವಿಶಿಷ್ಟವಾದ ಸಂದರ್ಭಗಳಿಗೆ ಮಾತ್ರ ಅನ್ವಯಿಸುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

समगच्छश्चत्वारष्षष्टिर्मुखमुत्तरं ततो द्विगुणम्। तद्द्वयादि[1] हतविभक्तस्वेष्टस्याद्युत्तरे ब्रूहि ॥ ८५॥

इष्टगच्छयोर्व्यस्ताद्युत्तरसमधनद्विगुणत्रिगुणद्विभागत्रिभागादिधनानयनसूत्रम् -

---

## Atroddeśakaḥ

**85.** Samagacchaścatvāraṣṣaṣṭirmukhamuttaram tato dviguṇam, taddvadyādihatavibhaktasveṣṭasyādyuttare brūhi.

Iṣṭagacchayorvyastādyuttarasamadhanadviguṇatriguṇadvibhāgatribhāgādidhanānayanasūtram-

---

## *Examples in illustration thereof*

**85.** Sixty is the (known) first term and the (known) common difference is twice that and the number of terms is the same, i.e., 4 (in the given series as well as in all the required series). Give out the first terms and the common differences of these required (series, the sums whereof are) represented by that (known sum) as multiplied or divided by the (numbers) beginning with 2.

The rule for finding out, in relation to two (series), the number of terms wherein are optionally chosen, their mutually interchanged first term and common difference, as also their sums which may be equal, or (one of which may be) twice, thrice, half or one-third or any such (multiple or fraction of the other) :

---

## ಉದಾಹರಣೆಗಳಿಂದ ವಿಶ್ಲೇಷಣ

ಆಃ. ೬೦ (ಗೊತ್ತಿರುವ) ಪ್ರಥಮ ಪದ ಮತ್ತು ಇದರ ಎರಡರಷ್ಟು (ಗೊತ್ತಿರುವ) ಸಾಮಾನ್ಯ ವ್ಯತ್ಯಾಸ ಮತ್ತು ಪದಗಳ ಸಂಖ್ಯೆ (ಕೊಟ್ಟಿರುವ ಶ್ರೇಣಿಯಲ್ಲಿ ಹಾಗೂ ಬೇಕಾದ ಎಲ್ಲ ಶ್ರೇಣಿಗಳಲ್ಲಿ) ಒಂದೇ ಆಗಿರುತ್ತದೆ, ಅಂದರೆ ೪. ೨ ರಿಂದ ಆರಂಭವಾಗುವ ಸಂಖ್ಯೆಗಳಿಂದ ಗುಣಿಸಲ್ಪಟ್ಟ, ಅಥವಾ ಭಾಗಿಸಲ್ಪಟ್ಟ ಗೊತ್ತಿರುವ ಮೊತ್ತಗಳಿಂದ ನಿರೂಪಿತವಾದ ಈ ಬೇಕಾದ ಶ್ರೇಣಿಗಳ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳನ್ನು ತಿಳಿಸು.

ಯಾವ ಶ್ರೇಣಿಗಳಲ್ಲಿ ಪದಗಳ ಸಂಖ್ಯೆಯನ್ನು ಇಚ್ಛಾನುಸಾರವಾಗಿ ಆರಿಸಲಾಗುತ್ತದೆಯೋ ಅಂತಹ ಎರಡು ಶ್ರೇಣಿಗಳ ಪರಸ್ಪರ ವಿನಿಮಯಗೊಂಡ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸ ಹಾಗೂ ಈ ಶ್ರೇಣಿಗಳ ಮೊತ್ತಗಳನ್ನು (ಇವು ಸಮವಾಗಿರಬಹುದು ಅಥವಾ ಇವುಗಳಲ್ಲಿ ಒಂದು ಇನ್ನೊಂದರ ಎರಡರಷ್ಟು, ಮೂರರಷ್ಟು, ಅರ್ಧ, ಮೂರನೆಯ ಒಂದು ಭಾಗ ಅಥವಾ ಇಂತಹುದೇ ಯಾವುದಾದರೂ ಅಪವರ್ತ್ಯ ಅಥವಾ ಭಿನ್ನಾಂಕಗಳಾಗಿರಬಹುದು) ಕಂಡುಹಿಡಿಯಲು ನಿಯಮ :

---

1. M ಗ್ರಣೆ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



व्येकात्महतो गच्छस्वेष्टघ्नो द्विगुणितान्यपदहीनः ।
मुखमात्मोनान्यकृतिर्द्विकेष्टपदघातवर्जिता प्रचयः ॥ ८६ ॥

**अत्रोद्देशकः**

पञ्चाष्टगच्छपुंसो व्यस्तप्रभवोत्तरे समानधनम् ।
द्वित्रिगुणादिधनं वा ब्रूहि त्वं गणक विगणय्य ॥ ८७ ॥

---

86. Vyekātmahato gacchassveṣṭaghno dviguṇitānyapadahīnaḥ
mukhamātmonānyakṛtirdvikeṣṭapadaghātavarjitā pracayaḥ.

**Atroddeśakaḥ**

87. Pañcāṣṭagacchapuṁso vyarstaprabhavottare samānadhanam,
dvitriguṇādidhanaṁ vā brūhi tvaṁ gaṇaka viganayya.

---

**86.** The number of terms (in one series), multiplied by itself as lessened by one and then multiplied by the chosen (ratio between the sums of the two series) and then diminished by twice the number of terms in the other series (gives rise to the interchangeable) first term of one (of the series). The square of the (number of terms in the) other (series), diminished by that (number of terms) itself and (then) diminished (again) by the product of two (times the) chosen (ratio) and the number of terms (in the first series gives rise to the interchangeable) common difference (of that series).

***Examples in illustration thereof***

**87.** In relation to two men, (whose wealth is measured respectively by the sums of two series in arithmetical progression) having 5 and 8 for the number of terms, the first term and the common difference of both these series being interchangeable (in relation to each other); the sums (of the series) being equal or the sum (of one of them) being twice, thrice or any such (multiple of that of the other) O arithmetician give out (the value of these) sums and the interchangeable first term and common difference after calculating (them all) well.

---

೮೬. (ಒಂದು ಶ್ರೇಣಿಯಲ್ಲಿ) ಪದಗಳ ಸಂಖ್ಯೆಯನ್ನು, ಇದೇ ಸಂಖ್ಯೆಯಿಂದ ಒಂದನ್ನು ಕಡಿಮೆಮಾಡಿ ಗುಣಿಸಿ, ಆನಂತರ ಇದನ್ನು, ಆಯ್ದ ಎರಡು ಶ್ರೇಣಿಗಳ ಮೊತ್ತಗಳ ಅನುಪಾತದಿಂದ ಗುಣಿಸಿದ ನಂತರ ಇನ್ನೊಂದು ಶ್ರೇಣಿಯ ಪದಗಳ ಸಂಖ್ಯೆಯ ಎರಡರಷ್ಟರಿಂದ ಕಳೆದರೆ, ಒಂದು ಶ್ರೇಣಿಯ (ಪರಸ್ಪರ ಬದಲಾಯಿಸಲು ಯೋಗ್ಯವಾದಂತಹ) ಪ್ರಥಮ ಪದವು ದೊರೆಯುತ್ತದೆ. ಇನ್ನೊಂದು ಶ್ರೇಣಿಯ ಪದಗಳ ಸಂಖ್ಯೆಯ ವರ್ಗದಿಂದ ಅದೇ (ಪದಗಳ) ಸಂಖ್ಯೆಯಿಂದ ಕಳೆದು ಮತ್ತು ಇದನ್ನು ಪುನಃ ಆಯ್ದ ಅನುಪಾತದ ಎರಡರಷ್ಟು ಮತ್ತು ಮೊದಲನೆ ಶ್ರೇಣಿಯ ಪದಗಳ ಸಂಖ್ಯೆಗಳ ಗುಣಲಬ್ಧದಿಂದ ಕಳೆದರೆ (ಪರಸ್ಪರ ಬದಲಾಯಿಸಲು ಯೋಗ್ಯವಾದ) ಆ ಶ್ರೇಣಿಯ ಸಾಮಾನ್ಯ ವ್ಯತ್ಯಾಸವು ದೊರೆಯುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

೮೭. ಪುರುಷರಿಬ್ಬರ ಐಶ್ವರ್ಯವನ್ನು ಕ್ರಮವಾಗಿ ಎರಡು ಕಲನಶ್ರೇಣಿಗಳ ಮೊತ್ತಗಳಿಂದ ಅಳೆಯಲಾಗುತ್ತದೆ. ಈ ಶ್ರೇಣಿಗಳ ಪದಗಳ ಸಂಖ್ಯೆಗಳು ೫ ಮತ್ತು ೮. ಎರಡೂ ಶ್ರೇಣಿಗಳಲ್ಲಿ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸ ಪರಸ್ಪರ ಬದಲಾಯಿಸಲು ಯೋಗ್ಯವಾಗಿವೆ. ಶ್ರೇಣಿಗಳ ಮೊತ್ತಗಳು ಸಮವಾಗಿವೆ ಅಥವಾ ಅವುಗಳಲ್ಲಿ ಒಂದು ಇನ್ನೊಂದರ ಎರಡರಷ್ಟು, ಮೂರರಷ್ಟು, ಅಥವಾ ಇಂತಹ ಯಾವುದಾದರೂ ಅಪವರ್ತ್ಯವಾಗಿದೆ. ಎಲೈ ಗಣಿತಜ್ಞನೇ, ಚೆನ್ನಾಗಿ ಲೆಕ್ಕಾಚಾರ ಮಾಡಿದ ನಂತರ ಈ ಶ್ರೇಣಿಗಳ ಮೊತ್ತಗಳು ಮತ್ತು ಪರಸ್ಪರ ಬದಲಾಯಿಸಲು ಯೋಗ್ಯವಾದ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳನ್ನು ಹೇಳು.

---

**86.** Algebraically, $a = n(n - 1) \times p - 2n_1$ and $b = (n_1)^2 - n_1 - 2pn$, where $a$, $b$ and $n$ are the first term, the common difference and the number of terms in the first series, $n_1$ the number of terms in the second series and $p$ the ratio between the two sums : $a$ and $b$ being thus found out, the first term and the common difference of the second series are $b$ and $a$ respectively in value.

೮೬. ಬೀಜಗಣಿತರೂಪದಲ್ಲಿ, $ಅ = ನ(ನ - ೧) \times ಪ - ೨ ನ$ ಮತ್ತು $ಬ = (ನ)^2 - ನ - ೨ ಪನ$, ಇಲ್ಲಿ ಅ, ಬ ಮತ್ತು ನ ಗಳು ಕ್ರಮವಾಗಿ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಮೊದಲನೆ ಶ್ರೇಣಿಯ ಪದಗಳ ಸಂಖ್ಯೆ, ನ ಎರಡನೇ ಶ್ರೇಣಿಯ ಪದಗಳ ಸಂಖ್ಯೆ ಮತ್ತು ಪ ಎರಡು ಮೊತ್ತಗಳ ಅನುಪಾತ, ಅ ಮತ್ತು ಬ ಗಳನ್ನು ಈ ರೀತಿ ಕಂಡುಹಿಡಿದ ಮೇಲೆ ಇನ್ನೊಂದು ಶ್ರೇಣಿಯ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳು ಕ್ರಮವಾಗಿ ಬ ಮತ್ತು ಅ ಗಳಾಗುತ್ತವೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



द्वादशषोडशपदयोर्व्यस्तप्रभवोत्तरे समानधनम् ।
द्व्यादिगुणभागधनमपि कथय त्वं गणितशास्त्रज्ञ ॥ ८८ ॥
असमानोत्तरसमगच्छसमधनस्याद्युत्तरानयनसूत्रम् -
अधिकचयस्यैकादिश्चाधिकचयशेषचयविशेषो गुणितः ।
विगतैकपदार्धेन सरूपश्च मुखानि मित्र शेषचयानाम् ॥ ८९ ॥

---

**88.** Dvādaśaṣodaśapadayorvyastaprabhavottare samānadhanam, dvyādiguṇabhāgadhanamapi kathaya tvaṁ gaṇitaśāstrajña.

Asamānottarasamagacchasamadhanasyādyuttarānayanasūtram-

**89.** Adhikacayasyaikādiścādhikacayaśeṣacayaviśeṣo guṇitaḥ, vigataikapadārdhena sarūpaśca mukhāni mitra śeṣacayānām.

---

**88.** In relation to two series (in arithmetical progression), having 12 and 16 for their number of terms, the first term and the common difference are interchangeable. The sums (of the series) are equal or the sum (of one of them) is twice or any such multiple or half or any such fraction (of that of the other). You, who are versed in the science of calculation, give out (the value of these sums and the interchangeable first term and common difference).

The rule for finding out the first terms in relation to such (series in arithmetical progression) as are characterised by varying common differences, equal numbers of terms and equal sums :

**89.** Of that (series) which has the largest common difference, one is (taken to be) the first term. The difference between this largest common difference and (any other) remaining common difference is multiplied by the half of the number of terms lessened by one and when this (product) is combined with one, (we get) O friend, the first terms of (the various series having) the remaining (smaller) common differences.

---

೮೮. ೧೨ ಮತ್ತು ೧೬ ನ್ನು ಪದಗಳ ಸಂಖ್ಯೆಯನ್ನಾಗಿ ಹೊಂದಿರುವ ಎರಡು (ಕಲನ) ಶ್ರೇಣಿಗಳ ಸಂಬಂಧದಲ್ಲಿ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳು ಪರಸ್ಪರ ಬದಲಾಯಿಸಲು ಯೋಗ್ಯವಾಗಿವೆ. ಶ್ರೇಣಿಗಳ ಮೊತ್ತಗಳು ಸಮವಾಗಿವೆ ಅಥವಾ ಒಂದು ಶ್ರೇಣಿಯ ಮೊತ್ತವು ಇನ್ನೊಂದು ಶ್ರೇಣಿಯ ಮೊತ್ತದ ಎರಡರಷ್ಟು ಅಥವಾ ಇಂತಹ ಯಾವುದಾದರೂ ಅಪವರ್ತ್ಯ ಅಥವಾ ಅರ್ಧಭಾಗ ಅಥವಾ ಇಂತಹ ಯಾವುದಾದರೂ ಭಿನ್ನಾಂಕವಾಗಿದೆ. ಎಲ್ಕೆ ಗಣಿತಶಾಸ್ತ್ರಜ್ಞನೇ, ಈ ಮೊತ್ತಗಳ ಮತ್ತು ಪರಸ್ಪರ ಬದಲಾಯಿಸಲು ಯೋಗ್ಯವಾದ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳ ಬೆಲೆಗಳನ್ನು ಹೇಳು.

ಬೇರೆ ಬೇರೆ ಸಾಮಾನ್ಯ ವ್ಯತ್ಯಾಸಗಳನ್ನುಳ್ಳ, ಪದಗಳ ಸಂಖ್ಯೆಗಳು ಸಮವಾಗಿರುವ ಮತ್ತು ಮೊತ್ತಗಳು ಸಮವಾಗಿರುವ, ಕಲನಶ್ರೇಣಿಗಳ ಪ್ರಥಮ ಪದಗಳನ್ನು ಕಂಡುಹಿಡಿಯಲು ನಿಯಮ :

೮೯. ಯಾವ ಶ್ರೇಣಿಯಲ್ಲಿ ಸಾಮಾನ್ಯ ವ್ಯತ್ಯಾಸವು ಎಲ್ಲದಕ್ಕಿಂತಲೂ ಅಧಿಕವಾಗಿದೆಯೋ ಅಂತಹ ಶ್ರೇಣಿಯ ಪ್ರಥಮ ಪದವನ್ನು ಒಂದು ಎಂದು ತೆಗೆದುಕೊಳ್ಳಲಾಗುತ್ತದೆ. ಇಂತಹ ಅಧಿಕ ಸಾಮಾನ್ಯ ವ್ಯತ್ಯಾಸ ಮತ್ತು ಬೇರೆ ಉಳಿದ ಸಾಮಾನ್ಯ ವ್ಯತ್ಯಾಸದ ವ್ಯತ್ಯಾಸವನ್ನು, ಒಂದನ್ನು ಕಡಿಮೆಮಾಡಿದ ಪದಗಳ ಸಂಖ್ಯೆಯ ಅರ್ಧಭಾಗದಿಂದ ಗುಣಿಸಲಾಗುತ್ತದೆ. ನಂತರ ಈ ಗುಣಲಬ್ಧಕ್ಕೆ ಒಂದನ್ನು ಸೇರಿಸಿದರೆ, ಎಲ್ಕೆ ಸ್ನೇಹಿತನೇ, ಉಳಿದ (ಚಿಕ್ಕ) ಸಾಮಾನ್ಯ ವ್ಯತ್ಯಾಸಗಳನ್ನುಳ್ಳ ಶ್ರೇಣಿಗಳ ಪ್ರಥಮ ಪದಗಳು ದೊರೆಯುತ್ತವೆ.

---

1. M ಗಣಕಮುಖತಿಲಕ

**89.** The solution herein given is only a particular case of the general rule $a_1 = \frac{n-1}{2}(b_1 - b) + a$, where $a$ and $a_1$ are the first terms of two series and $b$ and $b_1$ their corresponding common differences. It is obvious that in this formula, when $b$, $b_1$ and $n$ are given, $a_1$ is determined by choosing any value for $a$ and one is chosen as the value of $a$ in the rule here.

೮೯. ಇಲ್ಲಿ ಕೊಟ್ಟಿರುವ ಉತ್ತರವು ಸಾಮಾನ್ಯ ಸೂತ್ರದ ಒಂದು ವಿಶಿಷ್ಟವಾದ ಸಂದರ್ಭವಾಗಿದೆ. $ಲ_1 = (ಬ_1 - ಬ)\frac{ನ-1}{2} + ಅ$, ಇಲ್ಲಿ ಅ ಮತ್ತು $ಲ_1$ ಎರಡು ಶ್ರೇಣಿಗಳ ಪ್ರಥಮ ಪದಗಳು ಮತ್ತು ಬ ಮತ್ತು $ಬ_1$ ಅವುಗಳಿಗೆ ಸಂಬಂಧಿಸಿದ ಸಾಮಾನ್ಯ ವ್ಯತ್ಯಾಸಗಳಾಗಿವೆ. ಈ ಸೂತ್ರದಲ್ಲಿ $ಬ_1$, ಬ ಮತ್ತು ನ ಗಳನ್ನು ಕೊಟ್ಟಾಗ ಯಾವುದೇ ಆರಿಸಿದ ಅ ಬೆಲೆಯಿಂದ $ಲ_1$ ನ್ನು ಕಂಡುಹಿಡಿಯಬಹುದಾಗಿದೆ ಮತ್ತು ಇಲ್ಲಿ ಅದರ ಬೆಲೆಯನ್ನು ಒಂದು ಎಂದು ತೆಗೆದುಕೊಳ್ಳಲಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

एकादिषडन्तचयानामेकत्रितयपञ्चसप्तचयानाम् ।
नवनवगच्छानां समवित्तानां चाशु वद मुखानि सखे ॥ ९० ॥
विसदृशादिसदृशगच्छसमधनानामुत्तरानयनसूत्रम् -
अधिकमुखस्यैकचयश्चाधिकमुखशेषमुखविशेषो भक्तः ।
विगतैकपदार्धेन सरूपश्च चया भवन्ति शेषमुखानाम् ॥ ९१ ॥

**Atroddeśakaḥ**

**90.** Ekādiṣaḍantacayānāmekatritayapañcasaptacayānām,
navanavagacchānāṁ samavittānāṁ cāśu vada mukhāni sakhe.
Visadṛśādisadṛśagacchasamadhanānāmuttarānayanasūtram-
**91.** Adhikamukhasyaikacayaścādhikamukhaśeṣamukhaviśeṣo bhaktaḥ,
vigataikapadārdhena sarūpaśca cayā bhavanti śeṣamukhānām.

***Examples in illustration thereof***

**90.** Give out quickly, O friend, the first terms of (all the series found in two sets of) such (series) as have equal sums (in relation to each set) and are characterised by 9 as the number of terms in each (series), when those (series belonging to the first and second sets) have (respectively) common differences beginning with 1 and ending with 6 (in one case) and have 1, 3, 5 and 7 as the common differences (in the other case).

The rule for finding out the common difference in relation to such (series in arithmetical progression) as are characterised by varying first terms, equal numbers of terms and equal sums :

**91.** Of that (series) which has the largest first term, one is taken to be the common difference. The difference between this largest first term and (each of the) remaining (smaller) first terms is divided by the half of the number of terms lessened by one and when this (quotient in each case) is combined with one, (we get) the common differences of (the various series having) the remaining (smaller) first terms.

**ಉದಾಹರಣೆಗಳಿಂದ ವಿಶ್ಲೇಷಣ**

೯೦. ಎಲೈ ಸ್ನೇಹಿತನೇ, ಸಮವಾದ ಮೊತ್ತವನ್ನುಳ್ಳ ಎರಡು ಶ್ರೇಣಿಗಳ ಪ್ರಥಮ ಪದಗಳನ್ನು ಬೇಗ ಹೇಳು. ಇವುಗಳಲ್ಲಿ ಪದಗಳ ಸಂಖ್ಯೆ ೯ ಮತ್ತು ಸಾಮಾನ್ಯ ವ್ಯತ್ಯಾಸ ಒಂದು ಶ್ರೇಣಿಯಲ್ಲಿ ಕ್ರಮವಾಗಿ ೧ ರಿಂದ ಆರಂಭವಾಗಿ ೬ ರಿಂದ ಕೊನೆಗೊಳ್ಳುತ್ತದೆ ಮತ್ತು ಇನ್ನೊಂದು ಶ್ರೇಣಿಯಲ್ಲಿ ೧, ೩, ೫ ಮತ್ತು ೭ ಸಾಮಾನ್ಯ ವ್ಯತ್ಯಾಸಗಳಾಗಿವೆ.

ಬೇರೆ ಬೇರೆ ಪ್ರಥಮ ಪದಗಳನ್ನುಳ್ಳ, ಸಮವಾದ ಪದಗಳ ಸಂಖ್ಯೆಗಳನ್ನುಳ್ಳ ಮತ್ತು ಸಮವಾದ ಮೊತ್ತಗಳನ್ನುಳ್ಳ ಕಲನಶ್ರೇಣಿಗಳ ಸಾಮಾನ್ಯ ವ್ಯತ್ಯಾಸವನ್ನು ಕಂಡುಹಿಡಿಯಲು ನಿಯಮ :

೯೧. ಯಾವ ಶ್ರೇಣಿಯಲ್ಲಿ ಪ್ರಥಮ ಪದವು ಅಧಿಕವಾಗಿದೆಯೋ ಆ ಶ್ರೇಣಿಯಲ್ಲಿ ಒಂದನ್ನು ಸಾಮಾನ್ಯ ವ್ಯತ್ಯಾಸವನ್ನಾಗಿ ತೆಗೆದುಕೊಳ್ಳಲಾಗಿದೆ. ಈ ಅಧಿಕ ಪ್ರಥಮ ಪದದ ಮತ್ತು ಉಳಿದ (ಚಿಕ್ಕದಾದ) ಎಲ್ಲ ಪ್ರಥಮ ಪದಗಳ ವ್ಯತ್ಯಾಸವನ್ನು, ಒಂದನ್ನು ಕಡಿಮೆಮಾಡಿದ ಪದಗಳ ಸಂಖ್ಯೆಯ ಅರ್ಧಭಾಗದಿಂದ ಭಾಗಿಸಬೇಕು ಮತ್ತು (ನಂತರ) ಈ ಭಾಗಲಬ್ಧಕ್ಕೆ ಒಂದನ್ನು ಸೇರಿಸಿದರೆ ಉಳಿದ (ಚಿಕ್ಕ) ಪ್ರಥಮ ಪದಗಳನ್ನು ಹೊಂದಿರುವ ವಿವಿಧ ಶ್ರೇಣಿಗಳ ಸಾಮಾನ್ಯ ವ್ಯತ್ಯಾಸಗಳು ದೊರೆಯುತ್ತವೆ.

---

**91.** The general formula in this case is $b_1 = \left\{(a - a_1) \div \frac{(n-1)}{2}\right\} + b$, wherein also the value of $b$ is taken to be one in the rule given above.

೯೧. ಈ ಸಂದರ್ಭದಲ್ಲಿ ಸಾಮಾನ್ಯ ಸೂತ್ರವು ಹೀಗಿದೆ : $ಬ_ನ = \left\{(ಅ - ಲ್ನ) \div \frac{(ನ-೧)}{೨}\right\} + ಬ$, ಇಲ್ಲಿ ಕೊಟ್ಟಿರುವ ನಿಯಮದಲ್ಲಿ $ಬ$ ದ ಬೆಲೆಯನ್ನು ೧ ಎಂದು ತೆಗೆದುಕೊಳ್ಳಲಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

एकत्रिपञ्चसप्तनवैकादशवदनपञ्चपञ्चपदानाम् ।
समवित्तानां कथयोत्तराणि गणिताब्धिपारदृश्वन् गणक ॥ ९२ ॥
अथ गुणधनगुणसङ्कलितधनयोस्सूत्रम् -
पदमितगुणहतिगुणितप्रभवस्स्याद्गुणधनं तदाद्यूनम् ।
एकोनगुणविभक्तं गुणसङ्कलितं विजानीयात् ॥ ९३ ॥

---

## Atroddeśakaḥ

**92.** Ekatripañcasaptanavaikādaśavadanapañcapañcapadānām, samavittānāṁ kathayottarāṇi gaṇitābdhipāradṛśvan gaṇaka.

Atha guṇadhanaguṇasaṅkalitadhanayossūtram-

**93.** Padamitaguṇahatiguṇitaprabhavassyādguṇadhanaṁ tadādyūnam, ekonaguṇavibhaktaṁ guṇasaṅkalitaṁ vijāniyāt.

---

## *An example in illustration thereof*

**92.** O arithmetician, who have seen the other shore of calculation, give out the common differences of (all) those (series) which are characterised by equal sums and have 1, 3, 5, 7, 9 and 11 for their first terms and 5 for the number of terms in each.

The rule for finding out the *guṇadhana* and the sum of a series in geometrical progression :

**93.** The first term (of a series in geometrical progession), when multiplied by that self-multiplied product of the common ratio in which (product the frequency of the occurrence of the common ratio is) measured by the number of terms (in the series), gives rise to the *guṇadhana*. And it has to be understood that this *guṇadhana*, when diminished by the first term and (then) divided by the common ratio lessened by one, becomes the sum of the series in geometrical progression.

---

## ಉದಾಹರಣೆಯಿಂದ ವಿಶ್ಲೇಷಣ

೯೨. ಎಲೈ ಗಣಿತರೂಪೀ ಸಮುದ್ರದ ಇನ್ನೊಂದು ದಡವನ್ನು ನೋಡಿರುವ ಗಣಿತಜ್ಞನೇ, ೧, ೩, ೫, ೭, ೯ ಮತ್ತು ೧೧ ನ್ನು ಪ್ರಥಮ ಪದಗಳನ್ನಾಗಿ ಮತ್ತು ಪ್ರತಿಯೊಂದರಲ್ಲೂ ೫ ನ್ನು ಪದಗಳ ಸಂಖ್ಯೆಗಳನ್ನಾಗಿ ಮತ್ತು ಸಮವಾದ ಮೊತ್ತಗಳನ್ನುಳ್ಳ ಎಲ್ಲ ಶ್ರೇಣಿಗಳ ಸಾಮಾನ್ಯ ವ್ಯತ್ಯಾಸಗಳನ್ನು ಕಂಡುಹಿಡಿ.

ಗುಣೋತ್ತರ ಶ್ರೇಣಿಯ ಮೊತ್ತ ಮತ್ತು ಗುಣಧನವನ್ನು ಕಂಡುಹಿಡಿಯಲು ನಿಯಮ :

೯೩. ಗುಣೋತ್ತರ ಶ್ರೇಣಿಯಲ್ಲಿನ ಪ್ರಥಮ ಪದವನ್ನು, ಸಾಮಾನ್ಯ ನಿಷ್ಪತ್ತಿಯನ್ನು ಪದೇಪದೇ (ಪದಗಳ ಸಂಖ್ಯೆಯಷ್ಟು ಸಲ) ಅದರಿಂದಲೇ ಗುಣಿಸಿ, ಬಂದಂತಹ ಗುಣಲಬ್ಧದೊಂದಿಗೆ ಗುಣಿಸಿದಾಗ ಗುಣಧನವು ಸಿಗುತ್ತದೆ. ಈ ಗುಣಧನದಿಂದ ಪ್ರಥಮ ಪದವನ್ನು ಕಳೆದು, ಆನಂತರ ಇದನ್ನು ಒಂದನ್ನು ಕಳೆದ ಸಾಮಾನ್ಯ ನಿಷ್ಪತ್ತಿಯಿಂದ ಭಾಗಿಸಿದರೆ, ಗುಣೋತ್ತರ ಶ್ರೇಣಿಯ ಮೊತ್ತವು ಲಭಿಸುತ್ತದೆ.

---

**93.** The *guṇadhana* of a series of $n$ terms in geometrical progression corresponds in value to the $(n + 1)$th term thereof, when the series is continued. The value of this *guṇadhana* algebraically stated is $r \times r \times r$.....up to $n$ such factors $\times a$, i.e., $ar^n$. Compare this with the *uttaradhana*.

This rule for finding out the sum may be algebraically expressed thus :

$S = \frac{ar^n - a}{r - 1}$, where $a$ is the first term, $r$ the common ratio and $n$ the number of terms.

೯೩. *ನ* ಪದಗಳನ್ನುಳ್ಳ ಗುಣೋತ್ತರ ಶ್ರೇಣಿಯ *ಗುಣಧನವು*, ಶ್ರೇಣಿಯನ್ನು ಮುಂದುವರೆಸಿದರೆ ಆ ಶ್ರೇಣಿಯ $(ನ + ೧)$ ಪದಕ್ಕೆ ಸಮವಾಗುತ್ತದೆ. ಬೀಜಗಣಿತರೂಪದಲ್ಲಿ ಗುಣಧನವು *ರ* x *ರ* x.....*ನ* ಗುಣಕ ಅವಯವಗಳವರೆಗೆ x *ಅ* ಅಂದರೆ $ಅರ^ನ$. ಇದನ್ನು *ಉತ್ತರಧನ*ದೊಂದಿಗೆ ಹೋಲಿಸಿನೋಡಿ.

ಬೀಜಗಣಿತರೂಪದಲ್ಲಿ, ಮೊತ್ತವನ್ನು ಕಂಡುಹಿಡಿಯುವ ಈ ನಿಯಮವನ್ನು ಹೀಗೆ ವ್ಯಕ್ತಪಡಿಸಬಹುದು :

$ಯ = \frac{ಅರ^ನ - ಅ}{ರ - ೧}$, ಇಲ್ಲಿ *ಅ* ಪ್ರಥಮ ಪದ, *ರ* ಸಾಮಾನ್ಯ ನಿಷ್ಪತ್ತಿ ಮತ್ತು *ನ* ಪದಗಳ ಸಂಖ್ಯೆಯಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



गुणसङ्कलिते अन्यदपि सूत्रम् -
समदलविषमखरूपो गुणगुणितो वर्गताडितो गच्छः ।
रूपोनः प्रभवघ्नो व्येकोत्तरभाजितस्सारम् ॥ ९४ ॥

---

Guṇasaṅkalite anyadapi sūtram-

**94.** Samadalaviṣamakharūpo guṇaguṇito vargatāḍito gacchaḥ, rūponaḥ prabhavaghno vyekottarabhājitassāram.

---

Another rule also for finding out the sum of a series in geometrical progression :

**94.** The number of terms in the series is caused to be marked (in a separate column) by zero and by one (respectively) corresponding to the even (value) which is halved and to the uneven (value from which one is subtracted till by continuing these processes zero is ultimately reached); then this (representative series made up of zero and one is used in order from the last one therein, so that this one multiplied by the common ratio is again) multiplied by the common ratio (wherever one happens to be the denoting item) and multiplied so as to obtain the square (wherever zero happens to be the denoting item). When (the result of) this (operation) is diminished by one and (is then) multiplied by the first term and (is then) divided by the common ratio lessened by one, it becomes the sum (of the series).

---

ಗುಣೋತ್ತರ ಶ್ರೇಣಿಯ ಮೊತ್ತವನ್ನು ಕಂಡುಹಿಡಿಯಲು ಮತ್ತೊಂದು ನಿಯಮ :

೯೪. ಒಂದು ಪ್ರತ್ಯೇಕವಾದ ಸ್ತಂಭದಲ್ಲಿ ಶ್ರೇಣಿಯ ಪದಗಳ ಸಂಖ್ಯೆಯನ್ನು ಸೊನ್ನೆ ಮತ್ತು ಒಂದರಿಂದ ಕ್ರಮವಾಗಿ ಪ್ರದರ್ಶಿಸಲಾಗುತ್ತದೆ. ಸಂಖ್ಯೆಯ ಬೆಲೆಯು ಸಮವಾಗಿದ್ದರೆ ಅದನ್ನು ಅರ್ಧಮಾಡಲಾಗುತ್ತದೆ ಮತ್ತು ಅದರ ಬೆಲೆಯು ಬೆಸವಾಗಿದ್ದರೆ, ಅದರಿಂದ ಒಂದನ್ನು ಕಳೆದು ಅರ್ಧಮಾಡಲಾಗುತ್ತದೆ. ಸೊನ್ನೆ ಬರುವವರೆಗೂ ಇದನ್ನು ಮುಂದುವರೆಸಲಾಗುತ್ತದೆ. ನಂತರ ಸೊನ್ನೆ ಮತ್ತು ಒಂದರಿಂದಲೇ ಪ್ರದರ್ಶಿತವಾಗಿರುವ ಈ ಶ್ರೇಣಿಯನ್ನು ಕ್ರಮವಾಗಿ ಕಡೆಯ ಒಂದರಿಂದ ಉಪಯೋಗಕ್ಕೆ ತರಲಾಗುತ್ತದೆ. ಎಲ್ಲಿ ಒಂದು ಸೂಚಿತ ಅಂಶವಾಗಿದೆಯೋ ಅಲ್ಲಿ ಸಾಮಾನ್ಯ ನಿಷ್ಪತ್ತಿ ಮತ್ತು ಈ ಒಂದರ ಗುಣಲಬ್ಧವನ್ನು ಪುನಃ ಸಾಮಾನ್ಯ ನಿಷ್ಪತ್ತಿಯಿಂದ ಗುಣಿಸಲಾಗುತ್ತದೆ ಮತ್ತು ಎಲ್ಲಿ ಸೊನ್ನೆಯು ಸೂಚಿತ ಅಂಶವಾಗಿದೆಯೋ ಅಲ್ಲಿಯೂ ಕೂಡ ವರ್ಗವನ್ನು ಪಡೆಯಲು ಗುಣಿಸಲಾಗುತ್ತದೆ. ಹೀಗೆ ಬಂದ ಸಂಖ್ಯೆಯಿಂದ ಒಂದನ್ನು ಕಳೆದು ಪುನಃ ಪ್ರಥಮ ಪದದಿಂದ ಗುಣಿಸಿ ಮತ್ತು ಒಂದನ್ನು ಕಳೆದ ಸಾಮಾನ್ಯ ನಿಷ್ಪತ್ತಿಯಿಂದ ಭಾಗಿಸಿದರೆ ಆಗ ಅದು ಶ್ರೇಣಿಯ ಮೊತ್ತವಾಗುತ್ತದೆ.

---



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**94.** This rule differs from the previous one in so far as it gives a new method for finding out $r^n$ by using the processes of squaring and ordinary multiplication and this method will become clear from the following example :

Let n in $r^n$ be equal to 12.

12 is even; it has therefore to be divided by 2 and to be denoted by 0 :

$\frac{12}{2} = 6$ ,, ,, ,, ,, 2, ,, ,, 0 :

$\frac{6}{2} = 3$ is odd; 1 is ,, ,, subtracted from it and it is ,, ,, ,, 1 :

3-1 = 2 is even; it has ,, ,, divided by 2 and to be ,, ,, ,, 0 :

$\frac{2}{2} = 1$ is odd; 1 is ,, ,, subtracted from it and it is ,, ,, ,, 1 :

1-1 = 0, which concludes this part of the operation.

Now, in the representative column of figures so derived and given in the margin

0 the lowest 1 is multiplied by $r$, which gives $r$ : since this lowest 1 has 0

0 above it, the $r$ obtained as before is squared, which gives $r^2$ : since this 0

1 has 1 above it, the $r^2$ now obtained is multiplied by $r$, which gives $r^3$ :

0 since this 1 has 0 above it, this $r^3$ is squared, which gives $r^6$ and since

1 again this 0 has another 0 above it, this $r^6$ is squared, which gives $r^{12}$.

Thus the value of r may be arrived at by using as few times as possible the processes of squaring and simple multiplication. The object of the method is to facilitate the determination of the value of $r^n$ and it is easily seen that the method holds true for all positive and integral values of $n$.

೯೪. ಈ ನಿಯಮವು ಹಿಂದಿನ ನಿಯಮಕ್ಕಿಂತ ಕೇವಲ ಈ ಕಾರಣಕ್ಕಾಗಿ ಭಿನ್ನವಾಗಿದೆ. ಅದೇನೆಂದರೆ ಇಲ್ಲಿ ವರ್ಗ ಮತ್ತು ಸರಳ ಗುಣಾಕಾರಗಳ ವಿಧಿಗಳನ್ನು ಉಪಯೋಗಕ್ಕೆ ತಂದು ($ರ^ನ$) ವನ್ನು ಹೊಸ ರೀತಿಯಲ್ಲಿ ಕಂಡುಹಿಡಿಯಲಾಗಿದೆ. ಈ ವಿಧಾನವು ಮುಂದೆ ಸಾಧಿಸಲಾಗಿರುವ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ.

($ರ^ನ$)ನಲ್ಲಿ $ನ$ದ ಬೆಲೆಯು ೧೨ ಆಗಿರಲಿ.

೧೨, ಸಮಸಂಖ್ಯೆ ಆದ್ದರಿಂದ ಇದನ್ನು ೨ ರಿಂದ ಭಾಗಿಸುತ್ತೇವೆ ಮತ್ತು ೦ ದಿಂದ ಪ್ರದರ್ಶಿಸುತ್ತೇವೆ.

$\frac{೧೨}{೨}$ = ೬, ಸಮಸಂಖ್ಯೆ. ಆದರಿಂದ ಇದನ್ನು ೨ ರಿಂದ ಭಾಗಿಸುತ್ತೇವೆ ಮತ್ತು ೦ ದಿಂದ ಪ್ರದರ್ಶಿಸುತ್ತೇವೆ.

$\frac{೬}{೨}$ = ೩, ಬೆಸಸಂಖ್ಯೆ. ಆದ್ದರಿಂದ ಇದರಿಂದ ೧ ನ್ನು ಕಳೆಯುತ್ತೇವೆ ಮತ್ತು ೧ ರಿಂದ ಪ್ರದರ್ಶಿಸುತ್ತೇವೆ.

೩ - ೧ = ೨, ಸಮಸಂಖ್ಯೆ. ಆದ್ದರಿಂದ ಇದನ್ನು ೨ ರಿಂದ ಭಾಗಿಸುತ್ತೇವೆ ಮತ್ತು ಇದನ್ನು ೦ ದಿಂದ ಪ್ರದರ್ಶಿಸುತ್ತೇವೆ.

$\frac{೨}{೨}$ = ೧, ಬೆಸಸಂಖ್ಯೆ. ಆದ್ದರಿಂದ ಇದರಿಂದ ೧ ನ್ನು ಕಳೆಯುತ್ತೇವೆ ಮತ್ತು ಇದನ್ನು ೧ ರಿಂದ ಪ್ರದರ್ಶಿಸುತ್ತೇವೆ.

೧ - ೧ = ೦. ಇಲ್ಲಿಗೆ ಈ ಕ್ರಿಯೆಯು ಮುಕ್ತಾಯವಾಗುತ್ತದೆ.

ಈಗ, ಹೀಗೆ ಬಂದಂತಹ ಮತ್ತು ಅರುಗಿನಿಲ್ಲಿ ಕೊಟ್ಟಿರುವ ನಿರೂಪಿತ ಸ್ತಂಭದ ಅಂಕಿಗಳಲ್ಲಿ ಅಂತಿಮವಾಗಿರುವ ೧

೦ ನ್ನು $ರ$ದಿಂದ ಗುಣಿಸಲಾಗುತ್ತದೆ. ಇದರಿಂದ $ರ$ ಬರುತ್ತದೆ. ಏಕೆಂದರೆ ಈ ಅಂತಿಮ ೧ $ರ$ಮೇಲೆ ೦ ಇದೆ. $ರ$

೦ ವನ್ನು ಮೇಲಿನ ರೀತಿಯಲ್ಲಿ ಪಡೆದು ವರ್ಗಮಾಡಲಾಗುತ್ತದೆ. ಇದರಿಂದ $ರ^೨$ ಬರುತ್ತದೆ. ಏಕೆಂದರೆ ಈ ೦ ದ

೧ ಮೇಲೆ ೧ ಇದೆ. $ರ^೨$ ಬಂದ ಮೇಲೆ ಇದನ್ನು $ರ$ದಿಂದ ಗುಣಿಸಿದರೆ $ರ^೩$ ನ್ನು ಕೊಡುತ್ತದೆ. ಏಕೆಂದರೆ ಈ '೧' $ರ$

೦ ಮೇಲೆ ೦ ಇದೆ. ಈ $ರ^೩$ ನ್ನು ವರ್ಗಮಾಡುತ್ತೇವೆ. ಇದರಿಂದ $ರ^೬$ ಬರುತ್ತದೆ. ಏಕೆಂದರೆ ಈ ೦ ದ ಮೇಲೆ ಮತ್ತೆ

೧ ಇನ್ನೊಂದು ೦ ಇದೆ. ಈ $ರ^೬$ ನ್ನು ವರ್ಗಮಾಡಲಾಗಿ $ರ^೧೨$ ಸಿಗುತ್ತದೆ. ಈ ರೀತಿ $ರ$ದ ಬೆಲೆಯನ್ನು ಎಷ್ಟು ಕಡಿಮೆಸಲ ಸಾಧ್ಯವೋ ಅಷ್ಟು ಸಲ ವರ್ಗ ಮತ್ತು ಸರಳ ಗುಣಾಕಾರ ಕ್ರಿಯೆಗಳಿಂದ ಪಡೆಯಬಹುದಾಗಿದೆ. ಈ ವಿಧಾನದ ಉದ್ದೇಶವೇನೆಂದರೆ $ರ^ನ$ ಬೆಲೆಯನ್ನು ಸರಳರೀತಿಯಲ್ಲಿ ಕಂಡುಹಿಡಿಯುವುದು. ಈ ವಿಧಾನವು ಸಮಸ್ತ ಧನಾತ್ಮಕ ಮತ್ತು ಪೂರ್ಣಾಂಕಗಳಿಗೂ ನಿಜವಾಗುತ್ತದೆ ಎಂಬುದು ಸ್ಪಷ್ಟವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



गुणसङ्कलितान्त्यधनानयने तत्सङ्कलितधनानयने च सूत्रम् -
गुणसङ्कलितान्त्यधनं विगतैकपदस्य गुणधनं भवति ।
तद्गुणगुणं मुखोनं व्येकोत्तरभाजितं सारम् ॥ ९५ ॥

गुणधनस्योदाहरणम् ।

स्वर्णद्वयं गृहीत्वा त्रिगुणधनं प्रतिपुरं समार्जयति ।
यः पुरुषोऽष्टनगर्यां तस्य कियद्वित्तमाचक्ष्व ॥ ९६ ॥

---

Guṇasaṅkalitāntyadhanānayane tatsaṅkalitadhanānayane ca sūtram-

**95.** Guṇasaṅkalitāntyadhanaṁ vigataikapadasya guṇadhanaṁ bhavati, tadguṇaguṇaṁ mukhonaṁ vyekottarabhājitaṁ sāram.

**Guṇadhanasyodāharaṇam**

**96.** Svarṇadvayaṁ gṛhītvā triguṇadhanaṁ pratipuraṁ samārjayati, yaḥ puruṣo'ṣṭanagaryāṁ tasya kiyadvittamācakṣva.

---

The rule for finding out the last term in a geometrically progressive series as also the sum of that (series) :

**95.** The antyadhana or the last term of a series in geometrical progression is the *guṇadhana* (of another series) wherein the number of terms is less by one. This (*antyadhana*), when multiplied by the common ratio and (then) diminished by the first term and (then) divided by the common ratio lessened by one, gives rise to the sum (of the series).

***An example in illustration thereof***

**96.** Having (first) obtained 2 golden coins (in some city) a man goes on from city to city, earning (everywhere) three times (of what he earned immediately before). Say how much he will make in the eighth city.

---

ಗುಣೋತ್ತರ ಶ್ರೇಣಿಯ ಕಡೆಯ ಪದ ಹಾಗೂ ಮೊತ್ತವನ್ನು ಕಂಡುಹಿಡಿಯಲು ನಿಯಮ :

೯೫. ಗುಣೋತ್ತರ ಶ್ರೇಣಿಯ ಅಂತ್ಯಧನ ಅಥವಾ ಕಡೆಯ ಪದವು ಒಂದು ಕಡಿಮೆಯಾಗಿರುವ ಪದಗಳ ಸಂಖ್ಯೆಯನ್ನು ಹೊಂದಿರುವ ಇನ್ನೊಂದು ಶ್ರೇಣಿಯ ಗುಣಧನವಾಗಿದೆ. ಈ ಅಂತ್ಯಧನವನ್ನು ಸಾಮಾನ್ಯ ನಿಷ್ಪತ್ತಿಯಿಂದ ಗುಣಿಸಿದ ಮೇಲೆ ಪ್ರಥಮ ಪದದಿಂದ ಕಳೆದ ಮತ್ತು ನಂತರ ಒಂದನ್ನು ಕಡಿಮೆಮಾಡಿದ ಸಾಮನ್ಯ ನಿಷ್ಪತ್ತಿಯಿಂದ ಭಾಗಿಸಿದರೆ, ಶ್ರೇಣಿಯ ಮೊತ್ತವು ದೊರೆಯುತ್ತದೆ.

**ಉದಾಹರಣೆಯಿಂದ ವಿಶ್ಲೇಷಣ**

೯೬. ಒಂದು ನಗರದಲ್ಲಿ ೨ ಚಿನ್ನದ ನಾಣ್ಯಗಳನ್ನು ಹೊಂದಿರುವ ಒಬ್ಬ ಮನುಷ್ಯನು ನಗರದಿಂದ ನಗರಕ್ಕೆ ಹೋಗುತ್ತಾ ಪ್ರತಿಸ್ಥಳದಲ್ಲೂ ಹಿಂದಿನ ಸ್ಥಳದಲ್ಲಿ ಸಂಪಾದಿಸಿದ ಮೂರರಷ್ಟನ್ನು ಸಂಪಾದಿಸುತ್ತಾನೆ. ಎಂಟನೇ ನಗರದಲ್ಲಿ ಅವನಿಗೆ ಎಷ್ಟು ನಾಣ್ಯಗಳು ದೊರೆಯುತ್ತವೆ ಎಂದು ಹೇಳು.

---

1. M समर्चयति

**95.** Expressed algebraically, $S = \frac{ar^{n-1} \times r - a}{r - 1}$. The antyadhana is the value of the last term in a series in geometrical progression; for the meaning and value of *guṇadhana*, see stanza 93 above in this chapter. The antyadhana of a geometrically progressive series of $n$ terms is $ar^{n-1}$, while the *guṇadhana* of the same series is $ar^n$. Similarly the *antyadhana* of a geometrically progressive series of $n - 1$ terms is $ar^{n-2}$, while the *guṇadhana* thereof is $ar^{n-1}$. Here it is evident that the antyadhana of the series of $n$ terms is the same as the *guṇadhana* of the series of $n - 1$ terms.

೯೫. ಬೀಜಗಣಿತರೂಪದಲ್ಲಿ, $ಯ = \frac{ಅರ^{ನ} \times ರ - ಅ}{ರ - ೧}$. *ಅಂತ್ಯಧನವು* ಗುಣೋತ್ತರ ಶ್ರೇಣಿಯ ಕಡೆಯ ಪದದ ಮೌಲ್ಯವಾಗಿದೆ. *ಗುಣಧನದ* ಅರ್ಥ ಮತ್ತು ಬೆಲೆಗೆ, ಈ ಅಧ್ಯಾಯದ ೯೩ ನೇ ಶ್ಲೋಕವನ್ನು ನೋಡಿ. *ನ* ಪದಗಳನ್ನುಳ್ಳ ಗುಣೋತ್ತರ ಶ್ರೇಣಿಯ ಅಂತ್ಯಧನವು $ಅರ^{ನ}$ ಆಗಿದ್ದರೆ, ಅದೇ ಶ್ರೇಣಿಯ *ಗುಣಧನವು* $ಅರ^{ನ}$ ಆಗುತ್ತದೆ. ಇದೇ ರೀತಿ *ನ - ೧* ಪದಗಳನ್ನುಳ್ಳ ಗುಣೋತ್ತರ ಶ್ರೇಣಿಯ ಅಂತ್ಯಧನವು $ಅರ^{ನ-೧}$ ಆಗಿದ್ದರೆ, ಇದೇ ಶ್ರೇಣಿಯ *ಗುಣಧನವು* $ಅರ^{ನ-೧}$ ಆಗುತ್ತದೆ. *ನ* ಪದಗಳನ್ನುಳ್ಳ ಶ್ರೇಣಿಯ *ಅಂತ್ಯಧನವು ನ - ೧* ಪದಗಳನ್ನುಳ್ಳ ಶ್ರೇಣಿಯ *ಗುಣಧನಕ್ಕೆ* ಸಮವಾಗಿದೆ ಎಂಬುದು ಇಲ್ಲಿ ಸ್ಪಷ್ಟವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



गुणधनस्याद्युत्तरानयनसूत्रम् -
गुणधनमादिविभक्तं यत्पदमितवधसमं स एव चयः ।
गच्छप्रमगुणघातप्रहृतं गुणितं भवेत्प्रभवः ॥ ९७ ॥
गुणधनस्य गच्छानयनसूत्रम् -
मुखभक्ते गुणवित्ते यथा निरग्रं तथा गुणेन हृते ।
यावत्योऽत्र शलाकास्तावान् गच्छो गुणधनस्य ॥ ९८ ॥

---

Guṇadhanasyādyuttarānayanasūtram-

**97.** Guṇadhanamādivibhaktaṁ yatpadamitavadhasamaṁ sa eva cayaḥ, gacchapramaguṇaghātaprahṛtaṁ guṇitaṁ bhavetprabhavaḥ.

Guṇadhanasya gacchānayanasūtram-

**98.** Mukhabhakte guṇavitte yathā niragraṁ tathā guṇena hṛte, yāvatyo'tra śalākāstāvān gaccho guṇadhanasya.

---

The rule for finding out the first term and the common ratio in relation to a (given) *guṇadhana* :

**97.** The *guṇadhana* when divided by the first term becomes equal to the (self-multiplied) product of a certain quantity in which (product) that (quantity) occurs as often as the number of terms (in the series) and this (quantity) is the (required) common ratio. The *guṇadhana*, when divided by that (self-multiplied) product of the common ratio in which (product the frequency of the occurrence of this common ratio) is measured by the number of terms (in the series), gives rise to the first term.

The rule for finding out in relation to a given *guṇadhana* the number of terms (in the corresponding geometrically progressive series) :

**98.** Divide the *guṇadhana* (of the series) by the first term (thereof). Then divide this (quotient) by the common ratio (time after time) so that there is nothing left (to carry out such a division any further); whatever happens (here) to be the number of vertical strokes, (each representing a single such division), so much is (the value of) the number of terms in relation to the (given) *guṇadhana*.

---

ಕೊಟ್ಟಿರುವ *ಗುಣಧನದ* ಸಂಬಂಧವಾದ ಪ್ರಥಮ ಪದ ಮತ್ತು ಸಾಮಾನ್ಯ ನಿಷ್ಪತ್ತಿಗಳನ್ನು ಕಂಡುಹಿಡಿಯಲು ನಿಯಮ :

೯೭. *ಗುಣಧನವನ್ನು* ಪ್ರಥಮ ಪದದಿಂದ ಭಾಗಿಸಿದಾಗ ಅದು ಪದಗಳ ಸಂಖ್ಯೆಯಷ್ಟು ಸಲ ಸ್ವಗುಣಿತವಾದ ಒಂದು ಸಂಖ್ಯೆಗೆ ಸಮವಾಗುತ್ತದೆ ಮತ್ತು ಈ ಸಂಖ್ಯೆಯು ಬೇಕಾಗಿರುವ ಸಾಮಾನ್ಯ ನಿಷ್ಪತ್ತಿಯಾಗಿರುತ್ತದೆ. *ಗುಣಧನವನ್ನು* ಪದಗಳ ಸಂಖ್ಯೆಯಷ್ಟು ಸಲ ಸ್ವಗುಣಿತವಾದ ಸಾಮಾನ್ಯ ನಿಷ್ಪತ್ತಿಯ ಗುಣಲಬ್ಧದಿಂದ ಭಾಗಿಸಿದರೆ ಪ್ರಥಮ ಪದವು ದೊರೆಯುತ್ತದೆ.

ಗುಣೋತ್ತರ ಶ್ರೇಣಿಯಲ್ಲಿ ಕೊಟ್ಟಿರುವ *ಗುಣಧನದ* ಸಂಬಂಧದಲ್ಲಿ ಪದಗಳ ಸಂಖ್ಯೆಯನ್ನು ಕಂಡುಹಿಡಿಯಲು ನಿಯಮ :

೯೮. ಶ್ರೇಣಿಯ *ಗುಣಧನವನ್ನು* ಪ್ರಥಮ ಪದದಿಂದ ಭಾಗಿಸು. ನಂತರ ಈ ಭಾಗಲಬ್ಧವನ್ನು (ಪದೇ ಪದೇ) ಎಲ್ಲಿಯವರೆಗೆ ಭಾಗಿಸಲು ಏನೂ ಉಳಿಯುವುದಿಲ್ಲವೋ ಅಲ್ಲಿಯವರೆಗೂ ಸಾಮಾನ್ಯ ನಿಷ್ಪತ್ತಿಯಿಂದ ಭಾಗಿಸುತ್ತಾ ಇರು. ಪ್ರತಿಯೊಂದು ಭಾಗಾಹಾರವನ್ನು ನಿರೂಪಿಸುವ, ಲಂಬಪ್ರಹಾರಗಳ ಸಂಖ್ಯೆಯು ಏನಾಗಿರುತ್ತದೋ ಆ ಸಂಖ್ಯೆಯೇ ಕೊಟ್ಟಿರುವ *ಗುಣಧನದ* ಸಂಬಂಧವಾದ ಪದಗಳ ಸಂಖ್ಯೆಯಾಗಿರುತ್ತದೆ.

---

**97 and 98.** It is clear that $ar^n$, when divided by $a$ gives $r^n$ and this is divisible by $r$ as many times as $n$, which is accordingly the measure of the number of terms in the series. Similarly $r \times r \times r$..... up to $n$ times gives $r^n$ and the guṇadhana i.e., $ar^n$ divided by this $r^n$ gives $a$, which is the required first term of the series.

೯೭ ಮತ್ತು ೯೮ *ಅರ*$^{ನ}$ವನ್ನು *ಅ* ದಿಂದ ಭಾಗಿಸಿದರೆ *ರ*$^{ನ}$ ದೊರೆಯುತ್ತದೆ ಮತ್ತು ಇದು *ನ* ದಷ್ಟು ಸಲ *ರ* ದಿಂದ ಭಾಗಿಸಲು ಯೋಗ್ಯವಾಗಿದೆ ಮತ್ತು *ನ* ಶ್ರೇಣಿಯ ಪದಗಳ ಸಂಖ್ಯೆ ಎಂಬುದು ಸ್ಪಷ್ಟವಾಗಿದೆ. ಇದೇ ರೀತಿ, *ರ* x *ರ* x *ರ* x.....*ನ* ಪದಗಳವರೆಗೆ *ರ*$^{ನ}$ ಆಗುತ್ತದೆ ಮತ್ತು ಗುಣಧನ ಅಂದರೆ *ಅರ*$^{ನ}$ವನ್ನು *ರ*$^{ನ}$ ದಿಂದ ಭಾಗಿಸಿದಾಗ, ಶ್ರೇಣಿಯ ಬೇಕಾದ ಪ್ರಥಮ ಪದ *ಅ* ಲಭಿಸುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## गुणसङ्कलितोदाहरणम् ।

दीनारपञ्चकादिद्विगुणं धनमर्जयन्नरः कश्चित् ।
प्राविक्षदष्टनगरीः कति जातास्तस्य दीनाराः ॥ ९९ ॥
सप्तमुखत्रिगुणचयत्रिवर्गगच्छस्य किं धनं वणिजः ।
त्रिकपञ्चकपञ्चदशप्रभवगुणोत्तरपदस्यापि ॥ १०० ॥

---

### Guṇasaṅkalitodāharaṇam

**99.** Dīnārapañcakādidviguṇaṁ dhanamarjayannaraḥ kaśc'it,
prāvikṣadaṣṭanagarīḥ kati jātāstasya dīnārāḥ.

**100.** Saptamukhatriguṇacayatrivargagacchasya kiṁ dhanaṁ vaṇijaḥ,
trikapañcakapañcadaśaprabhavaguṇottarapadasyāpi.

---

### *Examples in illustration thereof*

**99.** A certain man (in going from city to city) earned money (in a geometrically progressive series) having 5 *dīnāras* for the first term (thereof) and 2 for the common ratio. He (thus) entered 8 cities. How many are the *dīnāras* (in) his (possession)?

**100.** What is (the value of) the wealth owned by a merchant (when it is measured by the sum of a geometrically progressive series), the first term whereof is 7, the common ratio 3 and the number of terms (wherein) is 9 and again (when it is measured by the sum of another geometrically progressive series), the first term, the common ratio and the number of terms thereof being 3, 5 and 15 (respectively)?

---

### ಉದಾಹರಣೆಗಳಿಂದ ವಿಶ್ಲೇಷಣ

೯೯. ಒಬ್ಬ ಮನುಷ್ಯನು ನಗರದಿಂದ ನಗರಕ್ಕೆ ಹೋಗುತ್ತಾ ೫ *ದೀನಾರ*ಗಳನ್ನು ಪ್ರಥಮ ಪದವನ್ನಾಗಿ ಮತ್ತು ೨ ನ್ನು ಸಾಮಾನ್ಯ ನಿಷ್ಪತ್ತಿಯನ್ನಾಗಿ ಹೊಂದಿರುವ ಗುಣೋತ್ತರ ಶ್ರೇಣಿಯಲ್ಲಿರುವ ಧನವನ್ನು ಸಂಪಾದಿಸುತ್ತಾನೆ. ಈ ರೀತಿ ೮ ನಗರಗಳನ್ನು ಪ್ರವೇಶಿಸುತ್ತಾನೆ. ಅವನ ವಶದಲ್ಲಿರುವ *ದೀನಾರ*ಗಳು ಎಷ್ಟು?

೧೦೦. ೭ ನ್ನು ಪ್ರಥಮ ಪದವನ್ನಾಗಿ, ೩ ನ್ನು ಸಾಮಾನ್ಯ ನಿಷ್ಪತ್ತಿಯನ್ನಾಗಿ ಮತ್ತು ೯ ನ್ನು ಪದಗಳ ಸಂಖ್ಯೆಯನ್ನಾಗಿ ಹೊಂದಿರುವ ಒಂದು ಗುಣೋತ್ತರ ಶ್ರೇಣಿಯ ಮೊತ್ತದಿಂದ ಅಳೆಯಲ್ಪಡುವ ಮತ್ತು ಪುನಃ ಕ್ರಮವಾಗಿ ೩ ನ್ನು ಪ್ರಥಮ ಪದವನ್ನಾಗಿ, ೫ ನ್ನು ಸಾಮಾನ್ಯ ನಿಷ್ಪತ್ತಿಯನ್ನಾಗಿ ಮತ್ತು ೧೫ ನ್ನು ಪದಗಳ ಸಂಖ್ಯೆಯನ್ನಾಗಿ ಹೊಂದಿರುವ ಬೇರೊಂದು ಗುಣೋತ್ತರ ಶ್ರೇಣಿಯ ಮೊತ್ತದಿಂದ ಅಳೆಯಲ್ಪಡುವ ಒಬ್ಬ ವ್ಯಾಪಾರಿಯ ಐಶ್ವರ್ಯದ ಬೆಲೆಯೇನು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



गुणसङ्कलितोत्तराद्यानयनसूत्रम् -
असकृद्धयेकं मूखहृतवित्तं येनोद्धृतं भवेत्स चयः ।
व्येकगुणगुणितगणितं निरेकपदमात्रगुणवधाप्तं प्रभवः ॥ १०१ ॥

---

Guṇasaṅkalitottarādyānayanasūtram-

**101.** Asakṛdyekaṁ mukhahṛtavittaṁ yenoddhṛtaṁ bhavetsa cayaḥ,
vyekaguṇaguṇitaganitaṁ nirekapadamātraguṇavadhāptaṁ prabhavaḥ.

---

The rule for finding out the common ratio and the first term in relation to the (given) sum of a series in geometrical progression :

**101.** That (quantity) by which the sum of the series divided by the first term and (then) lessened by one is divisible throughout (when this process of division after the subtraction of one is carried on in relation to all the successive quotients) time after time-(that quantity) is the common ratio. The sum, multiplied by the common ratio lessened by one and (then) divided by that self-multiplied product of the common ratio in which (product) that (common ratio) occurs as frequently as the number of terms (in the series), after this (same self-multiplied product of the common ratio) is diminished by one, gives rise to the first term.

---

೧೦೧. ಯಾವ ಸಂಖ್ಯೆಯು, ಶ್ರೇಣಿಯ ಮೊತ್ತವನ್ನು ಪ್ರಥಮ ಪದದಿಂದ ಭಾಗಿಸಿ, ಆನಂತರ ಒಂದನ್ನು ಕಳೆದ ಸಂಖ್ಯೆಯಿಂದ ಭಾಗವಾಗುವುದೊ (ಅನುಕ್ರಮವಾಗಿ ಬಂದ ಈ ಎಲ್ಲಾ ಭಾಗಲಬ್ಧಗಳ ಸಂಬಂಧದಲ್ಲಿ ಒಂದನ್ನು ಕಳೆದ ನಂತರ ಈ ವಿಧಾನದ ಭಾಗಾಹಾರವನ್ನು ಸಮಯ ಸಮಯದಲ್ಲಿ ಮಾಡಿದರೆ) ಆ ಸಂಖ್ಯೆಯೇ ಸಾಮಾನ್ಯ ನಿಷ್ಪತ್ತಿಯಾಗಿರುತ್ತದೆ. ಮೊತ್ತವನ್ನು, ಒಂದನ್ನು ಕಳೆದ ಸಾಮಾನ್ಯ ನಿಷ್ಪತ್ತಿಯಿಂದ ಗುಣಿಸಿ ಮತ್ತು ಇದನ್ನು ಶ್ರೇಣಿಯ ಪದಗಳ ಸಂಖ್ಯೆಯಷ್ಟು ಸಲ ಸ್ವಗುಣಿತವಾದ ಸಾಮಾನ್ಯ ನಿಷ್ಪತ್ತಿಯಿಂದ ಒಂದನ್ನು ಕಳೆದು ಬಂದಂತಹ ಸಂಖ್ಯೆಯಿಂದ ಭಾಗಿಸಿದರೆ ಪ್ರಥಮ ಪದವು ಉತ್ಪನ್ನವಾಗುತ್ತದೆ.

---

**101.** The first part of the rule will become clear from the following example :

The sum of the series is 4095, the first term 3 and the number of terms 6.

Here, dividing 4095 by 3 we get 1365. Now, 1365 -1 = 1364. Choosing by trial 4, we have $\frac{1364}{4} = 341$; 341 -1= 340; $\frac{340}{4} = 85$; 85 -1 = 84; $\frac{84}{4} = 21$; 21 - 1 = 20; $\frac{20}{4} = 5$; 5 -1 = 4; $\frac{4}{4} = 1$.

Hence 4 is the common ratio. The principle on which this method is based will be clear from the following :

$\frac{a(r^n - 1)}{r - 1} \div a = \frac{r^n - 1}{r - 1}$ and $\frac{r^n - 1}{r - 1} - 1 = \frac{r^n - r}{r - 1}$ which is obviously divisible by r.

The second part expressed algebraically is $a = \frac{a(r^n - 1)}{r - 1} \times \frac{r - 1}{r^n - 1}$.

೧೦೧. ನಿಯಮದ ಮೊದಲನೆ ಭಾಗವು ಮುಂದೆ ತಿಳಿಸಿರುವ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ.

ಶ್ರೇಣಿಯ ಮೊತ್ತವು ೪೦೯೫, ಪ್ರಥಮ ಪದ ೩ ಮತ್ತು ಪದಗಳ ಸಂಖ್ಯೆ ೬.

ಇಲ್ಲಿ ೪೦೯೫ ನ್ನು ೩ ರಿಂದ ಭಾಗಿಸಿದರೆ ೧೩೬೫ ದೊರೆಯುತ್ತದೆ. ಈಗ ೧೩೬೫-೧ = ೧೩೬೪. ೪ ನ್ನು ಪ್ರಯೋಗಕ್ಕಾಗಿ ಆರಿಸಿದರೆ, ನಮಗೆ $\frac{೧೩೬೪}{೪}$ = ೩೪೧ ಸಿಗುತ್ತದೆ. ೩೪೧ - ೧ = ೩೪೦. $\frac{೩೪೦}{೪}$ = ೮೫ ೮೫ - ೧ = ೮೪. $\frac{೮೪}{೪}$ = ೨೧, ೨೧ - ೧ = ೨೦' $\frac{೨೦}{೪}$ = ೫, ೫ - ೧ = ೪, $\frac{೪}{೪}$ = ೧:

ಆದ್ದರಿಂದ ೪ ಸಾಮಾನ್ಯ ನಿಷ್ಪತ್ತಿಯಾಗುತ್ತದೆ. ಈ ವಿಧಾನವು ಯಾವ ತತ್ವದ ಮೇಲೆ ಆಧಾರವಾಗಿದೆ ಎಂಬುದು ಮುಂದೆ ಸ್ಪಷ್ಟವಾಗುತ್ತದೆ.

$\frac{ಅ(ರ^ನ - ೧)}{ರ - ೧} \div ಅ = \frac{ರ^ನ - ೧}{ರ - ೧}$ ಮತ್ತು $\frac{ರ^ನ - ೧}{ರ - ೧} - ೧ = \frac{ರ^ನ - ರ}{ರ - ೧}$ ಇದು ರ ದಿಂದ ಭಾಗವಾಗುತ್ತದೆ.

ಎರಡನೆಯ ಭಾಗವು ಬೀಜಗಣಿತರೂಪದಲ್ಲಿ ಹೀಗೆ ಆಗುತ್ತದೆ :

$ಅ = \frac{ಅ(ರ^ನ - ೧)}{ರ - ೧} \times \frac{ರ - ೧}{ರ^ನ - ೧}$.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

त्रिमुखर्तुगच्छबाणाङ्काम्बरजलनिधिधने कियान्प्रचयः ।
षड्गुणचयपञ्चपदाम्बरशशिहिमगुत्रिवित्तमत्र मुखं किम् ॥ १०२ ॥

गुणसङ्कलितगच्छानयनसूत्रम् -

एकोनगुणाभ्यस्तं प्रभवहृतं रूपसंयुतं वित्तम् ।
यावत्कृत्वो भक्तं गुणेन तद्वारसम्मितिर्गच्छः ॥ १०३ ॥

---

**Atroddeśakaḥ**

**102.** Trimukhartugacchabāṇāṅkāmbarajalanidhidhane kiyānpracayaḥ, saḍguṇacayapañcapadāmbaraśaśihimagutrivittamatra mukhaṁ kim.

Guṇasaṅkalitagacchānayanasūtram-

**103.** Ekonaguṇābhyastaṁ prabhavahṛtaṁ rūpasaṁyutaṁ vittam, yāvatkṛtvo bhaktaṁ guṇena tadvārasammitirgacchaḥ.

---

***Examples in illustration thereof***

**102.** When the first term is 3, the number of terms is 6 and the sum is 4095 (in relation to a series in geometrical progression), what is the value of the common ratio? The common ratio is 6, the number of terms is 5 and the sum is 3110 (in relation to another series in geometrical progression). What is the first term here?

The rule for finding out the number of terms in a geometrically progressive series :

**103.** Multiply the sum (of the given series in geometrical progression) by the common ratio lessened by one; (then) divide this (product) by the first term and (then) add one to this (quotient). The number of times that this (resulting quantity) is (successively) divisible by the common ratio-that gives the measure of the number of terms (in the series).

---

**ಉದಾಹರಣೆಗಳಿಂದ ವಿಶ್ಲೇಷಣ**

೧೦೨. ಒಂದು ಗುಣೋತ್ತರ ಶ್ರೇಣಿಯ ಸಂಬಂಧದಲ್ಲಿ ಪ್ರಥಮ ಪದವು ೩, ಪದಗಳ ಸಂಖ್ಯೆ ೬ ಮತ್ತು ಮೊತ್ತವು ೪೦೯೫ ಆಗಿದ್ದಾಗ ಸಾಮಾನ್ಯ ನಿಷ್ಪತ್ತಿಯೇನು? ಇನ್ನೊಂದು ಗುಣೋತ್ತರ ಶ್ರೇಣಿಯ ಸಂಬಂಧದಲ್ಲಿ ಸಾಮಾನ್ಯ ನಿಷ್ಪತ್ತಿ ೬, ಪದಗಳ ಸಂಖ್ಯೆ ೫ ಮತ್ತು ಮೊತ್ತವು ೩೧೧೦. ಇಲ್ಲಿ ಪ್ರಥಮ ಪದವೇನು?

ಗುಣೋತ್ತರ ಶ್ರೇಣಿಯ ಪದಗಳ ಸಂಖ್ಯೆಯನ್ನು ಕಂಡುಹಿಡಿಯಲು ನಿಯಮ :

೧೦೩. ಕೊಟ್ಟಿರುವ ಗುಣೋತ್ತರ ಶ್ರೇಣಿಯ ಮೊತ್ತವನ್ನು ಒಂದನ್ನು ಕಡಿಮೆಮಾಡಿದ ಸಾಮಾನ್ಯ ನಿಷ್ಪತ್ತಿಯಿಂದ ಗುಣಿಸಿ, ನಂತರ ಈ ಗುಣಲಬ್ಧವನ್ನು ಪ್ರಥಮ ಪದದಿಂದ ಭಾಗಿಸಿ, ಆನಂತರ ಈ ಭಾಗಲಬ್ಧಕ್ಕೆ ಒಂದನ್ನು ಸೇರಿಸಬೇಕು. ಹೀಗೆ ಬಂದಂತಹ ಸಂಖ್ಯೆಯು ಸಾಮಾನ್ಯ ನಿಷ್ಪತ್ತಿಯಿಂದ ಸತತವಾಗಿ ಎಷ್ಟು ಸಲ ಭಾಗವಾಗುವುದೋ ಅದೇ ಶ್ರೇಣಿಯ ಪದಗಳ ಸಂಖ್ಯೆಯ ಬೆಲೆಯಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

त्रिप्रभवं षट्कगुणं सारं सप्तत्युपेतसप्तशती ।
सप्ताग्रा ब्रूहि सखे कियत्पदं गणक गुणनिपुण ॥ १०४ ॥
पञ्चादिद्विगुणोत्तरे शरगिरिद्व्येकप्रमाणे धने सप्तादि[1] त्रिगुणे नगेभदुरितस्तम्बेरमर्तुप्रमे। त्र्यास्ये पञ्चगुणाधिके हुतवहोपेन्द्राक्षवह्निद्विपश्वेतांशुद्विरदेभकर्मकरदृङ्नानेऽपि गच्छः कियान् ॥१०५॥

**इति परिकर्मविधौ सप्तमं सङ्कलितं समाप्तम् ।**

---

### Atroddeśakaḥ

**104.** Triprabhavaṁ ṣaṭkaguṇaṁ sāraṁ saptatyupetasaptaśatī, saptāgrā brūhi sakhe kiyatpadaṁ gaṇaka guṇanipuṇa.

**105.** Pañcādidviguṇottare śaragiridvyekapramāṇe dhane saptādi triguṇe nagebhaduritastamberamartuprame, tryāsye pañcaguṇādhike hutavahopendrākṣavahnidvipaśvetāṁśudviradebhakarmakaradṛṅmane'pi gacchaḥ kiyān.

**Iti parikarmavidhau saptamaṁ saṅkalitaṁ samāptam.**

---

### *Examples in illustration thereof*

**104.** O my excellently able mathematical friend, tell me of what value the number of terms is in relation to (a series, whereof) the first term is 3, the common ratio is 6 and the sum is 777.

**105.** What is the value of the number of terms in those (series) which (respectively) have 5 for the first term, 2 for the common ratio, 1275 for the sum : 7 for the first term, 3 for the common ratio, 68887 for the sum and 3 for the first term, 5 for the common ratio and 22888183593 for the sum?

**Thus ends summation, the seventh of the operation known as *Parikarman.***

---

### ಉದಾಹರಣೆಗಳಿಂದ ವಿಶ್ಲೇಷಣ

೧೦೪. ಎಲ್ಕೆ ಗುಣನಿಪುಣನಾದ ಗಣಿತಮಿತ್ರನೇ, ಒಂದು ಶ್ರೇಣಿಯ ಸಂಬಂಧದಲ್ಲಿ ಪ್ರಥಮ ಪದ ೩, ಸಾಮಾನ್ಯ ನಿಷ್ಪತ್ತಿ ೬ ಮತ್ತು ಮೊತ್ತ ೭೭೭ ಆಗಿದ್ದರೆ, ಆ ಶ್ರೇಣಿಯ ಪದಗಳ ಸಂಖ್ಯೆ ಏನಾಗುತ್ತದೆ ಎಂದು ಹೇಳು.

೧೦೫. ಯಾವ ಶ್ರೇಣಿಯಲ್ಲಿ ಪ್ರಥಮ ಪದ ೫, ಸಾಮಾನ್ಯ ನಿಷ್ಪತ್ತಿ ೨, ೧೨೭೫ ಮೊತ್ತವಾಗಿದೆಯೋ ಮತ್ತು ಯಾವ ಶ್ರೇಣಿಯಲ್ಲಿ ಪ್ರಥಮ ಪದ ೭, ಸಾಮಾನ್ಯ ನಿಷ್ಪತ್ತಿ ೩, ೬೮೮೮೭ ಮೊತ್ತ ಹಾಗೆಯೇ ಯಾವ ಶ್ರೇಣಿಯಲ್ಲಿ ಪ್ರಥಮ ಪದ ೩, ಸಾಮಾನ್ಯ ನಿಷ್ಪತ್ತಿ ೫ ಮತ್ತು ೨೨೮೮೮೧೮೩೫೯೩ ಮೊತ್ತವಾಗಿದೆಯೋ ಅಂತಹ ಶ್ರೇಣಿಗಳ ಪದಗಳ ಸಂಖ್ಯೆಯನ್ನು ಬೇರೆ ಬೇರೆಯಾಗಿ ಕಂಡುಹಿಡಿ.

**ಈ ರೀತಿ *ಪರಿಕರ್ಮ* ಕ್ರಿಯೆಗಳಲ್ಲಿ ಏಳನೆಯದಾದ ಸಂಕಲನವು ಮುಗಿಯಿತು.**

---

1. M ಶ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## व्युत्कलितम्

अष्टमे व्युत्कलितपरिकर्मणि करणसूत्रं यथा -

सपदेष्टं स्वेष्टमपि व्येकं दलितं चयाहतं समुखम् ।
शेषेष्टगच्छगुणितं व्युत्कलितं स्वेष्ट वित्तं च ॥ १०६ ॥

---

## Vyutkalitam

Aṣṭame vyutkalitaparikarmaṇi karaṇasūtraṁ yathā-

**106.** Sapadeṣṭaṁ sveṣṭamapi vyekaṁ dalitaṁ cayāhataṁ samukham,
śeṣeṣṭagacchaguṇitaṁ vyutkalitaṁ sveṣṭavittaṁ ca.

---

## *Vyutkalita*

The rule of work in relation to the operation of *Vyutkalita*,* which is the eighth (of the *Parikarman* operations), is as follows :

**106.** (Take) the chosen-off number of terms as combined with the total number of terms (in the series) and (take) also your own chosen-off number of terms (simply); diminish (each of) these (quantities) by one and (then) halve it and multiply it by the common difference and (then) add the first term to (each of) these (resulting products). And these (resulting quantities), when multiplied by the remaining number of terms and the chosen-off number of terms (respectively), give rise to the sum of the remainder-series and to the sum of the chosen-off part of the series (in order).

---

## ವ್ಯುತ್ಕಲಿತ

*ಪರಿಕರ್ಮ* ಕ್ರಿಯೆಗಳಲ್ಲಿ ಎಂಟನೆಯದಾದ *ವ್ಯುತ್ಕಲಿತ* * ಕ್ರಿಯೆಗೆ ಸಂಬಂಧಿಸಿದ ಕ್ರಿಯಾನಿಯಮವು ಮುಂದೆ ತಿಳಿಸಿದಂತಿದೆ :

೧೦೬. ಶ್ರೇಣಿಯ ಒಟ್ಟು ಪದಗಳ ಸಂಖ್ಯೆಯೊಂದಿಗೆ ಆರಿಸಿದ ಪದಗಳ ಸಂಖ್ಯೆಯನ್ನು ಸೇರಿಸು ಮತ್ತು ನೀನೇ ಸ್ವತಃ ಆರಿಸಿದ ಪದಗಳ ಸಂಖ್ಯೆಯನ್ನು ಬೇರೆಯಾಗಿ ತೆಗೆದುಕೊ. ಈ ಎಲ್ಲಾ ಸಂಖ್ಯೆಗಳಿಂದ ಒಂದನ್ನು ಕಳೆ ಮತ್ತು ನಂತರ ಅರ್ಧಮಾಡು ಮತ್ತು ಸಾಮಾನ್ಯ ವ್ಯತ್ಯಾಸದಿಂದ ಗುಣಿಸು. ನಂತರ ಹೀಗೆ ಬಂದ ಪ್ರತಿಯೊಂದು ಗುಣಲಬ್ಧಕ್ಕೆ ಪ್ರಥಮ ಪದವನ್ನು ಸೇರಿಸು ಮತ್ತು ಈ ರೀತಿ ಲಭಿಸಿದ ಸಂಖ್ಯೆಗಳನ್ನು ಕ್ರಮವಾಗಿ ಉಳಿದ ಪದಗಳ ಸಂಖ್ಯೆಯಿಂದ ಮತ್ತು ಆರಿಸಿದ ಪದಗಳ ಸಂಖ್ಯೆಯಿಂದ ಗುಣಿಸಿದರೆ ಕ್ರಮವಾಗಿ ಶೇಷ-ಶ್ರೇಣಿಯ ಮೊತ್ತ ಮತ್ತು ಶ್ರೇಣಿಯ ಆರಿಸಿದ ಭಾಗದ ಮೊತ್ತವು ದೊರೆಯುತ್ತದೆ.

---

* In a given series, any portion chosen off from the beginning is called *iṣṭa* or the chosen-off part and the rest of the series is called *śēṣa* and it contains the remaining terms and forms the remainder-series. It is the sum of these *śēṣa* terms which is called vyutkalita.

**106.** Algebraically, *vyutkalita* or $S_v = \left\{\frac{n + d - 1}{2} b + a\right\} (n - d)$ and the sum of the *iṣṭa* or $S_i = \left\{\frac{d - 1}{2} . b + a\right\} d$ ; where $d$ is the number of terms in the chosen-off part of the series.

* ಯಾವುದಾದರೂ ಒಂದು ಕೊಟ್ಟಿರುವ ಶ್ರೇಣಿಯಲ್ಲಿ ಆರಂಭದಿಂದ ಆರಿಸಿದ ಯಾವುದಾದರೂ ಒಂದು ಭಾಗವನ್ನು *ಇಷ್ಟ*, ಅಥವಾ ಆಯ್ದ ಭಾಗವೆಂದು ಕರೆಯಲಾಗುತ್ತದೆ ಮತ್ತು ಶ್ರೇಣಿಯ ಉಳಿದ ಭಾಗವನ್ನು ಶೇಷವೆಂದು ಕರೆಯಲಾಗುತ್ತದೆ ಮತ್ತು ಅದು ಉಳಿದ ಪದಗಳನ್ನು ಹೊಂದಿರುತ್ತದೆ ಮತ್ತು ಶೇಷ-ಶ್ರೇಣಿಯಾಗುತ್ತದೆ. ಈ ಶೇಷ-ಪದಗಳ ಮೊತ್ತವನ್ನು ವ್ಯುತ್ಕಲಿತವೆಂದು ಕರೆಯಲಾಗುತ್ತದೆ.

೧೦೬. ಬೀಜಗಣಿತರೂಪದಲ್ಲಿ *ವ್ಯುತ್ಕಲಿತ* ಅಥವಾ $ಯ್ವ = \left\{\frac{ವ + ಡ - ೧}{೨} ಬ + ಅ\right\} (ನ - ಡ)$ ಮತ್ತು *ಇಷ್ಟ*ದ ಮೊತ್ತ ಅಥವಾ $ಯ್ಷ = \left\{\frac{ಡ - ೧}{೨} ಬ + ಅ\right\} ಡ$ ಇಲ್ಲಿ *ಡ*ವು ಶ್ರೇಣಿಯ ಆರಿಸಿದ ಭಾಗದ ಪದಗಳ ಸಂಖ್ಯೆಯಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



प्रकारान्तरेण व्युत्कलितधनस्वेष्टधनानयनसूत्रम् -
गच्छसहितेष्टमिष्टं चैकोनं चयहतं द्विहादियुतम् ।
शेषेष्टपदार्धगुणं व्युत्कलितं स्वेष्टवित्तमपि ॥ १०७ ॥

---

Prakārāntareṇa vyutkalitadhanasveṣṭadhanānayanasūtram-

**107.** Gacchasahiteṣṭamiṣṭaṁ caikonaṁ cayahataṁ dvihādiyutam,
śeṣeṣṭapadārdhaguṇaṁ vyutkalitaṁ sveṣṭavittamapi.

---

The rule for obtaining in another manner the sum of the remainder-series and also the sum of the chosen-off part of the given series :

**107.** (Take) the chosen-off number of terms as combined with the total number of terms (in the series) and (take) also the chosen-off number of terms (simply); diminish (each of) these by one and (then) multiply by the common difference and (then) add to (each of) these (resulting products) twice the first term. These (resulting quantities), when multiplied by the half of the remaining number of terms and by the half of the chosen-off number of terms (respectively), give rise to the sum of the remainder-series and to the sum of the chosen-off part of the series (in order).

---

ಬೇರೊಂದು ರೀತಿಯಲ್ಲಿ, ಯಾವುದಾದರೂ ಕೊಟ್ಟಿರುವ ಶ್ರೇಣಿಯಲ್ಲಿ ಶೇಷ-ಶೇಣಿಯ ಮೊತ್ತ ಹಾಗೂ ಆರಿಸಿದ-ಭಾಗದ ಶ್ರೇಣಿಯ ಮೊತ್ತವನ್ನು ಪಡೆಯಲು ನಿಯಮ :

೧೦೭. ಶ್ರೇಣಿಯ ಆರಿಸಿದ-ಭಾಗದ ಪದಗಳ ಸಂಖ್ಯೆಯೊಂದಿಗೆ, ಶ್ರೇಣಿಯ ಒಟ್ಟು ಪದಗಳ ಸಂಖ್ಯೆಯನ್ನು ಸೇರಿಸು ಮತ್ತು ಆರಿಸಿದ-ಭಾಗದ ಪದಗಳ ಸಂಖ್ಯೆಯನ್ನು ತೆಗೆದುಕೊ. ಪ್ರತಿಯೊಂದರಿಂದ ಒಂದನ್ನು ಕಳೆ. ನಂತರ ಸಾಮಾನ್ಯ ವ್ಯತ್ಯಾಸದಿಂದ ಗುಣಿಸು. ಹೀಗೆ ಬಂದಂತಹ ಪ್ರತಿಯೊಂದು ಗುಣಲಬ್ಧಕ್ಕೂ ಪ್ರಥಮ ಪದದ ಎರಡರಷ್ಟನ್ನು ಸೇರಿಸು. ನಂತರ ಈ ರೀತಿ ಲಭಿಸಿದ ಸಂಖ್ಯೆಗಳನ್ನು ಕ್ರಮವಾಗಿ ಉಳಿದ ಪದಗಳ ಸಂಖ್ಯೆಯ ಅರ್ಧಭಾಗದಿಂದ ಮತ್ತು ಆರಿಸಿದ ಭಾಗದ ಪದಗಳ ಸಂಖ್ಯೆಯ ಅರ್ಧಭಾಗದಿಂದ ಗುಣಿಸಿದರೆ ಕ್ರಮವಾಗಿ ಶೇಷ-ಶ್ರೇಣಿಯ ಮೊತ್ತ ಮತ್ತು ಶ್ರೇಣಿಯ ಆರಿಸಿದ-ಭಾಗದ ಮೊತ್ತಗಳು ದೊರೆಯುತ್ತವೆ.

---

**107.** Again, $S_v = \left\{(n + d - 1)\, b + 2a\right\} \frac{n - d}{2}$ and $S_i = \left\{(d - 1)b + 2a\right\} \frac{d}{2}$

೧೦೭. ಪುನಃ $ಯ_ವ = \left\{(ನ + ಡ - ೧)ಬ + ೨ಎ\right\} \frac{(ನ - ಡ)}{೨}$ ಮತ್ತು $ಯ_ಶ = \left\{(ಡ - ೧)ಬ + ೨ಎ\right\} \frac{ಡ}{೨}$.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



चयगुणभवव्युत्कलितधनानयने व्युत्कलितधनस्य शेषेष्टगच्छानयने च सूत्रम् -
इष्टधनोनं गणितं ।व्यवकलितं चयभवं गुणोत्थं च। सर्वेष्टगच्छशेषे शेषपदं जायते तस्य ॥१०८॥
शेषगच्छस्याद्यानयनसूत्रम् -
प्रचयगुणितेष्टगच्छस्सादिः प्रभवः पदस्य शेषस्य ।
प्राक्तन एव चयस्याद्गच्छस्येष्टस्य तावेव ॥ १०९ ॥

---

Cayaguṇabhavavyutkalitadhanānayane vyutkalitadhanasya śeṣeṣṭagacchānayane ca sūtram-

**108.** Iṣṭadhanonaṁ gaṇitaṁ vyavakalitaṁ cayabhavaṁ guṇotthaṁ ca, sarveṣṭagacchaśeṣe śeṣapadaṁ jāyate tasya.

S'eṣagacchasyādyānayanasūtram-

**109.** Pracayaguṇiteṣṭagacchassādiḥ prabhavaḥ padasya śeṣasya, prāktana eva cayassyādgacchasyeṣṭasya tāveva.

---

The rule for finding out the sum of the remainder-series in respect of an arithmetically progressive as well as a geometrically progressive series, as also for finding out the remaining number of terms (belonging to the remainder-series):

**108.** The sum (of the given series) diminished by the sum of the chosen-off part (of the series) gives rise to the sum of the remainder-series in respect of the arithmetically progressive as well as the geometrically progressive series and when the difference between the total number of terms and the chosen-off number of terms (in the series) is obtained, it becomes the remaining number of terms belonging to that (remainder-series).

The rule for finding out the first term in relation to the remaining number of terms (belonging to the remainder-series) :

**109.** The chosen-off number of terms multiplied by the common difference and (then) combined with the first term (of the given series) gives rise to the first term in relation to the remaining terms (belonging to the remainder-series). The already mentioned common difference is the common difference in relation to these (remaining terms also) and in relation to the chosen-off number of terms (also both the first term and the common difference) are exactly those (which are found in the given series).

---

ಕಲನಶ್ರೇಣಿಯ ಹಾಗೂ ಗುಣೋತ್ತರ ಶ್ರೇಣಿಯ ಶೇಷ-ಶ್ರೇಣಿಯ ಮೊತ್ತವನ್ನು ಹಾಗೆಯೇ ಶೇಷ-ಶ್ರೇಣಿಯ ಉಳಿದ ಪದಗಳ ಸಂಖ್ಯೆಯನ್ನು ಕಂಡುಹಿಡಿಯಲು ನಿಯಮ :

೧೦೮. ಕೊಟ್ಟಿರುವ ಶ್ರೇಣಿಯ ಮೊತ್ತದಿಂದ, ಶ್ರೇಣಿಯ ಆರಿಸಿದ-ಭಾಗದ ಮೊತ್ತವನ್ನು ಕಳೆದರೆ, ಕಲನ ಶ್ರೇಣಿಯ ಹಾಗೂ ಗುಣೋತ್ತರ ಶ್ರೇಣಿಯ ಶೇಷ-ಶ್ರೇಣಿಯ ಮೊತ್ತವು ದೊರೆಯುತ್ತದೆ ಮತ್ತು ಶ್ರೇಣಿಯ ಒಟ್ಟು ಪದಗಳ ಸಂಖ್ಯೆ ಮತ್ತು ಆರಿಸಿದ-ಭಾಗದ ಪದಗಳ ಸಂಖ್ಯೆಯ ವ್ಯತ್ಯಾಸವನ್ನು ಪಡೆದರೆ, ಅದು ಶೇಷ-ಶ್ರೇಣಿಯ ಉಳಿದ ಪದಗಳ ಸಂಖ್ಯೆಯಾಗುತ್ತದೆ.

ಶೇಷ-ಶ್ರೇಣಿಯ ಉಳಿದ ಪದಗಳ ಸಂಖ್ಯೆಯ ಸಂಬಂಧದಲ್ಲಿ ಪ್ರಥಮ ಪದವನ್ನು ಕಂಡುಹಿಡಿಯಲು ನಿಯಮ :

೧೦೯. ಆರಿಸಿದ ಭಾಗದ ಪದಗಳ ಸಂಖ್ಯೆಯನ್ನು ಸಾಮಾನ್ಯ ವ್ಯತ್ಯಾಸದಿಂದ ಗುಣಿಸಿದ ನಂತರ, ಇದನ್ನು, ಕೊಟ್ಟಿರುವ ಶ್ರೇಣಿಯ ಪ್ರಥಮ ಪದದೊಂದಿಗೆ ಸೇರಿಸಿದರೆ ಶ್ರೇಷ-ಶೇಣಿಯ ಉಳಿದ ಪದಗಳ ಸಂಬಂಧದ ಪ್ರಥಮ ಪದವು ದೊರೆಯುತ್ತದೆ. ಈಗಾಗಲೇ ತಿಳಿಸಿರುವಂತಹ ಸಾಮಾನ್ಯ ವ್ಯತ್ಯಾಸವು ಈ ಉಳಿದ ಪದಗಳ ಸಾಮಾನ್ಯ ವ್ಯತ್ಯಾಸವೂ ಆಗಿದೆ ಮತ್ತು ಆರಿಸಿದ-ಭಾಗದ ಪದಗಳ ಸಂಖ್ಯೆಗಳ ಸಂಬಂಧದಲ್ಲಿ (ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸ ಇವೆರಡೂ) ಕೊಟ್ಟಿರುವ ಶ್ರೇಣಿಯಲ್ಲಿ ಇರುವಂತಹವುಗಳೇ ಆಗಿವೆ.

---

1. M गणितं

**109.** The first term of the remainder series = $db + a$. The series dealt with in this rule is obviously in arithmetical progression.

೧೦೯. ಶೇಷ-ಶೇಣಿಯ ಪ್ರಥಮ ಪದ = $ಡಬ + ಅ$ ಆಗಿದೆ. ಈ ನಿಯಮದಲ್ಲಿ ಬಳಸಲಾಗಿರುವ ಶ್ರೇಣಿಯು ಕಲನಶ್ರೇಣಿ ಎಂಬುದು ಸ್ಪಷ್ಟವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



गुणव्युत्कलितशेषगच्छस्याद्यानयनसूत्रम् -
गुणगुणितेऽपि चयादी तथैव भेदोऽयमत्रशेषपदे ।
इष्टपदमितिगुणाहतिगुणितप्रभवो भवेद्वक्रम् ॥ ११० ॥

**अत्रोद्देशकः**

द्विमुखस्त्रिचयो गच्छश्चतुर्दश स्वेप्सितं पदं सप्त ।
अष्टनवषट्कपञ्च च किंव्युत्कलितं समाकलय ॥ १११ ॥

---

Guṇavyutkalitaśeṣagacchasyādyānayanasūtram-

**110.** Guṇaguṇite'pi cayādī tathaiva bhedo'yamatraśeṣapade iṣṭapadamitiguṇāhatiguṇitaprabhavo bhavedvakram.

**Atrodde'śakaḥ**

**111.** Dvimukhastricayo gacchaścaturdaśa svepsitaṁ padaṁ sapta, aṣṭanavaṣaṭkapañca ca kiṁvyutkalitaṁ samākalaya.

---

The rule for finding out the first term in relation to the remaining number of terms belonging to the remainder-series in a geometrically progressive series:

**110.** Even in respect of a geometrically progressive series, the common ratio and the first term are exactly alike (in the given series and in the chosen-off part thereof). There is (however) this difference here in respect of (the first term in relation to) the remaining number of terms (in the remainder-series), viz., that the first term of the (given) series multiplied by that self-multiplied product of the common ratio, in which (product) the frequency of the occurrence of the common ratio is measured by the chosen-off number of terms, gives rise to the first term (of the remainder-series).

***Examples in illustration thereof***

**111.** Calculate what the sums of the remainder-series are in respect of a series in arithmetical progression, the first term of which is 2, the common difference is 3 and the number of terms is 14, when the chosen-off numbers of the terms are 7, 8, 9, 6 and 5 (respectively).

---

ಗುಣೋತ್ತರ ಶ್ರೇಣಿಯ ಶೇಷ-ಶ್ರೇಣಿಯ ಉಳಿದ ಪದಗಳ ಸಂಖ್ಯೆಯ ಸಂಬಂಧದಲ್ಲಿ ಪ್ರಥಮ ಪದವನ್ನು ಕಂಡುಹಿಡಿಯಲು ನಿಯಮ :

೧೧೦. ಗುಣೋತ್ತರ ಶ್ರೇಣಿಯ ವಿಷಯದಲ್ಲೂ ಕೂಡ, ಕೊಟ್ಟಿರುವಂತಹ ಶ್ರೇಣಿಯಲ್ಲಿ ಹಾಗೂ ಆರಿಸಿದ-ಭಾಗದಲ್ಲಿ ಸಾಮಾನ್ಯ ನಿಷ್ಪತ್ತಿ ಮತ್ತು ಪ್ರಥಮ ಪದಗಳು ಸಮವಾಗಿರುತ್ತವೆ. ಆದರೆ ಶೇಷ-ಶ್ರೇಣಿಯ ಪದಗಳ ಪ್ರಥಮ ಪದವು ಬೇರೆಯಾಗಿರುತ್ತದೆ. ಕೊಟ್ಟಿರುವಂತಹ ಶ್ರೇಣಿಯ ಪ್ರಥಮ ಪದವನ್ನು ಆರಿಸಿದ ಸಂಖ್ಯೆಯಷ್ಟು ಸಲ ಸ್ವಗುಣಿತವಾದ ಸಾಮಾನ್ಯ ನಿಷ್ಪತ್ತಿಯ ಗುಣಲಬ್ಧದಿಂದ ಗುಣಿಸಿದರೆ, ಶೇಷ-ಶ್ರೇಣಿಯ ಪ್ರಥಮ ಪದವು ಲಭಿಸುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

೧೧೧. ಪ್ರಥಮ ಪದ ೨, ಸಾಮಾನ್ಯ ವ್ಯತ್ಯಾಸ ೩ ಮತ್ತು ಪದಗಳ ಸಂಖ್ಯೆ ೧೪ ಹಾಗೂ ಆರಿಸಿದ ಪದಗಳ ಸಂಖ್ಯೆಗಳು ಕ್ರಮವಾಗಿ ೭, ೮, ೯, ೬ ಮತ್ತು ೫ ಆಗಿರುವ ಕಲನಶ್ರೇಣಿಯ ಶೇಷ-ಶ್ರೇಣಿಯ ಮೊತ್ತಗಳನ್ನು ಕಂಡುಹಿಡಿ.

---

**110.** The first term of the remainder series is $ar^q$.

೧೧೦. ಶೇಷ-ಶ್ರೇಣಿಯ ಪ್ರಥಮ ಪದವು $ar^q$.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



षडादिरष्टौ प्रचयोऽत्र षट्कृतिः पदं दश द्वादश षोडशेप्सितम् ।
मुखादिरन्यस्य तु पञ्चपञ्चकं शतद्वयं ब्रूहि शतं व्ययः कियान् ॥ ११२ ॥
षड्घ्नमानो गच्छः प्रचयोऽष्टौ द्विगुणसप्तकं वक्रम् ।
सप्तत्रिंशत्स्वेष्टं पदं समाचक्ष्व फलमुभयम् ॥ ११३ ॥
अष्टकृतिरादिरुत्तरमूनं चत्वारि षोडशात्र पदम् ।
इष्टानि तत्त्वकेशवरुद्रार्कपदानि किं शेषम् ॥ ११४ ॥

---

**112.** Ṣaḍādiraṣṭau pracayo'tra ṣaṭkṛtiḥ padaṁ daśa dvādaśa ṣoḍaśepsitam, mukhādiranyasya tu pañcapañcakaṁ śatadvayaṁ brūhi śataṁ vyayaḥ kiyān.

**113.** Ṣaḍghanamāno gacchaḥ pracayo'ṣṭau dviguṇasaptakaṁ vakram, saptatriṁśatsveṣṭaṁ padaṁ samācakṣva phalamubhayam.

**114.** Aṣṭakṛtirādiruttaramūnaṁ catvāri ṣoḍaśātra padam, iṣṭāni tatvakeśavarudrārkapadāni kiṁ śeṣam.

---

**112.** (In connection with a series in arithmetical progression) here (given), the first term is 6, the common difference is 8, the number of terms is 36 and the chosen-off numbers of terms are 10, 12 and 16 (respectively). In connection with another (similar series), the first term and the other things are 5, 5, 200 and 100 (in order). Say what the sums are of the (corresponding) remainder-series.

**113.** The number of terms (in a series in arithmetical progression) is 216, the common difference is 8, the first term is 14, 37 is the chosen-off number of terms (to be removed). Find the sums both of the remainder-series and of the chosen-off part (of the given series).

**114.** The first term (in a given series in arithmetical progression) is, in this (problem), 64, the common difference is minus 4, the number of terms is 16. What are the sums of the remainder-series when the chosen-off numbers of terms are 7,9,11 and 12?

---

೧೧೨. ಕಲನಶ್ರೇಣಿಯ ಸಂಬಂಧದಲ್ಲಿ ಇಲ್ಲಿ (ಕೊಟ್ಟಿರುವ) ಪ್ರಥಮ ಪದವು ೬, ಸಾಮಾನ್ಯ ವ್ಯತ್ಯಾಸ ೮, ಪದಗಳ ಸಂಖ್ಯೆ ೩೬ ಮತ್ತು ಆರಿಸಿದ ಪದಗಳ ಸಂಖ್ಯೆಗಳು ಕ್ರಮವಾಗಿ ೧೦, ೧೨ ಮತ್ತು ೧೬. ಇದೇ ರೀತಿ ಬೇರೊಂದು ಶ್ರೇಣಿಯ ಸಂಬಂಧದಲ್ಲಿ ಪ್ರಥಮ ಪದ ಮತ್ತು ಇನ್ನಿತರ ಸಂಖ್ಯೆಗಳು ಕ್ರಮವಾಗಿ ೫, ೫, ೨೦೦ ಮತ್ತು ೧೦೦ ಆಗಿವೆ. ತತ್ಸಂಬಂಧವಾದ ಶೇಷ-ಶ್ರೇಣಿಗಳ ಮೊತ್ತಗಳನ್ನು ಹೇಳು.

೧೧೩. ಕಲನಶ್ರೇಣಿಯ ಪದಗಳ ಸಂಖ್ಯೆ ೨೧೬, ಸಾಮಾನ್ಯ ವ್ಯತ್ಯಾಸ ೮, ಪ್ರಥಮ ಪದ ೧೪, ೩೭ ಆರಿಸಿದ ಪದಗಳ ಸಂಖ್ಯೆ. ಕೊಟ್ಟಿರುವ ಶ್ರೇಣಿಯ ಶೇಷ-ಶ್ರೇಣಿಯ ಮತ್ತು ಆರಿಸಿದ-ಭಾಗದ ಶ್ರೇಣಿಯ ಮೊತ್ತಗಳನ್ನು ಕಂಡುಹಿಡಿ.

೧೧೪. ಈ ಲೆಕ್ಕದಲ್ಲಿ ಕೊಟ್ಟಿರುವ ಕಲನಶ್ರೇಣಿಯಲ್ಲಿ, ಪ್ರಥಮ ಪದ ೬೪, ಸಾಮಾನ್ಯ ವ್ಯತ್ಯಾಸ -೪ (ಋಣ ೪), ಪದಗಳ ಸಂಖ್ಯೆ ೧೬, ಆರಿಸಿದ ಪದಗಳ ಸಂಖ್ಯೆಗಳು ೭, ೯, ೧೧ ಮತ್ತು ೧೨ ಆದಾಗ ಶೇಷ-ಶ್ರೇಣಿಯ ಮೊತ್ತಗಳು ಏನಾಗುತ್ತವೆ?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## गुणव्युत्कलितस्योदाहरणम्

चतुरादिद्विगुणात्मकोत्तरयुतो गच्छश्चतुर्णां कृतिर्दश वाञ्छापदमङ्कसिन्धुरगिरिद्रव्येन्द्रियाम्भोधयः।
कथय व्युत्कलितं फलं सकलसद्भूजाग्रिमं [1]व्याप्तवान् करणस्कन्धवनान्तरं
गणितविन्मत्तेभविक्रीडितम् ॥ ११५ ॥

**इति परिकर्मविधावष्टमं व्युत्कलितं समाप्तम् ।**

**इति सारसङ्ग्रहे गणितशास्त्रे महावीराचार्यस्य कृतौ परिकर्मनामा प्रथमो व्यवहारः समाप्तः ।**

---

### Guṇavyutkalitasyodāharaṇam

115. Caturādidviguṇātmakottarayuto gacchaścaturṇāṁ kṛtirdaśa
vāñchāpadamaṅkasindhuragiridravyendriyāmbhodhayaḥ, kathaya vyutkalitaṁ
phalaṁ sakalasadbhūjāgrimaṁ vyāptavān karaṇaskandhavanāntaraṁ
gaṇitavinmattebhavikrīḍitam.

**Iti parikarmavidhāvaṣṭamaṁ vyutkalitaṁ samāptam.**

**Iti sārasaṅgrahe gaṇitaśāstre Mahāvīrācāryasya kṛtau parikarmanāmā prathamo vyavahāraḥ samāptaḥ.**

---

### *Examples on vyutkalita in respect of a geometrically progressive series.*

**115.** Where (in the process of reckoning of the fruits on trees in serial bunches), 4 happens to be the first term, 2 the common ratio and 16 the number of terms, while the chosen-off number of terms (removed) are 10, 9, 8, 7, 6, 5 and 4 (respectively) there, say, O you who know arithmetic and have penetrated into the interior of the forest of practical mathematical operations, (the interior) wherein wild elephants sport-(there say) what the total of the remaining fruits is on the tops of the various good trees (dealt with therein).

**Thus ends *vyutkalita*, the eighth of the operations known as *Parikarman*.**

**Thus ends the first subject of treatment known as *Parikarman* in Sārasaṅgraha, which is a work on arithmetic by Māhāvirācārya.**

---

### ಗುಣೋತ್ತರ ಶ್ರೇಣಿಯ ಸಂಬಂಧದಲ್ಲಿ ವ್ಯುತ್ಕಲಿತದ ಮೇಲಿನ ಉದಾಹರಣೆಗಳು

೧೧೫. ಕ್ರಮಬದ್ಧವಾಗಿ ಮರಗಳ ಮೇಲಿನ ಗೊಂಚಲುಗಳಲ್ಲಿರುವ ಹಣ್ಣುಗಳನ್ನು ಎಣಿಕೆಮಾಡುವ ವಿಧಾನದಲ್ಲಿ, ೪ ಪ್ರಥಮ ಪದ, ೨ ಸಾಮಾನ್ಯ ನಿಷ್ಪತ್ತಿ ಮತ್ತು ೧೬ ಪದಗಳ ಸಂಖ್ಯೆ ಆಗಿರುವಾಗ ಆರಿಸಿದ ಪದಗಳ ಸಂಖ್ಯೆಗಳು ಕ್ರಮವಾಗಿ ೧೦, ೯, ೮, ೭, ೬, ೫ ಮತ್ತು ೪ ಆಗಿವೆ. ಎಲೈ ವ್ಯವಹಾರಗಣಿತ ಕ್ರಿಯೆಗಳೆಂಬ ಕಾಡಿನ ಒಳಭಾಗ (ಇಲ್ಲಿ ಕಾಡು ಆನೆಗಳು ಕ್ರೀಡಿಸುತ್ತವೆ)ವನ್ನು ಹೊಕ್ಕಿರುವವನೇ, ಹಿಂದೆ ಹೇಳಿದ ವಿವಿಧ ಉತ್ತಮವಾದ ಮರಗಳ ಮೇಲಿರುವ ಉಳಿದ ಹಣ್ಣುಗಳ ಒಟ್ಟು ಸಂಖ್ಯೆ ಏನಾಗುತ್ತದೆಯೆಂದು ಹೇಳು.

**ಈ ರೀತಿ *ಪರಿಕರ್ಮ* ಕ್ರಿಯೆಗಳಲ್ಲಿ ಎಂಟನೆಯದಾದ ವ್ಯುತ್ಕಲಿತವು ಮುಗಿಯಿತು.**

**ಈ ರೀತಿ ಮಹಾವೀರಾಚಾರ್ಯರಿಂದ ರಚಿತವಾದ ಸಾರಸಂಗ್ರಹವೆಂಬ ಹೆಸರಿನ ಗಣಿತಶಾಸ್ತ್ರದ *ಪರಿಕರ್ಮ*ವೆಂಬ ಹೆಸರಿನ ಪ್ರಥಮ ವ್ಯವಹಾರವು ಮುಕ್ತಾಯವಾಯಿತು.**

---



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



1. M ಶ್ರಾ

**115.** In this problem, there are given 7 different fruit trees, each of which has 16 bunches of fruits. The lowest bunch on each tree has 4 fruits; the fruits in the higher bunches are geometrically progressive in number, the common ratio being 2 and 10, 9, 8, 7, 6, 5 and 4 represent the numbers of the bunches removed from below in order from the 7 trees. We have to find out the total of the remaining fruits on the tops of the various good trees. *Mattēbhavikrīḍita*, as it occurs in this stanza, is the name of the metre in which it is composed, at the same time that it means the sporting of wild elephants.

೧೧೫. ಈ ಲೆಕ್ಕದಲ್ಲಿ ೭ ಬೇರೆ ಬೇರೆ ಹಣ್ಣಿನ ಗಿಡಗಳನ್ನು ಕೊಡಲಾಗಿದೆ. ಪ್ರತಿಯೊಂದರಲ್ಲೂ ೧೬ ಹಣ್ಣುಗಳ ಗೊಂಚಲುಗಳಿವೆ. ಪ್ರತಿಯೊಂದು ಮರದಲ್ಲಿರುವ ಅತಿ ಕೆಳಗಿನ ಗೊಂಚಲಿನಲ್ಲಿ ೪ ಹಣ್ಣುಗಳಿವೆ. ಮೇಲಿನ ಗೊಂಚಲುಗಳಲ್ಲಿ ಗುಣೋತ್ತರ ಶ್ರೇಣಿಯಲ್ಲಿ ಹೆಚ್ಚುವ ಹಣ್ಣುಗಳ ಸಂಖ್ಯೆಗಳಿವೆ. ಇದರ ಸಾಮಾನ್ಯ ನಿಷ್ಪತ್ತಿಯು ೨ ಆಗಿದೆ ಮತ್ತು ೭ ಮರಗಳಲ್ಲಿ ತೆಗೆದಂತಹ ಗೊಂಚಲುಗಳ ಸಂಖ್ಯೆ ಕೆಳಗಿನಿಂದ ಕ್ರಮವಾಗಿ ೧೦, ೯, ೮, ೭, ೬, ೫ ಮತ್ತು ೪ ಆಗಿದೆ. ನಾವು ವಿವಿಧ ಉತ್ತಮ ಮರಗಳ ಮೇಲಿರುವ ಉಳಿದ ಹಣ್ಣುಗಳ ಒಟ್ಟು ಸಂಖ್ಯೆಯನ್ನು ಕಂಡುಹಿಡಿಯಬೇಕು. ಈ ಸೂತ್ರದಲ್ಲಿ ಬಂದಿರುವ *ಮತ್ತೇ ಭವಿಕ್ರೀಡಿತಂ* ಎಂಬುದು ಯಾವುದರಿಂದ ಇದು ರಚಿತವಾಗಿದೆಯೊ ಆ ಸೂತ್ರದ ಛಂದಸ್ಸು ಆಗಿದೆ. ಕಾಡಿನ ಆನೆಗಳ ಕ್ರೀಡೆ ಎಂದೂ ಇದರ ಅರ್ಥವಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



# ३. कलासवर्णव्यवहारः

[1]त्रिलोकराजेन्द्रकिरीटकोटिप्रभाभिरालीढपदारविन्दम् ।
निर्मूलमुन्मूलितकर्मवृक्षं जिनेन्द्रचन्द्रं प्रणमामि भक्त्या ॥ १ ॥

**इतः परं कलासवर्णं द्वितीयव्यवहारमुदाहरिष्यामः ।**

---

# 3. Kalāsavarṇavyavahāraḥ

1. Trilokarājendrakirīṭakoṭiprabhābhirālīḍhapadāravindam,
nirmūlamunmūlitakarmavṛkṣaṁ jinendracandraṁ praṇamāmi bhaktyā.

**Itaḥ paraṁ kalāsavarṇaṁ dvitīyavyavahāramudāhariṣyāmaḥ.**

---

## CHAPTER III
## FRACTIONS
### The Second Subject of Treatment

1. Unto that excellent Lord of the Jinas, by whom the tree of karman has been completely uprooted and whose lotus-like feet are enveloped in the halo of splendour proceeding from the tops of the crowns belonging to the chief sovereigns in all the three worlds (unto that Lord of the Jinas), I bow in devotion.

Hereafter, we shall expound the second subject of treatment known as *Kalāsavarṇa** (i.e., fractions).

---

## ಅಧ್ಯಾಯ ೩
## ಭಿನ್ನರಾಶಿಗಳು
### ವ್ಯವಹಾರದ ಎರಡನೇ ವಿಷಯ

೧. ಯಾರು ಕರ್ಮರೂಪೀ ವೃಕ್ಷವನ್ನು ಸಂಪೂರ್ಣವಾಗಿ ನಿರ್ಮೂಲನಗೊಳಿಸಿದ್ದಾರೋ ಮತ್ತು ಯಾರ ಚರಣ-ಕಮಲವು ಮೂರು ಲೋಕಗಳ ರಾಜೇಂದ್ರರ ಬಾಗಿಸಿದ ಶಿರಗಳ ಮೇಲಿಟ್ಟಂತಹ ಕಿರೀಟಗಳಿಂದ ಉತ್ಪನ್ನವಾದ ಪ್ರಭಾಮಂಡಲದಿಂದ ಆವರಿಸಲ್ಪಟ್ಟಿದೆಯೋ, ಅಂತಹ ಜಿನೇಂದ್ರ ಚಂದ್ರನಾಥ ಭಗವಾನರಿಗೆ ನಾನು ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ.

ಇದಾದ ನಂತರ ನಾವು *ಕಲಾಸವರ್ಣ* * (ಭಿನ್ನರಾಶಿ) ಎಂಬ ಹೆಸರಿನ ದ್ವಿತೀಯ ವ್ಯವಹಾರವನ್ನು ಪ್ರಕಟಿಸುತ್ತೇವೆ.

---

1. This stanza is omitted in P

*Kalāsavarṇa literally means parts resembling $\frac{1}{16}$, since kalā denotes the sixteenth part. Hence the term Kalāsavarṇa has come to signify fractions in general.

**ಕಲಾಸವರ್ಣ* ದ ವಾಚ್ಯಾರ್ಥವೇನೆಂದರೆ $\frac{೧}{೧೬}$ ಭಾಗವೆಂದು, ಏಕೆಂದರೆ *ಕಲಾ* ಎಂದರೆ ಹದಿನಾರನೇ ಒಂದು ಭಾಗವೆಂದಾಗುತ್ತದೆ. ಆದ್ದರಿಂದ *ಕಲಾಸವರ್ಣ* ಎಂಬ ಪದವನ್ನು ಭಿನ್ನರಾಶಿಗಳ ಸಾಧಾರಣರೂಪವನ್ನು ಸೂಚಿಸಲು ಉಪಯೋಗಿಸಲಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## भिन्नप्रत्युत्पन्नः

तत्र भिन्नप्रत्युत्पन्ने करणसूत्रं यथा -

गुणयेदंशानंशैर्हारान् हारैर्घटेत यदि तेषाम् । वज्रापवर्तनविधिर्विधाय तं भिन्नगुणकारे ॥ २ ॥

### अत्रोद्देशकः

शुण्ठ्याः पलेन लभते चतुर्नवांशं पणस्य यः पुरुषः ।
किमसौ ब्रूहि सखे त्वं त्रिगुणेन पलाष्टभागेन ॥ ३ ॥

---

## Bhinnapratyutpannaḥ

Tatra bhinnapratyutpanne karaṇasūtraṁ yathā-

2. Guṇayedaṁśānaṁśairhārān hārairghaṭeta yadi teṣām,
vajrāpavartanavidhirvidhāya taṁ bhinnaguṇakāre.

### Atroddeśakaḥ

3. S'uṇṭhyāḥ palena labhate caturnavāṁśaṁ paṇasya yaḥ puruṣaḥ,
kimasau brūhi sakhe tvaṁ triguṇena palāṣṭabhāgena.

---

## Multiplication of Fractions

The rule of work here, in relation to the multiplication of fractions, is as follows :

**2.** In the multiplication of fractions, the numerators are to be multiplied by the numerators and the denominators by the denominators, after carrying out the process of cross-reduction, if that be possible in relation to them.

### *Examples in illustration thereof*

**3.** Tell me, friend, what a person will get for $\frac{3}{8}$ of a *pala* of dried ginger, if he gets $\frac{4}{9}$ of a *paṇa* for 1 *pala* of such ginger.

---

## ಭಿನ್ನರಾಶಿಗಳ ಗುಣಾಕಾರ

ಭಿನ್ನರಾಶಿಗಳ ಗುಣಾಕಾರಕ್ಕೆ ಸಂಬಂಧಿಸಿದ ನಿಯಮವು ಮುಂದೆ ತಿಳಿಸಿದಂತಿದೆ :

೨. ಅಂಶ-ಛೇದಗಳ ಸಂಬಂಧದಲ್ಲಿ ಸಾಧ್ಯವಾದರೆ ವಜ್ರ-ಅಪವರ್ತನದ ಕ್ರಿಯೆಯನ್ನು ಮಾಡಿದ ನಂತರ, ಭಿನ್ನರಾಶಿಗಳ ಗುಣಾಕಾರದಲ್ಲಿ ಅಂಶಗಳನ್ನು ಅಂಶಗಳಿಂದ ಗುಣಿಸಲಾಗುತ್ತದೆ ಮತ್ತು ಛೇದಗಳನ್ನು ಛೇದಗಳಿಂದ ಗುಣಿಸಲಾಗುತ್ತದೆ.

### ಉದಾಹರಣೆಗಳಿಂದ ವಿಶ್ಲೇಷಣ

೩. ಎಲೈ ಸ್ನೇಹಿತನೇ, ಒಬ್ಬ ವ್ಯಕ್ತಿಯು ಒಂದು *ಪಲ* ಒಣಗಿದ ಶುಂಠಿಗೆ $\frac{೪}{೯}$ *ಪಣ*ವನ್ನು ಪಡೆದರೆ, ಅಂತಹ ಶುಂಠಿಯ $\frac{೩}{೮}$ *ಪಲ*ಕ್ಕೆ ಅವನಿಗೆ ಏನು ದೊರೆಯುತ್ತದೆ ಎಂದು ಹೇಳು.

---

2. When $\frac{3}{4} \times \frac{2}{9}$ reduced as $\frac{1}{2} \times \frac{1}{3}$, the process of cross-reduction is applied.

೨. $\frac{೩}{೪} \times \frac{೨}{೯}$ ಅನ್ನು $\frac{೧}{೨} \times \frac{೧}{೩}$ ಕ್ಕೆ ರೂಪಾಂತರಗೊಳಿಸಿದಾಗ ವಜ್ರಾಪವರ್ತನ ವಿಧಾನವನ್ನು ಅನ್ವಯಿಸಲಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



मरिचस्य पलस्यार्घः पणस्य सप्ताष्टमांशको यत्र ।
तत्र भवोत्किं [1] मूल्यं पलषट्पञ्चांशकस्य वद ॥ ४ ॥
कश्चित्पणेन लभते त्रिपञ्चभागं पलस्य पिप्पल्याः ।
नवभिः पणैर्द्विभक्तैः किं गणकाचक्ष्व गुणयित्वा ॥ ५ ॥
क्रीणाति पणेन वणिग्जीरकपलनवदशांशकं यत्र ।
तत्र पणैः पञ्चार्धैः कथय त्वं किं समग्रमते ॥ ६ ॥
द्व्यादयो द्वितयवृद्ध्योऽशकास्त्र्यादयो द्व्यचया हराः पुनः ।
ते द्वये दशपदाः कियत्फलं ब्रूहि तत्र गुणने द्वयोर्द्वयोः ॥ ७ ॥

**इति भिन्नगुणकारः ।**

---

4. Maricasya palasyārghaḥ paṇasya saptāṣṭamāṁśako yatra, tatra bhavetkiṁ mūlyaṁ palaṣaṭpañcāṁśakasya vada.

5. Kaścitpaṇena labhate tripañcabhāgaṁ palasya pippalyāḥ, navabhiḥ paṇairdvibhaktaiḥ kiṁ gaṇakācakṣva guṇayitvā.

6. Kriṇāti paṇena vaṇigjirakapalanavadaśāṁśakaṁ yatra, tatra paṇaiḥ pañcārdhaiḥ kathaya tvaṁ kiṁ samagramate.

7. Dvyādayo dvitayavṛddhayoṁ'śakāstryādayo dvayacayā harāḥ punaḥ, te dvaye daśapadāḥ kiyatphalaṁ brūhi tatra guṇane dvayordvayoḥ.

**Iti bhinnaguṇakāraḥ.**

**4.** Where the price of 1 *pala* of pepper is $\frac{7}{8}$ of a *paṇa*, there, say, what the price will be of $\frac{6}{5}$ of a *pala*.

**5.** A person gets $\frac{3}{5}$ of a *pala* of long pepper for 1 *paṇa*. O arithmetician, mention, after multiplying, what (he gets) for $\frac{9}{2}$ *paṇas*.

**6.** Where a merchant buys $\frac{9}{10}$ of a *pala* of cumin seeds for 1 *paṇa*, there, O you who possess complete knowledge, mention what (he buys) for $\frac{5}{2}$ *paṇas*.

**7.** The numerators of the given fractions begin with 2 and go on increasing gradually by 2; again their denominators begin with 3 and go on increasing by 2; those (numerators and denominators) are, in both (the cases), 10 in number. Mention, of what value the products here will be, when those (fractions) are multiplied, they being taken two by two.

**Thus ends multiplication of fractions.**

---

೪. ಎಲ್ಲಿ ೧ *ಪಲ* ಮೆಣಸಿಗೆ $\frac{೭}{೮}$ *ಪಣ*ವಾಗುತ್ತದೋ ಅಲ್ಲಿ $\frac{೬}{೫}$ *ಪಲ* (ಮೆಣಸಿಗೆ) ಏನು ಬೆಲೆಯಾಗುತ್ತದೆ?

೫. ಒಬ್ಬ ವ್ಯಕ್ತಿಗೆ ಉದ್ದನೆಯ ಮೆಣಸು ೧ ಪಣಕ್ಕೆ $\frac{೩}{೫}$ *ಪಲ* ದೊರೆಯುತ್ತದೆ. ಎಲೈ ಗಣಿತಜ್ಞನೇ, ಗುಣಿಸಿದ ನಂತರ $\frac{೯}{೨}$ *ಪಣ*ಗಳಿಗೆ ಅವನಿಗೆ ಎಷ್ಟು (ಮೆಣಸು) ದೊರೆಯುತ್ತದೆ ಎಂದು ಹೇಳು.

೬. ಎಲ್ಲಿ ಒಬ್ಬ ವ್ಯಾಪಾರಿಯು ಒಂದು *ಪಣ*ಕ್ಕೆ $\frac{೯}{೧೦}$ *ಪಲ* ಜೀರಿಗೆಯನ್ನು ಖರೀದಿಸುತ್ತಾನೋ ಅಲ್ಲಿ ಅವನು $\frac{೫}{೨}$ *ಪಣ*ಕ್ಕೆ ಎಷ್ಟನ್ನು ಖರೀದಿಸುತ್ತಾನೆ ಎಂದು ಸಮಗ್ರಮತಿಯಾದ ನೀನು ಹೇಳು.

೭. ಕೊಟ್ಟಿರುವಂತಹ ಭಿನ್ನರಾಶಿಗಳಲ್ಲಿ ಅಂಶಗಳು ಎರಡರಿಂದ ಆರಂಭವಾಗುತ್ತವೆ ಮತ್ತು ಕ್ರಮೇಣ ೨ ರಂತೆ ಹೆಚ್ಚುತ್ತಾ ಹೋಗುತ್ತವೆ; ಅವುಗಳ ಛೇದಗಳು ೩ ರಿಂದ ಆರಂಭವಾಗುತ್ತವೆ ಮತ್ತು ೨ ರಂತೆ ಹೆಚ್ಚುತ್ತಾ ಹೋಗುತ್ತವೆ. ಇವುಗಳು (ಅಂಶಗಳು ಮತ್ತು ಛೇದಗಳು) ಎರಡರಲ್ಲೂ ಸಂಖ್ಯೆಯಲ್ಲಿ ೧೦ ಆಗಿವೆ. ಈ ಭಿನ್ನರಾಶಿಗಳನ್ನು ಎರಡೆರಡರಂತೆ ತೆಗೆದುಕೊಂಡು ಗುಣಿಸಿದಾಗ ಬರುವ ಗುಣಲಬ್ಧವೆನ್ನು ತಿಳಿಸು.

**ಈ ರೀತಿ ಭಿನ್ನರಾಶಿಗಳ ಗುಣಾಕಾರವು ಮುಕ್ತಾಯವಾಗುತ್ತದೆ.**

---

1. M ಮೌ

7. The fractions herein mentioned are : $\frac{2}{3}$, $\frac{4}{5}$, $\frac{6}{7}$, &c.

೭. ಇಲ್ಲಿ ತಿಳಿಸಲಾಗಿರುವ ಭಿನ್ನರಾಶಿಗಳು $\frac{೨}{೩}$, $\frac{೪}{೫}$, $\frac{೬}{೭}$ ಇತ್ಯಾದಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## भिन्नभागहारः

भिन्नभागहारे करणसूत्रं यथा -

अंशीकृत्यच्छेदं प्रमाणराशेस्ततः क्रिया गुणवत् ।
प्रमितफलेऽन्यहरघ्ने विच्छिदि वा सकलवच्च भागहृतौ ॥ ८ ॥

### अत्रोद्देशकः

हिङ्गोः पलार्धमौल्यं पणत्रिपादांशको भवेद्यत्र। तत्रार्घे विक्रीणन् पलमेकं किं नरो लभते ॥ ९ ॥

---

### Bhinnabhāgahāraḥ

Bhinnabhāgahāre karaṇasūtram yathā-

**8.** Aṁśīkṛtyacchedaṁ pramāṇarāśestataḥ kriyā guṇavat,
pramitaphale'nyaharaghne vicchidi vā sakalavacca bhāgahṛtau.

### Atroddeśakaḥ

**9.** Hiṅgoḥ palārdhamaulyaṁ paṇatripādāṁśako bhavedyatra, tatrāghre vikrīṇan palamekaṁ kiṁ naro labhate.

---

### *Division of Fractions*

The rule of work, in relation to the division of fractions, is as follows :

8. After making the denominator of the divisor its numerator (and vice versa), the operation to be conducted then is as in the multiplication (of fractions). Or, when (the fractions constituting) the divisor and the dividend are multiplied by the denominators of each other and (these two products) are (thus reduced so as to be) without denominators, the operation to be conducted is as in the division of whole numbers.

### *Examples in illustration thereof*

**9.** When the cost of half a *pala* of asafoetida is $\frac{3}{4}$ of a *paṇa*, what does a person get if he sells 1 *pala* at that (same) rate?

---

### ಭಿನ್ನರಾಶಿಗಳ ಭಾಗಾಹಾರ

ಭಿನ್ನರಾಶಿಗಳ ಭಾಗಾಹಾರಕ್ಕೆ ಸಂಬಂಧಿಸಿದ ನಿಯಮವು ಮುಂದೆ ತಿಳಿಸಿದಂತಿದೆ :

೮. ಭಾಜಕದ ಅಂಶವನ್ನು ಛೇದವನ್ನಾಗಿಯೂ ಮತ್ತು ಛೇದವನ್ನು ಅಂಶವಾಗಿಯೂ ಮಾಡಿದ ನಂತರ ಕೇವಲ ಗುಣಾಕಾರದ ಕ್ರಿಯೆಯನ್ನು ಮಾಡಬೇಕಾಗುತ್ತದೆ. ಅಥವಾ ಭಾಜಕ ಮತ್ತು ಭಾಜ್ಯಗಳನ್ನು ಅವುಗಳ ಛೇದಗಳ ಗುಣಲಬ್ಧದಿಂದ ಗುಣಿಸಿದ ನಂತರ ಬಂದಂತಹ ಛೇದರಹಿತ ಗುಣಲಬ್ಧಗಳ ಭಾಗಾಹಾರವು ಕೇವಲ ಪೂರ್ಣಾಂಕಗಳ ಭಾಗಾಹಾರದಂತೆ ಆಗುತ್ತದೆ.

### ಉದಾಹರಣೆಗಳಿಂದ ವಿಶ್ಲೇಷಣ

೯. $\frac{೧}{೨}$ ಪಲ ಇಂಗಿನ ಬೆಲೆ $\frac{೩}{೪}$ ಪಣವಾದಾಗ ಒಬ್ಬ ವ್ಯಕ್ತಿಯು ೧ ಪಲ (ಇಂಗನ್ನು) ಆ ಬೆಲೆಗೆ ಮಾರಿದರೆ ಅವನಿಗೆ ಏನು ದೊರೆಯುತ್ತದೆ?

---

**8.** (i) $\frac{a}{b} \div \frac{c}{d} = \frac{a}{b} \times \frac{d}{c}$ (ii) $\frac{a}{b} \div \frac{c}{d} = \frac{a}{d} \times bd \div \frac{c}{d} \times bd = ad \div bc.$

೮. (i) $\frac{ಲ}{ಬ} \div \frac{ಸ}{ದ} = \frac{ಲ}{ಬ} \times \frac{ದ}{ಸ}$ ii) $\frac{ಲ}{ಬ} \div \frac{ಸ}{ದ} = \frac{ಲ}{ಬ} \times ಬದ \div \frac{ಸ}{ದ} \times ಬದ = ಲದ \div ಬಸ$



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अगरोः पलाष्टमेन त्रिगुणेन पणस्य विंशतित्र्यंशान् ।
उपलभते यत्र पुमानेकेन पलेन किं तत्र ॥ १० ॥
पणपञ्चमैश्चतुर्भिर्नखस्य पलसप्तमो द्व्यशीतिगुणः ।
संप्राप्यो यत्र स्यादेकेन पणेन किं तत्र ॥ ११ ॥
त्र्यादिरूपपरिवृद्धियुजोंऽशा यावदष्टपदमेकविहीनाः ।
हारकास्तत इह द्वितयाद्यैः किं फलं वद परेषु हृतेषु ॥ १२ ॥

**इति भिन्नभागहारः ।**

---

**10.** Agaroḥ palāṣṭamena triguṇena paṇasya viṁśatitrayaṁśān, upalabhate yatra pumānekena palena kiṁ tatra.

**11.** Paṇapañcamaiścaturbhirnakhasya palasaptamo dyaśītiguṇaḥ, saṁprāpyo yatra syādekena paṇena kiṁ tatra.

**12.** Tryādirūpaparivṛddhiyujoṁ'śā yāvadaṣṭapadamekavihīnāḥ, hārakāstata iha dvitayādyaiḥ kiṁ phalaṁ vada pareṣu hṛteṣu.

**Iti bhinnabhāgahāraḥ.**

---

**10.** In case a person gets $\frac{20}{3}$ of a *paṇa* for $\frac{3}{8}$ of a *pala* of red sandalwood, what will he get for 1 *pala* (of the same wood)?

**11.** When $\frac{82}{7}$ *palas* of the perfume *nakha* is obtainable for $\frac{4}{5}$ of a *paṇa*, what (will be obtainable) for 1 *paṇa* at that (same rate)?

**12.** The numerators (of the given fractions) begin with 3 and go on increasing gradually by 1, till they are 8 in number; the denominators begin with 2 and are (throughout) less by one (than the corresponding numerators). Tell me what the result is when the succeeding (fractions here) are divided (in order by the preceding ones).

**Thus ends the division of fractions.**

---

೧೦. ಒಂದು ವೇಳೆ ಒಬ್ಬ ವ್ಯಕ್ತಿಯು $\frac{೩}{೮}$ *ಪಲ* ಕೆಂಪು ಚಂದನದ ತುಂಡುಗಳಿಗೆ $\frac{೨೦}{೩}$ *ಪಣ*ವನ್ನು ಗಳಿಸಿದರೆ ಅವನಿಗೆ (ಇದೇ ಮರದ) ಒಂದು *ಪಲ*ಕ್ಕೆ ಏನು ಲಭಿಸುತ್ತದೆ?

೧೧. $\frac{೮೨}{೭}$ *ಪಲ*ಗಳ *ನಖ* ಸುಗಂಧವನ್ನು $\frac{೪}{೫}$ *ಪಣ*ಕ್ಕೆ ಪಡೆದಾಗ ೧ *ಪಣ*ಕ್ಕೆ (ಅದೇ ಬೆಲೆಯಲ್ಲಿ) ಏನನ್ನು (ಎಷ್ಟು *ಪಲ* ಸುಗಂಧವನ್ನು) ಪಡೆಯಬಹುದು?

೧೨. ಕೊಟ್ಟಿರುವಂತಹ ಭಿನ್ನರಾಶಿಗಳ ಅಂಶಗಳು ೩ ರಿಂದ ಆರಂಭವಾಗುತ್ತವೆ ಮತ್ತು ಅವುಗಳ ಸಂಖ್ಯೆ ೮ ಆಗುವವರೆಗೂ ಕ್ರಮೇಣ ೧ ರಂತೆ ಹೆಚ್ಚುತ್ತಾ ಹೋಗುತ್ತವೆ. ಛೇದಗಳು ೨ ರಿಂದ ಆರಂಭವಾಗುತ್ತವೆ ಮತ್ತು ಅವುಗಳಿಗೆ ಅನುಗುಣವಾದ ಅಂಶಗಳಿಗಿಂತ (ಉದ್ದಕ್ಕೂ) ಒಂದು ಕಡಿಮೆಯಾಗಿರುತ್ತವೆ. ಅಗ್ರಿಮ ಭಿನ್ನರಾಶಿಗಳನ್ನು ಕ್ರಮವಾಗಿ ಪೂರ್ವಕ ಭಿನ್ನರಾಶಿಗಳಿಂದ ಭಾಗಿಸಿದಾಗ ಏನು ಫಲ ದೊರೆಯುತ್ತದೆ ಎಂದು ಹೇಳು.

**ಈ ರೀತಿ ಭಿನ್ನರಾಶಿಗಳ ಭಾಗಾಹಾರವು ಸಮಾಪ್ತಿಯಾಯಿತು.**



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



### भिन्नवर्गवर्गमूलघनघनमूलानि

[1]भिन्नवर्गवर्गमूलघनघनमूलेषु करणसूत्रं यथा -

कृत्वाच्छेदांशकयोः कृतिकृतिमूले घनं च घनमूलम्। तच्छेदैरंशहृतौ वर्गादिफलं भवेद्भिन्ने ॥१३॥

### अत्रोद्देशकः

पञ्चकसप्तनवानां दलितानां कथय गणक वर्गं त्वम् ।

षोडशविंशतिशतकद्विशतानां च त्रिभक्तानाम् ॥ १४ ॥

---

### Bhinnavargavargamūlaghanaghanamūlāni

Bhinnavargavargamūlaghanaghanamūleṣu karaṇasūtraṁ yatha-

**13.** Kṛtvācchedāṁśakayoḥ kṛtikṛtimūle ghanaṁ ca ghanamūlam, tacchedairaṁśahṛtau vargādiphalaṁ bhavedbhinne.

### Atroddeśakaḥ

**14.** Pañcakasaptanavānāṁ dalitānāṁ kathaya gaṇaka vargaṁ tvam, ṣoḍaśaviṁśatiśatakadviśatānāṁ ca tribhaktānām.

---

### The Squaring, Square-Root, Cubing and Cube-Root of Fractions

In connection with the squaring, the square root, the cubing and the cube root of fractions, the rule of operation is as follows :

**13.** If, after getting the square, the square root, the cube (or) the cube root of the (simplified) denominator and numerator (of the given fraction), the (new) numerator (so obtained) is divided by the (similarly new) denominator, there arises the result of the operation of squaring or of any of the other above-mentioned (operations as the case may be) in relation to fractions.

### *Examples in illustration thereof*

**14.** O arithmetician, tell me the squares of $\frac{5}{2}, \frac{7}{2}, \frac{9}{2}, \frac{16}{3}, \frac{20}{3}, \frac{100}{3}$ and $\frac{200}{3}$.

---

### ಭಿನ್ನರಾಶಿಗಳಿಗೆ ಸಂಬಂಧಿಸಿದ ವರ್ಗ, ವರ್ಗಮೂಲ, ಘನ ಮತ್ತು ಘನಮೂಲ

ಭಿನ್ನರಾಶಿಗಳ ಸಂಬಂಧದಲ್ಲಿ ವರ್ಗಮಾಡಲು, ವರ್ಗಮೂಲವನ್ನು ಕಂಡುಹಿಡಿಯಲು, ಘನಮಾಡಲು ಮತ್ತು ಘನಮೂಲವನ್ನು ಕಂಡುಹಿಡಿಯಲು ನಿಯಮವು ಮುಂದೆ ತಿಳಿಸಿದಂತಿದೆ :

೧೩. (ಸರಳೀಕರಿಸಿದ) ಭಿನ್ನರಾಶಿಯ ಅಂಶ ಮತ್ತು ಛೇದಗಳ ವರ್ಗ, ವರ್ಗಮೂಲ, ಘನ ಅಥವಾ ಘನಮೂಲಗಳನ್ನು ಬೇರೆ ಬೇರೆಯಾಗಿ ಕಂಡುಹಿಡಿದು, ನಂತರ ಹೀಗೆ ಬಂದಂತಹ ಹೊಸ ಅಂಶವನ್ನು ಹೊಸ ಛೇದದಿಂದ ಭಾಗಿಸಲಾಗುತ್ತದೆ. ಈ ರೀತಿ ಭಿನ್ನರಾಶಿಗಳ ಸಂಬಂಧದಲ್ಲಿ ವರ್ಗ ಅಥವಾ ಮೇಲೆ ಹೇಳಿದ ಇನ್ನಿತರ ಕ್ರಿಯೆಗಳು ಪ್ರಾಪ್ತವಾಗುತ್ತವೆ.

### ಉದಾಹರಣೆಗಳಿಂದ ವಿಶ್ಲೇಷಣ

೧೪. ಎಲೈ ಅಂಕಗಣಿತಜ್ಞನೇ, $\frac{೫}{೨}, \frac{೭}{೨}, \frac{೯}{೨}, \frac{೧೬}{೩}, \frac{೨೦}{೩}, \frac{೧೦೦}{೩}$ ಮತ್ತು $\frac{೨೦೦}{೩}$ ಇವುಗಳ ವರ್ಗಗಳನ್ನು ಹೇಳು.

---

1. M भिन्नवर्गभिन्नवर्गमूलभिन्नघनतन्मूलेषु



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



त्रिकादिरूपद्वयवृद्धयोंऽशा द्विकादिरूपोत्तरका हराश्च ।
पदं मतं द्वादश वर्गमेषां वदाशु मे त्वं गणकाग्रगण्य ॥ १५ ॥
पादनवांशकषोडशभागानां पञ्चविंशतितमस्य ।
षट्त्रिंशद्भागस्य च कृतिमूलं गणक भण शीघ्रम् ॥ १६ ॥
भिन्ने वर्गे राशयो वर्गिता ये तेषां मूलं सप्तशत्याश्च किं स्यात् ।
त्र्यष्टोनायाः पञ्चवर्गोद्धृताया ब्रूहि त्वं मे वर्गमूलं प्रवीण ॥ १७ ॥
अर्धत्रिभागपादाः पञ्चाशकषष्ठसप्तमाष्टांशाः ।
दृष्टा नवमश्चैषां पृथक् पृथग्ब्रूहि गणक घनम् ॥ १८ ॥

---

15. Trikādirūpadvayavṛddhayoṁśā dvikādirūpottarakā harāśca, padaṁ mataṁ dvādaśa vargameṣāṁ vadāśu me tvaṁ gaṇakāgragaṇya.

16. Pādanavāṁśakaṣoḍaśabhāgānāṁ pañcaviṁśatitamasya, ṣaṭtriṁśadbhāgasya ca kṛtimūlaṁ gaṇaka bhaṇa śīghram.

17. Bhinne varge rāśayo vargitā ye teṣāṁ mūlaṁ saptaśatyāśca kiṁ syāt, tryaṣṭonāyāḥ pañcavargodbhṛtāyā brūhi tvaṁ me vargamūlaṁ praviṇa.

18. Ardhatribhāgapādāḥ pañcāṁśakaṣaṣṭasaptamāṣṭāṁśāḥ, dṛṣṭā navamaścaiṣāṁ pṛthak pṛthagbrūhi gaṇaka ghanam.

---

**15.** The numerators (of the given fractions) begin with 3 and (gradually) rise by 2; the denominators begin with 2 and (gradually) rise by 1: the number of these (fractions) is known to be 12. Tell me quickly their squares, you who are foremost among arithmeticians.

**16.** Tell me quickly, O arithmetician, the square roots of $\frac{1}{4}, \frac{1}{9}, \frac{1}{16}, \frac{1}{25}$ and $\frac{1}{36}$.

**17.** O clever man, tell me what the square roots are of the squared quantities which are found in the (examples bearing on the) squaring of fractions and also of $\frac{676}{25}$.

**18.** The following quantities, namely, $\frac{1}{2}, \frac{1}{3}, \frac{1}{4}, \frac{1}{5}, \frac{1}{6}, \frac{1}{7}, \frac{1}{8}$ and $\frac{1}{9}$, are given. Tell me their cubes separately.

---

೧೫. ಕೊಟ್ಟಿರುವಂತಹ ಭಿನ್ನರಾಶಿಗಳ ಅಂಶಗಳು ೩ ರಿಂದ ಆರಂಭವಾಗುತ್ತವೆ ಮತ್ತು (ಕ್ರಮೇಣ) ೨ ರಂತೆ ಹೆಚ್ಚುತ್ತವೆ. ಛೇದಗಳು ೨ ರಿಂದ ಆರಂಭವಾಗುತ್ತವೆ ಮತ್ತು (ಕ್ರಮೇಣ) ೧ ರಂತೆ ಹೆಚ್ಚುತ್ತವೆ. ಈ ಭಿನ್ನರಾಶಿಗಳ ಸಂಖ್ಯೆಯು ೧೨ ಎಂದು ಗೊತ್ತಾಗಿದೆ. ಎಲೈ ಅಂಕಗಣಿತಜ್ಞರಲ್ಲಿ ಅಗ್ರಗಣ್ಯನಾದವನೇ, ಅವುಗಳ ವರ್ಗಗಳನ್ನು ಬೇಗನೆ ಹೇಳು.

೧೬. ಎಲೈ ಅಂಕಗಣಿತಜ್ಞನೇ, $\frac{೧}{೪}, \frac{೧}{೯}, \frac{೧}{೧೬}, \frac{೧}{೨೫}$ ಮತ್ತು $\frac{೧}{೩೬}$ ಇವುಗಳ ವರ್ಗಮೂಲಗಳನ್ನು ಬೇಗನೆ ಹೇಳು.

೧೭. ಎಲೈ ಕುಶಲ ವ್ಯಕ್ತಿಯೇ, ಭಿನ್ನರಾಶಿಗಳ ವರ್ಗಗಳಿಗೆ ಸಂಬಂಧಿಸಿದ ಉದಾಹರಣೆಗಳಿಂದ ಬಂದಂತಹ, ವರ್ಗಮಾಡಿದ ಸಂಖ್ಯೆಗಳ ವರ್ಗಮೂಲಗಳನ್ನೂ ಹಾಗೂ $\frac{೬೭೬}{೨೫}$ ರ ವರ್ಗಮೂಲವನ್ನೂ ಹೇಳು.

೧೮. ಮುಂದೆ ಹೇಳಿರುವ ಸಂಖ್ಯೆಗಳು, ಅಂದರೆ $\frac{೧}{೨}, \frac{೧}{೩}, \frac{೧}{೪}, \frac{೧}{೫}, \frac{೧}{೬}, \frac{೧}{೭}, \frac{೧}{೮}$ ಮತ್ತು $\frac{೧}{೯}$ ಇವುಗಳ ಘನಗಳನ್ನು ಪ್ರತ್ಯೇಕವಾಗಿ ಹೇಳು.

---

17. Here $\frac{676}{25}$ is given in the original as $\frac{700 - 3 \times 8}{5^2}$

೧೭. ಮೂಲಕೃತಿಯಲ್ಲಿ $\frac{೬೭೬}{೨೫}$ ನ್ನು $\frac{೭೦೦ - ೩ \times ೮}{೫^೨}$ ಎಂದು ಕೊಡಲಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



त्रितयादिचतुश्चयकोऽशगणो द्विमुखद्विचयोऽत्र हरप्रचयः ।
दशकं पदमाशु तदीयघनं कथय प्रिय सूक्ष्ममते गणिते ॥ १९ ॥
शतकस्य पञ्चविंशस्याष्टविभक्तस्य कथय घनमूलम् ।
[1]नवयुतसप्तशतानां विंशानामष्टभक्तानाम् ॥ २० ॥
भिन्नघने परिदृष्टघनानां मूलमुदग्रमते वद मित्र ।
त्र्यूनशतद्वययुग्द्विसहस्याश्चापि नवप्रहतत्रिहृतायाः ॥ २१ ॥

**इति भिन्नवर्गवर्गमूलघनघनमूलानि ।**

---

**19.** Tritayādicatuścayakoṁ'śagaṇo dvimukhadvicayo'tra harapracayaḥ, daśakaṁ padamāśu tadīyaghanaṁ kathaya priya sūkṣmamate gaṇite.

**20.** S'atakasya pañcaviṁśasyāṣṭavibhaktasya kathaya ghanamūlam, navayutasaptaśatānāṁ viṁśānāmaṣṭabhaktānām.

**21.** Bhinnaghane paridṛṣṭaghanānāṁ mūlamudagramate vada mitra, tryūnaśatadvayayugdvisahasyāścāpi navaprahatatrihṛtāyāḥ.

**Iti bhinnavargavargamūlaghanaghanamūlāni.**

---

**19.** The numerators (of the given fractions) begin with 3 and (gradually) rise by 4; the denominators begin with 2 and (gradually) rise by 2; the number of such (fractional) terms is 10. Tell me their cubes quickly, O friend who are possessed of keen intelligence in calculation.

**20.** Give the cube roots of $\frac{125}{8}$ and $\frac{729}{8}$.

**21.** O friend of prominent intelligence, give the cube roots of the cubed quantities found in (the examples on) the cubing of fractions and (give also the cube root) of $\frac{2197}{27}$.

**Thus end the squaring, square-root, cubing and cube-root of fractions.**

---

೧೯. ಕೊಟ್ಟಿರುವಂತಹ ಭಿನ್ನರಾಶಿಗಳ ಅಂಶಗಳು ೩ ರಿಂದ ಆರಂಭವಾಗುತ್ತವೆ ಮತ್ತು (ಕ್ರಮೇಣ) ೪ ರಂತೆ ಹೆಚ್ಚುತ್ತವೆ. ಛೇದಗಳು ೨ ರಿಂದ ಆರಂಭವಾಗುತ್ತವೆ ಮತ್ತು (ಕ್ರಮೇಣ) ೨ ರಂತೆ ಹೆಚ್ಚುತ್ತವೆ. ಇಂತಹ ಭಿನ್ನರಾಶಿಗಳು ೧೦ ಆಗಿವೆ. ಎಲೈ ಚುರುಕು ಬುದ್ಧಿಯ ಗಣಕ ಮಿತ್ರನೇ, ಇವುಗಳ ಘನಗಳನ್ನು ಬೇಗನೆ ಹೇಳು.

೨೦. $\frac{೧೨೫}{೮}$ ಮತ್ತು $\frac{೭೨೯}{೮}$ ಇವುಗಳ ಘನಮೂಲಗಳನ್ನು ಕಂಡುಹಿಡಿ.

೨೧. ಎಲೈ ಅಗ್ರಮತಿಯಾದ ಮಿತ್ರನೇ, ಭಿನ್ನರಾಶಿಗಳ ಘನಗಳಿಗೆ ಸಂಬಂಧಿಸಿದ ಉದಾಹರಣೆಗಳಿಂದ ಬಂದಂತಹ ಘನಮಾಡಿದ ಸಂಖ್ಯೆಗಳ ಘನಮೂಲಗಳನ್ನೂ ಹಾಗೂ $\frac{೨೧೯೭}{೨೭}$ ರ ಘನಮೂಲವನ್ನೂ ತಿಳಿಸು.

**ಈ ರೀತಿ ಭಿನ್ನರಾಶಿಗಳ ವರ್ಗ, ವರ್ಗಮೂಲ, ಘನ ಮತ್ತು ಘನಮೂಲಗಳು ಮುಕ್ತಾಯವಾಗುತ್ತವೆ.**

---

1. M सप्तशतस्यापि सखे व्येकोनत्रिंशकाष्टकाप्तस्य ।।



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## भिन्नसङ्कलितम्

भिन्नसङ्कलिते करणसूत्रं यथा -

पदमिष्टं प्रचयहतं द्विगुणप्रभवान्वितं चयेनोनम् ।
गच्छार्धेनाभ्यस्तं भवति फलं भिन्नसङ्कलिते ॥ २२ ॥

---

## Bhinnasaṅkalitam

Bhinnasaṅkalite karaṇasūtraṁ yathā-

**22.** Padamiṣṭaṁ pracayahataṁ dviguṇaprabhavānvitaṁ cayenonam,
gacchārdhenābhyastaṁ bhavati phalaṁ bhinnasaṅkalite.

---

## Summation of Fractional Series in Progression

In regard to the summation of fractional series, the rule of work is as follows:

**22.** The optional number of terms (making up the fractional series in arithmetical progression) is multiplied by the common difference and (then it) is combined with twice the first term and diminished by the common difference. And when this (resulting quantity) is multiplied by the half of the number of terms, it gives rise to the sum in relation to a fractional series (in arithmetical progression).

---

## ಭಿನ್ನಾತ್ಮಕ ಶ್ರೇಣಿಗಳ ಸಂಕಲನ

ಭಿನ್ನಾತ್ಮಕ ಶ್ರೇಣಿಗಳ ಸಂಕಲನಕ್ಕೆ ಸಂಬಂಧಿಸಿದ ನಿಯಮವು ಮುಂದೆ ತಿಳಿಸಿದಂತಿದೆ :

೨೨. ಕಲನಶ್ರೇಣಿಯಲ್ಲಿರುವ ಭಿನ್ನಾತ್ಮಕ ಶ್ರೇಣಿಯನ್ನುಂಟುಮಾಡುವ ಪದಗಳ ಆರಿಸಿದ ಸಂಖ್ಯೆಯನ್ನು ಸಾಮಾನ್ಯ ವ್ಯತ್ಯಾಸದಿಂದ ಗುಣಿಸಲಾಗುತ್ತದೆ. ನಂತರ ಅದನ್ನು ಪ್ರಥಮ ಪದದ ಎರಡರಷ್ಟರೊಂದಿಗೆ ಸೇರಿಸಲಾಗುತ್ತದೆ ಮತ್ತು ಹೀಗೆ ಬಂದಂತಹ ಸಂಖ್ಯೆಯಿಂದ ಸಾಮಾನ್ಯ ವ್ಯತ್ಯಾಸವನ್ನು ಕಳೆಯಲಾಗುತ್ತದೆ. ಈ ರೀತಿ ಲಭಿಸಿದ ಸಂಖ್ಯೆಯನ್ನು ಪದಗಳ ಸಂಖ್ಯೆಯ ಅರ್ಧಭಾಗದಿಂದ ಗುಣಿಸಿದಾಗ ಅದು (ಕಲನಶ್ರೇಣಿಯಲ್ಲಿರುವ) ಭಿನ್ನಾತ್ಮಕ ಶ್ರೇಣಿಯ ಮೊತ್ತವನ್ನು ಉತ್ಪನ್ನಮಾಡುತ್ತದೆ.

---

**22.** Algebraically $S = (nb + 2a - b)\frac{n}{2}$. Cf. note under 62, Chap. II.

೨೨. ಬೀಜಗಣಿತರೂಪದಲ್ಲಿ, $ಯ = (ನಬ + ೨ಅ - ಬ)\frac{ನ}{೨}$. ಇದಕ್ಕಾಗಿ ೨ ನೇ ಅಧ್ಯಾಯದ ೬೨ ನೇ ಶ್ಲೋಕದ ಟಿಪ್ಪಣಿಯನ್ನು ನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

द्वित्र्यंशषड्भागस्त्रिचरणभागो मुखं चयो गच्छः ।
द्वौ पञ्चमौ त्रिपादो द्वित्र्यंशोऽन्यस्य कथय किं वित्तम् ॥ २३ ॥
आदिः प्रचयो गच्छस्त्रिपञ्चमः पञ्चमस्त्रिपादांशः ।
सर्वांशहरौ वृद्धौ द्वित्रिभिरा सप्तकाच्च का चितिः ॥ २४ ॥

---

**Atroddeśakaḥ**

**23.** Dvitryaṁśaṣṣaḍbhāgastricaraṇabhāgo mukhaṁ cayo gacchaḥ, dvau pañcamau tripādo dvitryaṁśo'nyasya kathaya kiṁ vittam.

**24.** Ādiḥ pracayo gacchastripañcamaḥ pañcamastripādāṁśaḥ, sarvāṁśaharau vṛddhau dvitribhirā saptakācca kā citiḥ.

---

***Examples in illustration thereof***

**23.** Tell me what the sum is (in relation to a series) of which $\frac{2}{3}$, $\frac{1}{6}$ and $\frac{3}{4}$ are the first term, the common difference and the number of terms (in order); as also in relation to another of which $\frac{2}{5}$, $\frac{3}{4}$ and $\frac{2}{3}$ (constitute these elements).

**24.** The first term, the common difference and the number of terms are $\frac{3}{5}$, $\frac{1}{5}$ and $\frac{3}{4}$ (in order in relation to a given series in arithmetical progression). The numerators and denominators of all (these fractional quantities) are (successively) increased by 2 and 3 (respectively) until seven (series are so made up). What is the sum (of each of these)?

---

**ಉದಾಹರಣೆಗಳಿಂದ ವಿಶ್ಲೇಷಣ**

೨೩. ಯಾವ ಶ್ರೇಣಿಯಲ್ಲಿ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಪದಗಳ ಸಂಖ್ಯೆ ಕ್ರಮವಾಗಿ $\frac{೨}{೩}$, $\frac{೧}{೬}$ ಮತ್ತು $\frac{೩}{೪}$ ಆಗಿರುತ್ತವೋ ಹಾಗೆಯೇ ಇನ್ನೊಂದು ಶ್ರೇಣಿಯಲ್ಲಿ ಇವುಗಳು ಕ್ರಮವಾಗಿ $\frac{೨}{೫}$, $\frac{೩}{೪}$ ಮತ್ತು $\frac{೨}{೩}$ ಆಗಿರುತ್ತವೋ ಅಂತಹ ಎರಡು ಶ್ರೇಣಿಗಳ ಮೊತ್ತವನ್ನು ಹೇಳು.

೨೪. (ಕಲನಶ್ರೇಣಿಯಲ್ಲಿ) ಕೊಟ್ಟಿರುವಂತಹ ಒಂದು ಶ್ರೇಣಿಯಲ್ಲಿ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಪದಗಳ ಸಂಖ್ಯೆಗಳು ಕ್ರಮವಾಗಿ $\frac{೩}{೫}$, $\frac{೧}{೫}$ ಮತ್ತು $\frac{೩}{೪}$ ಆಗಿರುತ್ತವೆ. ಏಳು ಶ್ರೇಣಿಗಳಾಗುವವರೆಗೂ ಈ ಭಿನ್ನಾತ್ಮಕ ಸಂಖ್ಯೆಗಳ ಅಂಶಗಳನ್ನು ಮತ್ತು ಛೇದಗಳನ್ನು ಅನುಕ್ರಮವಾಗಿ ೨ ರಂತೆ ಮತ್ತು ೩ ರಂತೆ ಹೆಚ್ಚಿಸಲಾಗುತ್ತದೆ. ಇವುಗಳಲ್ಲಿ ಪ್ರತಿಯೊಂದು ಶ್ರೇಣಿಯ ಮೊತ್ತವೇನಾಗುತ್ತದೆ?

---

**23.** Whenever the number of terms in a series is given as a fraction, as here, it is evident that such a series cannot generally be formed with actual number of terms. But the intention seems to be to show that the rule holds good even in such cases.

೨೩. ಶ್ರೇಣಿಯಲ್ಲಿ ಪದಗಳ ಸಂಖ್ಯೆಯನ್ನು ಭಿನ್ನರೂಪದಲ್ಲಿ ಕೊಟ್ಟಿದ್ದಾಗ ಅಂತಹ ಶ್ರೇಣಿಯು ಸಾಮಾನ್ಯವಾಗಿ ರೂಪುಗೊಳ್ಳುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಆದರೆ ಇಂತಹ ಪ್ರಕರಣಗಳಲ್ಲೂ ಸಹ ಈ ನಿಯಮವು ಅನ್ವಯವಾಗುತ್ತದೆ ಎಂಬುದನ್ನು ತೋರಿಸುವುದೇ ಇದರ ಉದ್ದೇಶವಾಗಿರುವಂತಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



इष्टगच्छस्याद्युत्तरवर्गरूपघनरूपधनानयनसूत्रम् -
पदमिष्टमेकमादिर्व्येकेष्टदलोद्धृतं मुखोनपदम्। प्रचयो वित्तं तेषां वर्गो गच्छाहतं बृन्दम् ॥ २५ ॥

---

Iṣṭagacchasyādyuttaravargarūpaghanarūpadhanānayanasūtram-

**25.** Padamiṣṭamekamādirvyekeṣṭadalodghṛtaṁ mukhonapadam, pracayo vittaṁ teṣāṁ vargo gacchāhataṁ bṛndam.

---

The rule for arriving, in relation to (a series made up of any) optional number of terms, at the first term, the common difference and the (related) sum, which is equivalent firstly to the square and secondly to the cube (of the number of terms):

**25.** Whatever is (so) chosen is the number of terms and one is the first term. The number of terms diminished by the first term and (then) divided by the half of the number of terms diminished by one, becomes the common difference. The sum (of the series) in relation to these is the square of the number of terms. This multiplied by the number of terms becomes the cube thereof.

---

ಮೊತ್ತವು ಕೊಟ್ಟಿರುವ ಶ್ರೇಣಿಯ ಪದಗಳ ಸಂಖ್ಯೆಯ ವರ್ಗ ಅಥವಾ ಘನವಾಗಿದ್ದರೆ, ಆರಿಸಿದ ಪದಗಳ ಸಂಖ್ಯೆಯಿರುವ ಶ್ರೇಣಿಯ ಸಂಬಂಧದಲ್ಲಿ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಮೊತ್ತವನ್ನು ಕಂಡುಹಿಡಿಯಲು ನಿಯಮ :

೨೫. ಆಯ್ದ ಯಾವುದೇ ಸಂಖ್ಯೆಯನ್ನು ಪದಗಳ ಸಂಖ್ಯೆಯನ್ನಾಗಿ ತೆಗೆದುಕೊ ಮತ್ತು ೧ ನ್ನು ಪ್ರಥಮ ಪದವನ್ನಾಗಿ ತೆಗೆದುಕೊ. ಪದಗಳ ಸಂಖ್ಯೆಯಿಂದ ಪ್ರಥಮ ಪದವನ್ನು ಕಳೆದ ನಂತರ ಅದನ್ನು, ಒಂದನ್ನು ಕಡಿಮೆಮಾಡಿದ ಪದಗಳ ಸಂಖ್ಯೆಯ ಅರ್ಧಭಾಗದಿಂದ ಭಾಗಿಸಿದರೆ, ಸಾಮಾನ್ಯ ವ್ಯತ್ಯಾಸವು ದೊರೆಯುತ್ತದೆ. ಇವುಗಳಿಗೆ ಸಂಬಂಧಿಸಿದ ಶ್ರೇಣಿಯ ಮೊತ್ತವು ಪದಗಳ ಸಂಖ್ಯೆಯ ವರ್ಗವಾಗಿರುತ್ತದೆ. ಇದನ್ನು ಪದಗಳ ಸಂಖ್ಯೆಯಿಂದ ಗುಣಿಸಿದರೆ ಮೊತ್ತದ ಘನವು ಲಭ್ಯವಾಗುತ್ತದೆ.

---

**25.** It is obvious that, in the formula $S = \frac{n}{2}[2a + (n-1).b]$, the value of $S$ becomes equivalent to $n^2$ when $a = 1$ and $b = \frac{(n-a)^2}{n-1}$. In the multiplication of this sum by $n$, there is necessarily involved the multiplication of $a$ as well as of $b$ by $n$ so that when $a = n$ and $b = \frac{(n-a)}{n-1}2n$, $S = n^3$. A little consideration will show how the value of $b$ as $\frac{2(n-a)}{n-1}$ makes it possible to arrive at $n^2$ as the value of $S$ whatever may be the value of $a$, whether fractional or integral.

೨೫. $ಯ = \frac{ನ}{೨}[೨ ಅ + (ನ - ೧) ಬ]$ ಸೂತ್ರದಲ್ಲಿ $ಅ = ೧$ ಮತ್ತು $ಬ = \frac{(ನ - ಅ)^2}{ನ - ೧}$ ಆದಾಗ ಯ ದ ಬೆಲೆಯು $ನ^2$ ಗೆ ಸಮವೆಂಬುದು ಸ್ಪಷ್ಟವಾಗಿದೆ. ಈ ಮೊತ್ತ ಮತ್ತು ನ ದ ಗುಣಾಕಾರದಲ್ಲಿ ನ ದಿಂದ ಅ ಮತ್ತು ಬ ಗಳ ಗುಣಾಕಾರವು ಒಳಗೊಂಡಿದೆ, ಏಕೆಂದರೆ $ಅ = ನ$ ಮತ್ತು $ಬ = \frac{೨ ನ (ನ - ಅ)}{ನ - ೧}$ ಆದಾಗ $ಯ = ನ^3$ ಆಗುತ್ತದೆ. ಇನ್ನು ಸ್ವಲ್ಪ ವಿಚಾರಮಾಡಿ ನೋಡಿದರೆ, ಅ ದ ಬೆಲೆಯು ಪೂರ್ಣಾಂಕ ಅಥವಾ ಭಿನ್ನಾತ್ಮಕವಾಗಿದ್ದರೂ ಕೂಡ ಬ ದ $\frac{೨(ನ - ಅ)}{ನ - ೧}$ ಬೆಲೆಯು ಯ ದ ಬೆಲೆಯನ್ನು $ನ^3$ ರೂಪದಲ್ಲಿ ತರಲು ಸಾಧ್ಯಮಾಡಿಕೊಡುತ್ತದೆ ಎಂಬುದು ತಿಳಿಯುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

[1]पदमिष्टं द्वित्र्यंशो रूपेणांशो हरश्च संवृद्धः। यावद्दशपदमेषां वद मुखचयवर्गबृन्दानि ॥ २६ ॥

इष्टघनधनाद्युत्तरगच्छानयनसूत्रम् -

---

**Atroddeśakaḥ**

**26.** Padamiṣṭaṁ dvitryaṁśo rūpeṇāṁśo haraśca saṁvṛddhaḥ,
yāvaddaśapadameṣāṁ vada mukhacayavargabṛndāni.

Iṣṭaghanadhanādyuttaragacchānayanasūtram-

---

***Examples in illustration thereof***

**26.** The optional number of terms (in a given series) is (taken to be) $\frac{2}{3}$ and the numerator as well as the denominator (of this fraction) is (successively) increased by one till ten (such different fractional terms) are obtained. In relation to these (fractions taken as the number of terms of corresponding arithmetically progressive series), give out the first term, the common difference and the square and the cube (values of the sums in the manner explained above).

The rule for finding out the first term, the common difference and the number of terms, in relation to the sum (of a series in arithmetical progression) which (sum) happens to be the cube of (any) chosen quantity :

---

**ಉದಾರಹಣೆಗಳಿಂದ ವಿಶ್ಲೇಷಣ**

**೨೬.** ಕೊಟ್ಟಿರುವ ಶ್ರೇಣಿಯಲ್ಲಿ, ಆರಿಸಿದ ಪದಗಳ ಸಂಖ್ಯೆಯನ್ನು $\frac{೨}{೩}$ ಎಂದು ತೆಗೆದುಕೊಳ್ಳಲಾಗಿದೆ ಮತ್ತು ಬೇರೆಬೇರೆ ೧೦ ಭಿನ್ನರಾಶಿಗಳು ದೊರೆಯುವವರೆಗೂ ಈ ಭಿನ್ನರಾಶಿಯ ಅಂಶ ಹಾಗೂ ಛೇದಗಳನ್ನು ಅನುಕ್ರಮವಾಗಿ ೧ ರಂತೆ ಹೆಚ್ಚಿಸುತ್ತಾ ಹೋಗಬೇಕು. ಈ ಭಿನ್ನರಾಶಿಗಳನ್ನು ಅನುಗಣವಾದ ಕಲನಶ್ರೇಣಿಗಳ ಪದಗಳ ಸಂಖ್ಯೆಯನ್ನಾಗಿ ತೆಗೆದುಕೊಂಡು, ಅವುಗಳ ಸಂಬಂಧದಲ್ಲಿ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಮೊತ್ತದ ವರ್ಗ ಹಾಗೂ ಘನಗಳನ್ನು ಕಂಡುಹಿಡಿ.

ಕಲನಶ್ರೇಣಿಯ ಕೊಟ್ಟಿರುವ ಮೊತ್ತದ (ಇದು ಯಾವುದಾದರೂ ಆರಿಸಿದ ಸಂಖ್ಯೆಯ ಘನವಾಗಿರಬಹುದು) ಸಂಬಂಧದಲ್ಲಿ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಪದಗಳ ಸಂಖ್ಯೆಯನ್ನು ಕಂಡುಹಿಡಿಯಲು ನಿಯಮ :

---

1. This stanza is not found in M



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



इष्टचतुर्थः प्रभवः प्रभवात्प्रचयो भवेद्द्विसङ्गुणितः ।
प्रचयश्चतुरभ्यस्तो गच्छस्तेषां युतिर्बृन्दम् ॥ २७ ॥

**अत्रोद्देशकः**

द्विमुखैकचया अंशास्त्रिप्रभवैकोत्तरा हरा उभये ।
पञ्चपदा वद तेषां घनधनमुखचयपदानि सखे ॥ २८ ॥

---

**27.** Iṣṭacaturthaḥ prabhavaḥ prabhavātpracayo bhaveddvisaṅguṇitaḥ, pracayaścaturabhyasto gacchasteṣāṁ yutirbṛndam.

**Atroddeśekaḥ**

**28.** Dvimukhaikacayā aṁśāstriprabhavaikottarā harā ubhaye, pañcapadā vada teṣāṁ ghanadhanamukhacayapadāni sakhe.

---

**27.** One-fourth of the chosen quantity is the first term and from this first term, when it is multiplied by two, results the common difference. The common difference multiplied by four is the number of terms (in the required series). The sum as related to these is the cube (of the chosen quantity).

***Examples in illustration thereof***

**28.** The numerators begin with 2 and are successively increased by 1; the denominators begin with 3 and are (also) successively increased by 1 and both these kinds of terms (namely, the numerators and the denominators) are (severally) five (in number). In relation to these (chosen fractional quantities), give out, O friend, the cubic sum and the (corresponding) first term, common difference and number of terms.

---

೨೭. ಆರಿಸಿದ ಸಂಖ್ಯೆಯ $\frac{೧}{೪}$ ಭಾಗ ಪ್ರಥಮ ಪದವಾಗಿದೆ ಮತ್ತು ಈ ಪ್ರಥಮ ಪದವನ್ನು ಎರಡುರಿಂದ ಗುಣಿಸಿದಾಗ ಸಾಮಾನ್ಯ ವ್ಯತ್ಯಾಸವು ದೊರೆಯುತ್ತದೆ. ಸಾಮಾನ್ಯ ವ್ಯತ್ಯಾಸವನ್ನು ನಾಲ್ಕರಿಂದ ಗುಣಿಸಿದರೆ ಬೇಕಾದ ಶ್ರೇಣಿಯ ಪದಗಳ ಸಂಖ್ಯೆಯಾಗುತ್ತದೆ. ಇವುಗಳಿಗೆ ಸಂಬಂಧಿಸಿದ ಮೊತ್ತವ: ಆರಿಸಿದ ಸಂಖ್ಯೆಯ ಘನವಾಗಿರುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

೨೮. ಅಂಶಗಳು ೨ ರಿಂದ ಆರಂಭವಾಗುತ್ತವೆ ಮತ್ತು ಅನುಕ್ರಮವಾಗಿ ೧ ರಂತೆ ಹೆಚ್ಚುತ್ತವೆ. ಛೇದಗಳು ೩ ರಿಂದ ಆರಂಭವಾಗುತ್ತವೆ ಮತ್ತು ಇವುಗಳೂ ಕೂಡ ಅನುಕ್ರಮವಾಗಿ ೧ ರಂತೆ ಹೆಚ್ಚುತ್ತವೆ. ಈ ಎರಡು ವಿಧವಾದ ಪದಗಳು (ಅಂಶ ಮತ್ತು ಛೇದ) ಸಂಖ್ಯೆಯಲ್ಲಿ ಐದು ಆಗಿವೆ. ಈ ಆರಿಸಿದ ಭಿನ್ನಾತ್ಮಕ ಸಂಖ್ಯೆಗಳ ಸಂಬಂಧದಲ್ಲಿ, ಎಲೈ ಮಿತ್ರನೇ, ಘನಾತ್ಮಕವಾದ ಮೊತ್ತ ಮತ್ತು ಅನುಗುಣವಾದ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಪದಗಳ ಸಂಖ್ಯೆಯನ್ನು ಕಂಡುಹಿಡಿ.

---

**27.** This rule gives only a particular case of what may be generally applied. The rule as given here works out thus : $\frac{x}{4} + \frac{3x}{4} + \frac{5x}{4} + \ldots$ up to $2x$ terms $= \frac{x}{4}(2x)^2 = x^3$. The general applicability of this process can be at once made out from the equality, $\frac{x}{p^2}(px)^2 = x^3$, so that in all such cases the number of terms in the series is obtained by multiplying by $p^3$ the first term, which is representable as $\frac{x}{p^2}$ and the common difference is of course taken to be twice this first term in every case.

೨೭. ಈ ನಿಯಮವನ್ನು ಕೇವಲ ವಿಶೇಷ ಪ್ರಕರಣಗಳಲ್ಲಿ ಮಾತ್ರ ಬಳಸಲಾಗಿದೆ. ಇದನ್ನು ಸಾಮಾನ್ಯರೂಪದಲ್ಲೂ ಸಹ ಬಳಸಬಹುದಾಗಿದೆ. ನಿಯಮವು ಈ ರೀತಿ ಇದೆ :

$\frac{ಕ}{೪} + \frac{೩ಕ}{೪} + \frac{೫ಕ}{೪} + \ldots\ldots$ ೨ಕ ಪದಗಳವರೆಗೆ $= \frac{ಕ}{೪}(೨ಕ)^೩ = ಕ^೪$ ಈ ಕ್ರಿಯೆಯ ಸಾಮಾನ್ಯ ಉಪಯೋಗವು $\frac{ಕ}{ಪ^೨} \times (ಪಕ)^೩ = ಕ^೪$ ಸಮೀಕರಣದಿಂದ ಬೇಗನೆ ಸ್ಪಷ್ಟವಾಗುತ್ತದೆ. ಈ ಎಲ್ಲ ಪ್ರಕರಣಗಳಲ್ಲಿ ಶ್ರೇಣಿಯ ಪದಗಳ ಸಂಖ್ಯೆಯು ಪ್ರಥಮ ಪದವನ್ನು $ಪ^೪$ ದಿಂದ ಗುಣಿಸುವುದರಿಂದ ದೊರೆಯುತ್ತದೆ. ಏಕೆಂದರೆ ಪ್ರಥಮ ಪದವು $\frac{ಕ}{ಪ^೨}$ ಆಗಿದೆ. ಪ್ರತಿಯೊಂದು ಪ್ರಕರಣದಲ್ಲಿ ದ್ವಿಗುಣಿತವಾದ ಪ್ರಥಮ ಪದವನ್ನು ಸಾಮಾನ್ಯ ವ್ಯತ್ಯಾಸವನ್ನಾಗಿ ತೆಗೆದುಕೊಳ್ಳಲಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



[1]ದೃಷ್ಟಧನಾದ್ಯುತ್ತರತೋ ದ್ವಿಗುಣತ್ರಿಗುಣದ್ವಿಭಾಗತ್ರಿಭಾಗಾದೀಷ್ಟಧನಾದ್ಯುತ್ತರಾನಯನಸೂತ್ರಮ್ -
ದೃಷ್ಟವಿಭಕ್ತೇಷ್ಟಧನಂ ದ್ವಿಷ್ಠಂ [2] ತತ್ಪ್ರಚಯತಾಡಿತಂ ಪ್ರಚಯಃ ।
ತತ್ಪ್ರಭವಗುಣಂ ಪ್ರಭವೋ [3]ಗುಣಭಾಗಸ್ಯೇಷ್ಟವಿತ್ತಸ್ಯ ॥ ೨೯ ॥

---

Dṛṣṭadhanādyuttarato dviguṇatriguṇadvibhāgatribhāgādīṣṭadhanādyuttarānayanasūtram-

**29.** Dṛṣṭavibhakteṣṭadhanaṁ dviṣṭaṁ tatpracayatāḍitaṁ pracayaḥ, tatprabhavaguṇaṁ prabhavo guṇabhāgasyeṣṭavittasya.

---

The rule for finding out, from the known sum, first term and common difference (of a given series in arithmetical progression), the first term and the common difference (of a series), the optionally chosen sum (whereof) is twice, three times, half, one-third or some such (multiple or fraction of the known sum of the given series):

**29.** Put down in two places (for facility of working) the chosen sum as divided by the known sum. This (quotient), when multiplied by the (known) common difference, gives the (required) common difference and that (same quotient), when multiplied by the (known) first term, gives the (required) first term of (the series of which) the sum is either a multiple or a fraction (of the known sum of the given series).

---

ಯಾವ ಶ್ರೇಣಿಯ ಆರಿಸಿದ ಮೊತ್ತವು ಕೊಟ್ಟಿರುವ ಕಲನಶ್ರೇಣಿಯ ಗೊತ್ತಿರುವ ಮೊತ್ತದ ಎರಡರಷ್ಟು, ಮೂರರಷ್ಟು, ಅರ್ಧಭಾಗ, ಮೂರನೆಯ ಒಂದು ಭಾಗ ಅಥವಾ ಇಂತಹ ಯಾವುದಾದರೂ ಅಪವರ್ತ್ಯ ಅಥವಾ ಭಿನ್ನಾಂಕವಾಗಿರುತ್ತದೋ, ಅಂತಹ ಶ್ರೇಣಿಯ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸವನ್ನು ಕೊಟ್ಟಿರುವ ಶ್ರೇಣಿಯ ಗೊತ್ತಿರುವ ಮೊತ್ತ, ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸದಿಂದ ಕಂಡುಹಿಡಿಯಲು ನಿಯಮ :

೨೯. ಕೆಲಸವನ್ನು ಸುಲಭಗೊಳಿಸುವ ಸಲುವಾಗಿ ಆರಿಸಿದ ಮೊತ್ತವನ್ನು ಗೊತ್ತಿರುವ ಮೊತ್ತದಿಂದ ಭಾಗಿಸಿ ಎರಡು ಸ್ಥಾನಗಳಲ್ಲಿ ಇಡು. ಈ ಭಾಗಲಬ್ಧವನ್ನು, ಗೊತ್ತಿರುವ ಸಾಮಾನ್ಯ ವ್ಯತ್ಯಾಸದಿಂದ ಗುಣಿಸಿದಾಗ ಬೇಕಾದ ಸಾಮಾನ್ಯ ವ್ಯತ್ಯಾಸವು ದೊರೆಯುತ್ತದೆ ಮತ್ತು ಇದೇ ಭಾಗಲಬ್ಧವನ್ನು ಗೊತ್ತಿರುವ ಪ್ರಥಮ ಪದದಿಂದ ಗುಣಿಸಿದಾಗ, ಬೇಕಾದ ಪ್ರಥಮ ಪದವು ಲಭಿಸುತ್ತದೆ. ಇಲ್ಲಿ ದೊರೆಯುವ ಸಾಮಾನ್ಯ ವ್ಯತ್ಯಾಸ ಮತ್ತು ಪ್ರಥಮ ಪದ, ಕೊಟ್ಟಿರುವ ಶ್ರೇಣಿಯ ಗೊತ್ತಿರುವ ಮೊತ್ತದ ಅಪವರ್ತ್ಯ ಅಥವಾ ಭಿನ್ನಾಂಕವನ್ನು ಮೊತ್ತವನ್ನಾಗಿ ಉಳ್ಳ ಶ್ರೇಣಿಯದ್ದಾಗಿರುತ್ತದೆ.

---

1. M ಗುಣಭಾಗಾದ್ಯುತ್ತರಾನಯನಸೂತ್ರಮ್ । 2. M ಪ್ರಚಯೇನ 3. M ಗುಣಭಾಗಾದ್ಯುತ್ತರೇಚ್ಛಾಯಾಃ

**29.** See note under 84, Chap. II.

೨೯. ಅಧ್ಯಾಯ ೨ ರಲ್ಲಿ ಕೊಟ್ಟಿರುವ ೮೪ ನೇ ಶ್ಲೋಕದ ಟಿಪ್ಪಣಿಯನ್ನು ನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

प्रभवस्त्रयर्धो रूपं प्रचयः पञ्चाष्टमस्समानपदम् ।
इच्छाधनमपि तावत्कथय सखे कौ मुखप्रचयौ ॥ ३० ॥
प्रचयादादिर्द्विगुणस्त्रयोदशाष्टादशं पदं स्वेष्टम् ।
वित्तं तु सप्तषष्टिः षड्घनभक्ता वदादिचयौ ॥ ३१ ॥
[1]मुखमेकं द्वित्र्यंशः प्रचयो गच्छस्समश्चतुर्नवमः ।
धनमिष्टं द्वाविंशतिरेकाशीत्या वदादिचयौ ॥ ३२ ॥

---

## Atroddeśakaḥ

**30.** Prabhavastryardho rūpaṁ pracayaḥ pañcāṣṭamassamānapadam, icchādhanamapi tāvatkathaya sakhe kau mukhapracayau.

**31.** Pracayādādirdviguṇastrayodaśāṣṭādaśaṁ padaṁ sveṣṭam, vittaṁ tu saptaṣaṣṭiḥ ṣaḍghanabhaktā vadādicayau.

**32.** Mukhamekaṁ dvitryaṁśaḥ pracayo gacchassamaścaturnavamaḥ, dhanamiṣṭaṁ dvāviṁśatirekāśītyā vadādicayau.

---

## *Examples in illustration thereof*

**30.** The first term (of a series) is $\frac{3}{2}$, the common difference is 1 and the number of terms common (to the given as well as the required series) is (taken to be) $\frac{5}{8}$. The sum of the required series is of the same value ($\frac{5}{8}$). Find out, O friend, the first term and the common difference (of the required series).

**31.** The first term is twice the common difference (which is taken to be 1); the number of terms is (taken to be) $\frac{13}{18}$. The sum of the required series is $\frac{67}{216}$. Find out the first term and the common difference.

**32.** The first term is 1, the common difference is $\frac{2}{3}$ and the number of terms common (to both the given as well as the required series) is (taken to be) $\frac{4}{9}$ The sum of the required series is $\frac{22}{81}$. Give out the first term and the common difference (of the required series).

---

## ಉದಾಹರಣೆಗಳಿಂದ ವಿಶ್ಲೇಷಣ

೩೦. ಒಂದು ಶ್ರೇಣಿಯ ಪ್ರಥಮ ಪದವು $\frac{೩}{೨}$, ಸಾಮಾನ್ಯ ವ್ಯತ್ಯಾಸ ೧ ಆಗಿದೆ ಮತ್ತು ಪದಗಳ ಸಂಖ್ಯೆ ಕೊಟ್ಟಿರುವ ಹಾಗೂ ಬೇಕಾದ ಶ್ರೇಣಿಗಳೆರಡರಲ್ಲೂ $\frac{೫}{೮}$ ಎಂದು ತೆಗೆದುಕೊಳ್ಳಲಾಗಿದೆ. ಬೇಕಾದ ಶ್ರೇಣಿಯ ಮೊತ್ತವು ಇದೇ ಬೆಲೆಯದ್ದಾಗಿದೆ $\left(\frac{೫}{೮}\right)$. ಎಲೈ ಸ್ನೇಹಿತನೇ, ಬೇಕಾದ ಶ್ರೇಣಿಯ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸವನ್ನು ಕಂಡುಹಿಡಿ.

೩೧. ಪ್ರಥಮ ಪದವು ಸಾಮಾನ್ಯ ವ್ಯತ್ಯಾಸದ (ಇದನ್ನು ೧ ಎಂದು ತೆಗೆದುಕೊಳ್ಳಲಾಗಿದೆ) ಎರಡರಷ್ಟಿದೆ. ಪದಗಳ ಸಂಖ್ಯೆಯನ್ನು $\frac{೧೩}{೧೮}$ ಎಂದು ತೆಗೆದುಕೊಳ್ಳಲಾಗಿದೆ. ಬೇಕಾದ ಶ್ರೇಣಿಯ ಮೊತ್ತವು $\frac{೬೭}{೨೧೬}$ ಆಗಿದೆ. ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸವನ್ನು ಕಂಡುಹಿಡಿ.

೩೨. ಪ್ರಥಮ ಪದ ೧, ಸಾಮಾನ್ಯ ವ್ಯತ್ಯಾಸ $\frac{೨}{೩}$ ಮತ್ತು ಪದಗಳ ಸಂಖ್ಯೆಯನ್ನು ಕೊಟ್ಟಿರುವ ಹಾಗೂ ಬೇಕಾದ ಶ್ರೇಣಿಗಳೆರಡಲ್ಲೂ $\frac{೪}{೯}$ ಎಂದು ತೆಗೆದುಕೊಳ್ಳಲಾಗಿದೆ. ಬೇಕಾದ ಶ್ರೇಣಿಯ ಮೊತ್ತವು $\frac{೨೨}{೮೧}$ ಆಗಿದೆ. ಬೇಕಾದ ಶ್ರೇಣಿಯ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸವನ್ನು ಕಂಡುಹಿಡಿ.

---

1. This stanza takes the place of stanza No.31 in M and is omitted in B



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



[1] गच्छानयनसूत्रम् -
द्विगुणचयगुणितवित्तादुत्तरदलमुखविशेषकृतिसहितात् ।
मूलं प्रचयार्धयुतं प्रभवोनं चयहृतं गच्छः ॥ ३३ ॥
प्रकारान्तरेण तदेवाह -
द्विगुणचयगुणितवित्तादुत्तरदलमुखविशेषकृतिसहितात् ।
मूलं क्षेपपदोनं प्रचयेन हृतं च गच्छस्स्यात् ॥ ३४ ॥

---

Gacchānayanasūtram-

**33.** Dviguṇacayaguṇitavittāduttaradalamukhaviśeṣakṛtisahitāt, mūlaṁ pracayārdhayutaṁ prabhavonaṁ cayahṛtaṁ gacchaḥ.

Prakārāntareṇa tadevāha -

**34.** Dviguṇacayaguṇitavittāduttaradalamukhaviśeṣakṛtisahitāt, mūlaṁ kṣepapadonaṁ pracayena hṛtaṁ ca gacchassyāt.

---

The rule for finding out the number of terms (in a series in arithmetical progression):

**33.** When, to the square root of (the quantity obtained by) the addition, of the square of the difference between the half of the common difference and the first term, to twice the common difference multiplied by the sum of the series, half the common difference is added and when (this sum is) diminished by the first term and (then) divided by the common difference, (we get) the number of terms in the series.

He (the author) states in another way (the rule for finding out) the same (number of terms) :

**34.** When, from the square root of (the quantity obtained by) the addition, of the square of the difference between the half of the common difference and the first term, to twice the common difference multiplied by the sum of the series, the *kṣēpapada* is subtracted and when (this resulting quantity is) divided by the common difference, (we get) the number of terms in the series.

---

ಕಲನಶ್ರೇಣಿಯಲ್ಲಿ ಪದಗಳ ಸಂಖ್ಯೆಯನ್ನು ಕಂಡುಹಿಡಿಯಲು ನಿಯಮ :

೩೩. ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸದ ಅರ್ಧಭಾಗಗಳ ಅಂತರದ ವರ್ಗದ ಜೊತೆಗೆ, ದ್ವಿಗುಣಿಸಿದ ಸಾಮಾನ್ಯ ವ್ಯತ್ಯಾಸವನ್ನು ಶ್ರೇಣಿಯ ಮೊತ್ತದೊಂದಿಗೆ ಗುಣಿಸಿ ಬಂದಂತಹ ಸಂಖ್ಯೆಯನ್ನು ಸೇರಿಸಲಾಗುತ್ತದೆ. ಹೀಗೆ ದೊರೆತ ಸಂಖ್ಯೆಯ ವರ್ಗಮೂಲದಲ್ಲಿ ಸಾಮಾನ್ಯ ವ್ಯತ್ಯಾಸದ ಅರ್ಧಭಾಗವನ್ನು ಸೇರಿಸಲಾಗುತ್ತದೆ. ಈ ಮೊತ್ತದಿಂದ ಪ್ರಥಮ ಪದವನ್ನು ಕಳೆಯಲಾಗುತ್ತದೆ ಮತ್ತು ಇದನ್ನು ಸಾಮಾನ್ಯ ವ್ಯತ್ಯಾಸದಿಂದ ಭಾಗಿಸಿದರೆ, ಶ್ರೇಣಿಯ ಪದಗಳ ಸಂಖ್ಯೆಯು ದೊರೆಯುತ್ತದೆ.

ಲೇಖಕನು ಪದಗಳ ಸಂಖ್ಯೆಯನ್ನು ಕಂಡುಹಿಡಿಯಲು ಇನ್ನೊಂದು ನಿಯಮವನ್ನು ತಿಳಿಸುತ್ತಾನೆ :

೩೪. ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸದ ಅರ್ಧಭಾಗಗಳ ಅಂತರದ ವರ್ಗದ ಜೊತೆಗೆ, ದ್ವಿಗುಣಿಸಿದ ಸಾಮಾನ್ಯ ವ್ಯತ್ಯಾಸವನ್ನು ಶ್ರೇಣಿಯ ಮೊತ್ತದೊಂದಿಗೆ ಗುಣಿಸಿ ಬಂದಂತಹ ಸಂಖ್ಯೆಯನ್ನು ಸೇರಿಸಲಾಗುತ್ತದೆ. ಹೀಗೆ ಲಭಿಸಿದ ಸಂಖ್ಯೆಯ ವರ್ಗಮೂಲದಿಂದ *ಕ್ಷೇಪಪದವನ್ನು* ಕಳೆಯಲಾಗುತ್ತದೆ. ಇದನ್ನು ಸಾಮಾನ್ಯ ವ್ಯತ್ಯಾಸದಿಂದ ಭಾಗಿಸಿದರೆ ಶ್ರೇಣಿಯ ಪದಗಳ ಸಂಖ್ಯೆಯು ದೊರೆಯುತ್ತದೆ.

---

1. Instead of the following two stanzas M reads अष्टोत्तरगुणराशीत्यादिना इष्टधनगच्छ आनेतव्यः and repeats stanza No.70 given under परिकर्मव्यवहार

**33.** Symbolically expressed, $n = \frac{\left\{\sqrt{2bs + \left(\frac{b}{2} - a\right)^2} + b - a\right\}}{b}$ Cf. note under 69, in Chap. II.

**34.** For *kṣēpapada*, see note under 70, in Chap. II.

೩೩. ಸಾಂಕೇತಿಕವಾಗಿ, $ನ = \frac{\left\{\sqrt{\left(ಮ - \frac{ಬ}{೨}\right)^2 + ೨ಬಯ} + ಬ - ಮ\right\}}{ಬ}$ ಎಂದಾಗುತ್ತದೆ. ೨ ನೇ ಅಧ್ಯಾಯದಲ್ಲಿ ಕೊಟ್ಟಿರುವ ೬೯ ನೇ ಶ್ಲೋಕದ ಟಿಪ್ಪಣಿಯನ್ನು ನೋಡಿ.

೩೪. *ಕ್ಷೇಪಪದ*ಕ್ಕಾಗಿ ೨ ನೇ ಅಧ್ಯಾಯದ ೭೦ ನೇ ಶ್ಲೋಕದ ಟಿಪ್ಪಣಿಯನ್ನು ನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

द्विपञ्चांशो वक्त्रं त्रिगुणचरणस्यादिह चयः षडंशस्सप्तघ्नस्त्रिकृतिविहृतो वित्तमुदितम् ।
चयः पञ्चाष्टांशः पुनरपि मुखं त्र्यष्टममिति त्रिचत्वारिंशास्त्वं प्रिय वद पदं शीघ्रमनयोः ॥३५॥
आद्युत्तरानयनसूत्रम् -
[1]गच्छाप्तगणितमादिर्विगतैकपदार्धगुणितचयहीनम् ।
पदहृतधनमाद्यूनं निरेकपददलहृतं प्रचयः ॥ ३६ ॥

---

## Atroddeśakaḥ

**35.** Dvipañcāṁśo vaktraṁ triguṇacaraṇassyādiha cayaḥ ṣaḍaṁśassaptaghnastrikṛtivihṛto vittamuditam, cayaḥ pañcāṣṭāṁśaḥ punarapi mukhaṁ tryaṣṭamamiti tricatvāriṁśāssvaṁ priya vada padaṁ śīghramanayoḥ.

Ādyuttarānayanasūtram-

**36.** Gacchāptagaṇitamādirvigataikapadārdhaguṇitacayahīnam, padahṛtadhanamādyūnaṁ nirekapadadalahṛtaṁ pracayaḥ.

---

## *Examples in illustration thereof*

**35.** In relation to this (given) series, the first term is $\frac{2}{5}$, the common difference is $\frac{3}{4}$ and the sum given is $\frac{7}{54}$; again (in relation to another series), the common difference is $\frac{5}{8}$, the value of the first term is $\frac{3}{8}$, and the sum is $\frac{3}{40}$. In respect of these two (series), O friend, give out the number of terms quickly.

The rule for finding out the first term as well as the common difference :

**36.** The sum (of the series) divided by the number of terms (therein), when diminished by (the product of) the common difference multiplied by the half of the number of terms less by one, (gives) the first term (of the series). The common difference is (obtained when) the sum, divided by the number of terms and (then) diminished by the first term, is divided by the half of the number of terms less by one.

---

## ಉದಾಹರಣೆಗಳಿಂದ ವಿಶ್ಲೇಷಣ

೩೫. ಕೊಟ್ಟಿರುವ ಶ್ರೇಣಿಯ ಸಂಬಂಧದಲ್ಲಿ ಪ್ರಥಮ ಪದವು $\frac{೨}{೫}$ ಆಗಿದೆ, ಸಾಮಾನ್ಯ ವ್ಯತ್ಯಾಸ $\frac{೩}{೪}$ ಆಗಿದೆ ಮತ್ತು ಕೊಟ್ಟಿರುವ ಮೊತ್ತ $\frac{೭}{೫೪}$ ಆಗಿದೆ. ಪುನಃ ಮತ್ತೊಂದು ಶ್ರೇಣಿಯ ಸಂಬಂಧದಲ್ಲಿ ಸಾಮಾನ್ಯ ವ್ಯತ್ಯಾಸವು $\frac{೫}{೮}$ ಆಗಿದೆ, ಪ್ರಥಮ ಪದದ ಬೆಲೆ $\frac{೩}{೮}$ ಆಗಿದೆ ಮತ್ತು ಮೊತ್ತವು $\frac{೩}{೪೦}$ ಆಗಿದೆ. ಎಲೈ ಸ್ನೇಹಿತನೇ, ಈ ಎರಡು ಶ್ರೇಣಿಗಳ ವಿಷಯದಲ್ಲಿ ಪದಗಳ ಸಂಖ್ಯೆಯನ್ನು ಬೇಗನೆ ತಿಳಿಸು.

ಪ್ರಥಮ ಪದ ಹಾಗೂ ಸಾಮಾನ್ಯ ವ್ಯತ್ಯಾಸಗಳನ್ನು ಕಂಡುಹಿಡಿಯಲು ನಿಯಮ :

೩೬. ಶ್ರೇಣಿಯ ಮೊತ್ತವನ್ನು ಪದಗಳ ಸಂಖ್ಯೆಯಿಂದ ಭಾಗಿಸಿ, ನಂತರ ಇದರಿಂದ ಸಾಮಾನ್ಯ ವ್ಯತ್ಯಾಸ ಮತ್ತು ಒಂದನ್ನು ಕಡಿಮೆಮಾಡಿದ ಪದಗಳ ಸಂಖ್ಯೆಯ ಅರ್ಧಭಾಗದ ಗುಣಲಬ್ಧವನ್ನು ಕಳೆದರೆ, ಶ್ರೇಣಿಯ ಪ್ರಥಮ ಪದವು ದೊರೆಯುತ್ತದೆ. ಶ್ರೇಣಿಯ ಮೊತ್ತವನ್ನು ಪದಗಳ ಸಂಖ್ಯೆಯಿಂದ ಭಾಗಿಸಿ, ನಂತರ ಇದರಿಂದ ಪ್ರಥಮ ಪದವನ್ನು ಕಳೆಯಬೇಕು. ಹೀಗೆ ಬಂದಂತಹ ಸಂಖ್ಯೆಯಿಂದ ಒಂದನ್ನು ಕಡಿಮೆಮಾಡಿದ ಪದಗಳ ಸಂಖ್ಯೆಯ ಅರ್ಧಭಾಗದಿಂದ ಭಾಗಿಸಿದರೆ, ಸಾಮಾನ್ಯ ವ್ಯತ್ಯಾಸವು ಲಭಿಸುತ್ತದೆ.

---

1. K and B प्रभवो गच्छाप्तधनम्

**36.** See note under 74, Chap. II.

೩೬. ೨ ನೇ ಅಧ್ಯಾಯದ ೭೪ ನೇ ಶ್ಲೋಕದ ಟಿಪ್ಪಣಿಯನ್ನು ನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

त्रिचतुर्थचतुःपञ्चमचयगच्छे खेषुशशिहृतैकत्रिंशद्- ।
वित्ते त्र्यंशचतुः पञ्चममुखगच्छे च वद मुखं प्रचयं व ॥ ३७ ॥
इष्टगच्छयोर्व्यस्ताद्युत्तरसमधनद्विगुणत्रिगुणद्विभागत्रिभागधनानयनसूत्रम् -
व्येकात्महतो गच्छस्वेष्टघ्नो द्विगुणितान्यपदहीनः ।
मुखमात्मोनान्यकृतिर्द्विकेष्टपदघातवर्जिता प्रचयः ॥ ३८ ॥

---

**Atroddeśakaḥ**

**37.** Tricaturthacatuḥpañcamacayagacche kheṣuśaśihṛtaikatriṁśadvitte tryaṁśacatuḥpañcamamukhagacche ca vada mukhaṁ pracayaṁ ca.

Iṣṭagacchayorvyastādyuttarasamadhanadviguṇatriguṇadvi-bhāgatribhāgadhanānayanasūtram-

**38.** Vyekātmahato gacchassveṣṭaghno dviguṇitānyapadahīnaḥ, mukhamātmonānyakṛtirdvikeṣṭapadaghātavārjitā pracayaḥ.

---

***Examples in illustration thereof***

**37.** Give out the first term and the common difference (respectively) in relation to (the two series characterised by) $\frac{31}{150}$ as the sum and having $\frac{3}{4}$ (in one case) as the common difference and $\frac{4}{5}$ as the number of terms and (in the other case) $\frac{1}{3}$ as the first term and $\frac{4}{5}$ as the number of terms.

The rule for finding out in relation to two (series), the number of terms wherein is optionally chosen, their mutually interchanged first term and the common difference, as also their sums which may be equal or (one of which may be) twice, thrice, half or one-third (of the other) :

**38.** The number of terms (in one series), multiplied by itself as lessened by one and then multiplied by the chosen (ratio between the sums of the two series) and then diminished by twice the number of terms in the other (series, gives rise to the interchangeable) first term (of one of the series). The square of the (number of terms in the) other (series), diminished by that (number of terms) itself and (then) diminished (again) by the product of two (times) the chosen (ratio) and the number of terms (in the first series, gives rise to the interchangeable) common difference (of that series).

---

**ಉದಾಹರಣೆಗಳಿಂದ ವಿಶ್ಲೇಷಣ**

೩೭. ಎರಡು ಶ್ರೇಣಿಗಳ ಸಂಬಂಧದಲ್ಲಿ, ಒಂದರ ಮೊತ್ತವು $\frac{೩೧}{೧೫೦}$ ಆಗಿದೆ, $\frac{೩}{೪}$ ಸಾಮಾನ್ಯ ವ್ಯತ್ಯಾಸವಾಗಿದೆ ಮತ್ತು $\frac{೪}{೫}$ ಪದಗಳ ಸಂಖ್ಯೆಯಾಗಿದೆ. ಹಾಗೆಯೇ ಇನ್ನೊಂದರ ಮೊತ್ತವು $\frac{೩೧}{೧೫೦}$ ಆಗಿದೆ, $\frac{೧}{೩}$ ಪ್ರಥಮ ಪದವಾಗಿದೆ ಮತ್ತು $\frac{೪}{೫}$ ಪದಗಳ ಸಂಖ್ಯೆಯಾಗಿದೆ. ಈ ಎರಡೂ ಶ್ರೇಣಿಗಳ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸವನ್ನು ಕಂಡುಹಿಡಿ.

ಪದಗಳ ಸಂಖ್ಯೆಯು ಯಾವುದೇ ಆರಿಸಿದ ಸಂಖ್ಯೆಯಾಗಿದ್ದಾಗ, ಎರಡು ಶ್ರೇಣಿಗಳ ಸಂಬಂಧದಲ್ಲಿ ಪರಸ್ಪರ ಬದಲಾಯಿಸಲ್ಪಟ್ಟಂತಹ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಹಾಗೂ ಅವುಗಳ ಮೊತ್ತ (ಇವು ಒಂದಕ್ಕೊಂದು ಸಮವಾಗಿರಬಹುದು ಅಥವಾ ಒಂದು ಇನ್ನೊಂದರ ಎರಡರಷ್ಟು, ಮೂರರಷ್ಟು, ಅರ್ಧಭಾಗ ಅಥವಾ ಮೂರನೇ ಒಂದು ಭಾಗವಾಗಿರಬಹುದು) ಗಳನ್ನು ಕಂಡುಹಿಡಿಯಲು ನಿಯಮ :

೩೮. (ಒಂದು ಶ್ರೇಣಿಯಲ್ಲಿ) ಪದಗಳ ಸಂಖ್ಯೆಯನ್ನು ಇದೇ ಸಂಖ್ಯೆಯಿಂದ ಒಂದನ್ನು ಕಡಿಮೆಮಾಡಿ ಗುಣಿಸಿದ ನಂತರ, ಇದನ್ನು ಆರಿಸಿದ ಎರಡು ಶ್ರೇಣಿಗಳ ಮೊತ್ತಗಳ ಅನುಪಾತದಿಂದ ಗುಣಿಸಿ, ಆನಂತರ ಇನ್ನೊಂದು ಶ್ರೇಣಿಯ ಪದಗಳ ಸಂಖ್ಯೆಯ ಎರಡರಷ್ಟರಿಂದ ಕಳೆದರೆ, ಒಂದು ಶ್ರೇಣಿಯ (ಪರಸ್ಪರ ಬದಲಾಯಿಸಲು ಯೋಗ್ಯವಾದಂತಹ) ಪ್ರಥಮ ಪದವು ದೊರೆಯುತ್ತದೆ. ಇನ್ನೊಂದು ಶ್ರೇಣಿಯ ಪದಗಳ ಸಂಖ್ಯೆಯ ವರ್ಗದಿಂದ ಅದೇ (ಪದಗಳ) ಸಂಖ್ಯೆಯಿಂದ ಕಳೆದು ಮತ್ತು ಇದನ್ನು ಪುನಃ ಆರಿಸಿದ ಅನುಪಾತದ ಎರಡರಷ್ಟು ಮತ್ತು ಮೊದಲನೆ ಶ್ರೇಣಿಯ ಪದಗಳ ಸಂಖ್ಯೆಗಳ ಗುಣಲಬ್ಧದಿಂದ ಕಳೆದರೆ (ಪರಸ್ಪರ ಬದಲಾಯಿಸಲು ಯೋಗ್ಯವಾದ), ಆ ಶ್ರೇಣಿಯ ಸಾಮಾನ್ಯ ವ್ಯತ್ಯಾಸವು ಲಭಿಸುತ್ತದೆ.

---

**38.** See note under 86, Chap. II.

೩೮. ೨ ನೇ ಅಧ್ಯಾಯದ ೮೬ ನೇ ಶ್ಲೋಕದ ಟಿಪ್ಪಣಿಯನ್ನು ನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

एकादिगुणविभागस्त्वं व्यस्ताद्युत्तरे हि वद मित्र ।
द्वित्र्यंशोनैकादशपञ्चांशकमिश्रनवपदयोः ॥ ३९ ॥
गुणधनगुणसङ्कलितधनयोः सूत्रम् -
पदमितगुणहतिगुणितप्रभवः स्याद्गुणधनं तदाद्यूनम् ।
एकोनगुणविभक्तं गुणसङ्कलितं विजानीयात् ॥ ४० ॥

---

**Atroddeśakaḥ**

**39.** Ekādiguṇavibhāgassvaṁ vyastādyuttare hi vada mitra,
dvitryaṁśonaikādaśapañcāṁśakamiśranavapadayoḥ.
Guṇadhanaguṇasaṅkalitadhanayoḥ sūtram-

**40.** Padamitaguṇahatiguṇitaprabhavaḥ syādguṇadhanaṁ tadādyūnam,
ekonaguṇavibhaktaṁ guṇasaṅkalitaṁ vijāniyāt.

---

***Examples in illustration thereof***

**39.** In relation to two series, having $10\frac{1}{3}$ and $9\frac{1}{5}$ to (respectively) represent their number of terms, the first term and the common difference are interchangeable, the sum of one (of the series) is either a multiple or a fraction (of that of the other, this multiple or fraction being the result of the multiplication or the division as the case may be) by means of (the natural numbers) commencing with 1. O friend, give out (these) sums, the first terms and the common differences.

The rule for finding out the *guṇadhana* and the sum of a series in geometrical progression :

**40.** The first term (of a series in geometrical progression), when multiplied by that self-multiplied product of the common ratio, in which (product) the frequency of the occurrence of the common ratio is measured by the number of terms (in the series), gives rise to the *guṇadhana*. And it has to be understood that this (*guṇadhana*), when diminished by the first term and (then) divided by the common ratio lessened by one, becomes the sum of the series in geometrical progression.

---

**ಉದಾಹರಣೆಗಳಿಂದ ವಿಶ್ಲೇಷಣ**

೩೯. ಕ್ರಮವಾಗಿ $10\frac{1}{3}$ ಮತ್ತು $9\frac{1}{5}$ ನ್ನು ಪದಗಳ ಸಂಖ್ಯೆಗಳನ್ನಾಗಿ ಉಳ್ಳ ಎರಡು ಶ್ರೇಣಿಗಳ ಸಂಬಂಧದಲ್ಲಿ ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳು ಪರಸ್ಪರ ಬದಲಾಯಿಸಲು ಯೋಗ್ಯವಾಗಿವೆ. ಒಂದು ಶ್ರೇಣಿಯ ಮೊತ್ತವು ಇನ್ನೊಂದು ಶ್ರೇಣಿಯ ಮೊತ್ತದ ಅಪವರ್ತ್ಯ ಅಥವಾ ಭಿನ್ನಾಂಕವಾಗಿರುತ್ತದೆ. ಈ ಅಪವರ್ತ್ಯ ಅಥವಾ ಭಿನ್ನಾಂಕವು ೧ ರಿಂದ ಆರಂಭವಾಗುವಂತಹ ಸ್ವಾಭಾವಿಕ ಸಂಖ್ಯೆಗಳಿಂದ ಗುಣಿಸಿದಾಗ ಅಥವಾ ಭಾಗಿಸಿದಾಗ ಬಂದಂತಹವುಗಳಾಗಿವೆ. ಎಲೈ ಸ್ನೇಹಿತನೇ, ಈ ಮೊತ್ತಗಳನ್ನು, ಪ್ರಥಮ ಪದಗಳನ್ನು ಮತ್ತು ಸಾಮಾನ್ಯ ವ್ಯತ್ಯಾಸಗಳನ್ನು ಕಂಡುಹಿಡಿ.

ಗುಣೋತ್ತರ ಶ್ರೇಣಿಯ *ಗುಣಧನ* ಮತ್ತು ಮೊತ್ತವನ್ನು ಕಂಡುಹಿಡಿಯಲು ನಿಯಮ :

೪೦. ಗುಣೋತ್ತರ ಶ್ರೇಣಿಯಲ್ಲಿನ ಪ್ರಥಮ ಪದವನ್ನು, ಸಾಮಾನ್ಯ ನಿಷ್ಪತ್ತಿಯನ್ನು ಪದೇ ಪದೇ (ಪದಗಳ ಸಂಖ್ಯೆಯಷ್ಟು ಸಲ) ಅದರಿಂದಲೇ ಗುಣಿಸಿ ಬಂದಂತಹ ಗುಣಲಬ್ಧದೊಂದಿಗೆ ಗುಣಿಸಿದಾಗ, *ಗುಣಧನವು* ಸಿಗುತ್ತದೆ. ಈ *ಗುಣಧನದಿಂದ* ಪ್ರಥಮ ಪದವನ್ನು ಕಳೆದು ನಂತರ ಇದನ್ನು, ಒಂದನ್ನು ಕಡಿಮೆಮಾಡಿದ ಸಾಮಾನ್ಯ ನಿಷ್ಪತ್ತಿಯಿಂದ ಭಾಗಿಸಿದರೆ, ಗುಣೋತ್ತರ ಶ್ರೇಣಿಯ ಮೊತ್ತವು ಲಭಿಸುತ್ತದೆ.

---

**40.** See note under 93, Chap. II.

೪೦. ೨ ನೇ ಅಧ್ಯಾಯದ ೯೩ ನೇ ಶ್ಲೋಕದ ಟಿಪ್ಪಣಿಯನ್ನು ನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



गुणसङ्कलितान्त्यधनानयने तत्सङ्कलितानयने च सूत्रम् -
गुणसङ्कलितान्त्यधनं विगतैकपदस्य गुणधनं भवति ।
तद्गुणगुणं मुखोनं व्येकोत्तरभाजितं सारम् ॥ ४१ ॥

**अत्रोद्देशकः**

प्रभवोऽष्टमश्चतुर्थः प्रचयः पञ्च पदमत्र गुणगुणितम् ।
गुणसङ्कलितं तस्यान्त्यधनं चाचक्ष्व मे शीघ्रम् ॥ ४२ ॥
[1]गुणधनसङ्कलितधनयोराद्युत्तरपदान्यपि पूर्वोक्तसूत्रैरानयेत् ।

---

Guṇasaṅkalitāntyadhanānayane tatsaṅkalitānayane ca sūtram-

**41.** Guṇasaṅkalitāntyadhanaṁ vigataikapadasya guṇadhanaṁ bhavati, tadguṇaguṇaṁ mukhonaṁ vyekottarabhājitaṁ sāram.

**Atroddeśakaḥ**

**42.** Prabhavo'ṣṭamaścaturthaḥ pracayaḥ pañca padamatra guṇaguṇitam, guṇasaṅkalitaṁ tasyāntyadhanaṁ cācakṣva me śīghram.

Guṇadhanasaṅkalitadhanayorādyuttarapadānyapi pūrvoktasūtrairānayet.

---

The rule for finding out the last term in a geometrically progressive series as well as the sum of that (series) :

**41.** The *antyadhana* or the last term of a series in geometrical progression is the *guṇadhana* of (another series) wherein the number of terms is less by one. This (*antyadhana*), when multiplied by the common ratio and (then) diminished by the first term and (then) divided by the common ratio lessened by one, gives rise to the sum (of the series).

***An example in illustration thereof***

**42.** In relation to a series in geometrical progression, the first term is $\frac{1}{8}$, the common ratio is $\frac{1}{4}$ and the number of terms is here 5. Tell me quickly the sum and the last term of that (series).

The first term, the common ratio and the number of terms, in relation to the *guṇadhana* and the sum of a series in geometrical progression should also be found out by means of the rules stated already (in the last chapter).*

---

ಗುಣೋತ್ತರ ಶ್ರೇಣಿಯ ಕಡೆಯ ಪದ ಹಾಗೂ ಮೊತ್ತವನ್ನು ಕಂಡುಹಿಡಿಯಲು ನಿಯಮ :

೪೧. ಗುಣೋತ್ತರ ಶ್ರೇಣಿಯ *ಅಂತ್ಯಧನ* ಅಥವಾ ಕಡೆಯ ಪದವು, ಒಂದು ಕಡಿಮೆಯಾಗಿರುವ ಪದಗಳ ಸಂಖ್ಯೆಯನ್ನು ಹೊಂದಿರುವ ಇನ್ನೊಂದು ಶ್ರೇಣಿಯ *ಗುಣಧನ*ವಾಗಿದೆ. ಈ *ಅಂತ್ಯಧನ*ವನ್ನು ಸಾಮಾನ್ಯ ನಿಷ್ಪತ್ತಿಯಿಂದ ಗುಣಿಸಿ, ನಂತರ ಪ್ರಥಮ ಪದದಿಂದ ಕಳೆದು, ಆನಂತರ ಒಂದನ್ನು ಕಡಿಮೆಮಾಡಿದ ಸಾಮಾನ್ಯ ನಿಷ್ಪತ್ತಿಯಿಂದ ಭಾಗಿಸಿದರೆ, ಶ್ರೇಣಿಯ ಮೊತ್ತವು ದೊರೆಯುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

೪೨. ಒಂದು ಗುಣೋತ್ತರ ಶ್ರೇಣಿಯ ಸಂಬಂಧದಲ್ಲಿ ಪ್ರಥಮ ಪದ $\frac{೧}{೮}$ ಆಗಿದೆ, ಸಾಮಾನ್ಯ ನಿಷ್ಪತ್ತಿ $\frac{೧}{೪}$ ಆಗಿದೆ ಮತ್ತು ಇಲ್ಲಿ ಪದಗಳ ಸಂಖ್ಯೆ ೫ ಆಗಿದೆ. ಆ ಶ್ರೇಣಿಯ ಮೊತ್ತವನ್ನು ಮತ್ತು ಕಡೆಯ ಪದವನ್ನು ಬೇಗನೆ ಹೇಳು.

ಒಂದು ಗುಣೋತ್ತರ ಶ್ರೇಣಿಯ ಗುಣಧನ ಮತ್ತು ಮೊತ್ತದ ಸಂಬಂಧದಲ್ಲಿ, ಪ್ರಥಮ ಪದ, ಸಾಮಾನ್ಯ ನಿಷ್ಪತ್ತಿ ಮತ್ತು ಪದಗಳ ಸಂಖ್ಯೆಯನ್ನು ಈಗಾಗಲೇ (ಹಿಂದಿನ ಅಧ್ಯಾಯದಲ್ಲಿ)* ತಿಳಿಸಿರುವ ನಿಯಮಗಳಿಂದ ಕಂಡುಹಿಡಿಯಬಹುದು.

---

1. Found only in B.

**41.** See note under 95, Chap. II.

*For these rules, see 97, 98, 101 and 103, Chap. III.

೪೧. ೨ ನೇ ಅಧ್ಯಾಯದ ೯೫ ನೇ ಶ್ಲೋಕದ ಟಿಪ್ಪಣಿಯನ್ನು ನೋಡಿ.

*ಈ ನಿಯಮಗಳಿಗಾಗಿ ೨ ನೇ ಅಧ್ಯಾಯದ ೯೭, ೯೮, ೧೦೧ ಮತ್ತು ೧೦೩ ನೇ ಶ್ಲೋಕಗಳ ಟಿಪ್ಪಣಿಗಳನ್ನು ನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



समानेष्टोत्तरगच्छसङ्कलितगुणसङ्कलितसमधनस्याद्यानयनसूत्रम् -
मुखमेकं चयगच्छाविष्टौ मुखवित्तरहितगुणचित्या ।
हृतचयधनमादिगुणं मुखं भवेद्विचितिधनसाम्ये ॥ ४३ ॥

**अत्रोद्देशकः**

भाववार्धिभुवनानि पदान्यम्भोधिपञ्चमुनयस्त्रिहृतास्ते ।
उत्तराणि वदनानि कति स्युर्युग्मसङ्कलितवित्तसमेषु ॥ ४४ ॥

**इति भिन्नसङ्कलितं समाप्तम् ।**

---

Samāneṣṭottaragacchasaṅkalitaguṇasaṅkalitasamadhanasyādyānayanasūtram-

**43.** Mukhamekaṁ cayagacchāviṣṭau mukhavittarahitaguṇacityā,
hṛtacayadhanamādiguṇaṁ mukhaṁ bhaveddvicitidhanasāmye.

**Atroddeśakaḥ**

**44.** Bhāvavārdhibhuvanāni padānyambhodhipañcamunayastrihṛtāste,
uttarāṇi vadanāni kati syuryugmasaṅkalitavittasameṣu.

**Iti bhinnasaṅkalitaṁ samāptam.**

---

The rule for finding out the (common) first term of two series having the same sum, one of them being in arithmetical progression and the other in geometrical progression, their optionally chosen number of terms being equal and the similarly chosen common difference and common ratio also being equal in value.

**43.** One is (taken as) the first term, the number of terms and the common ratio as well as the common difference (which is equal to it) are optionally chosen. The *uttaradhana* (here), divided by the sum of this geometrically progressive series as diminished by the *ādidhana* (thereof) and (then) multiplied by whatever is taken as the first term, gives rise to the (required common) first term in relation to the two series, (one of which is in geometrical progression and the other in arithmetical progression and both of) which are characterised by sums of the same value.

***Examples in illustration thereof***

44. The number of terms are 5, 4 and 3 (respectively) and the common ratios as well as the (equal) common differences are $\frac{4}{3}$, $\frac{5}{3}$ and $\frac{7}{3}$ (in order). What is the value of the (corresponding) first terms in relation to these (sets of two series, one in geometrical progression and the other in arithmetical progression), which are characterised by sums of the same value?

**Thus ends the summations of fractions in series.**

---

ಸಮವಾದ ಆರಿಸಿದ ಪದಗಳ ಸಂಖ್ಯೆಯನ್ನುಳ್ಳ ಮತ್ತು ಇದೇ ರೀತಿ ಸಮವಾದ ಸಾಮಾನ್ಯ ವ್ಯತ್ಯಾಸ ಮತ್ತು ಸಾಮಾನ್ಯ ನಿಷ್ಪತ್ತಿಗಳನ್ನುಳ್ಳ ಹಾಗೂ ಒಂದೇ ಮೊತ್ತವನ್ನುಳ್ಳ, ಒಂದು ಕಲನ ಶ್ರೇಣಿ ಮತ್ತು ಇನ್ನೊಂದು ಗುಣೋತ್ತರ ಶ್ರೇಣಿಯ (ಸಾಮಾನ್ಯ) ಪ್ರಥಮ ಪದವನ್ನು ಕಂಡುಹಿಡಿಯಲು ನಿಯಮ :

೪೩. ಒಂದನ್ನು ಪ್ರಥಮ ಪದವನ್ನಾಗಿ ತೆಗೆದುಕೊಂಡು, ಪದಗಳ ಸಂಖ್ಯೆ ಮತ್ತು ಸಾಮಾನ್ಯ ನಿಷ್ಪತ್ತಿ ಹಾಗೂ (ಇದಕ್ಕೆ ಸಮವಾದ) ಸಾಮಾನ್ಯ ವ್ಯತ್ಯಾಸಗಳನ್ನು ಇಚ್ಛಾನುಸಾರವಾಗಿ ಆರಿಸಲಾಗಿದೆ. ಇಲ್ಲಿ *ಉತ್ತರಧನವನ್ನು ಆದಿಧನವನ್ನು* ಕಳೆದ ಗುಣೋತ್ತರ ಶ್ರೇಣಿಯ ಮೊತ್ತದಿಂದ ಭಾಗಿಸಿ ಮತ್ತು ನಂತರ ಯಾವುದನ್ನು ಪ್ರಥಮ ಪದವನ್ನಾಗಿ ತೆಗೆದುಕೊಂಡಿದ್ದೇವೋ ಅದರಿಂದ ಗುಣಿಸಿದರೆ, ಸಮವಾದ ಮೊತ್ತಗಳನ್ನುಳ್ಳ ಎರಡು ಶ್ರೇಣಿಗಳ ಸಂಬಂಧದ (ಬೇಕಾದ ಸಾಮಾನ್ಯ) ಪ್ರಥಮ ಪದವು ದೊರೆಯುತ್ತದೆ. (ಇಲ್ಲಿ ಒಂದು ಶ್ರೇಣಿಯು ಗುಣೋತ್ತರ ಶ್ರೇಣಿಯಾಗಿದೆ ಮತ್ತು ಇನ್ನೊಂದು ಕಲನಶ್ರೇಣಿಯಾಗಿದೆ.)

**ಉದಾಹರಣೆಗಳಿಂದ ವಿಶ್ಲೇಷಣ**

೪೪. ಪದಗಳ ಸಂಖ್ಯೆ ಕ್ರಮವಾಗಿ ೫, ೪ ಮತ್ತು ೩ ಆಗಿವೆ. ಸಾಮಾನ್ಯ ನಿಷ್ಪತ್ತಿ ಹಾಗೂ ಇದಕ್ಕೆ ಸಮವಾದ ಸಾಮಾನ್ಯ ವ್ಯತ್ಯಾಸಗಳು ಕ್ರಮವಾಗಿ $\frac{೪}{೩}$, $\frac{೫}{೩}$ ಮತ್ತು $\frac{೭}{೩}$ ಆಗಿವೆ. ಈ ಸಮವಾದ ಮೊತ್ತಗಳನ್ನುಳ್ಳ ಗುಣೋತ್ತರ ಹಾಗೂ ಕಲನಶ್ರೇಣಿಗಳ ಅನುಗುಣವಾದ ಪ್ರಥಮ ಪದಗಳ ಬೆಲೆಗಳೇನು?

**ಈ ರೀತಿ ಭಿನ್ನಾತ್ಮಕ ಶ್ರೇಣಿಗಳ ಸಂಕಲನವು ಸಮಾಪ್ತಿಯಾಯಿತು.**



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**43.** For *ādidhana* and *uttaradhana*, see note under 63 and 64, Chap II : This rule, symbolically expressed, works out thus :

$$a = \frac{\frac{n(n-1) \times 6}{2}}{\frac{(r^n - 1)1}{r-1} - n \times 1} \quad \text{where } b = r$$

For facility of working, 1 is chosen as the provisional first term, but it is obvious that any quantity may be so provisionally chosen. The use of the provisional first term is seen in facilitating the statement of the rule by means of the expressions *ādidhana* and *uttaradhana*. The formula here given is obtained by equating the formulae giving the sums of the geometrical and the arithmetical series. It is worth noting that the word *caya* is used here to denote both the common difference in an arithmetical and the common ratio in a geometrical series.

೪೩. *ಆದಿಧನ* ಮತ್ತು *ಉತ್ತರಧನ* ಗಳಿಗಾಗಿ ೨ ನೇ ಅಧ್ಯಾಯದ ೬೩ ಮತ್ತು ೬೪ ನೇ ಶ್ಲೋಕಗಳ ಟಿಪ್ಪಣಿಯನ್ನು ನೋಡಿ. ಸಾಂಕೇತಿಕವಾಗಿ ಈ ನಿಯಮವು ಹೀಗಾಗುತ್ತದೆ :

$$ಅ = \frac{\frac{ನ(ನ-೧) \times ಬ}{೨}}{\frac{(ರ^ನ - ೧)೧}{ರ-೧} - ನ \times ೧}$$

ಇಲ್ಲಿ $ಬ = ರ$ ಆಗಿದೆ. ಕಲಸವನ್ನು ಸುಲಭಗೊಳಿಸಲು ೧ ನ್ನು ತಾತ್ಕಾಲಿಕವಾಗಿ ಪ್ರಥಮ ಪದವನ್ನಾಗಿ ಆರಿಸಲಾಗಿದೆ. ಆದರೆ ಯಾವುದೇ ಸಂಖ್ಯೆಯನ್ನು ಬೇಕಾದರೂ ಹೀಗೆ ತಾತ್ಕಾಲಿಕವಾಗಿ ಆರಿಸಬಹುದಾಗಿದೆ ಎಂಬುದು ಸ್ಪಷ್ಟವಾಗಿದೆ. *ಆದಿಧನ* ಮತ್ತು *ಉತ್ತರಧನ* ಗಳಿಂದ ನಿರೂಪಿತವಾದ ನಿಯಮದ ಹೇಳಿಕೆಯನ್ನು ಸರಳಮಾಡಲು ತಾತ್ಕಾಲಿಕ ಪ್ರಥಮ ಪದವನ್ನು ಉಪಯೋಗಿಸಲಾಗಿದೆ. ಗುಣೋತ್ತರ ಶ್ರೇಣಿಯ ಮತ್ತು ಕಲನಶ್ರೇಣಿಯ ಮೊತ್ತಗಳನ್ನು ಕೊಡುವ ಸೂತ್ರಗಳನ್ನು ಸಮಗೊಳಿಸುವುದರಿಂದ, ಇಲ್ಲಿ ಕೊಟ್ಟಿರುವ ನಿಯಮವನ್ನು ಪಡೆಯಬಹುದಾಗಿದೆ. *ಚಯ* ಪದವನ್ನು ಕಲನಶ್ರೇಣಿಯ ಸಾಮಾನ್ಯ ವ್ಯತ್ಯಾಸ ಮತ್ತು ಗುಣೋತ್ತರ ಶ್ರೇಣಿಯ ಸಾಮಾನ್ಯ ನಿಷ್ಪತ್ತಿಗಳನ್ನು ಸೂಚಿಸಲು ಉಪಯೋಗಿಸಲಾಗಿದೆ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## भिन्नव्युत्कलितम्

भिन्नव्युत्कलिते करणसूत्रं यथा -
गच्छाधिकेष्टमिष्टं चयहतमूनोत्तरं द्विहादियुतम्। शेषेष्टपदार्धगुणं व्युत्कलितं स्वेष्टवित्तं च ॥४५॥
शेषगच्छस्याद्यानयनसूत्रम् -
[1]प्रचयार्धोनः प्रभवो युतश्चयघ्नेष्टपदचयार्धाभ्याम् ।
शेषस्य पदस्यादिश्चयस्तु पूर्वोक्त एव भवेत् ॥ ४६ ॥

---

## Bhinnavyutkalitaṁ

Bhinnavyutkalite karaṇasūtraṁ yathā-

**45.** Gacchādhikeṣṭamiṣṭaṁ cayahatamūnottaraṁ dvihādiyutam,
śeṣeṣṭapadārdhaguṇaṁ vyutkalitaṁ sveṣṭavittaṁ ca.

S'eṣagacchasyādyānayanasūtram-

**46.** Pracayārdhonaḥ prabhavo yutaścayaghneṣṭapadacayārdhābhyām,
śeṣasya padasyādiścayastu pūrvokta eva bhavet.

---

## *Vyutkalita* of fractions in series

The rule for performing the operation of *vyutkalita* is as follows :

**45.** (Take) the chosen-off number of terms as combined with the total number of terms (in the series) and (take) also your chosen-off number of terms (separately). Multiply each of these quantities by the common difference and diminish (the products) by the common difference; (then) multiply by *two* and these (resulting quantities), when multiplied by the half of the remaining number of terms and by the half of the chosen-off number of terms (respectively), give rise to the sum of the remainder-series and to the sum of the chosen-off part of the (given) series (in order).

The rule for finding out the first term in relation to the remaining number of terms (making up the remainder-series) :

**46.** The first term (of the series), diminished by the half of the common difference and combined with the chosen-off number of terms as multiplied by the common difference, as also with the half of the common difference (gives) the first term of the remaining number of terms (making up the remainder-series). And the common difference (of the remainder-series) is the same as what is found in the given series.

---

## ಭಿನ್ನಾತ್ಮಕ ಶ್ರೇಣಿಗಳ ವ್ಯುತ್ಕಲನ

*ವ್ಯುತ್ಕಲಿತ* ಕ್ರಿಯೆಯನ್ನು ಮಾಡಲು ನಿಯಮವು ಮುಂದೆ ಹೇಳುವಂತಿದೆ :

೪೫. ಶ್ರೇಣಿಯ ಆರಿಸಿದ ಪದಗಳ ಸಂಖ್ಯೆಯೊಂದಿಗೆ, ಶ್ರೇಣಿಯ ಒಟ್ಟು ಪದಗಳ ಸಂಖ್ಯೆಯನ್ನು ಸೇರಿಸು ಮತ್ತು ನೀನೇ ಆರಿಸಿದ ಪದಗಳ ಸಂಖ್ಯೆಯನ್ನು ಬೇರೆಯಾಗಿ ತೆಗೆದುಕೊ. ಇವುಗಳಲ್ಲಿ ಪ್ರತಿಯೊಂದು ಸಂಖ್ಯೆಯನ್ನೂ ಸಾಮಾನ್ಯ ವ್ಯತ್ಯಾಸದಿಂದ ಗುಣಿಸು ಮತ್ತು ಗುಣಲಬ್ಧಗಳನ್ನು ಸಾಮಾನ್ಯ ವ್ಯತ್ಯಾಸದಿಂದ ಕಳೆ. ನಂತರ ಎರಡರಿಂದ ಗುಣಿಸು. ಹೀಗೆ ಬಂದಂತಹ ಸಂಖ್ಯೆಗಳನ್ನು ಕ್ರಮವಾಗಿ ಉಳಿದ ಪದಗಳ ಸಂಖ್ಯೆಯ ಅರ್ಧಭಾಗದಿಂದ ಮತ್ತು ಆರಿಸಿದ ಪದಗಳ ಸಂಖ್ಯೆಯ ಅರ್ಧಭಾಗದಿಂದ ಗುಣಿಸಿದರೆ, ಅವು ಕ್ರಮವಾಗಿ ಶೇಷ-ಶ್ರೇಣಿಯ ಮೊತ್ತವನ್ನು ಮತ್ತು ಶ್ರೇಣಿಯ ಆರಿಸಿದ ಭಾಗದ ಮೊತ್ತವನ್ನು ಕೊಡುತ್ತವೆ.

(ಶೇಷ-ಶ್ರೇಣಿಯನ್ನುಂಟುಮಾಡುವ) ಶೇಷ ಪದಗಳ ಸಂಖ್ಯೆಯ ಸಂಬಂಧದಲ್ಲಿ ಪ್ರಥಮ ಪದವನ್ನು ಕಂಡುಹಿಡಿಯಲು ನಿಯಮ :

೪೬. ಶ್ರೇಣಿಯ ಸಾಮಾನ್ಯ ವ್ಯತ್ಯಾಸದ ಅರ್ಧಭಾಗವನ್ನು ಕಳೆದ ಪ್ರಥಮ ಪದವನ್ನು, ಆರಿಸಿದ ಪದಗಳ ಸಂಖ್ಯೆಯೊಂದಿಗೆ ಸೇರಿಸಿದ ನಂತರ, ಸಾಮಾನ್ಯ ವ್ಯತ್ಯಾಸದಿಂದ ಹಾಗೂ ಸಾಮಾನ್ಯ ವ್ಯತ್ಯಾಸದ ಅರ್ಧಭಾಗದಿಂದ ಗುಣಿಸಿದರೆ (ಶೇಷ-ಶ್ರೇಣಿಯನ್ನುಂಟುಮಾಡುವ) ಶೇಷ ಪದಗಳ ಪ್ರಥಮ ಪದವು ದೊರೆಯುತ್ತದೆ. ಶೇಷ-ಶ್ರೇಣಿಯ ಸಾಮಾನ್ಯ ವ್ಯತ್ಯಾಸವು, ಕೊಟ್ಟಿರುವ ಶ್ರೇಣಿಯ ಸಾಮಾನ್ಯ ವ್ಯತ್ಯಾಸವೇ ಆಗಿರುತ್ತದೆ.

---

1. M प्रचयगुणितेष्टगच्छस्यादिः प्रभवः पदस्य शेषस्य । पूर्वोक्तः प्रचयस्यादिष्टस्य प्राक्तनादेव ।।

**45.** Cf. note under 106, Chap. II.

**46.** Cf. note under 109, Chap. II.

೪೫. ೨ ನೇ ಅಧ್ಯಾಯದ ೧೦೬ ನೇ ಶ್ಲೋಕದ ಟಿಪ್ಪಣಿಯೊಂದಿಗೆ ಹೋಲಿಸಿನೋಡಿ.

೪೬. ೨ ನೇ ಅಧ್ಯಾಯದ ೧೦೯ ನೇ ಶ್ಲೋಕದ ಟಿಪ್ಪಣಿಯೊಂದಿಗೆ ಹೋಲಿಸಿನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



गुणगुणितेऽपि चयादी तथैव भेदोऽयमत्र शेषपदे ।
इष्टपदमितगुणाहतिगुणितप्रभवो भवेद्वक्त्रम् ॥ ४७ ॥

अत्रोद्देशकः

पादोत्तरं दलास्यं पदं त्रिपादांशकस्समुद्दिष्टः ।
स्वेष्टं [1] चतुर्थभागः किं व्युत्कलितं समाकलय ॥ ४८ ॥

---

47. Guṇaguṇite'pi cayādī tathaiva bhedo'yamatra śeṣapade,
iṣṭapadamitaguṇāhatiguṇitaprabhavo bhavedvaktram.

**Atroddeśakaḥ**

48. Pādottaraṁ dalāsyaṁ padaṁ tripādāṁśakassamuddiṣṭaḥ, sveṣṭaṁ caturthabhāgaḥ kiṁ vyutkalitaṁ samākalaya.

---

**47.** Even in respect of a geometrically progressive series, the common ratio and the first term are exactly alike (in the given series and in the chosen-off part thereof). There is (however) this difference here in respect of (the first term among) the remaining number of terms (constituting the remainder-series), viz., that the first term of the (given) series multiplied by that self-multiplied product of the common ratio, in which (product) the frequency of occurrence of the common ratio is measured by the chosen-off number of terms, gives rise to the first term (of the remainder-series).

***Examples in illustration thereof***

**48.** Calculate what the sum of the remainder-series is in relation to that (series) of which $\frac{1}{4}$ is the common difference, $\frac{1}{2}$ the first term and $\frac{3}{4}$ is (taken to be) the number of terms, when the chosen-off number of terms (to be removed) is (taken as) $\frac{1}{4}$.

---

೪೭. ಒಂದು ಗುಣೋತ್ತರ ಶ್ರೇಣಿಯ ವಿಷಯದಲ್ಲೂ ಕೂಡ (ಕೊಟ್ಟಿರುವ ಶ್ರೇಣಿಯಲ್ಲಿ ಮತ್ತು ಆರಿಸಿದ ಭಾಗದ ಶ್ರೇಣಿಯಲ್ಲಿ) ಸಾಮಾನ್ಯ ನಿಷ್ಪತ್ತಿ ಮತ್ತು ಪ್ರಥಮ ಪದ ಒಂದೇ ಆಗಿರುತ್ತದೆ. (ಆದರೆ) ಇಲ್ಲಿ (ಶೇಷ-ಶ್ರೇಣಿಯನ್ನುಂಟುಮಾಡುವ) ಶೇಷ ಪದಗಳ ಸಂಖ್ಯೆಯ ವಿಷಯದಲ್ಲಿ ವ್ಯತ್ಯಾಸವಿದೆ. ಅದೇನೆಂದರೆ: ಕೊಟ್ಟಿರುವ ಶ್ರೇಣಿಯ ಪ್ರಥಮ ಪದವನ್ನು ಆರಿಸಿದ ಪದಗಳ ಸಂಖ್ಯೆಯಷ್ಟು ಸಲ ಸ್ವಗುಣಿತವಾದ ಸಾಮಾನ್ಯ ನಿಷ್ಪತ್ತಿಯ ಗುಣಲಬ್ಧದಿಂದ ಗುಣಿಸಿದರೆ, ಶೇಷ-ಶ್ರೇಣಿಯ ಪ್ರಥಮ ಪದವು ಲಭಿಸುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

೪೮. (ತೆಗೆಯಬೇಕಾಗಿರುವ) ಆರಿಸಿದ ಪದಗಳ ಸಂಖ್ಯೆಯನ್ನು $\frac{೧}{೪}$ ಎಂದು ತೆಗೆದುಕೊಂಡಾಗ, $\frac{೧}{೪}$ ನ್ನು ಸಾಮಾನ್ಯ ವ್ಯತ್ಯಾಸ, $\frac{೧}{೨}$ ನ್ನು ಪ್ರಥಮ ಪದ ಮತ್ತು $\frac{೩}{೪}$ ನ್ನು ಪದಗಳ ಸಂಖ್ಯೆಯನ್ನಾಗಿ ತೆಗೆದುಕೊಂಡಂತಹ ಶ್ರೇಣಿಯ ಸಂಬಂಧದಲ್ಲಿ, ಶೇಷ-ಶ್ರೇಣಿಯ ಮೊತ್ತವನ್ನು ಕಂಡುಹಿಡಿ.

---

1. M च चत्वर्भागः

47. See note under 110, Chap II.

೪೭. ೨ನೇ ಅಧ್ಯಾಯದ ೧೧೦ ನೇ ಶ್ಲೋಕದ ಟಿಪ್ಪಣಿಯನ್ನು ನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



प्रभवोऽर्धं पञ्चांशः प्रचयो द्वित्र्यंशको भवेद्गच्छः ।
पञ्चाष्टांशस्त्वेष्टं [1] पदमृणमाचक्ष्व गणितज्ञ ॥ ४९ ॥
आदिश्चतुर्थभागः प्रचयः पञ्चांशकस्त्रिपञ्चांशः ।
गच्छो वाञ्छागच्छो दशमो व्यवकलितमानं किम् ॥ ५० ॥
त्रिभागौ द्वौ वक्रं पञ्चमांशश्चयस्स्यात् पदं त्रिघ्नः पादः पञ्चमस्त्वेष्टगच्छः ।
षडंशस्सप्तांशो वा व्ययः को वद त्वम् कलावास प्रज्ञाचन्द्रिकाभास्वदिन्दो ॥ ५१ ॥

---

**49.** Prabhavo'rdhaṁ pañcāṁśaḥ pracayo dvitryaṁśako bhavedgacchaḥ, pañcāṣṭāṁśassveṣṭaṁ padamṛṇamācakṣva gaṇitajña.

**50.** Ādiścaturthabhāgaḥ pracayaḥ pañcāṁśakastripañcāṁśaḥ, gaccho vāñchāgaccho daśamo vyavakalitamānaṁ kim.

**51.** Tribhāgau dvau vakraṁ pañcamāṁśaścayassyāt padaṁ trighnaḥ pādaḥ pañcamassveṣṭagacchaḥ ṣaḍaṁśassaptāṁśo vā vyayaḥ ko vada tvam kalāvāsa prajñācandrikābhāsvadindo.

---

**49.** In relation to a series in arithmetical progression, the first term is $\frac{1}{2}$, the common difference is $\frac{1}{5}$ and the number of terms is (taken to be) $\frac{2}{3}$. When the chosen-off number of terms (to be removed) is (taken as) $\frac{5}{8}$, give out, O you who know calculation, the sum of the remainder-series.

**50.** What is the value of the sum of the remainder-series in relation to a series of which the first term is $\frac{1}{4}$, the common difference is $\frac{1}{5}$ and the number of terms is (taken to be) $\frac{3}{5}$, when the chosen-off number of terms is $\frac{1}{10}$?

**51.** The first term is $\frac{2}{3}$, the common difference is $\frac{1}{5}$ and the number of terms is (taken as) $\frac{3}{4}$ and the chosen-off number of terms is taken to be $\frac{1}{5}$, $\frac{1}{6}$ or $\frac{1}{7}$. O you, who, being the abode of *kalās**, are the moon shining with the moon-light of wisdom, tell me the sum of the remaining number of terms.

---

೪೯. ಒಂದು ಕಲನಶ್ರೇಣಿಯ ಸಂಬಂಧದಲ್ಲಿ ಪ್ರಥಮ ಪದವು $\frac{೧}{೨}$ ಆಗಿದೆ, ಸಾಮಾನ್ಯ ವ್ಯತ್ಯಾಸವು $\frac{೧}{೫}$ ಆಗಿದೆ ಮತ್ತು ಪದಗಳ ಸಂಖ್ಯೆಯನ್ನು $\frac{೨}{೩}$ ಎಂದು ತೆಗೆದುಕೊಳ್ಳಲಾಗಿದೆ. (ತೆಗೆಯಬೇಕಾಗಿರುವ) ಆರಿಸಿದ ಪದಗಳ ಸಂಖ್ಯೆಯನ್ನು $\frac{೫}{೮}$ ಎಂದು ತೆಗೆದುಕೊಂಡಾಗ, ಎಲೈ ಗಣಿತಜ್ಞನೇ, ಶೇಷ -ಶ್ರೇಣಿಯ ಮೊತ್ತವನ್ನು ಕಂಡುಹಿಡಿ.

೫೦. $\frac{೧}{೪}$ ನ್ನು ಪ್ರಥಮ ಪದವನ್ನಾಗಿ, $\frac{೧}{೫}$ ನ್ನು ಸಾಮಾನ್ಯ ವ್ಯತ್ಯಾಸವನ್ನಾಗಿ ಮತ್ತು ಪದಗಳ ಸಂಖ್ಯೆಯನ್ನು $\frac{೩}{೫}$ ನ್ನಾಗಿ ತೆಗೆದುಕೊಂಡಂತಹ ಒಂದು ಶ್ರೇಣಿಯ ಸಂಬಂಧದಲ್ಲಿ, ಆರಿಸಿದ ಪದಗಳ ಸಂಖ್ಯೆಯನ್ನು $\frac{೧}{೧೦}$ ಎಂದು ತೆಗೆದುಕೊಂಡಾಗ, ಶೇಷ-ಶ್ರೇಣಿಯ ಮೊತ್ತದ ಮೌಲ್ಯವೇನಾಗುತ್ತದೆ?

೫೧. ಪ್ರಥಮ ಪದವು $\frac{೨}{೩}$ ಆಗಿದೆ, ಸಾಮಾನ್ಯ ವ್ಯತ್ಯಾಸವು $\frac{೧}{೫}$ ಆಗಿದೆ ಮತ್ತು ಪದಗಳ ಸಂಖ್ಯೆಯನ್ನು $\frac{೩}{೪}$ ಎಂದು ತೆಗೆದುಕೊಳ್ಳಲಾಗಿದೆ ಮತ್ತು ಆರಿಸಿದ ಪದಗಳ ಸಂಖ್ಯೆಯನ್ನು $\frac{೧}{೫}$, $\frac{೧}{೬}$ ಅಥವಾ $\frac{೧}{೭}$ ಎಂದು ತೆಗೆದುಕೊಳ್ಳಲಾಗಿದೆ. ಎಲೈ ಚಂದ್ರನ ಪ್ರಕಾಶರೂಪೀ ಬುದ್ಧಿಯಿಂದ ಹೊಳೆಯುವ ಚಂದ್ರನನ್ನು ಹೋಲುವ *ಕಲಾ* * ನಿಧಿಯೇ, ಶೇಷ ಪದಗಳ ಸಂಖ್ಯೆಗಳ ಮೊತ್ತವನ್ನು ಹೇಳು.

---

1. M किं व्युत्कलितं समाकलय

* *Kalā* is here used in the double sense of " learning " and " the digits of the moon. "

* ಇಲ್ಲಿ *ಕಲಾ* ಎಂಬ ಪದಕ್ಕೆ ಎರಡು ಅರ್ಥಗಳಿವೆ : ಮೊದಲನೆಯದು " ಜ್ಞಾನ " ಮತ್ತು ಎರಡನೆಯದು " ಚಂದನ ಅಂಕ " ಎಂದು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



द्वादशपदं चतुर्थर्णोत्तरमर्धोनपञ्चकं वदनम्। त्रिचतुःपञ्चाष्टेष्टपदानि व्युत्कलितमाकलय ॥५२॥

**गुणसङ्कलितव्युत्कलितोदाहरणम् ।**

द्वित्रिभागरहिताष्टमुखं द्वित्र्यंशको गुणचयोऽष्ट पदं भोः ।
मित्र रत्नगतिपञ्चपदानीष्टानि शेषमुखवित्तपदं किम् ॥ ५३ ॥

**इति भिन्नव्युत्कलितं समाप्तम् ।**

---

52. Dvādaśapadaṁ caturtharṇottaramardhonapañcakaṁ vadanam, tricatuḥ pañcāṣṭeṣṭapadāni vyutkalitamākalaya.

**Guṇasaṅkalitavyutkalitodāharaṇam**

53. Dvitribhāgarahitāṣṭamukhaṁ dvitryaṁśako guṇacayo'ṣṭa padaṁ bhoḥ, mitra ratnagatipañcapadānīṣṭāni śeṣamukhavittapadaṁ kim.

**Iti bhinnavyutkalitaṁ samāptam.**

---

**52.** Calculate the sum of the remaining number of terms in relation to a series of which the number of terms is 12, the common difference is minus $\frac{1}{4}$ and the first term is $4\frac{1}{2}$, the chosen-off number of terms being 3, 4, 5 or 8.

***Example in illustration of* vyutkalita *in relation to a series in geometrical progression***

**53.** The first term is $7\frac{1}{3}$, the common ratio is $\frac{2}{3}$ and the number of terms is 8 and the chosen-off number of terms is 3, 4 or 5. What are the first term, the sum and the number of terms in relation to the (respective) remainder-series?

**Thus ends the *vyutkalita* of fractions.**

---

೫೨. ಪದಗಳ ಸಂಖ್ಯೆ ೧೨, ಸಾಮಾನ್ಯ ವ್ಯತ್ಯಾಸ - $\frac{೧}{೪}$ (ಋಣ $\frac{೧}{೪}$ ) ಮತ್ತು ಪ್ರಥಮ ಪದ ೪$\frac{೧}{೨}$, ಆರಿಸಿದ ಪದಗಳ ಸಂಖ್ಯೆ ೩, ೪, ೫ ಅಥವಾ ೮ ಆಗಿರುವಂತಹ ಒಂದು ಶ್ರೇಣಿಯ ಸಂಬಂಧದಲ್ಲಿ, ಶೇಷ ಪದಗಳ ಸಂಖ್ಯೆಯ ಮೊತ್ತವನ್ನು ಕಂಡುಹಿಡಿ.

**ಒಂದು ಗುಣೋತ್ತರ ಶ್ರೇಣಿಯ ಸಂಬಂಧದಲ್ಲಿ ವ್ಯುತ್ಕಲಿತಕ್ಕೆ ಉದಾಹರಣೆಯಿಂದ ವಿಶ್ಲೇಷಣ**

೫೩. ಪ್ರಥಮ ಪದ ೭ $\frac{೧}{೩}$ , ಸಾಮಾನ್ಯ ನಿಷ್ಪತ್ತಿ $\frac{೨}{೩}$ ಮತ್ತು ಪದಗಳ ಸಂಖ್ಯೆ ೮ ಮತ್ತು ಆರಿಸಿದ ಪದಗಳ ಸಂಖ್ಯೆ ೩, ೪ ಅಥವಾ ೫ ಆಗಿವೆ. ಶೇಷ-ಶ್ರೇಣಿಗಳ ಸಂಬಂಧದಲ್ಲಿ ಪ್ರಥಮ ಪದ, ಮೊತ್ತ ಮತ್ತು ಪದಗಳ ಸಂಖ್ಯೆಗಳು ಏನೇನಾಗುತ್ತವೆ?

**ಈ ರೀತಿ ಭಿನ್ನ ವ್ಯುತ್ಕಲಿತವು ಮುಕ್ತಾಯವಾಗುತ್ತದೆ.**



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## कलासवर्णषड्जातिः

इतः परं कलासवर्णे षड्जातिमुदाहरिष्यामः -

भागप्रभागावथ भागभागो भागानुबन्धः परिकीर्तितोऽतः ।
भागापवाहस्सह भागमात्रा षड्जातयोऽमुत्र कलासवर्णे ॥ ५४ ॥

## भागजातिः

तत्र भागजातौ करणसूत्रं यथा -

सदृशहृतच्छेदहतौ मिथोंऽशहारौ समच्छिदावंशौ ।
लुप्तैकहरौ योज्यौ त्याज्यौ वा भागजातिविधौ ॥ ५५ ॥

---

## Kalāsavarṇaṣaḍjātiḥ

Itaḥ paraṁ kalāsavarṇe ṣaḍjātimudāhariṣyāmaḥ.

**54.** Bhāgaprabhāgāvatha bhāgabhāgo bhāgānubandhaḥ parikīrtito'taḥ, bhāgāpavāhassaha bhāgamātrā ṣaḍjātayo'mutra kalāsavarṇe.

## Bhāgajātiḥ

Tatra bhāgajātau karaṇasūtram yathā-

**55.** Sadṛśahṛtacchedahatau mithoṁ'śahārau samacchidāvaṁśau luptaikaharau yojyau tyājyau vā bhāgajātividhau.

---

## The six varieties of fractions

Hereafter we shall expound the six varieties of fractions.

**54.** *Bhāga* (or simple fractions), *Prabhāga* (or fractions of fractions), then *Bhāgabhāga* (or complex fractions), then *Bhāgānubandha* (or fractions in association), *Bhāgāpavāha* (or fractions in dissociation), together with *Bhāgamātr* (or fractions consisting of two or more of the above mentioned fractions) - these are here said to be the six varieties of fractions.

## Simple fractions : (addition and subtraction)

The rule of operation in connection with simple fractions therein :

**55.** If, in the operations relating to simple fractions, the numerator and the denominator (of each of two given simple fractions) are multiplied in

---

## ಭಿನ್ನರಾಶಿಯ ಆರು ಜಾತಿಗಳು

ಇನ್ನು ಮುಂದೆ ನಾವು ಭಿನ್ನರಾಶಿಯ ಆರು ಜಾತಿಗಳನ್ನು ಪ್ರಕಟಿಸುತ್ತೇವೆ.

೫೪. *ಭಾಗ* (ಅಥವಾ ಸರಳಭಿನ್ನರಾಶಿಗಳು), *ಪ್ರಭಾಗ* (ಅಥವಾ ಭಿನ್ನರಾಶಿಗಳ ಭಿನ್ನರಾಶಿಗಳು) ನಂತರ *ಭಾಗಾಭಾಗ* (ಅಥವಾ ಜಟಿಲವಾದ ಭಿನ್ನರಾಶಿಗಳು) ನಂತರ *ಭಾಗಾನುಬಂಧ*, (ಅಥವಾ ಸಂವಲಿತ ಭಿನ್ನರಾಶಿಗಳು) *ಭಾಗಾಪವಾಹ* (ಅಥವಾ ವಿಯೋಜಿತ ಭಿನ್ನರಾಶಿಗಳು) ಮತ್ತು *ಭಾಗಮಾತ್ರ* (ಮೇಲೆ ಹೇಳಿದ ಎರಡು ಅಥವಾ ಅದಕ್ಕಿಂತ ಹೆಚ್ಚು ಭಿನ್ನರಾಶಿಗಳನ್ನು ಹೊಂದಿರುವ ಭಿನ್ನರಾಶಿಗಳು) ಇವು ಭಿನ್ನರಾಶಿಗಳ ಆರು ಭೇದಗಳೆಂದು ಕರೆಯಲ್ಪಟ್ಟಿವೆ.

## ಸರಳ ಭಿನ್ನರಾಶಿಗಳು : (ಸಂಕಲನ ಮತ್ತು ವ್ಯವಕಲನ)

ಸರಳ ಭಿನ್ನರಾಶಿಗಳ ಕ್ರಿಯೆಗೆ ಸಂಬಂಧಪಟ್ಟ ನಿಯಮ :

೫೫. ಸರಳ ಭಿನ್ನರಾಶಿಗಳ ಕ್ರಿಯೆಗಳ ಸಂಬಂಧದಲ್ಲಿ (ಕೊಟ್ಟಿರುವ ಎರಡು ಭಿನ್ನರಾಶಿಗಳಲ್ಲಿ ಪ್ರತಿಯೊಂದರ) ಅಂಶ ಮತ್ತು ಛೇದಗಳನ್ನು, ಒಂದು ಸಾಮಾನ್ಯ ಅಪವರ್ತನದಿಂದ ಛೇದಗಳನ್ನು ಭಾಗಿಸಿದಾಗ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



alternation by the quotients obtained by dividing the denominators by means of a common factor thereof, (the quotient derived from the denominator of either of the fractions being used in the multiplication of the numerator and the denominator of the other fraction), those (fractions) become so reduced as to have equal denominators. (Then) removing one of these (equal) denominators, the numerators are to be added (to one another) or to be subtracted (from one another, so that the result may be the numerator in relation to the other equal denominator).

---

ಬಂದಂತಹ ಭಾಗಲಬ್ಧದಿಂದ ಏಕಾಂತರದಿಂದ ಗುಣಿಸಬೇಕು (ಯಾವ ಭಿನ್ನರಾಶಿಯ ಅಂಶ ಮತ್ತು ಛೇದಗಳ ಗುಣಾಕಾರದಲ್ಲಿ ಇನ್ನೊಂದು ಭಿನ್ನರಾಶಿಯ ಛೇದವನ್ನು ಬಳಸಲಾಗಿದೆಯೋ ಆ ಛೇದದಿಂದ ಈ ಭಾಗಲಬ್ಧವನ್ನು ಪಡೆಯಲಾಗಿದೆ). ಆಗ ಈ ಭಿನ್ನರಾಶಿಗಳು ಸಮವಾದ ಛೇದಗಳನ್ನು ಹೊಂದುತ್ತವೆ. ನಂತರ (ಸಮವಾದ) ಯಾವುದಾದರೂ ಒಂದು ಛೇದವನ್ನು ತೆಗೆದು, ಅಂಶಗಳನ್ನು (ಒಂದನ್ನು ಇನ್ನೊಂದರೊಂದಿಗೆ) ಕೂಡಬೇಕು ಅಥವಾ (ಒಂದನ್ನು ಇನ್ನೊಂದರಿಂದ) ಕಳೆಯಬೇಕು. ಆಗ ಉತ್ತರವು ಇನ್ನೊಂದು ಸಮವಾದ ಛೇದವುಳ್ಳ ಭಿನ್ನರಾಶಿಯ ಸಂಬಂಧದ ಅಂಶವಾಗುತ್ತದೆ.

---

**55.** The method of reducing fractions to common denominators described in this rule applies only to pairs of fractions. The rule will be clear from the following worked out example:

To simplify $\frac{a}{xy} + \frac{b}{yz}$ here, $a$ and $xy$ are to be multiplied by $z$ which is the quotient obtained by dividing $yz$, the denominator of the other fraction, by $y$ which is the common factor of the denominators. Thus we get $\frac{az}{xyz}$.

Similarly in the second fraction, by multiplying $b$ and $yz$ by $x$ which is the quotient obtained by dividing the first denominator $xy$ by $y$ the common factor.

We get $\frac{bx}{xyz}$. Now $\frac{az}{xyz} + \frac{bx}{xyz} = \frac{az + bx}{xyz}$

೫೫. ಈ ನಿಯಮದಲ್ಲಿ ವಿವರಿಸಿರುವ ಭಿನ್ನರಾಶಿಗಳಲ್ಲಿನ (ಸಾಮಾನ್ಯ ಛೇದಗಳಿಗೆ) ರೂಪಾಂತರೀಕರಣವು ಕೇವಲ ಭಿನ್ನರಾಶಿಗಳ ಜೋಡಿಗಳಿಗೆ ಮಾತ್ರ ಅನ್ವಯಿಸುತ್ತದೆ. ಈ ನಿಯಮವು ಮುಂದಿನ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ :

$\frac{ಅ}{ಕಖ} + \frac{ಬ}{ಖಗ}$ ವನ್ನು ಸರಳೀಕರಿಸಲು ಇಲ್ಲಿ *ಅ* ಮತ್ತು *ಕಖ* ಗಳನ್ನು *ಗ* ದಿಂದ ಗುಣಿಸುತ್ತೇವೆ. ಏಕೆಂದರೆ ಇನ್ನೊಂದು ಭಿನ್ನರಾಶಿಯ ಛೇದ ಅಂದರೆ *ಖಗ* ವನ್ನು ಛೇದಗಳ ಸಾಮಾನ್ಯ ಅಪವರ್ತನವಾದ *ಖ* ದಿಂದ ಭಾಗಿಸಿದಾಗ ಬರುವ ಭಾಗಲಬ್ಧವು *ಗ* ಆಗಿರುತ್ತದೆ. ಈ ರೀತಿ ನಮಗೆ $\frac{ಅಗ}{ಕಖಗ}$ ದೊರೆಯುತ್ತದೆ.

ಇದೇ ರೀತಿ, ಎರಡನೇ ಭಿನ್ನರಾಶಿಯಲ್ಲಿ *ಬ* ಮತ್ತು *ಖಗ* ಗಳನ್ನು *ಕ* (ಸಾಮಾನ್ಯ ಅಪವರ್ತನವಾದ *ಖ* ದಿಂದ ಮೊದಲನೆಯ ಛೇದವಾದ *ಕಖ* ವನ್ನು ಭಾಗಿಸಿದಾಗ ಬಂದಂತಹ ಭಾಗಲಬ್ಧ)ದಿಂದ ಗುಣಿಸಿದರೆ, ನಮಗೆ $\frac{ಬಕ}{ಕಖಗ}$ ದೊರೆಯುತ್ತದೆ.

ಈಗ $\frac{ಅಗ}{ಕಖಗ} + \frac{ಬಕ}{ಕಖಗ} = \frac{ಅಗ + ಬಕ}{ಕಖಗ}$.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



[1] प्रकारान्तरेण समानच्छेदमुद्भावयितुमुत्तरसूत्रम् -
छेदापवर्तकानां लब्धानां चाहतौ निरुद्धः स्यात् ।
हरहृतनिरुद्धगुणिते हारांशगुणे समो हारः ॥ ५६ ॥

**अत्रोद्देशकः**

[2]जम्बूजम्बीरनारङ्गचोचमोचाम्रदाडिमम् । अक्रैषीद्दळषड्भागद्वादशांशकविंशकैः ॥ ५७ ॥
हेम्नस्त्रिंशचतुर्विंशेनाष्टमेन यथाक्रमम् । श्रावको जिनपूजायै तद्योगे किं फलं वद ॥ ५८ ॥

---

Prakārāntareṇa samānacchedamudbhāvayitumuttarasūtram-

**56.** Chedāparvatakānāṁ labdhānāṁ cāhatau niruddhaḥ syāt,
harahṛtaniruddhaguṇite hārāṁśaguṇe samo hāraḥ.

**Atroddeśakaḥ**

**57.** Jambūjambīranāraṅgacocamocāmradāḍimam,
akraiṣīddaḷaṣaḍbhāgadvādaśāṁśakaviṁśakaiḥ.

**58.** Hemnastriṁśacaturviṁśenāṣṭamena yathākramam, śrāvako jinapūjāyai
tadyoge kiṁ phalaṁ vada.

---

Another rule for arriving at the common denominator in another manner :

**56.** The *niruddha* (or the least common multiple) is obtained by means of the continued multiplication of (all) the (possible) common factors of the denominators and (all) their (ultimate) quotients. In the case of (all) such multiplies of the denominators and the numerators (of the given fractions), as are obtained by multiplying those (denominators and numerators) by means of the quotients derived from the division of the *niruddha* by the (respective) denominators, the denominators become equal (in value).

***Examples in illustration thereof***

**57-58.** A *śrāvaka* purchased, for the worship of Jina, *jambu* fruits, limes, oranges, cocoanuts, plantains, mangoes and pomegranates for $\frac{1}{2}$, $\frac{1}{6}$, $\frac{1}{12}$, $\frac{1}{20}$, $\frac{1}{30}$, $\frac{1}{24}$ and $\frac{1}{8}$ of the golden coin in order; tell (me) what the result is when these (fractions) are added together.

ಬೇರೊಂದು ರೀತಿಯಲ್ಲಿ ಸಾಮಾನ್ಯ ಛೇದವನ್ನು ಪಡೆಯಲು ಮತ್ತೊಂದು ನಿಯಮ :

೫೬. ಛೇದಗಳ (ಸಾಧ್ಯವಾದ) ಎಲ್ಲ ಸಾಮಾನ್ಯ ಅಪವರ್ತನಗಳನ್ನು ಮತ್ತು ಅವುಗಳ ಎಲ್ಲ (ಅಂತಿಮ) ಭಾಗಲಬ್ಧಗಳನ್ನು ಸತತವಾಗಿ ಗುಣಿಸುವುದರಿಂದ *ನಿರುದ್ಧ* (ಅಥವಾ ಲಘುತಮ ಸಾಮಾನ್ಯ ಅಪವರ್ತ್ಯ)ವು ಲಭಿಸುತ್ತದೆ. *ನಿರುದ್ಧ*ವನ್ನು ಛೇದದಿಂದ ಭಾಗಿಸಿದರೆ ಬರುವ ಭಾಗಲಬ್ಧವನ್ನು, ಛೇದಗಳಿಂದ ಮತ್ತು ಅಂಶಗಳಿಂದ ಗುಣಿಸುತ್ತೇವೆ. ಈ ರೀತಿ ದೊರೆತ ಛೇದಗಳ ಮತ್ತು ಅಂಶಗಳ ಸಂಬಂಧವಾದ ಭಿನ್ನರಾಶಿಗಳಲ್ಲಿ ಛೇದಗಳು ಸಮವಾಗಿರುತ್ತವೆ.

**ಉದಾಹರಣೆಗಳಿಂದ ವಿಶ್ಲೇಷಣ**

೫೭-೫೮. ಒಬ್ಬ ಶ್ರಾವಕನು ಜಿನನ ಪೂಜೆಗೆಂದು ನೇರಳೆಹಣ್ಣು, ನಿಂಬೆಹಣ್ಣು, ಕಿತ್ತಲೆಹಣ್ಣು, ತೆಂಗಿನಕಾಯಿ, ಬಾಳೆಹಣ್ಣು, ಮಾವಿನಹಣ್ಣು ಮತ್ತು ದಾಳಿಂಬೆ ಹಣ್ಣುಗಳನ್ನು ಕ್ರಮವಾಗಿ $\frac{೧}{೨}$, $\frac{೧}{೬}$, $\frac{೧}{೧೨}$, $\frac{೧}{೨೦}$, $\frac{೧}{೩೦}$, $\frac{೧}{೨೪}$ ಮತ್ತು $\frac{೧}{೮}$ ಚಿನ್ನದ ನಾಣ್ಯಗಳಿಗೆ ಖರೀದಿಸುತ್ತಾನೆ. ಈ ಭಿನ್ನರಾಶಿಗಳನ್ನು ಕೂಡಿದಾಗ ಬರುವ ಮೊತ್ತವನ್ನು ನನಗೆ ಹೇಳು.

---

1. This and the stanza following are not found in M. 2. Stanzas Nos. 57 and 58 are omitted in P.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अष्टपञ्चदशं विंशं सप्तषट्त्रिंशदंशकम् । एकादशत्रिषष्ट्यंशमेकविंशं च सङ्क्षिप ॥ ५९ ॥
[1] एकद्विकत्रिकाद्येकोत्तरनवदशकषोडशान्त्यहराः ।
निजनिजमुखप्रमांशास्स्वपराभ्यस्ताश्च किं फलं तेषाम् ॥ ६० ॥

---

59. Aṣṭapañcadaśaṁ viṁśaṁ saptaṣaṭtriṁśadaṁśakam,
ekādaśatriṣaṣṭyaṁśamekaviṁśaṁ ca saṅkṣipa.

60. Ekadvikatrikādyekottaranavadaśakaṣoḍaśāntyaharāḥ,
nijanijamukhapramāṁśāssvaparābhyastāśca kiṁ phalaṁ teṣām.

---

**59.** Add together $\frac{8}{15}$, $\frac{1}{20}$, $\frac{7}{36}$, $\frac{11}{63}$ and $\frac{1}{21}$.

**60.** (There are 3 sets of fractions), the denominators whereof begin with 1, 2 and 3, (respectively) and go on increasing gradually by one till the last (of such denominators) becomes 9, 10 and 16 (in order in the respective sets); the numerators (of these sets of fractions) are of the same value as the first number (in these sets of denominators) and every one of these (above mentioned denominators in each set) is multiplied by the next one (the last denominator, however, remaining in each case unchanged for want of a further multiplying denominator). What is the sum of (each of) these (finally resulting sets of fractions)?

---

೫೯. $\frac{೮}{೧೫}$, $\frac{೧}{೨೦}$, $\frac{೭}{೩೬}$, $\frac{೧೧}{೬೩}$ ಮತ್ತು $\frac{೧}{೨೧}$ ಗಳನ್ನು ಕೂಡು.

೬೦. ಭಿನ್ನರಾಶಿಗಳ ೩ ಗುಂಪುಗಳಿವೆ. ಇವುಗಳಲ್ಲಿ ಛೇದಗಳು ಕ್ರಮವಾಗಿ ೧, ೨ ಮತ್ತು ೩ ರಿಂದ ಆರಂಭವಾಗುತ್ತವೆ ಮತ್ತು ಈ ಛೇದಗಳು ಅಂತಿಮವಾಗಿ ೯, ೧೦ ಮತ್ತು ೧೬ (ಕ್ರಮವಾಗಿ ಅನುಗುಣವಾದ ಗುಂಪುಗಳಲ್ಲಿ)ನ್ನು ತಲುಪುವವರೆಗೂ ಛೇದಗಳು ಕ್ರಮೇಣ ೧ ರಂತೆ ಹೆಚ್ಚುತ್ತಾ ಹೋಗುತ್ತವೆ. ಈ ಭಿನ್ನರಾಶಿಗಳ ಗುಂಪಿನಲ್ಲಿ ಅಂಶವು, ಛೇದಗಳ ಸಮೂಹದ ಪ್ರಥಮ ಸಂಖ್ಯೆಗೆ ಸಮವಾಗಿದೆ ಮತ್ತು ಈ ಮೇಲೆ ಹೇಳಿದ ಪ್ರತ್ಯೇಕ ಗುಂಪಿನ ಪ್ರತ್ಯೇಕ ಛೇದವು ಮುಂದಿನ ಛೇದದಿಂದ ಗುಣಿಸಲ್ಪಡುತ್ತದೆ (ಆದರೆ ಕಡೆಯ ಛೇದವು ಬದಲಾಯಿಸದೆ ಹಾಗೆಯೇ ಉಳಿಯುತ್ತದೆ, ಏಕೆಂದರೆ ಇದರಿಂದ ಗುಣಿಸಲ್ಪಡಬೇಕಾದ ಛೇದದ ಅಭಾವವಿರುತ್ತದೆ). ಅಂತಿಮವಾಗಿ ಹೀಗೆ ಬಂದಂತಹ ಭಿನ್ನರಾಶಿಗಳ ಪ್ರತ್ಯೇಕ ಗುಂಪಿನ ಮೊತ್ತವು ಏನಾಗುತ್ತದೆ?

---

1. This stanza is found in K and B.

**60.** The resulting problems are to find the values of -

(i) $\frac{1}{1\times2} + \frac{1}{2\times3} + \frac{1}{3\times4} + \ldots + \frac{1}{8\times9} + \frac{1}{9}$

(ii) $\frac{2}{2\times3} + \frac{2}{3\times4} + \frac{2}{4\times5} + \ldots + \frac{2}{9\times10} + \frac{2}{10}$

(iii) $\frac{3}{3\times4} + \frac{3}{4\times5} + \frac{3}{5\times6} + \ldots + \frac{3}{15\times16} + \frac{3}{16}$

೬೦. ಮುಂದೆ ತಿಳಿಸಿರುವ ಸಂಖ್ಯೆಗಳ ಮೌಲ್ಯಗಳನ್ನು ಕಂಡುಹಿಡಿಯುವುದೇ ಇಲ್ಲಿನ ಸಮಸ್ಯೆಗಳು.

(i) $\frac{೧}{೧\times೨} + \frac{೧}{೨\times೩} + \frac{೧}{೩\times೪} + \ldots + \frac{೧}{೮\times೯} + \frac{೧}{೯}$

(ii) $\frac{೨}{೨\times೩} + \frac{೨}{೩\times೪} + \frac{೨}{೪\times೫} + \ldots + \frac{೨}{೯\times೧೦} + \frac{೨}{೧೦}$

(iii) $\frac{೩}{೩\times೪} + \frac{೩}{೪\times೫} + \frac{೩}{೫\times೬} + \ldots + \frac{೩}{೧೫\times೧೬} + \frac{೩}{೧೬}$



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



एकद्विकत्रिकाद्याश्चतुराद्याश्चैकवृद्धिका हाराः ।
निजनिजमुखप्रमांशाः स्वासन्नपराहताः क्रमशः ॥ ६१ ॥
विंशत्यन्ताः षड्गुणसप्तान्ताः पञ्चवर्गपश्चिमकाः ।
षट्त्रिंशत्पाश्चात्याः सङ्क्षेपे किं फलं तेषाम् ॥ ६२ ॥
[1] चन्दनघनसारागरुकुङ्कुममक्रेष्ट जिनमहाय नरः ।
चरणदळविंशपञ्चमभागैः कनकस्य किं शेषम् ॥ ६३ ॥

---

**61.** Ekadvikatrikādyāścaturādyāścaikavṛddhikā hārāḥ,
nijanijamukhapramāṁśaḥ svāsannaparāhatāḥ kramaśaḥ

**62.** Viṁśatyantāḥ ṣaḍguṇasaptāntāḥ pañcavargapaścimakāḥ
ṣaṭtriṁśatpāścātyāḥ saṅkṣepe kiṁ phalaṁ teṣām.

**63.** Candanaghanasārāgarukuṅkumamakreṣṭa jinamahāya naraḥ,
caraṇadaḷaviṁśapañcamabhāgaiḥ kanakasya kiṁ śeṣam.

---

**61-62.** (There are 4 sets of fractions), the denominators whereof begin with 1, 2, 3 and 4 (respectively) and rise successively in value by 1 until 20, 42, 25 and 36 become the last (denominators in the several sets) in order; the numerators of these (sets of fractions) are of the same value as the first number (in these sets of denominators). And every one of these (denominators in each set) is multiplied in order by the next one, (the last denominator, however, remaining unchanged in each case). What is the sum on adding these (finally resulting sets of fractions)?

**63.** A man purchased on account of a Jina-festival sandal-wood, camphor, *agaru* and saffron for $\frac{1}{4}$, $\frac{1}{2}$, $\frac{1}{20}$ and $\frac{1}{5}$ of a golden coin. What is the remainder (left thereof)?

---

೬೧-೬೨. ಇಲ್ಲಿ ಭಿನ್ನರಾಶಿಗಳ ೪ ಗುಂಪುಗಳಿವೆ. ಇವುಗಳಲ್ಲಿ ಛೇದಗಳು ಕ್ರಮವಾಗಿ ೧, ೨, ೩ ಮತ್ತು ೪ ರಿಂದ ಆರಂಭವಾಗುತ್ತವೆ ಮತ್ತು ಈ ಛೇದಗಳು ಕ್ರಮವಾಗಿ ೨೦, ೪೨, ೨೫ ಮತ್ತು ೩೬ (ವಿವಿಧ ಗುಂಪುಗಳ ಛೇದಗಳಾಗುವವರೆಗೂ) ತಲುಪುವವರೆಗೂ, ಛೇದಗಳು ಕ್ರಮೇಣ ೧ ರಂತೆ ಹೆಚ್ಚುತ್ತವೆ. ಈ ಭಿನ್ನರಾಶಿಗಳ ಗುಂಪಿನಲ್ಲಿ ಅಂಶವು, ಛೇದಗಳ ಸಮೂಹದ ಪ್ರಥಮ ಸಂಖ್ಯೆಗೆ ಸಮವಾಗಿದೆ ಮತ್ತು ಈ ಮೇಲೆ ಹೇಳಿದ ಗುಂಪಿನ ಪ್ರತ್ಯೇಕ ಛೇದವು ಮುಂದಿನ ಛೇದದಿಂದ ಗುಣಿಸಲ್ಪಡುತ್ತದೆ (ಆದರೆ ಪ್ರತಿಯೊಂದು ಪ್ರಕರಣದಲ್ಲೂ ಕಡೆಯ ಛೇದವು ಬದಲಾಯಿಸದೆ ಹಾಗೆಯೇ ಉಳಿಯುತ್ತದೆ). ಅಂತಿಮವಾಗಿ, ಹೀಗೆ ಬಂದಂತಹ ಭಿನ್ನರಾಶಿಗಳನ್ನು ಕೂಡಿದರೆ ಬರುವ ಮೊತ್ತವೇನು?

೬೩. ಒಬ್ಬ ಮನುಷ್ಯನು ಜಿನನ ಉತ್ಸವಕ್ಕೆಂದು ಚಂದನದ ತುಂಡು, ಕರ್ಪೂರ, ಅಗರು ಮತ್ತು ಕೇಸರಿಯನ್ನು $\frac{೧}{೪}$, $\frac{೧}{೨}$, $\frac{೧}{೨೦}$ ಮತ್ತು $\frac{೧}{೫}$ ಚಿನ್ನದ ನಾಣ್ಯಗಳಿಗೆ ಖರೀದಿಸುತ್ತಾನೆ. (ಅಲ್ಲಿ ಉಳಿದ) ಶೇಷವೇನು?

---

1. Stanzas Nos. 63 and 64 are found in K and B.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



पादं पञ्चांशमर्धं त्रिगुणितदशमं सप्तविंशांशकञ्च स्वर्णद्वन्द्वं प्रदाय स्मित[4]सितकमलं
स्त्यानदध्याज्यदुग्धम् ।
श्रीखण्डं त्वं गृहीत्वानय जिनसदनप्रार्चनायाब्रवीन्मामित्यद्य श्रावकार्यो भण गणक
कियच्छेषमंशान्विशोध्य ॥ ६४ ॥
[2] अष्टपञ्चमुखौ हारावुभयेऽप्येकवृद्धिकाः। [3] त्रिंशदन्ताः पराभ्यस्ताश्चतुर्गुणितपश्चिमाः ॥६५॥
[4] स्वस्ववक्त्रप्रमाणांशा रूपात्संशोध्य तद्द्वयम्। शेषं सखे समाचक्ष्व [5]प्रोत्तीर्णगणितार्णव ॥६६॥

---

64. Pādaṁ pañcāṁśamardhaṁ triguṇitadaśamaṁ saptaviṁśāṁśakañca svarṇadvandvaṁ pradāya smitasitakamalaṁ styānadadhyājyadugdham, śrīkhaṇḍaṁ tvaṁ gṛhītvānaya jinasadanaprārcanāyābravinmāmityadya śrāvakāryo bhaṇa gaṇaka kiyaccheṣamaṁśānviśodhya.

65. Aṣṭapañcamukhau hārāvubhaye'pyekavṛddhikāḥ triṁśadantāḥ parābhyastāścaturguṇitapaścimāḥ.

66. Svasvavaktrapramāṇāṁśā rūpātsaṁśodhya taddvayam, śeṣaṁ sakhe samācakṣva prottīrṇagaṇitārṇava.

---

**64.** A worthy *srāvaka* gave me two golden coins and told me that I should bring, for the purpose of worshipping in the temple of Jina, blossomed white lotuses, thick curds, ghee, milk and sandal-wood for $\frac{1}{4}$, $\frac{1}{5}$, $\frac{1}{2}$, $\frac{3}{10}$ and $\frac{7}{20}$ of a golden coin, (respectively, out of the given amount). Now tell me, O arithmetician, what remains after subtracting the (various) parts (so spent).

**65-66.** (There are two sets of fractions) the denominators whereof begin with 8 and 5 (respectively) and rise in both cases successively in value by 1, until 30 becomes (in both cases) the last (denominator). The numerators of these (sets of fractions) are of the same value as the first term in each (of these sets of denominators). And every one of the denominators (in each set) is multiplied by the next one, the last (denominator) being (in each case) multiplied by 4. After subtracting from 1, (each of) these two (sums obtained by the addition of the sets of fractions finally resulting as above), tell me, O friend, who have gone over to the other shore of the ocean of simple fractions, what it is that remains.

---

೬೪. ಒಬ್ಬ ಯೋಗ್ಯ *ಶ್ರಾವಕನು* ನನಗೆ ಎರಡು ಚಿನ್ನದ ನಾಣ್ಯಗಳನ್ನು ಕೊಟ್ಟನು ಮತ್ತು ಜಿನ ಬಸದಿಯಲ್ಲಿ ಪೂಜೆಗೆಂದು ಅರಳಿದ ಬಿಳಿತಾವರೆ, ಗಟ್ಟಿಯಾದ ಮೊಸರು, ತುಪ್ಪ, ಹಾಲು ಮತ್ತು ಚಂದನದ ತುಂಡುಗಳನ್ನು ಕ್ರಮವಾಗಿ (ಕೊಟ್ಟಿರುವ ಹಣದಲ್ಲಿ) $\frac{೧}{೪}$, $\frac{೧}{೫}$, $\frac{೧}{೨}$, $\frac{೩}{೧೦}$ ಮತ್ತು $\frac{೭}{೨೦}$ ಚಿನ್ನದ ನಾಣ್ಯಗಳಿಗೆ ತರಲು ಹೇಳಿದನು. ಈಗ, ಎಲೈ ಅಂಕಗಣಿತಜ್ಞನೇ, ಇಷ್ಟು ಖರ್ಚುಮಾಡಿದ ಬಳಿಕ ನನ್ನ ಬಳಿ ಏನು (ಎಷ್ಟು ಚಿನ್ನದ ನಾಣ್ಯ) ಉಳಿಯುತ್ತದೆ ಎಂದು ಹೇಳು.

೬೫-೬೬. ಇಲ್ಲಿ ಭಿನ್ನರಾಶಿಗಳ ೨ ಗುಂಪುಗಳಿವೆ. ಇವುಗಳಲ್ಲಿ ಛೇದಗಳು ಕ್ರಮವಾಗಿ ೮ ಮತ್ತು ೫ ರಿಂದ ಪ್ರಾರಂಭವಾಗುತ್ತವೆ ಮತ್ತು ಎರಡರಲ್ಲೂ ಕಡೆಯ ಛೇದವು ೩೦ ನ್ನು ತಲುಪುವವರೆಗೂ ಛೇದಗಳು ಕ್ರಮೇಣ ೧ ರಂತೆ ಹೆಚ್ಚುತ್ತವೆ. ಈ ಗುಂಪಿನ ಭಿನ್ನರಾಶಿಗಳ ಅಂಶಗಳು, ಈ ಗುಂಪಿನ ಛೇದಗಳ ಪ್ರಥಮ ಪದದ ಮೌಲ್ಯದಷ್ಟಿರುತ್ತದೆ. ಪ್ರತಿಯೊಂದು ಗುಂಪಿನ ಪ್ರತಿಯೊಂದು ಛೇದವನ್ನು ಮುಂದಿನ ಛೇದದಿಂದ ಗುಣಿಸಬೇಕು, ಪ್ರತಿಯೊಂದು ಪ್ರಕರಣದಲ್ಲಿ ಕಡೆಯ ಛೇದವನ್ನು ನಾಲ್ಕರಿಂದ ಗುಣಿಸಬೇಕು. ಈ ಎರಡು ಮೊತ್ತಗಳನ್ನು (ಈ ಮೊತ್ತಗಳು, ಅಂತಿಮವಾಗಿ ದೊರೆತ ಭಿನ್ನರಾಶಿಗಳ ಗುಂಪುಗಳನ್ನು ಕೂಡುವುದರಿಂದ ಬಂದಂತಹವುಗಳು) ೧ ರಿಂದ ಕಳೆದ ನಂತರ, ಎಲೈ ಸರಳ ಭಿನ್ನರಾಶಿಗಳ ಮಹಾಸಾಗರದ ದಡವನ್ನು ದಾಟಿದ ಮಿತ್ರನೇ, ಶೇಷವು ಏನಾಗುತ್ತದೆ ಎಂದು ಹೇಳು.

---

1. M गुरु 2. This stanza is omitted in M 3. B विंशत्य 4. This stanza is not found in M
5. K and B भागजात्यब्धिपारग



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



एकोनविंशतिरथ क्रमात् त्रयोविंशतिर्द्विषष्टिश्च ।
रूपविहीना त्रिंशत्ततस्त्रयोविंशतिशतं स्यात् ॥ ६७ ॥
पञ्चत्रिंशत्तस्मादष्टाशीतिकशतं विनिर्दिष्टम् ।
सप्तत्रिंशदमुष्मादष्टानवतित्रिकोनपञ्चाशत् ॥ ६८ ॥
चत्वारिंशच्छतिका सैका च पुनश्शतं सषोडशकम् ।
एकत्रिंशदतस्स्याद्द्वानवतिः सप्तपञ्चाशत् ॥ ६९ ॥
त्र्यधिका सप्ततिरस्मात्सपञ्चपञ्चाशदपि च सा द्विगुणा ।
सप्तकृतिः सचतुष्का सप्ततिरेकोनविंशतिद्विशतम् ॥ ७० ॥
हारा निरूपिता अंशा एकाद्येकोत्तरा अमून् ।
प्रक्षिप्य फलमाचक्ष्व [1]भागजात्यब्धिपारग ॥ ७१ ॥

---

**67.** Ekonaviṁśatiratha kramāt trayoviṁśatirdviṣaṣṭiśca, rūpavihīnā triṁśattatastrayoviṁśatiśataṁ syāt.

**68.** Pañcatriṁśattasmādaṣṭāśītikaśataṁ vinirdiṣṭam, saptatriṁśadamuṣmādaṣṭānavatitrikonapañcāśat.

**69.** Catvāriṁśacchatikā saikā ca punaśśataṁ saṣoḍaśakam, ekatriṁśadatassyāddvānavatiḥ saptapañcāśat.

**70.** Tryadhikā saptatirasmātsapañcapañcāśadapi ca sā dviguṇā, saptakṛtiḥ sacatuṣkā saptatirekonaviṁśatidviśatam.

**71.** Hārā nirūpitā aṁśā ekādyekottarā amūn, prakṣipya phalamācakṣva bhāgajātyabdhipāraga.

---

**67-71.** The denominators (of certain given fractions) are stated to be 19, 23, 62, 29, 123, 35, 188, 37, 98, 47, 140, 141, 116, 31, 92, 57, 73, 55, 110, 49, 74, 219, (in order) and the numerators begin with 1 and rise successively in value by 1 (in order). Add (all) these (fractions) and give the result, O you who have reached the other shore of the ocean of simple fractions.

---

೬೭-೭೧. ಕೊಟ್ಟಿರುವ ಕೆಲವು ಭಿನ್ನರಾಶಿಗಳ ಛೇದಗಳು ಕ್ರಮವಾಗಿ ೧೯, ೨೩, ೬೨, ೨೯, ೧೨೩, ೩೫, ೧೮೮, ೩೭, ೯೮, ೪೭, ೧೪೦, ೧೪೧, ೧೧೬, ೩೧, ೯೨, ೫೭, ೭೩, ೫೫, ೧೧೦, ೪೯, ೭೪, ೨೧೯ ಎಂದು ತಿಳಿಸಲಾಗಿದೆ ಮತ್ತು ಅಂಶಗಳು ೧ ರಿಂದ ಆರಂಭವಾಗುತ್ತವೆ ಮತ್ತು ಕ್ರಮವಾಗಿ ೧ ರಂತೆ ಕ್ರಮೇಣ ಹೆಚ್ಚುತ್ತಾ ಹೋಗುತ್ತವೆ. ಈ ಎಲ್ಲ ಭಿನ್ನರಾಶಿಗಳನ್ನು ಕೂಡಿಸು ಮತ್ತು ಎಲೈ ಭಿನ್ನರಾಶಿಗಳೆಂಬ ಮಹಾಸಾಗರದ ಆಚೆದಡವನ್ನು ತಲುಪುವವನೇ, ಮೊತ್ತವೇನಾಗುತ್ತದೆ ಎಂದು ತಿಳಿಸು.

---

1. B प्रोत्तीर्णगणितार्णव



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अत्रांशोत्पत्तौ सूत्रम् -
एकं परिकल्प्यांशं तैरिष्टैस्समहरांशकान् हन्यात् ।
यद्गुणितांशसमासः फलसदृशोंऽशास्त एवेष्टाः ॥ ७२ ॥

---

Atrāṁśotpattau sūtram-

72. Ekaṁ parikalpyāṁśaṁ tairiṣṭaissamaharāṁśakān hanyāt,
yadguṇitāṁśasamāsaḥ phalasadṛśoṁ'śāsta eveṣṭāḥ.

---

Here, the rule for arriving at the numerators, (when the denominators and the sum of a number of fractions are given, is as follows) :

**72.** Make one the numerator (in relation to all the given denominators); then, multiply by means of such (numbers) as are optionally chosen, those numerators which (are derived from these fractions so as to) have a common denominator. (Here), those (numbers) turn out to be the required numerators, the sum of the products whereof, obtained by multiplying them with the numerators (derived as above), is equal to (the numerator of) the given sum (of the fractions concerned).

---

ಭಿನ್ನರಾಶಿಗಳ ಛೇದಗಳನ್ನು ಮತ್ತು ಮೊತ್ತಗಳನ್ನು ಕೊಟ್ಟಿರುವಾಗ, ಅಂಶಗಳನ್ನು ಪಡೆಯಲು ನಿಯಮವು ಮುಂದೆ ತಿಳಿಸಿದಂತಿದೆ :

೭೨. ಕೊಟ್ಟಿರುವ ಛೇದಗಳ ಸಂಬಂಧದಲ್ಲಿ ಅಂಶವನ್ನು ಒಂದನ್ನಾಗಿ ಮಾಡು. ನಂತರ ಇಚ್ಛಾನುಸಾರವಾಗಿ ಆರಿಸಿದ ಸಂಖ್ಯೆಯಿಂದ, ಸಾಮಾನ್ಯ ಛೇದಗಳಿರುವಂತೆ ಮಾಡಲಾದ ಅಂಶಗಳನ್ನು ಗುಣಿಸು. ಇಲ್ಲಿ ಆ ಸಂಖ್ಯೆಗಳು ಬೇಕಾದ ಅಂಶಗಳಾಗಿ ಮಾರ್ಪಾಟಾಗುತ್ತವೆ. ಇವುಗಳ ಮೊತ್ತವು, ಸಂಬಂಧಪಟ್ಟ ಭಿನ್ನರಾಶಿಗಳ ಮೊತ್ತಕ್ಕೆ ಸಮವಾಗಿರುತ್ತದೆ.

---

**72.** This rule will become clear from the working of the example in stanza No. 74, wherein we assume 1 to be the provisional numerator in relation to each of the given denominators, thus we get $\frac{1}{9}$, $\frac{1}{10}$ and $\frac{1}{11}$, which, being reduced so as to have a common denominator, become $\frac{110}{990}$, $\frac{99}{990}$ and $\frac{90}{990}$. When the numerators are multiplied by 2, 3 and 4 in order, the sum of the products thus obtained becomes equal to the numerator of the given sum, namely, 877. Hence, 2, 3, and 4 are the required numerators. Here it may be pointed out that this given sum also must be understood to have the same denominator as the common denominator of the fractions.

೭೨. ಈ ನಿಯಮವು ೭೪ ನೇ ಶ್ಲೋಕದ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ.ಇಲ್ಲಿ ಕೊಟ್ಟಿರುವ ಪ್ರತಿಯೊಂದು ಛೇದದ ಸಂಬಂಧದಲ್ಲಿ, ೧ ನ್ನು ತಾತ್ಕಾಲಿಕ ಅಂಶವನ್ನಾಗಿ ತೆಗೆದುಕೊಳ್ಳಲಾಗಿದೆ. ಈ ರೀತಿ ನಮಗೆ $\frac{೧}{೯}$, $\frac{೧}{೧೦}$ ಮತ್ತು $\frac{೧}{೧೧}$ ದೊರೆಯುತ್ತವೆ. ಇವುಗಳನ್ನು ಸಾಮಾನ್ಯ ಛೇದಗಳಿರುವಂತೆ ಮಾಡಿದಾಗ $\frac{೧೧೦}{೯೯೦}$, $\frac{೯೯}{೯೯೦}$ ಮತ್ತು $\frac{೯೦}{೯೯೦}$ ಆಗುತ್ತವೆ. ಅಂಶಗಳನ್ನು ಕ್ರಮವಾಗಿ ೨, ೩, ಮತ್ತು ೪ ರಿಂದ ಗುಣಿಸಿದಾಗ, ಬಂದಂತಹ ಗುಣಲಬ್ಧಗಳ ಮೊತ್ತವು, ಕೊಟ್ಟಿರುವ ಮೊತ್ತದ ಅಂಶಕ್ಕೆ ಸಮವಾಗಿರುತ್ತದೆ, ಅಂದರೆ ೮೭೭ ಆಗಿರುತ್ತದೆ. ಆದ್ದರಿಂದ ೨, ೩ ಮತ್ತು ೪ ಬೇಕಾದ ಅಂಶಗಳಾಗಿರುತ್ತವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಈ ಕೊಟ್ಟಿರುವ ಮೊತ್ತದ ಛೇದ ಮತ್ತು ಭಿನ್ನರಾಶಿಗಳ ಸಾಮಾನ್ಯ ಛೇದ ಒಂದೇ ಆಗಿವೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



[1]एकांशवृद्धीनां राशीनां युतावंशाद्धारस्याधिक्ये सत्यंशोत्पादकसूत्रम् -
समहारैकांशकयुतिहृतयुत्यंशोऽश एकवृद्धीनाम् ।
शेषमितरांशयुतिहृतमन्यांशोऽस्त्येवमा चरमात् ॥ ७३ ॥

**अत्रोद्देशकः**

नवकदशैकादशहृतराशीनां नवतिनवशतीभक्ता ।
ऋनाशीत्यष्टशती संयोगः केऽशकाः कथय ॥ ७४ ॥

---

Ekāṁśavṛddhīnāṁ rāśīnāṁ yutāvaṁśādvārasyādhikye satyaṁśotpādakasūtram-

**73.** Samahāraikāṁśakayutihṛtayutyaṁśoṁ'śa ekavṛddhīnām, śeṣamitarāṁśayutihṛtamanyāṁśo'styevamā caramāt.

**Atroddeśakaḥ**

**74.** Navakadaśaikādaśahṛtarāśīnāṁ navatinavaśatībhaktā, tryūnāśītyaṣṭaśatī saṁyogaḥ keṁ'śakāḥ kathaya.

---

The rule for arriving at the numerators, (the denominators and the sum being given as before), in relation to such (fractional) quantities as have their numerators (successively) rising in value by one, when, in the (given) sum (of these fractions), the denominator is higher in value than the numerator :

**73.** The quotient obtained by dividing the (given) sum (of the fractions concerned) by the sum of those (tentative fractions) which, (while having the given denominators), have one for the numerators and (are then reduced so as to) have a common denominator, becomes the (first required) numerator among those which (successively) rise in value by one (and are to be found out). On the remainder (obtained in this division) being divided by the sum of the other numerators (having the common denominator as above), it, (i.e., the resulting quotient), becomes another (viz., the second required) numerator (if added to the first one already obtained). In this manner (the problem has to be worked out) to the end.

***An example in illustration thereof***

**74.** The sum of (certain) numbers which are divided (respectively) by 9, 10 and 11 is 877 as divided by 990. Give out what the numerators are (in this operation of adding fractions).

---

ಭಿನ್ನರಾಶಿಗಳ ಮೊತ್ತದ ಛೇದವು ಅಂಶಕ್ಕಿಂತ ಹೆಚ್ಚಾಗಿದ್ದು ಮತ್ತು ಅಂಶವು ಕ್ರಮೇಣ ೧ ರಂತೆ ಹೆಚ್ಚುತ್ತಿದ್ದರೆ, ಅಂತಹ ಭಿನ್ನರಾಶಿಗಳ ಸಂಬಂಧದಲ್ಲಿ ಅಂಶಗಳನ್ನು ಕಂಡುಹಿಡಿಯಲು ನಿಯಮ :

೭೩. ಸಂಬಂಧಪಟ್ಟ ಭಿನ್ನರಾಶಿಗಳ ಕೊಟ್ಟಿರುವ ಮೊತ್ತ ಹಾಗೂ ಒಂದನ್ನು ಅಂಶವನ್ನಾಗಿ ಉಳ್ಳ ಭಿನ್ನರಾಶಿಗಳನ್ನು, ಸಾಮಾನ್ಯ ಛೇದಗಳಿರುವಂತೆ ಮಾಡಲಾಗುತ್ತದೆ. ಭಿನ್ನರಾಶಿಗಳ ಕೊಟ್ಟಿರುವ ಮೊತ್ತವನ್ನು, ಇಂತಹ ಭಿನ್ನರಾಶಿಗಳ ಮೊತ್ತದಿಂದ ಭಾಗಿಸಿದಾಗ ಬರುವ ಭಾಗಲಬ್ಧವು, ಆ ಅಂಶ (ಯಾವ ಅಂಶಗಳು ಕ್ರಮೇಣ ೧ ರಂತೆ ಹೆಚ್ಚುತ್ತಾ ಹೋಗುತ್ತವೋ ಮತ್ತು ಇವುಗಳನ್ನು ಕಂಡುಹಿಡಿಯಬೇಕಾಗಿದೆಯೋ ಆ ಅಂಶ)ಗಳಲ್ಲಿನ ಬೇಕಾದ ಪ್ರಥಮ ಅಂಶವಾಗಿರುತ್ತದೆ. ಈ ಭಾಗಾಹಾರದಿಂದ ಲಭಿಸುವ ಶೇಷವನ್ನು, ಸಾಮಾನ್ಯ ಛೇದಗಳನ್ನುಳ್ಳ ಇತರ ಅಂಶಗಳ ಮೊತ್ತದಿಂದ ಭಾಗಿಸಿದ ನಂತರ ಬರುವ ಭಾಗಲಬ್ಧವು (ಮೊದಲೇ ಪ್ರಾಪ್ತವಾದುದಕ್ಕೆ ಸೇರಿಸಿದಾಗ) ಮತ್ತೊಂದು ಬೇಕಾದ ಅಂಶವಾಗುತ್ತದೆ. ಈ ರೀತಿ, ಪ್ರಶ್ನೆಯನ್ನು ಕಡೆಯ ತನಕ ಬಿಡಿಸಬೇಕಾಗುತ್ತದೆ.

**ಉದಾಹರಣೆಯಿಂದ ವಿಶ್ಲೇಷಣ**

೭೪. ೯, ೧೦ ಮತ್ತು ೧೧ ರಿಂದ ಕ್ರಮವಾಗಿ ಭಾಗಿಸಲ್ಪಟ್ಟ ಕೆಲವು ಸಂಖ್ಯೆಗಳ ಮೊತ್ತವು $\frac{೮೭೭}{೯೯೦}$ ಆಗಿದೆ. ಭಿನ್ನರಾಶಿಗಳನ್ನು ಕೂಡುವ ಈ ಕ್ರಿಯೆಯಲ್ಲಿ ಅಂಶಗಳು ಏನಾಗುತ್ತವೆ ಎಂದು ಕಂಡುಹಿಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



1. B सदृशवृद्धचंशराशीनां अंशोत्पादकसूत्रम् ।

73. To work out the sum given under 74 below, according to this rule :

Reducing to the same denominator the fractions formed by assuming 1 to be the numerator in relation to each of the given denominators, we get $\frac{110}{990}$, $\frac{99}{990}$ and $\frac{90}{990}$. Dividing the given sum $\frac{877}{990}$ by the sum of these fractions $\frac{299}{990}$, we get the quotient 2, which is the numerator in relation to the first denominator. The remainder 279 obtained in this division is then divided by the sum of the remaining provisional numerators, i.e., 189, giving the quotient 1, which, combined with the numerator of the first fraction, namely 2, becomes the numerator in relation to the second denominator. The remainder in this second divison, viz., 90, is divided by the provisional numerator 90 of the last fraction, and the quotient 1, when combined with the numerator of the previous fraction, namely 3, gives rise to the numerator in relation to the last denominator. Hence the fractions, of which $\frac{877}{990}$ is the sum, are $\frac{2}{9}$, $\frac{3}{10}$ and $\frac{4}{11}$.

It is noticeable here that the numerators successively found out thus become the required numerators in relation to the given denominators in the order in which they are given.

Algebraically also, given the denominators $a$, $b$ & $c$, in respect of 3 fractions whose sum is $\frac{bcx + (x+1)\,ac + (x+2)\,ab}{abc}$, the numerators $x$, $x+1$ and $x+2$ are easily found out by the method as given above.

೭೩. ಕೆಳಗೆ ಕೊಟ್ಟಿರುವ ೭೪ ನೇ ಶ್ಲೋಕದ ಮೊತ್ತವನ್ನು ಈ ನಿಯಮದ ಪ್ರಕಾರ ಕಂಡುಹಿಡಿಯಲು :

ಕೊಟ್ಟಿರುವ ಪ್ರತಿಯೊಂದು ಛೇದದ ಸಂಬಂಧದಲ್ಲಿ ೧ ನ್ನು ಅಂಶವನ್ನಾಗಿ ತೆಗೆದುಕೊಂಡಂತಹ ಭಿನ್ನರಾಶಿಗಳನ್ನು ಸಾಮಾನ್ಯ ಛೇದಗಳಿರುವಂತೆ ಮಾಡಿದ ನಂತರ, ನಮಗೆ $\frac{೧೧೦}{೯೯೦}$, $\frac{೯೯}{೯೯೦}$ ಮತ್ತು $\frac{೯೦}{೯೯೦}$ ದೊರೆಯುತ್ತವೆ.

ಕೊಟ್ಟಿರುವ ಮೊತ್ತ $\frac{೮೭೭}{೯೯೦}$ನ್ನು ಈ ಭಿನ್ನರಾಶಿಗಳ ಮೊತ್ತವಾದ $\frac{೨೯೯}{೯೯೦}$ ರಿಂದ ಭಾಗಿಸಿದರೆ ನಮಗೆ ಭಾಗಲಬ್ಧವಾದ ೨ ದೊರೆಯುತ್ತದೆ. ಇದು ಮೊದಲನೆ ಛೇದದ ಸಂಬಂಧದಲ್ಲಿನ ಅಂಶವಾಗಿರುತ್ತದೆ. ಈ ಭಾಗಾಹಾರದಿಂದ ಪಡೆದಂತಹ ಶೇಷ ೨೭೯ ನ್ನು, ಉಳಿದ ತಾತ್ಕಾಲಿಕ ಅಂಶಗಳ ಮೊತ್ತ, ಅಂದರೆ ೧೮೦ ರಿಂದ ಭಾಗಿಸಬೇಕು. ಆಗ ಭಾಗಲಬ್ಧವು ೧ ಆಗಿರುತ್ತದೆ. ಇದನ್ನು ಮೊದಲನೆ ಭಿನ್ನರಾಶಿಯ ಅಂಶ ಅಂದರೆ ೨ ಕ್ಕೆ ಸೇರಿಸಿದರೆ ಎರಡನೇ ಛೇದದ ಸಂಬಂಧದ ಅಂಶವಾಗುತ್ತದೆ. ಈ ಎರಡನೇ ಭಾಗಾಹಾರದಲ್ಲಿನ ಶೇಷ, ಅಂದರೆ ೯೦ ನ್ನು ಕಡೆಯ ಭಿನ್ನರಾಶಿಯ ತಾತ್ಕಾಲಿಕ ಅಂಶವಾದ ೯೦ ರಿಂದ ಭಾಗಿಸಬೇಕು ಮತ್ತು ಭಾಗಲಬ್ಧವಾದ ೧ ನ್ನು ಹಿಂದಿನ ಭಿನ್ನರಾಶಿಯ ಅಂಶವಾದ ೩ ಕ್ಕೆ ಸೇರಿಸಿದಾಗ, ಕಡೆಯ ಛೇದಕ್ಕೆ ಸಂಬಂಧಪಟ್ಟ ಅಂಶವು ದೊರೆಯುತ್ತದೆ. ಆದ್ದರಿಂದ $\frac{೮೭೭}{೯೯೦}$ ನ್ನು ಮೊತ್ತವನ್ನಾಗಿ ಉಳ್ಳ ಭಿನ್ನರಾಶಿಗಳು $\frac{೨}{೯}$, $\frac{೩}{೧೦}$ ಮತ್ತು $\frac{೪}{೧೧}$ ಆಗಿವೆ.

ಈ ರೀತಿಯಲ್ಲಿ ಅನುಕ್ರಮವಾಗಿ ಕಂಡುಹಿಡಿದ ಅಂಶಗಳು, ಕೊಟ್ಟಿರುವ ಕ್ರಮದಲ್ಲಿ ಕೊಟ್ಟಿರುವ ಛೇದಗಳ ಸಂಬಂಧದ, ಬೇಕಾದ ಅಂಶಗಳಾಗಿರುತ್ತವೆ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

ಬೀಜಗಣಿತರೂಪದಲ್ಲಿ ಸಹ, ೩ ಭಿನ್ನರಾಶಿಗಳಲ್ಲಿ ಮೊತ್ತವು

$$\frac{ಬಸಕ + (ಕ + ೧)\,ಅಸ + (ಕ + ೨)\,ಅಬ}{ಅಬಸ}$$

ಆಗಿದೆ ಮತ್ತು ಛೇದಗಳು ಅ, ಬ ಮತ್ತು ಸ ಗಳಾಗಿವೆ. ಇವುಗಳ (ಭಿನ್ನರಾಶಿಗಳ) ಅಂಶಗಳನ್ನು ಈ ವಿಧಾನದಿಂದ ಕ, ಕ + ೧ ಮತ್ತು ಕ + ೨ ಎಂದು ಸುಲಭವಾಗಿ ಕಂಡುಹಿಡಿಯಬಹುದು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



छेदोत्पत्तौ सूत्रम् -

रूपांशकराशीनां रूपाद्यास्त्रिगुणिता हराः क्रमशः ।
द्वित्रिव्यंशाभ्यस्तावादिमचरमौ फले रूपे ॥ ७५ ॥

**अत्रोद्देशकः**

पञ्चानां राशीनां रूपांशानां युतिर्भवेद्रूपम् ।
षण्णां सप्तानां वा के हाराः कथय गणितज्ञ ॥ ७६ ॥

---

Chedotpattau sūtram-

**75.** Rūpāṁśakarāśīnāṁ rūpādyāstriguṇitā harāḥ kramaśaḥ, dvidvitryaṁśābhyastāvādimacaramau phale rūpe.

**Atroddeśakaḥ**

**76.** Pañcānāṁ rāśīnāṁ rūpāṁśānāṁ yutirbhavedrūpam, ṣaṇṇāṁ saptānāṁ vā ke hārāḥ kathaya gaṇitajña.

---

The rule for arriving at the (required) denominators (is as follows) :

**75.** When the sum of the (different fractional) quantities having one for their numerator is one, the (required) denominators are such as, beginning with one, are in order multiplied (successively) by three, the first and the last (denominators so obtained) being (however) multiplied (again) by 2 and $\frac{2}{3}$ (respectively).

***Examples in illustration thereof***

**76.** The sum of five or six or seven (different fractional) quantities, having 1 for (each of) their numerators, is 1 (in each case). O you, who know arithmetic, say what the (required) denominators are.

---

ಬೇಕಾದ ಛೇದಗಳನ್ನು ಪಡೆಯಲು ನಿಯಮವು ಮುಂದೆ ಹೇಳುವಂತಿದೆ :

೭೫. ಒಂದನ್ನು ಅಂಶವನ್ನಾಗಿ ಉಳ್ಳ ಬೇರೆ ಬೇರೆ ಭಿನ್ನರಾಶಿಗಳ ಮೊತ್ತವು ೧ ಆದಾಗ, ಬೇಕಾದ ಛೇದಗಳು ೧ ರಿಂದ ಆರಂಭವಾಗುತ್ತವೆ ಮತ್ತು ಕ್ರಮವಾಗಿ ಮೂರರಿಂದ ಗುಣಿಸಲ್ಪಡುತ್ತವೆ. ಆದರೆ (ಹೀಗೆ ಬರುವ ಛೇದಗಳಲ್ಲಿ) ಮೊದಲನೆಯ ಮತ್ತು ಕಡೆಯ ಛೇದಗಳನ್ನು ಪುನಃ ಕ್ರಮವಾಗಿ ೨ ಮತ್ತು $\frac{೨}{೩}$ ರಿಂದ ಗುಣಿಸಲಾಗುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

೭೬. ಪ್ರತಿಯೊಂದರಲ್ಲೂ ೧ ನ್ನು ಅಂಶವನ್ನಾಗಿ ಉಳ್ಳ ಇಂತಹ ಐದು ಅಥವಾ ಆರು ಅಥವಾ ಏಳು ಬೇರೆ-ಬೇರೆ ಭಿನ್ನರಾಶಿಗಳ ಮೊತ್ತವು ಪ್ರತಿಯೊಂದರಲ್ಲೂ ೧ ಆಗಿದೆ. ಎಲೈ ಗಣಿತಜ್ಞನೇ, ಬೇಕಾದ ಛೇದಗಳನ್ನು ಕಂಡುಹಿಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**75.** In working out an example according to the method stated herein, it will be found that when there are $n$ fractions, there are, after leaving out the first and the last fractions, $n - 2$ terms in geometrical progression with $\frac{1}{3}$ as the first term and $\frac{1}{3}$ as the common ratio. The sum of these $n - 2$ terms is $\frac{\frac{1}{3}\left\{1-\left(\frac{1}{3}\right)^{n-2}\right\}}{1-\frac{1}{3}}$; which when reduced becomes $\frac{1}{2} - \frac{1}{2}\left(\frac{1}{3}\right)^{n-2}$ which is the same as $\frac{1}{2} - \frac{1}{\frac{2}{3}} \times \frac{1}{3^{n-1}}$. From this it is clear that, when the first fraction $\frac{1}{2}$ and the last fraction $\frac{1}{\frac{2}{3}\,3^{n-1}}$ are added to this last result, the sum becomes 1.

In this connection it may be noted that, in a series in geometrical progression consisting of $n$ terms, having $\frac{1}{a}$ as the first term and $\frac{1}{a}$ as the common ratio, the sum is, for all positive integral values of a, less than $\frac{1}{a-1}$ by $\frac{1}{(a-1)/a}$ x the $(n + 1)$th term in the series. Therefore, if we add to the sum of the series in geometrical progression $\frac{1}{\frac{(a-1)/a}{a}}$ x the $(n + 1)$th term, which is the last fraction according to the rule stated in this stanza, we get $\frac{1}{a-1}$. To this $\frac{1}{a-1}$ we have to add $\frac{a-2}{a-1}$ in order to get 1 as the sum. This $\frac{a-2}{a-1}$ is mentioned in the rule as the first fraction and so 3 is the value chosen for $a$, since the numerator of all the fractions has to be 1.

೭೫. ಇಲ್ಲಿ ತಿಳಿಸಿರುವ ವಿಧಾನದಿಂದ ಒಂದು ಉದಾಹರಣೆಯನ್ನು ಸಾದರಪಡಿಸುವುದರಿಂದ, ನ ಭಿನ್ನರಾಶಿಗಳನ್ನು ಕೊಟ್ಟಾಗ ಅದರಲ್ಲಿ ಮೊದಲನೆಯ ಹಾಗೂ ಕಡೆಯ ಭಿನ್ನರಾಶಿಗಳನ್ನು ತೆಗೆದರೆ $\frac{೧}{೩}$ ನ್ನು ಪ್ರಥಮ ಪದ ಮತ್ತು $\frac{೧}{೩}$ ನ್ನು ಸಾಮಾನ್ಯ ನಿಷ್ಪತ್ತಿಯನ್ನಾಗಿ ಉಳ್ಳ ಗುಣೋತ್ತರ ಶ್ರೇಣಿಯಲ್ಲಿ ನ - ೨ ಪದಗಳಿರುತ್ತವೆ ಎಂಬುದು ವಿಶದವಾಗುತ್ತದೆ. ಈ ನ - ೨ ಪದಗಳ ಮೊತ್ತವು $\frac{೧}{೩}\left\{\frac{೧-\left(\frac{೧}{೩}\right)^{ನ-೨}}{೧-\frac{೧}{೩}}\right\}$ ಆಗುತ್ತದೆ. ಇದನ್ನು ಸರಳೀಕರಿಸಿದಾಗ $೧ - \frac{೧}{೨}\frac{೧}{೩^{ನ-೨}}$ ಅಥವಾ $\frac{೧}{೨} - \frac{೧}{೨/೩} \times \frac{೧}{೩^{ನ-೧}}$ ಗೆ ಸಮವಾಗಿರುತ್ತದೆ. ಪ್ರಥಮ ಭಿನ್ನರಾಶಿ $\frac{೧}{೨}$ ನ್ನು ಮತ್ತು ಕಡೆಯ ಭಿನ್ನರಾಶಿ $\frac{೧}{೨/೩ \times ೩^{ನ-೧}}$ ನ್ನು ಈ ಅಂತಿಮ ಫಲಕ್ಕೆ ಸೇರಿಸಿದರೆ, ಮೊತ್ತವು ೧ ಆಗುತ್ತದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಈ ಸಂಬಂಧದಲ್ಲಿ $\frac{೧}{ಅ}$ ವನ್ನು ಪ್ರಥಮ ಪದವನ್ನಾಗಿ ಉಳ್ಳ ಮತ್ತು $\frac{೧}{ಅ}$ ವನ್ನು ಸಾಮಾನ್ಯ ನಿಷ್ಪತ್ತಿಯನ್ನಾಗಿ ಉಳ್ಳ, ನ ಪದಗಳನ್ನು ಹೊಂದಿರುವ ಗುಣೋತ್ತರ ಶ್ರೇಣಿಯಲ್ಲಿ, ಅ ದ ಎಲ್ಲ ಧನಾತ್ಮಕ ಪೂರ್ಣಾಂಕಗಳ ಮೊತ್ತವು $\frac{೧}{ಅ-೧} \div \frac{೧}{(ಅ-೧)/ಅ}$ x ಶ್ರೇಣಿಯ $(ನ + ೧)$ ಪದ ಕ್ಕಿಂತ ಕಡಿಮೆಯಾಗಿರುತ್ತದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ ಗುಣೋತ್ತರ ಶ್ರೇಣಿಯ ಮೊತ್ತಕ್ಕೆ, ಈ ಶ್ಲೋಕದಲ್ಲಿ ತಿಳಿಸಿರುವ ನಿಯಮದ ಪ್ರಕಾರ ಕಡೆಯ ಭಿನ್ನರಾಶಿಯಾದ $\left\{\frac{೧}{(ಅ-೧)/ಅ} \times (ನ + ೧)\text{ ಪದ}\right\}$ ವನ್ನು ಸೇರಿಸಿದರೆ ನಮಗೆ $\frac{೧}{ಅ-೧}$ ದೊರೆಯುತ್ತದೆ. ಈ $\frac{೧}{ಅ-೧}$ ಗೆ, ೧ ನ್ನು ಮೊತ್ತವನ್ನಾಗಿ ಪಡೆಯಲು, $\frac{ಅ-೨}{ಅ-೧}$ ನ್ನು ಸೇರಿಸಬೇಕಾಗುತ್ತದೆ. ಈ $\frac{ಅ-೨}{ಅ-೧}$ ನ್ನು ಈ ಸೂತ್ರದಲ್ಲಿ ಮೊದಲನೆಯ ಭಿನ್ನರಾಶಿಯೆಂದು ತಿಳಿಸಲಾಗಿದೆ. ಆದ್ದರಿಂದ ಅ ದ ಬೆಲೆಯನ್ನು ೩ ಎಂದು ಆರಿಸಲಾಗಿದೆ. ಏಕೆಂದರೆ ಎಲ್ಲ ಭಿನ್ನರಾಶಿಗಳ ಅಂಶವು ೧ ಆಗಿರಬೇಕಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



विषमस्थानानां छेदोत्पत्ता सूत्रम् -
एकांशकराशीनां द्याद्या रूपोत्तरा भवन्ति हराः ।
स्वासन्नपराभ्यस्तास्सर्वे दलिताः फले रूपे ॥ ७७ ॥

---

Viṣamasthānānāṁ chedotpattā sūtram-

**77.** Ekāṁśakarāśīnāṁ dyādyā rūpottarā bhavanti harāḥ,
svāsannaparābhyastāssarve dalitāḥ phale rūpe.

---

The rule for finding out the denominators in the case of an uneven number (of fractions) :

**77.** When the sum of the (different fractional) quantities, having one for each of their numerators, is one, the (required) denominators are such as, beginning with *two*, go on (successively) rising in value by one, each (such denominator) being (further) multiplied by that (number) which is (immediately) next to it (in value) and then halved..

---

ಭಿನ್ನರಾಶಿಗಳ ಸಂಖ್ಯೆಯು ಅಸಮವಾಗಿದ್ದಾಗ ಛೇದಗಳನ್ನು ಕಂಡುಹಿಡಿಯಲು ನಿಯಮ :

೭೭. ಪ್ರತಿಯೊಂದರಲ್ಲೂ ೧ ನ್ನು ಅಂಶವನ್ನಾಗಿ ಉಳ್ಳ ಬೇರೆ ಬೇರೆ ಭಿನ್ನರಾಶಿಗಳ ಮೊತ್ತವು ೧ ಆದಾಗ, ಬೇಕಾದ ಛೇದಗಳು ೨ ರಿಂದ ಆರಂಭವಾಗಿ ಕ್ರಮೇಣ ೧ ರಂತೆ ಹೆಚ್ಚುತ್ತಾ ಹೋಗುತ್ತವೆ. ಪ್ರತಿಯೊಂದು ಇಂತಹ ಛೇದವನ್ನು, ಇದರ ಮುಂದಿನ ಛೇದದ ಬೆಲೆಯನ್ನುಳ್ಳ ಸಂಖ್ಯೆಯಿಂದ ಗುಣಿಸಲಾಗುತ್ತದೆ ಮತ್ತು (ನಂತರ) ಇದನ್ನು ಅರ್ಧಮಾಡಲಾಗುತ್ತದೆ.

---

**77.** Here note : $\frac{1}{2 \times 3 \times \frac{1}{2}} + \frac{1}{3 \times 4 \times \frac{1}{2}} + \frac{1}{4 \times 5 \times \frac{1}{2}} + \ldots\ldots + \frac{1}{(n-1)\, n \times \frac{1}{2}} + \frac{1}{n \times \frac{1}{2}}$

$$= 2\left\{\frac{1}{2 \times 3} + \frac{1}{3 \times 4} + \frac{1}{4 \times 5} + \ldots\ldots + \frac{1}{n(n-1)} + \frac{1}{n}\right\}$$

$$= 2\left\{\left(\tfrac{1}{2} - \tfrac{1}{3}\right) + \left(\tfrac{1}{3} - \tfrac{1}{4}\right) + \left(\tfrac{1}{4} - \tfrac{1}{5}\right) + \ldots + \left(\frac{1}{n-1} - \frac{1}{n}\right) + \frac{1}{n}\right\} = 2 \times \tfrac{1}{2} = 1.$$

೭೭. ಇಲ್ಲಿ ಗಮನಿಸಿ :

$$\frac{೦}{೨ \times ೩ \times \frac{೦}{೨}} + \frac{೦}{೩ \times ೪ \times \frac{೦}{೨}} + \frac{೦}{೪ \times ೫ \times \frac{೦}{೨}} + \cdots\cdots + \frac{೦}{(ನ೧) \times ನ \times \frac{೦}{೨}} + \frac{೦}{ನ \times \frac{೦}{೨}}$$

$$= ೨\left\{\frac{೦}{೨ \times ೩} + \frac{೦}{೩ \times ೪} + \frac{೦}{೪ \times ೫} + \cdots + \frac{೦}{ನ(ನ-೧)} + \frac{೦}{ನ}\right\}$$

$$= ೨\left\{\left(\frac{೦}{೨} - \frac{೦}{೩}\right) + \left(\frac{೦}{೩} - \frac{೦}{೪}\right) + \left(\frac{೦}{೪} + \frac{೦}{೫}\right) + \cdots + \left(\frac{೦}{ನ-೧} - \frac{೦}{ನ}\right) + \frac{೦}{ನ}\right\} = ೨ \times \frac{೦}{೨} = ೦$$



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



एकांशानामनेकांशानां चैकांशे फले छेदोत्पत्तौ सूत्रम् -
लब्धहरः प्रथमस्यच्छेदः सस्वांशकोऽयमपरस्य ।
प्राक् स्वपरेण हतोऽन्त्यः स्वांशेनैकांशके योगे ॥ ७८ ॥

---

Ekāṁśānāmanekāṁśānāṁ caikāṁśe phale chedotpattau sūtram-

**78.** Labdhaharaḥ prathamasyacchedaḥ sasvāṁśako'yamaparasya, prāk svapareṇa hato'ntyaḥ svāṁśenaikāṁśake yoge.

---

The rule for arriving at the (required) denominators (in the case of certain intended fractions), when their numerators are (each) one or other than one, and when the (fraction constituting their) sum has one for its numerator :

**78.** When the sum (of certain intended fractions) has one for its numerator, then (their required denominators are arrived at by taking) the denominator of the sum to be that of the first (quantity) and (by taking) this (denominator) combined with its own (related) numerator to be (the denominator) combined with its own (related) numerator to be (the denominator) of the next (quantity) and so on and then by multiplying (further each such denominator in order) by that which is (immediately) next to it, the last (denominator) being (however multiplied) by its own (related) numerator.

---

ಕೆಲವು ಉದ್ದೇಶಿತ ಭಿನ್ನರಾಶಿಗಳ ವಿಷಯದಲ್ಲಿ ಅವುಗಳ ಅಂಶಗಳು ಪ್ರತಿಯೊಂದರಲ್ಲೂ ೧ ಅಥವಾ ೧ ಕ್ಕಿಂತ ಬೇರೆಯಾಗಿದ್ದು ಮತ್ತು ಅವುಗಳ ಮೊತ್ತದ ಭಿನ್ನರಾಶಿಯ ಅಂಶವೂ ಕೂಡ ೧ ಆಗಿದ್ದಾಗ, (ಭಿನ್ನರಾಶಿಗಳ) ಬೇಕಾದ ಛೇದಗಳನ್ನು ಪಡೆಯಲು ನಿಯಮ :

**೭೮.** ಕೆಲವು ಉದ್ದೇಶಿತ ಭಿನ್ನರಾಶಿಗಳ ಮೊತ್ತದ ಅಂಶವು ೧ ಆಗಿದ್ದಾಗ, ಅವುಗಳ ಬೇಕಾದ ಛೇದಗಳನ್ನು ಪಡೆಯಲು ಮೊತ್ತದ ಛೇದವನ್ನು ಪ್ರಥಮರಾಶಿಯ ಛೇದವನ್ನಾಗಿ ತೆಗೆದುಕೊ ಮತ್ತು ಈ ಛೇದವನ್ನು ಅದರದೇ ಅಂಶದೊಂದಿಗೆ ಸೇರಿಸಿ, ಅದನ್ನು ಮುಂದಿನರಾಶಿಯ ಛೇದವನ್ನಾಗಿ ತೆಗೆದುಕೊ ಮತ್ತು ಇಂತಹ ಪ್ರತಿಯೊಂದು ಛೇದವನ್ನು ಕ್ರಮವಾಗಿ, ಅದರ ಮುಂದಿನ ಛೇದದಿಂದ ಗುಣಿಸುತ್ತಾ ಬಾ. ಅಂತಿಮ ಛೇದವನ್ನು ಅದರದೇ ಅಂಶದಿಂದ ಗುಣಿಸು.

---

**78.** Algebraically, if the sum is $\frac{1}{n}$ and $a$, $b$, $c$ and $d$ are given numerators, the fractions summed up are as below :

$$= \frac{a}{n(n+a)} + \frac{b}{(n+a)(n+a+b)} + \frac{c}{(n+a+b)(n+a+b+c)} + \frac{d}{d(n+a+b+c)}$$

$$= \frac{a(n+a+b)+bn}{n(n+a)(n+a+b)} + \frac{c+n+a+b}{(n+a+b)(n+a+b+c)}$$

$$= \frac{(n+a)(a+b)}{n(n+a)(n+a+b)} + \frac{1}{n+a+b} = \frac{a+b+n}{n(n+a+b)} = \frac{1}{n}$$

೭೮. ಬೀಜಗಣಿತರೂಪದಲ್ಲಿ, ಮೊತ್ತವು ೧/ನ ಆಗಿದ್ದಾಗ ಮತ್ತು ಅ, ಬ, ಸ, ದ ಗಳು ಕೊಟ್ಟಿರುವ ಅಂಶಗಳಾಗಿದ್ದಾಗ ಭಿನ್ನರಾಶಿಗಳನ್ನು ಕೆಳಗೆ ತಿಳಿಸಿದ ರೀತಿಯಲ್ಲಿ ಕೂಡಲಾಗುತ್ತದೆ. ಮೊತ್ತ

$$= \frac{ಅ}{ನ(ನ+ಅ)} + \frac{ಬ}{(ನ+ಅ)(ನ+ಅ+ಬ)} + \frac{ಸ}{(ನ+ಅ+ಬ)(ನ+ಅ+ಬ+ಸ)} + \frac{ದ}{ದ(ನ+ಅ+ಬ+ಸ)}$$

$$= \frac{ಅ(ನ+ಅ+ಬ)+ಬನ}{ನ(ನ+ಅ)(ನ+ಅ+ಬ)} + \frac{ಸ+ನ+ಅ+ಬ}{(ನ+ಅ+ಬ)(ನ+ಅ+ಬ+ಸ)}$$

$$= \frac{(ನ+ಅ)(ಅ+ಬ)}{ನ(ನ+ಅ)(ನ+ಅ+ಬ)} + \frac{೧}{ನ+ಅ+ಬ} = \frac{ಅ+ಬ+ನ}{ನ(ನ+ಅ+ಬ)} = \frac{೧}{ನ}$$



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

सप्तकनवकत्रितयत्रयोदशांशप्रयुक्तराशीनाम्। रूपं पादः षष्ठः संयोगाः के हराः कथय ॥ ७९ ॥
एकांशकानामेकांशेऽनेकांशे च फले छेदोत्पत्तौ सूत्रम् -
सेष्टो हारो भक्तः स्वांशेन निरग्रमादिमांशहरः ।
तद्युतिहाराप्तेष्टः शेषोऽस्मादित्थमितरेषाम् ॥ ८० ॥

---

## Atroddeśakaḥ

**79.** Saptakanavakatritayatrayodaśāṁśaprayutkarāśīnām, rūpaṁ pādaḥ ṣaṣṭaḥ saṁyogāḥ ke harāḥ kathaya.

Ekāṁśakānāmekāṁśe'nekāṁśe ca phale chedotpattau sūtram-

**80.** Seṣṭo hāro bhaktaḥ svāṁśena niragramādimāṁśaharaḥ, tadyutihārāpteṣṭaḥ, śeṣo'smāditthamitareṣām.

---

## *Examples in illustration thereof*

**79.** The sums (of certain intended fractions) having for their numerators 7, 9, 3 and 13 (respectively) are (firstly) 1, (secondly) $\frac{1}{4}$ and (thirdly) $\frac{1}{6}$. Say what the denominators (of those fractional quantities) are.

The rule for arriving at the denominators (of certain intended fractions) having one for their numerators, when the sum (of those fractions) has one or (any quantity) other than one for its numerator :

**80.** The denominator (of the given sum), when combined with an optionally chosen quantity and then divided by the numerator of that sum so as to leave no remainder, becomes the denominator related to the first numerator (in the intended series of fractions) and the (above) optionally chosen quantity, when divided by this (denominator of the first fraction) and by the denominator of the (given) sum, gives rise to (the sum of) the remaining (fractions in the series). From this (known sum of the remaining fractions in the series, the determination) of the other (denominators is to be carried out) in this very manner.

---

## ಉದಾಹರಣೆಗಳಿಂದ ವಿಶ್ಲೇಷಣ

**೭೯.** ೭, ೯, ೩ ಮತ್ತು ೧೩ ನ್ನು ಕ್ರಮವಾಗಿ ಅಂಶಗಳನ್ನಾಗಿ ಉಳ್ಳ ಕೆಲವು ಭಿನ್ನರಾಶಿಗಳ ಮೊತ್ತಗಳು (ಮೊದಲನೆಯದಾಗಿ) ೧, (ಎರಡನೆಯದಾಗಿ) $\frac{೧}{೪}$ ಮತ್ತು (ಮೂರನೆಯದಾಗಿ) $\frac{೧}{೬}$ ಆಗಿವೆ. ಆ ಭಿನ್ನಾತ್ಮಕ ಸಂಖ್ಯೆಗಳ ಛೇದಗಳು ಏನಾಗುತ್ತವೆ ಎಂದು ಹೇಳು.

ಅಂಶಗಳು ೧ ಆಗಿರುವ ಕೆಲವು ಉದ್ದೇಶಿತ ಭಿನ್ನರಾಶಿಗಳಲ್ಲಿ, ಅವುಗಳ ಮೊತ್ತದ ಅಂಶವು ೧ ಅಥವಾ ಬೇರೆ ಯಾವುದಾದರೂ ಸಂಖ್ಯೆಯಾಗಿದ್ದಾಗ, ಈ ಭಿನ್ನರಾಶಿಗಳ ಛೇದಗಳನ್ನು ಪಡೆಯಲು ನಿಯಮ :

೮೦. ಕೊಟ್ಟಿರುವ ಮೊತ್ತದ ಛೇದವನ್ನು, ಯಾವುದಾದರೂ ಆರಿಸಿದ ಸಂಖ್ಯೆಯೊಂದಿಗೆ ಸೇರಿಸುತ್ತೇವೆ. ನಂತರ ಇದನ್ನು ಉಳಿಯದಂತೆ ಈ ಮೊತ್ತದ ಅಂಶದಿಂದ ಭಾಗಿಸಿದರೆ, ನಮಗೆ ಬೇಕಾದ ಭಿನ್ನರಾಶಿಗಳ ಶ್ರೇಣಿಯ ಪ್ರಥಮ ಅಂಶದ ಸುಬಂಧದ ಛೇದವಾಗುತ್ತದೆ. ಮೇಲೆ ಆರಿಸಿದ ಸಂಖ್ಯೆಯನ್ನು ಪ್ರಥಮ ಭಿನ್ನರಾಶಿಯ ಛೇದದಿಂದ ಭಾಗಿಸಿದಾಗ ಮತ್ತು ಕೊಟ್ಟಿರುವ ಮೊತ್ತದ ಛೇದದಿಂದಲೂ ಸಹ ಭಾಗಿಸಿದಾಗ, ಅದು ಉದ್ದೇಶಿತ ಶ್ರೇಣಿಯ ಶೇಷ ಭಿನ್ನರಾಶಿಗಳ ಮೊತ್ತವನ್ನು ಉತ್ಪನ್ನಮಾಡುತ್ತದೆ. ಇಚ್ಛಿಸಿದ ಶ್ರೇಣಿಯ ಶೇಷ ಭಿನ್ನರಾಶಿಗಳ ಗೊತ್ತಿರುವ ಮೊತ್ತದಿಂದ ಇದೇ ರೀತಿಯಲ್ಲಿ ಇತರ ಛೇದಗಳನ್ನು ಕಂಡುಹಿಡಿಯಲಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**80.** Algebraically, if $\frac{a}{n}$ is the sum, the first fraction is $\frac{1}{\frac{n+p}{a}}$ and the sum of the remaining fractions is mentioned in the rule to be $\frac{p}{\frac{n+p}{a}n}$, where '$p$' is the optionally chosen quantity.

This $\frac{p}{\frac{n+p}{a}n}$ is obtained obviously by simplifying $\frac{a}{n} - \frac{1}{\frac{n+p}{a}}$.

We must here give such $a$ value to p that $n + p$ becomes exactly divisible by $a$.

೮೦. ಬೀಜಗಣಿತರೂಪದಲ್ಲಿ, $\frac{ಲ}{ನ}$ ವು ಮೊತ್ತವಾದಾಗ, ಮೊದಲನೆಯ ಭಿನ್ನರಾಶಿಯು $\frac{೧}{\frac{ನ+ಪ}{ಲ}}$ ಆದಾಗ, ನಿಯಮದಲ್ಲಿ ತಿಳಿಸಲಾಗಿರುವ, ಶೇಷ ಭಿನ್ನರಾಶಿಗಳ ಮೊತ್ತವು $\frac{ಪ}{\frac{ನ+ಪ}{ಲ}\text{x}ನ}$ ಆಗುತ್ತದೆ. ಇಲ್ಲಿ, ಪವು ಇಚ್ಛಾನುಸಾರವಾಗಿ ಆರಿಸಿದ ಸಂಖ್ಯೆಯಾಗಿದೆ. $\frac{ಲ}{ನ} - \frac{೧}{\frac{ನ+ಪ}{ಲ}}$ ವನ್ನು ಸರಳೀಕರಿಸುವುದರಿಂದ ಈ $\frac{ಪ}{\frac{ನ+ಪ}{ಲ}\text{x}ನ}$ ವನ್ನು ಪಡೆಯಲಾಗಿದೆ ಎಂಬುದು ಸ್ಪಷ್ಟವಾಗಿದೆ. ಇಲ್ಲಿ ನಾವು ನ +ಪ ವ ಲ ದಿಂದ ಶೇಷ ಉಳಿಯದಂತೆ ಭಾಗವಾಗುವ ರೀತಿಯಲ್ಲಿ, ಪ ದ ಬೆಲೆಯನ್ನು ಕೊಡಬೇಕಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

त्रयाणां रूपकांशानां राशीनां के हरा वद । फलं चतुर्थभागस्याच्चतुर्णां च त्रिसप्तमम् ॥ ८१ ॥
ऐकांशानामनेकांशानां चानेकांशे फले छेदोत्पत्तौ सूत्रम् -
इष्टहता दृष्टांशाः फलांशसदृशो यथा हि तद्योगः ।
निजगुणहृतफलहारस्तद्धारो भवंति निर्दिष्टः ॥ ८२ ॥

---

**Atroddeśakaḥ**

**81.** Trayāṇāṁ rūpakāṁśānāṁ rāśīnāṁ ke harā vada, phalaṁ caturthabhāgassyāccaturṇāṁ ca trisaptamam.

Ekāṁśānāmanekāṁśānāṁ cānekāṁśe phale chedotpattau sūtram-

**82.** Iṣṭahatā dṛṣṭāṁśāḥ phalāṁśasadṛśo yathā hi tadyogaḥ, nijaguṇahṛtaphalahārastadvāro bhavati nirdiṣṭaḥ.

---

***Examples in illustration thereof***

**81.** Of three (different) fractional quantities having 1 for each of their numerators, the sum is $\frac{1}{4}$ and of 4 (such other quantities, the sum is) $\frac{3}{7}$. Say what the denominators are.

The rule for arriving at the denominators (of certain intended fractions) having either one or (any number) other than one for their numerators, when the sum (of those fractions) has a numerator other than one :

**82.** When the known numerators are multiplied by (certain) chosen quantities, so that the sum of these (products) is equal to the numerator of the (given) sum (of the intended fractions), then, if the denominator of the sum (of the intended fractions) is divided by the multiplier (with which a given numerator has) itself (been multiplied as above), it gives rise to the required denominator in relation to that (numerator).

---

**ಉದಾಹರಣೆಗಳಿಂದ ವಿಶ್ಲೇಷಣ**

**೮೧.** ಪ್ರತಿಯೊಂದರಲ್ಲೂ ೧ ನ್ನು ಅಂಶವನ್ನಾಗಿ ಉಳ್ಳ ಮೂರು ಬೇರೆ ಬೇರೆ ಭಿನ್ನರಾಶಿಗಳ ಮೊತ್ತವು $\frac{೧}{೪}$ ಆಗಿದೆ ಮತ್ತು ೪ ಇಂತಹ ಇತರ ರಾಶಿಗಳ ಮೊತ್ತವು $\frac{೩}{೭}$ ಆಗಿದೆ. ಛೇದಗಳು ಏನಾಗುತ್ತವೆ ಎಂದು ಹೇಳು.

ಅಂಶಗಳನ್ನು ೧ ಅಥವಾ ಬೇರೆ ಯಾವುದಾದರೂ ಸಂಖ್ಯೆಯನ್ನಾಗಿ ಉಳ್ಳ ಕೆಲವು ಉದ್ದೇಶಿತ ಭಿನ್ನರಾಶಿಗಳ ಮೊತ್ತದ ಅಂಶವು ೧ ರಿಂದ ಬೇರೆಯಾಗಿದ್ದಾಗ ಅವುಗಳ (ಭಿನ್ನರಾಶಿಗಳ) ಛೇದಗಳನ್ನು ಪಡೆಯಲು ನಿಯಮ :

**೮೨.** ಗೊತ್ತಿರುವ ಅಂಶಗಳನ್ನು ಕೆಲವು ಆರಿಸಿದ ಸಂಖ್ಯೆಗಳಿಂದ ಗುಣಿಸಿದಾಗ ಈ ಗುಣಲಬ್ಧಗಳ ಮೊತ್ತವು ಉದ್ದೇಶಿತ ಭಿನ್ನಾರಾಶಿಗಳ ಕೊಟ್ಟಿರುವ ಮೊತ್ತದ ಅಂಶಕ್ಕೆ ಸಮವಾಗುತ್ತದೆ. ಉದ್ದೇಶಿತ ಭಿನ್ನರಾಶಿಗಳ ಕೊಟ್ಟಿರುವ ಮೊತ್ತದ ಛೇದವನ್ನು (ಯಾವುದರಿಂದ ಕೊಟ್ಟಿರುವ ಅಂಶವನ್ನು ಗುಣಿಸಲಾಗಿತ್ತೋ ಆ) ಗುಣಕದಿಂದ ಭಾಗಿಸಿದರೆ ಅದು ಆ ಅಂಶ ಸಂಬಂಧವಾದ ಬೇಕಾದ ಛೇದವನ್ನು ಉತ್ಪನ್ನಮಾಡುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

[1]एककांशेन राशीनां त्रयाणां के हरा वद । द्वादशाप्ता त्रयोविंशत्यशंका च युतिर्भवेत् ॥ ८३ ॥
त्रिसप्तकनवांशानां त्रयाणां के हरा वद । द्यूनपञ्चाशदाप्ता त्रिसप्तत्यंशा युतिर्भवेत् ॥ ८४ ॥

---

## Atroddeśakaḥ

**83.** Ekakāṁśena rāśīnāṁ trayāṇāṁ ke harā vada, dvādaśāptā trayoviṁśatyaśaṁkā ca yutirbhavet.

**84.** Trisaptakanavāṁśānāṁ trayāṇāṁ ke harā vada, dyūnapañcāśadāptā trisaptatyaṁśā yutirbhavet.

---

## *Examples in illustration thereof*

**83.** Say what the denominators are of three (different fractional) quantities each of which has 1 for its numerator, when the sum (of those quantities) is $\frac{23}{12}$.

**84.** Say what the denominators are of three (fractional quantities) which have 3, 7 and 9 (respectively) for their numerators, when the sum (of those quantities) is $\frac{73}{48}$.

---

## ಉದಾಹರಣೆಗಳಿಂದ ವಿಶ್ಲೇಷಣ

೮೩. ಮೂರು ಬೇರೆ ಬೇರೆ ಭಿನ್ನರಾಶಿಗಳಲ್ಲಿ ಪ್ರತಿಯೊಂದರಲ್ಲೂ ಅಂಶವು ೧ ಆಗಿರುತ್ತದೆ. ಇವುಗಳ ಮೊತ್ತವು $\frac{೨೩}{೧೨}$ ಆಗಿದ್ದಾಗ, ಈ ಭಿನ್ನರಾಶಿಗಳ ಛೇದಗಳು ಏನಾಗುತ್ತವೆ ಎಂದು ಹೇಳು.

೮೪. ಮೂರು ಭಿನ್ನರಾಶಿಗಳಲ್ಲಿ ಅಂಶಗಳು ಕ್ರಮವಾಗಿ ೩, ೭ ಮತ್ತು ೯ ಆಗಿವೆ. ಇವುಗಳ ಮೊತ್ತವು $\frac{೭೩}{೪೮}$ ಆಗಿದ್ದಾಗ, ಈ ಭಿನ್ನರಾಶಿಗಳ ಛೇದಗಳು ಏನಾಗುತ್ತವೆ ಎಂದು ಹೇಳು.

---

1. Stanzas 83 and 84 are omitted in B



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



एकांशकयो राश्योरेकांशे फले छेदोत्पत्तौ सूत्रम् -
वाञ्छाहतयुतिहारश्छेदः स व्येकवाञ्छयाप्तोऽन्यः ।
फलहारहारलब्धे स्वयोगगुणिते हरौ वा स्तः ॥ ८५ ॥

Ekāṁśakayo rāśyorekāṁśe phale chedotpattau sūtram-

**85.** Vāñchāhatayutihāraśchedaḥ sa vyekavāñchayāpto'nyaḥ,
phalahārahāralabdhe svayogaguṇite harau vā staḥ.

The rule for arriving at the denominators of two (fractional) quantities which have *one* for each of their numerators, when the sum (of those quantities) has *one* for its numerator :

**85.** The denominator of the (given) sum multiplied by any chosen number is the denominator (of one of the intended fractional quantities) and this (denominator) divided by the (previously) chosen (number) as lessened by one gives rise to the other (required denominator). Or, when in relation to the denominator of the (given) sum (any chosen) divisor (thereof) and the quotient (obtained therewith) are (each) multiplied by their sum, they give rise to the two (required) denominators.

ಎರಡು ಭಿನ್ನರಾಶಿಗಳಲ್ಲಿ ಅಂಶವು ಪ್ರತಿಯೊಂದರಲ್ಲೂ ೧ ಆಗಿದ್ದು ಮತ್ತು ಅವುಗಳ ಮೊತ್ತದ ಅಂಶವು ೧ ಆಗಿದ್ದಾಗ, ಈ ಭಿನ್ನರಾಶಿಗಳ ಛೇದಗಳನ್ನು ಪಡೆಯಲು ನಿಯಮ :

೮೫. ಕೊಟ್ಟಿರುವ ಮೊತ್ತದ ಛೇದವನ್ನು ಯಾವುದಾದರೂ ಆರಿಸಿದ ಸಂಖ್ಯೆಯಿಂದ ಗುಣಿಸಿದಾಗ, ಅದು ಉದ್ದೇಶಿತ ಭಿನ್ನರಾಶಿಗಳೊಂದರ ಛೇದವಾಗುತ್ತದೆ. ಈ ಛೇದವನ್ನು ಒಂದನ್ನು ಕಡಿಮೆಮಾಡಿದ (ಹಿಂದೆಯೇ) ಆರಿಸಿದ ಸಂಖ್ಯೆಯಿಂದ ಭಾಗಿಸಿದರೆ, ಅದು ಬೇಕಾದ ಮತ್ತೊಂದು ಛೇದವನ್ನು ಕೊಡುತ್ತದೆ ಅಥವಾ ಕೊಟ್ಟಿರುವ ಮೊತ್ತದ ಛೇದದ ಸಂಬಂಧದಲ್ಲಿ, ಯಾವುದಾದರೂ ಆರಿಸಿದ ಭಾಜಕ ಮತ್ತು ಪ್ರಾಪ್ತವಾದ ಭಾಗಲಬ್ಧ - ಇವುಗಳಲ್ಲಿ ಪ್ರತಿಯೊಂದನ್ನೂ ಅವುಗಳ ಮೊತ್ತದಿಂದ ಗುಣಿಸುವುದರಿಂದ ಎರಡು ಬೇಕಾದ ಛೇದಗಳು ಉತ್ಪನ್ನವಾಗುತ್ತವೆ.

**85.** Algerbraically, when $\frac{1}{n}$ is the sum of two intended fractions, the fractions according to this rule are $\frac{1}{p^n}$ and $\frac{1}{\frac{p^n}{p-1}}$ where $p$ is any chosen quantity. It will be seen at once that the sum of these two fractions is $\frac{1}{n}$.

Or, when the sum is $\frac{1}{ab}$, the fractions may be taken to be $\frac{1}{a(a+b)}$ and $\frac{1}{b(a+b)}$.

೮೫. ಬೀಜಗಣಿತರೂಪದಲ್ಲಿ, ಎರಡು ಉದ್ದೇಶಿತ ಭಿನ್ನರಾಶಿಗಳ ಮೊತ್ತವು $\frac{೧}{ನ}$ ಆದಾಗ, ಈ ಸೂತ್ರದ ಪ್ರಕಾರ ಭಿನ್ನರಾಶಿಗಳು $\frac{೧}{ಪನ}$ ಮತ್ತು $\frac{\frac{೧}{ಪನ}}{ಪ-೧}$ ಆಗಿರುತ್ತದೆ. ಇಲ್ಲಿ ಪ ವು ಯಾವುದೇ ಆರಿಸಿದ ಸಂಖ್ಯೆಯಾಗಿರುತ್ತದೆ. ಈ ಎರಡು ಭಿನ್ನರಾಶಿಗಳ ಮೊತ್ತವು $\frac{೧}{ನ}$ ಆಗುತ್ತದೆ ಎಂಬುದನ್ನು ಇಲ್ಲಿ ನಾವು ಶೀಘ್ರವಾಗಿ ನೋಡಬಹುದು.

ಅಥವಾ, ಮೊತ್ತವು $\frac{೧}{ಅಬ}$ ಆಗಿದ್ದಾಗ, ಭಿನ್ನರಾಶಿಗಳನ್ನು $\frac{೧}{ಅ\,(ಅ+ಬ)}$ ಮತ್ತು $\frac{೧}{ಬ\,(ಅ+ಬ)}$ ಎಂದು ತೆಗೆದುಕೊಳ್ಳಬಹುದಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

राश्योरेकांशयोश्छेदौ कौ भवेतां तयोर्युतिः ।
षडंशो दशभागो वा ब्रूहि त्वं गणितार्थवित् ॥८६॥
एकांशकयोरनेकांशयोश्च एकांशेऽनेकांशेऽपि फले छेदोत्पत्तौप्रथम सूत्रम् -
[1]इष्टगुणांशोऽन्यांशप्रयुतः शुद्धं हृतः फलांशेन। इष्टाप्तयुतिहरघ्नो हरः परस्य तु तदिष्टहतिः ॥८७॥

---

**Atroddeśakaḥ**

**86.** Rāśyorekāṁśayoścchedau kau bhavetāṁ tayoryutiḥ, ṣaḍaṁśo daśabhāgo vā brūhi tvaṁ gaṇitārthavit.

Ekāṁśakayoranekāṁśayośca ekāṁśe'nekāṁśe'pi phale chedotpattau-prathama sūtram-

**87.** Iṣṭaguṇāṁśo'nyāṁśaprayutaḥ śuddhaṁ hṛtaḥ phalāṁśena, iṣṭāptayutiharaghno haraḥ parasya tu tadiṣṭahatiḥ.

---

***Examples in illustration thereof***

**86.** Tell me, O you who know the principles of arithmetic, what the denominators of the two (intended fractional) quantities are when their sum is either $\frac{1}{6}$ or $\frac{1}{10}$.

The first rule for arriving at the denominators of two (intended fractions) which have either *one* or (any number) other than *one* for their numerators, when the sum (of those fractions) has either *one* or (any number) other than *one* for its numerator :

**87.** (Either) numerator multiplied by a chosen (number), then combined with the other numerator, then divided by the numerator of the (given) sum (of the intended fractions) so as to leave no remainder and then divided by the (above) chosen number and multiplied by the denominator of the (above) sum (of the intended fractions), gives rise to a (required) denominator. The denominator of the other (fraction), however, is this (denominator) multiplied by the (above) chosen (quantity).

---

**ಉದಾಹರಣೆಗಳಿಂದ ವಿಶ್ಲೇಷಣ**

**೮೬.** ಎಲೈ ಅಂಕಗಣಿತದ ಸಿದ್ಧಾಂತಗಳನ್ನು ತಿಳಿದಿರುವವನೇ, ಎರಡು ಉದ್ದೇಶಿತ ಭಿನ್ನರಾಶಿಗಳ ಮೊತ್ತವು $\frac{೧}{೬}$ ಅಥವಾ $\frac{೧}{೧೦}$ ಆಗಿದ್ದಾಗ, ಅವುಗಳ ಛೇದಗಳು ಏನಾಗುತ್ತವೆ ಎಂದು ಹೇಳು.

ಅಂಶಗಳನ್ನು ೧ ಅಥವಾ ಬೇರೆ ಯಾವುದಾದರೂ ಸಂಖ್ಯೆಯನ್ನಾಗಿ ಉಳ್ಳ ಎರಡು ಉದ್ದೇಶಿತ ಭಿನ್ನರಾಶಿಗಳ ಮೊತ್ತದ ಅಂಶವು ೧ ಅಥವಾ ಬೇರೆ ಯಾವುದಾದರೂ ಸಂಖ್ಯೆಯಾಗಿದ್ದಾಗ, ಆ ಭಿನ್ನರಾಶಿಗಳ ಛೇದಗಳನ್ನು ಪಡೆಯಲು ಮೊದಲನೆಯ ನಿಯಮ :

**೮೭.** ಯಾವುದಾದರೂ ಒಂದು ಅಂಶವನ್ನು ಆರಿಸಿದ ಸಂಖ್ಯೆಯಿಂದ ಗುಣಿಸಬೇಕು. ನಂತರ ಇನ್ನೊಂದು ಅಂಶಕ್ಕೆ ಜೊತೆಗೂಡಿಸಬೇಕು. ಆನಂತರ ಉದ್ದೇಶಿತ ಭಿನ್ನರಾಶಿಗಳ ಕೊಟ್ಟಿರುವ ಮೊತ್ತದ ಅಂಶದಿಂದ ಶೇಷ ಉಳಿಯದಂತೆ ಭಾಗಿಸಬೇಕು ಮತ್ತು ಮೇಲೆ ಆರಿಸಿದ ಸಂಖ್ಯೆಯಿಂದ ಭಾಗಿಸಬೇಕು. ಹಾಗೆಯೇ ಉದ್ದೇಶಿತ ಭಿನ್ನರಾಶಿಗಳ ಮೊತ್ತದ ಛೇದದಿಂದ ಗುಣಿಸಿದಾಗ, ಅದು ಬೇಕಾದ ಛೇದವನ್ನು ಉತ್ಪನ್ನಮಾಡುತ್ತದೆ. ಈ ಛೇದವನ್ನು ಮೇಲೆ ಆರಿಸಿದ ಸಂಖ್ಯೆಯಿಂದ ಗುಣಿಸುವುದರಿಂದ (ಇನ್ನೊಂದು ಭಿನ್ನರಾಶಿಯ ಛೇದವನ್ನು) ಪಡೆಯಬಹುದಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



1. P and B add as another reading. शुद्धं फलांशभक्तः स्वान्यांशयुतो निजेष्टगुणितांशः ।

**87.** Algebraically, if $\frac{m}{n}$ is the sum of two intended fractions with $a$ and $b$ as their numerator then the fractions are $\frac{a}{\frac{ap+b}{m} \times \frac{n}{p}}$ and $\frac{b}{\frac{ap+b}{m} \times \frac{n}{p} \times p}$ ,where $p$ is any number so chosen that $ap + b$ is divisible by $m$ . The sum of these fractions, it will be found, is $\frac{m}{n}$.

೮೭. ಬೀಜಗಣಿತರೂಪದಲ್ಲಿ, ಅ ಮತ್ತು ಬ ಗಳನ್ನು ಅಂಶಗಳನ್ನಾಗಿ ಉಳ್ಳ ಎರಡು ಇಚ್ಛಿಸಿದ ಭಿನ್ನರಾಶಿಗಳ ಮೊತ್ತವು $\frac{\text{ಮ}}{\text{ನ}}$ ಆದಾಗ, ಈ ಭಿನ್ನರಾಶಿಗಳು $\frac{\text{ಅ}}{\frac{\text{ಅಪ}+\text{ಬ}}{\text{ಮ}} \times \frac{\text{ನ}}{\text{ಪ}}}$ ಮತ್ತು $\frac{\text{ಬ}}{\frac{\text{ಅಪ}+\text{ಬ}}{\text{ಮ}} \times \frac{\text{ನ}}{\text{ಪ}} \times \text{ಪ}}$ ಆಗುತ್ತವೆ. ಇಲ್ಲಿ ಅಪ + ಬ ವು ಮ ದಿಂದ ಶೇಷ ಉಳಿಯದಂತೆ ಭಾಗವಾಗುವ ರೀತಿಯಲ್ಲಿ ಪ ದ ಬೆಲೆಯನ್ನು ಆರಿಸಲಾಗುತ್ತದೆ. ಈ ಭಿನ್ನರಾಶಿಗಳ ಮೊತ್ತವು $\frac{\text{ಮ}}{\text{ನ}}$ ಎಂದು ಕಂಡುಹಿಡಿಯಬಹುದಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

रूपांशकयो राश्योः कौ स्यातां हारकौ युतिः पादः ।
पञ्चांशो वा द्विहतस्सप्तकनवकांशयोश्च वद ॥ ८८ ॥

द्वितीयसूत्रम् -

फलहारताडितांशः परांशसहितः फलांशकेन हृतः ।
स्यादेकस्यच्छेदः फलहरगुणितोऽयमन्यस्य ॥ ८९ ॥

---

**Atroddeśakaḥ**

**88.** Rūpāṁśakayo rāśyoḥ kau syātāṁ hārakau yutiḥ pādaḥ, pañcāṁśo vā dvihatassaptakanavakāṁśayośca vada.

Dvitīyasūtram-

**89.** Phalahāratāḍitāṁśaḥ parāṁśasahitaḥ phalāṁśakena hṛtaḥ, syādekasyacchedaḥ phalaharaguṇito'yamanyasya.

---

***Examples in illustration thereof***

**88.** Say what the denominators are of two (intended fractional) quantities which have 1 for each of their numerators, when the sum (of those fractional quantities) is either $\frac{1}{4}$ or $\frac{2}{5}$; as also of two (other fractional quantities) which have 7 and 9 (respectively) for (their) numerators.

The second rule (is as follows) :

**89.** The numerator (of one of the intended fractions) as multiplied by the denominator of the sum (of the intended fractions), when combined with the other numerator and then divided by the numerator of the sum (of the intended fractions), gives rise to the denominator of one (of the fractions). This (denominator), when multiplied by the denominator of the sum (of the intended fractions), becomes the denominator of the other (fraction).

---

**ಉದಾಹರಣೆಗಳಿಂದ ವಿಶ್ಲೇಷಣ**

೮೮. ಪ್ರತಿಯೊಂದರಲ್ಲೂ ೧ ನ್ನು ಅಂಶವನ್ನಾಗಿ ಉಳ್ಳ ಎರಡು ಉದ್ದೇಶಿತ ಭಿನ್ನರಾಶಿಗಳ ಮೊತ್ತವು $\frac{೧}{೪}$ ಅಥವಾ $\frac{೨}{೫}$, ಹಾಗೆಯೇ ಇನ್ನಿತರ ಎರಡು ಭಿನ್ನರಾಶಿಗಳ ಅಂಶಗಳು ಕ್ರಮವಾಗಿ ೭ ಮತ್ತು ೯ ಆದಾಗ, ಆ ಭಿನ್ನರಾಶಿಗಳ ಛೇದಗಳು ಏನಾಗುತ್ತವೆ ಎಂದು ಹೇಳು.

ಎರಡನೆಯ ನಿಯಮವು ಮುಂದೆ ತಿಳಿಸಿದಂತಿದೆ :

೮೯. ಉದ್ದೇಶಿತ ಭಿನ್ನರಾಶಿಗಳೊಂದರ ಅಂಶವನ್ನು (ಉದ್ದೇಶಿತ ಭಿನ್ನರಾಶಿಗಳ) ಮೊತ್ತದ ಛೇದದಿಂದ ಗುಣಿಸಬೇಕು. ಇದನ್ನು ಇನ್ನೊಂದು ಅಂಶದ ಜೊತೆಗೆ ಸೇರಿಸಿದಾಗ ಮತ್ತು (ನಂತರ) ಇದನ್ನು (ಉದ್ದೇಶಿತ ಭಿನ್ನರಾಶಿಗಳ) ಮೊತ್ತದ ಅಂಶದಿಂದ ಭಾಗಿಸಿದರೆ, ಭಿನ್ನರಾಶಿಯೊಂದರ ಛೇದವನ್ನು ಕೊಡುತ್ತದೆ. ಈ ಛೇದವನ್ನು (ಉದ್ದೇಶಿತ ಭಿನ್ನರಾಶಿಗಳ) ಮೊತ್ತದ ಛೇದದಿಂದ ಗುಣಿಸಿದಾಗ, ಅದು ಇನ್ನೊಂದು (ಭಿನ್ನರಾಶಿಯ) ಛೇದವಾಗುತ್ತದೆ.

---

**89.** This rule is only a particular case of the rule given in stanza No. 87, as the denominator of the sum of the intended fractions is itself substituted in this rule for the quantity to be chosen in the previous rule.

೮೯. ಇದು ೮೭ ನೇ ಶ್ಲೋಕದಲ್ಲಿ ಕೊಟ್ಟಿರುವ ನಿಯಮದ ಒಂದು ವಿಶೇಷ ಪ್ರಕರಣವಾಗಿದೆ. ಏಕೆಂದರೆ ಈ ನಿಯಮದಲ್ಲಿ ಉದ್ದೇಶಿತ ಭಿನ್ನರಾಶಿಗಳ ಮೊತ್ತದ ಛೇದವನ್ನೇ ಹಿಂದಿನ ನಿಯಮದಲ್ಲಿನ ಆರಿಸಿದ ಸಂಖ್ಯೆಯನ್ನಾಗಿ ಆದೇಶಿಸಲಾಗಿದೆ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

राशिद्वयस्य कौ हारावेकांशस्यास्य संयुतिः । द्विसप्तांशो भवेद्ब्रूहि षडष्टांशस्य च प्रिय ॥ ९० ॥
अर्धत्र्यंशदशांशकपञ्चदशांशकयुतिर्भवेद्रूपम् । त्यक्ते पञ्चदशांशे रूप्रांशावत्र कौ योज्यौ ॥९१॥
दलपादपञ्चमांशकविंशानां भवति संयुती रूपम् ।
सप्तैकादशकांशौ कौ योज्याविह विना विंशम् ॥ ९२ ॥

---

**Atroddeśakaḥ**

**90.** Rāśidvayasya kau hārāvekāṁśasyāsya saṁyutiḥ, dvisaptāṁśo bhavedbrūhi ṣaḍaṣṭāṁśasya ca priya.

**91.** Ardhatryaṁśadaśāṁśakapañcadaśāṁśakayutirbhavedrūpam, tyakte pañcadaśāṁśe rūpāṁśāvatra kau yojyau.

**92.** Dalapādapañcamāṁśakaviṁśānāṁ bhavati saṁyutī rūpam, saptaikādaśakāṁśau kau yojyāviha vinā viṁśam.

---

***Examples in illustration thereof***

**90.** O friend, tell me what the denominators are of two (fractional) quantities which have 1 for each of their numerators, when the sum (of those intended fractions) is $\frac{2}{7}$; as also of (two other intended fractions) which have 6 and 8 (respectively) for (their) numerators.

**91.** The sum of $\frac{1}{2}$, $\frac{1}{3}$, $\frac{1}{10}$ and $\frac{1}{15}$ is 1. When $\frac{1}{15}$ is left out here, what two (fractions) having 1 (for each of their numerators) have to be added (instead so as to give the same total)?

**92.** The sum of $\frac{1}{2}$, $\frac{1}{4}$, $\frac{1}{5}$ and $\frac{1}{20}$ is 1. If $\frac{1}{20}$ is left out here, what two (fractions) having 7 and 11 for their numerators should be added (instead so as to give the same total)?

---

**ಉದಾಹರಣೆಗಳಿಂದ ವಿಶ್ಲೇಷಣ**

೯೦. ಎಲೈ ಸ್ನೇಹಿತನೇ, ಪ್ರತಿಯೊಂದರಲ್ಲೂ ಅಂಶಗಳನ್ನು ೧ ನ್ನಾಗಿ ಉಳ್ಳ ಎರಡು ಭಿನ್ನರಾಶಿಗಳ ಮೊತ್ತವು $\frac{೨}{೭}$ ಆದಾಗ, ಹಾಗೆಯೇ ಇನ್ನಿತರ ಎರಡು ಉದ್ದೇಶಿತ ಭಿನ್ನರಾಶಿಗಳ ಅಂಶಗಳು ಕ್ರಮವಾಗಿ ೬ ಮತ್ತು ೮ ಆದಾಗ, ಅವುಗಳ ಛೇದಗಳು ಏನಾಗುತ್ತವೆ ಎಂದು ಹೇಳು.

೯೧. $\frac{೧}{೨}$, $\frac{೧}{೩}$, $\frac{೧}{೧೦}$ ಮತ್ತು $\frac{೧}{೧೫}$ರ ಮೊತ್ತವು ೧ ಆಗುತ್ತದೆ. ಇಲ್ಲಿ $\frac{೧}{೧೫}$ ನ್ನು ತೆಗೆದು (ಅದರ ಬದಲು) ೧ ನ್ನು ಅಂಶಗಳನ್ನಾಗಿ ಉಳ್ಳ ಯಾವ ಎರಡು ಭಿನ್ನರಾಶಿಗಳನ್ನು ಸೇರಿಸಿದರೆ ಅದೇ ಮೊತ್ತವು (ಅಂದರೆ ೧) ಸಿಗುತ್ತದೆ?

೯೨. $\frac{೧}{೨}$, $\frac{೧}{೪}$, $\frac{೧}{೫}$ ಮತ್ತು $\frac{೧}{೨೦}$ ರ ಮೊತ್ತವು ೧ ಆಗಿದೆ. ಇಲ್ಲಿ $\frac{೧}{೨೦}$ ನ್ನು ತೆಗೆದರೆ (ಇದರ ಬದಲು) ೭ ಮತ್ತು ೧೧ ನ್ನು ಅಂಶಗಳನ್ನಾಗಿ ಉಳ್ಳ ಯಾವ ಎರಡು ಭಿನ್ನರಾಶಿಗಳನ್ನು ಸೇರಿಸಿದರೆ ಅದೇ ಮೊತ್ತವು ದೊರೆಯುತ್ತದೆ?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



युग्मान्याश्रित्यच्छेदोत्पत्तौ सूत्रम् -
युग्मप्रमितान् भागानेकैकांशान् प्रकल्प्य फलराशेः ।
तेभ्यः फलात्मकेभ्यो द्विराशिविधिना हरास्साध्याः ॥ ९३ ॥

**अत्रोद्देशकः**

त्रिकपञ्चकत्रयोदशसप्तनवैकादशांशराशीनाम् ।
के हाराः फलमेकं पञ्चांशो वा चतुर्गुणितः ॥ ९४ ॥

---

Yugmānyāśrityacchedotpattau sūtram-

**93.** Yugmapramitān bhāgānekaikāṁśān prakalpya phalarāśeḥ, tebhyaḥ phalātmakebhyo dvirāśividhinā harāssādhyāḥ.

**Atroddeśakaḥ**

**94.** Trikapañcakatrayodaśasaptanavaikādaśāṁśarāśīnām, ke hārāḥ phalamekaṁ pañcāṁśo vā caturguṇitaḥ.

---

The rule for arriving at the denominators (of a number of intended fractions) by taking (them) in pairs :

**93.** After splitting up the sum (of all the intended fractions) into as many parts having one for each of their numerators as there are (numbers of) pairs (among the given numerators), these (parts) are taken (severally) as the sums of the pairs; (and from them) the (required) denominators are to be found out in accordance with the rule relating to two (such component fractional quantities).

***Examples in illustration thereof***

**94.** What are the denominators of (those intended) fractions whose numerators are 3, 5, 13, 7, 9 and 11, when the sum of (those fractional) quantities is 1 or $\frac{4}{5}$?

---

ಕೆಲವು ಉದ್ದೇಶಿತ ಭಿನ್ನರಾಶಿಗಳನ್ನು ಜೋಡಿಗಳಲ್ಲಿ ತೆಗೆದುಕೊಂಡು, ಅವುಗಳ ಛೇದಗಳನ್ನು ಕಂಡುಹಿಡಿಯಲು ನಿಯಮ :

೯೩. ಎಲ್ಲ ಉದ್ದೇಶಿತ ಭಿನ್ನರಾಶಿಗಳ ಮೊತ್ತವನ್ನು, ಕೊಟ್ಟಿರುವ (ಪ್ರತಿಯೊಂದರಲ್ಲೂ ೧ ಆಗಿರುವಂತಹ) ಅಂಶಗಳ ಜೋಡಿಗಳ ಸಂಖ್ಯೆಗೆ ಸಮವಾಗಿ ವಿಭಾಗಿಸಿದ ನಂತರ, ಈ ಭಾಗಗಳನ್ನು ಜೋಡಿಗಳ ಮೊತ್ತಗಳನ್ನಾಗಿ ತೆಗೆದುಕೊಳ್ಳಲಾಗುತ್ತದೆ. ಇವುಗಳಿಂದ ಬೇಕಾದ ಛೇದಗಳನ್ನು, ಎರಡು ಇಂತಹ ಭಿನ್ನರಾಶಿಯ ಘಟಕಗಳಿಗೆ ಸಂಬಂಧಪಟ್ಟ ನಿಯಮದ ಪ್ರಕಾರ ಕಂಡುಹಿಡಿಯಲಾಗುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

೯೪. ೩, ೫, ೧೩, ೭, ೯ ಮತ್ತು ೧೧ ನ್ನು ಕ್ರಮವಾಗಿ ಅಂಶಗಳನ್ನಾಗಿ ಉಳ್ಳ ಈ ಉದ್ದೇಶಿತ ಭಿನ್ನರಾಶಿಗಳ ಮೊತ್ತವು ೧ ಅಥವಾ $\frac{೪}{೫}$ ಆದಾಗ, ಈ ಭಿನ್ನರಾಶಿಗಳ ಛೇದಗಳು ಏನಾಗುತ್ತವೆ?

---

**93.** The rules relating to two fractional quantities have been given in stanzas 85, 87 and 89.

೯೩. ಎರಡು ಭಿನ್ನರಾಶಿಗಳಿಗೆ ಸಂಬಂಧಪಟ್ಟ ನಿಯಮಗಳನ್ನು ೮೫, ೮೭ ಮತ್ತು ೮೯ ನೇ ಶ್ಲೋಕಗಳಲ್ಲಿ ಕೊಡಲಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



एकसूत्रोत्पन्नरूपांशहारैस्सूत्रान्तरोत्पन्नरूपांशहारैश्च फले रूपे छेदोत्पत्तौ नष्टभागानयने च सूत्रम् -

वाञ्छितसूत्रजहारा हरा भवन्त्यन्यसूत्रजहरघ्नाः ।
दृष्टांशैक्योनं फलमभीष्टनष्टांशमानं स्यात् ॥ ९५ ॥

**अत्रोद्देशकः**

परहतिदलनविधानात्रयोदश स्वपरसङ्गुणविधानात् ।
भागाश्चत्वारोऽतः कति भागास्स्युः फले रूपे ॥ ९६ ॥

---

Ekasūtrotpannarūpāṁśahāraissūtrāntarotpannarūpāṁśahāraiśca phale rūpe chedotpattau naṣṭabhāgānayane ca sūtram-

**95.** Vāñchitasūtrajahārā harā bhavantyanyasūtrajaharaghnāḥ,
dṛṣṭāṁśaikyonaṁ phalamabhiṣṭanaṣṭāṁśamānaṁ syāt.

**Atroddeśakaḥ**

**96.** Parahatidalanavidhānātrayodaśa svaparasaṅguṇavidhānāt,
bhāgāścatvāro'taḥ kati bhāgāssyuḥ phale rūpe.

---

The rule for arriving at (a number of) denominators, with the help of the denominators that have one as (their corresponding) numerators and are arrived at according to one of the (already given) rules (for finding out the denominators), as also with the help of the denominators that have one as (their corresponding) numerators and are arrived at according to any other of those rules, when the sum (of all the intended fractions) is one and also (the rule) for getting at (the value of) the part that is left out:

**95.** The denominators derived in accordance with (any) chosen rule, when (severally) multiplied by the denominators derived in accordance with another rule, become the (required) denominators. The sum (of all the fractions), diminished by the sum of the specified part (thereof), gives the measure of the optionally left out part.

***Examples in illustration thereof***

**96.** The number of fractions (obtained) by rule No. 77 is 13 and 4 (is obtained) by rule No. 78. When the sum (of the fractions arrived at with the help of these rules) is 1, how many are the (component) fractions?

---

೧ ನ್ನು ಅನುಗುಣವಾದ ಅಂಶವನ್ನಾಗಿ ಉಳ್ಳ ಛೇದಗಳ ಮತ್ತು ಈಗಾಗಲೇ ತಿಳಿಸಿರುವ ಛೇದಗಳನ್ನು ಕಂಡುಹಿಡಿಯಲು ನಿಯಮದ ಪ್ರಕಾರ ಪಡೆಯಲಾದ ಛೇದಗಳ ಸಹಾಯದಿಂದ ಹಾಗೂ ೧ ನ್ನು (ಅವುಗಳ ಅನುಗುಣವಾದ) ಅಂಶಗಳನ್ನಾಗಿ ಉಳ್ಳ ಮತ್ತು ಉದ್ದೇಶಿತ ಭಿನ್ನರಾಶಿಗಳ ಮೊತ್ತವು ೧ ಆಗಿದ್ದಾಗ, ಇನ್ನಿತರ ನಿಯಮಗಳ ಪ್ರಕಾರ ಪಡೆಯಲಾದ ಛೇದಗಳ ಸಹಾಯದಿಂದ, ಕೆಲವು ಛೇದಗಳನ್ನು ಮತ್ತು ನಷ್ಟವಾದ ಭಾಗದ ಬೆಲೆಯನ್ನು ಪಡೆಯಲು ನಿಯಮ :

**೯೫.** ಯಾವುದಾದರೂ ಆರಿಸಿದ ನಿಯಮದ ಪ್ರಕಾರ ಪಡೆದಂತಹ ಛೇದಗಳನ್ನು, ಬೇರೊಂದು ನಿಯಮದ ಪ್ರಕಾರ ಪಡೆದ ಛೇದಗಳಿಂದ ಗುಣಿಸಿದಾಗ ಅದು ಬೇಕಾಗಿರುವ ಛೇದಗಳಾಗುತ್ತವೆ. ಈ ಎಲ್ಲ ಭಿನ್ನರಾಶಿಗಳ ಮೊತ್ತದಿಂದ ವಿಶಿಷ್ಟಭಾಗದ ಮೊತ್ತವನ್ನು ಕಳೆದರೆ, ಅದು ಬಿಟ್ಟಿರುವ ನಷ್ಟ ಭಾಗದ ಬೆಲೆಯಾಗುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

**೯೬.** ನಿಯಮದ ಸಂಖ್ಯೆ ೭೭ ರಿಂದ ಪಡೆಯಲಾದ ಭಿನ್ನರಾಶಿಗಳ ಸಂಖ್ಯೆ ೧೩ ಮತ್ತು ೪ ನ್ನು, ನಿಯಮದ ಸಂಖ್ಯೆ ೭೮ ರಿಂದ ಪಡೆಯಲಾಗಿದೆ. ಈ ನಿಯಮಗಳ ಸಹಾಯದಿಂದ ಪಡೆಯಲಾದ ಭಿನ್ನರಾಶಿಗಳ ಮೊತ್ತವು ೧ ಆದಾಗ, ಭಿನ್ನರಾಶಿಗಳ ಎಷ್ಟು ಘಟಕಗಳು ಇರುತ್ತವೆ?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



प्राक्स्वपरहतविधानात्सप्तस्वासन्नपरगुणार्धविधानात् ।
भागास्त्रितयश्चातः कति भागास्युः फले रूपे ॥ ९७ ॥
रूपांशका द्विषट्कद्वादशविंशतिहरा विनष्टोऽत्र- ।
पञ्चमराशी रूपं सर्वसमासस्स राशिः कः ॥ ९८ ॥

**इति भागजातिः ।**

प्रभागभागभागजात्योस्सूत्रम् -
अंशानां सङ्गुणनं हाराणां च प्रभागजातौ स्यात् ।
गुणकारोंऽशकराशेर्हरिहरो भागभागजातिविधौ ॥ ९९ ॥

---

**97.** Prāksvaparahatavidhānātsaptasvāsannaparaguṇārdhavidhānāt, bhāgāstritayaścātaḥ kati bhāgāssyuḥ phale rūpe.

**98.** Rūpāṁśakā dviṣaṭkadvādaśaviṁśatiharā vinaṣṭo'tra, pañcamarāśi rūpaṁ sarvasamāsassa rāśiḥ kaḥ.

**Iti bhāgajātiḥ.**

Prabhāgabhāgabhāgajātyossūtram-

**99.** Aṁśānāṁ saṅguṇanaṁ hārāṇāṁ ca prabhāgajātau syāt, guṇakāroṁ'śakarāśerhāraharo bhāgabhāgajātividhau.

---

**97.** The number of fractions (obtained) by rule No. 78 is 7 and 3 (is obtained) by rule No. 77. When the sum (of the fractions arrived at) with the help of these (rules) is 1, how many are the (component) fractions?

**98.** Certain fractions are given with 1 for each of their numerators and 2, 6, 12 and 20 for their respective denominators. The (fifth fractional) quantity is here left out. The sum of all (these five) being 1, what is that (fractional) quantity (which is left out)?

**Here end Simple Fractions.**

**Compound and Complex Fractions**

The rule for (simplifying) compound and complex fractions :

**99.** In (simplifying) compound fractions, the multiplication of the numerators (among themselves) as well as of the denominators (among themselves) shall be (the operation). In the operation (of simplification) relating to complex fractions, the denominator of (the fraction forming) the denominator (becomes) the multiplier of the number forming the numerator (of the given fraction).

---

೯೭. ನಿಯಮದ ಸಂಖ್ಯೆ ೭೮ ರಿಂದ ಪಡೆಯಲಾದ ಭಿನ್ನರಾಶಿಗಳ ಸಂಖ್ಯೆ ೭ ಮತ್ತು ೩ ನ್ನು ನಿಯಮದ ಸಂಖ್ಯೆ ೭೭ ರಿಂದ ಪಡೆಯಲಾಗಿದೆ. ಈ ನಿಯಮಗಳ ಸಹಾಯದಿಂದ ಪಡೆಯಲಾದ ಭಿನ್ನರಾಶಿಗಳ ಮೊತ್ತವು ೧ ಆದಾಗ, ಭಿನ್ನರಾಶಿಗಳ ಎಷ್ಟು ಘಟಕಗಳು ಇರುತ್ತವೆ?

೯೮. ೧ ನ್ನು ಪ್ರತಿಯೊಂದರಲ್ಲೂ ಅಂಶವನ್ನಾಗಿ ಉಳ್ಳ ಮತ್ತು ೨, ೬, ೧೨ ಮತ್ತು ೨೦ ನ್ನು ಅವುಗಳ ಅನುಗುಣವಾದ ಛೇದಗಳನ್ನಾಗಿ ಉಳ್ಳ ಕೆಲವು ಭಿನ್ನರಾಶಿಗಳನ್ನು ಕೊಡಲಾಗಿದೆ. ಇಲ್ಲಿ ಐದನೆಯ ಭಿನ್ನರಾಶಿಯನ್ನು ಬಿಟ್ಟುಬಿಡಲಾಗಿದೆ. ಈ ಎಲ್ಲ ಐದು ಭಿನ್ನರಾಶಿಗಳ ಮೊತ್ತವು ೧ ಆಗಿದ್ದರೆ, ಬಿಟ್ಟುಂತಹ ಭಿನ್ನರಾಶಿ ಯಾವುದು?

*ಇಲ್ಲಿಗೆ ಸರಳ ಭಿನ್ನರಾಶಿಗಳು ಮುಕ್ತಾಯವಾದವು.*

**ಸಂಯುಕ್ತ ಮತ್ತು ಜಟಿಲ ಭಿನ್ನರಾಶಿಗಳು**

ಸಂಯುಕ್ತ ಮತ್ತು ಜಟಿಲ ಭಿನ್ನರಾಶಿಗಳನ್ನು ಸರಳೀಕರಿಸಲು ನಿಯಮ :

೯೯. ಸಂಯುಕ್ತ ಭಿನ್ನರಾಶಿಗಳನ್ನು ಸರಳೀಕರಿಸುವಲ್ಲಿ, ಅಂಶಗಳನ್ನು ಅವುಗಳಿಂದಲೇ ಗುಣಿಸುವುದು ಹಾಗೂ ಛೇದಗಳನ್ನು ಅವುಗಳಿಂದಲೇ ಗುಣಿಸುವುದಾಗುತ್ತದೆ. ಜಟಿಲ ಭಿನ್ನರಾಶಿಗಳನ್ನು ಸರಳೀಕರಿಸುವ ಕ್ರಿಯೆಯಲ್ಲಿ, ಭಿನ್ನರಾಶಿಯ ಛೇದದ ಛೇದವು, ಕೊಟ್ಟಿರುವ ಭಿನ್ನರಾಶಿಯ ಅಂಶದ ಅಪವರ್ತನವಾಗುತ್ತದೆ.

---

**99.** The complex fraction here dealt with is of the sort which has an integer for the numerator and a fraction for the denominator.

೯೯. ಇಲ್ಲಿ ಜಟಿಲ ಭಿನ್ನರಾಶಿಯ ಅಂಶವು ಪೂರ್ಣಾಂಕವಾಗಿರುತ್ತದೆ ಮತ್ತು ಛೇದವು ಭಿನ್ನರಾಶಿಯಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## प्रभागजातावुद्देशकः

रूपार्धं त्र्यंशार्धं त्र्यंशार्धार्धं दलार्धपञ्चांशम् । पञ्चांशार्धत्र्यंशं तृतीयभागार्धसप्तांशम् ॥१००॥
दलदलदलसप्तांशं त्र्यंशत्र्यंशकदलार्धदलभागम् ।
अर्धत्र्यंशत्र्यंशकपञ्चांशं पञ्चमांशदलम् ॥ १०१ ॥
क्रीतं पणस्य दत्त्वा कोकनदं कुन्दकेतकीकुमुदम् ।
जिनचरणं प्रार्चयितुं प्रक्षिप्यैतान् फलं ब्रूहि ॥ १०२ ॥
रूपार्धं त्र्यंशकार्धार्धं पादसप्तनवांशकम् । द्वित्रिभागद्विसप्तांशं द्विसप्तांशनवांशकम् ॥ १०३ ॥
दत्त्वा पणद्वयं कश्चिदानैषीन्नूतनं घृतम् । जिनालयस्य दीपार्थं शेषं किं कथय प्रिय ॥ १०४ ॥

---

## Prabhāgajātāvuddeśakaḥ

**100.** Rupārdhaṁ tryaṁśārdhaṁ tryaṁśardhārdhaṁ dalārdhapañcāṁśam, pañcāṁśārdhatryaṁśaṁ tṛtīyabhāgārdhasaptāṁśam.

**101.** Daladaladalasaptāśaṁ tryaṁśatryaṁśakadalārdhadalabhāgam, ardhatryaṁśatryaṁśakapañcāṁśaṁ pañcamāṁśadalam.

**102.** Krītaṁ paṇasya datvā kokanadaṁ kundaketakīkumudam, jinacaraṇaṁ prārcayituṁ prakṣipyaitān phalaṁ brūhi.

**103.** Rūpārdhaṁ tryaṁśakārdhārdhaṁ pādasaptanavāṁśakam, dvitribhāgadvisaptāṁśaṁ dvisaptāṁśanavāṁśakam.

**104.** Datvā paṇadvayaṁ kaścidānaiṣīnnūtanaṁ ghṛtam, jinālayasya dīpārthaṁ śeṣaṁ kiṁ kathaya priya.

---

## *Examples in compound fractions*

**100-102.** To offer in worship at the feet of Jina, lotuses, jasmines, *kētakīs* and lilies were purchased in return for the payment of $\frac{1}{2}$ of 1, $\frac{1}{2}$ of $\frac{1}{3}$, $\frac{1}{2}$ of $\frac{1}{2}$ of $\frac{1}{3}$, $\frac{1}{5}$ of $\frac{1}{2}$ of $\frac{1}{2}$, $\frac{1}{3}$ of $\frac{1}{2}$ of $\frac{1}{5}$, $\frac{1}{7}$ of $\frac{1}{2}$ of $\frac{1}{3}$, $\frac{1}{7}$ of $\frac{1}{2}$ of $\frac{1}{2}$ of $\frac{1}{2}$, $\frac{1}{2}$ of $\frac{1}{2}$ of $\frac{1}{2}$ of $\frac{1}{3}$ of $\frac{1}{3}$, $\frac{1}{5}$ of $\frac{1}{3}$ of $\frac{1}{3}$ of $\frac{1}{2}$ and $\frac{1}{2}$ of $\frac{1}{5}$ of a *paṇa*. Sum up these (paid quantities) and give out the result.

**103-104.** A certain person gave (to a vendor) $\frac{1}{2}$ of 1, $\frac{1}{2}$ of $\frac{1}{3}$ of $\frac{1}{2}$, $\frac{1}{4}$ of $\frac{7}{9}$, $\frac{2}{3}$ of $\frac{2}{7}$ and $\frac{2}{7}$ of $\frac{1}{9}$, (of a *paṇa*) out of the 2 *paṇas* (in his possession) and brought fresh ghee for (lighting) the lamps in a Jina temple. O friend, give out what the remaining balance is.

---

## ಸಂಯುಕ್ತ ಭಿನ್ನರಾಶಿಗಳಿಗೆ ಉದಾಹರಣೆಗಳು

೧೦೦ - ೧೦೨. ಜಿನನ ಪಾದಗಳ ಪೂಜೆಗೆ ಅರ್ಪಿಸಲೆಂದು ಮುಂದೆ ತಿಳಿಸಿರುವ *ಪಣ*ದ ಮೌಲ್ಯಕ್ಕೆ ಕಮಲಗಳು, ಮಲ್ಲಿಗೆ ಹೂವುಗಳು, ಕೇತಕೀ ಪುಷ್ಪಗಳು ಮತ್ತು ಕುಮುದ ಪುಷ್ಪಗಳನ್ನು ಖರೀದಿಸಲಾಯಿತು.

೧ ರ $\frac{೧}{೨}$, $\frac{೧}{೩}$ ರ $\frac{೧}{೨}$, $\frac{೧}{೩}$ ರ $\frac{೧}{೨}$ ರ $\frac{೧}{೨}$, $\frac{೧}{೨}$ ರ $\frac{೧}{೨}$ ರ $\frac{೧}{೫}$, $\frac{೧}{೫}$ ರ $\frac{೧}{೨}$ ರ $\frac{೧}{೩}$, $\frac{೧}{೩}$ ರ $\frac{೧}{೨}$ ರ $\frac{೧}{೨}$ ರ $\frac{೧}{೨}$, $\frac{೧}{೨}$ ರ $\frac{೧}{೨}$ ರ $\frac{೧}{೨}$ ರ $\frac{೧}{೨}$, $\frac{೧}{೩}$ ರ $\frac{೧}{೨}$ ರ $\frac{೧}{೨}$ ರ $\frac{೧}{೨}$, $\frac{೧}{೩}$ ರ $\frac{೧}{೨}$ ರ $\frac{೧}{೨}$ ರ $\frac{೧}{೫}$ ಮತ್ತು $\frac{೧}{೫}$ ರ $\frac{೧}{೨}$. ಹೀಗೆ ಕೊಟ್ಟಂತಹ ಒಂದು *ಪಣ*ದ ಭಾಗಗಳನ್ನು ಕೂಡಿಸು ಮತ್ತು ಬರುವ ಫಲವನ್ನು ತಿಳಿಸು.

೧೦೩-೧೦೪. ಒಬ್ಬ ಮನುಷ್ಯನು ಓರ್ವ ಮಾರಾಟಗಾರನಿಗೆ ತನ್ನಲ್ಲಿದ್ದ ಎರಡು *ಪಣ*ಗಳಲ್ಲಿ ಕ್ರಮವಾಗಿ ಒಂದು *ಪಣ*ದ ೧ ರ $\frac{೧}{೨}$, $\frac{೧}{೩}$ ರ $\frac{೧}{೨}$ ರ $\frac{೧}{೨}$, $\frac{೨}{೯}$ ರ $\frac{೧}{೪}$, $\frac{೨}{೭}$ ರ $\frac{೨}{೩}$ ಮತ್ತು $\frac{೧}{೯}$ ರ $\frac{೨}{೭}$ ಭಾಗಗಳನ್ನು ಕೊಟ್ಟನು ಮತ್ತು ಜಿನಮಂದಿರದಲ್ಲಿ ದೀಪಗಳನ್ನು ಹತ್ತಿಸುವ ಸಲುವಾಗಿ, ಹೊಸ ತುಪ್ಪವನ್ನು ಖರೀದಿಸಿ ತಂದನು. ಎಲೈ ಮಿತ್ರನೇ, *ಪಣ*ದ ಎಷ್ಟು ಭಾಗ ಅವನಲ್ಲಿ ಉಳಿಯಿತು ಎಂದು ತಿಳಿಸು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



त्र्यंशाद्द्विपञ्चमांशस्तृतीयभागात् त्रयोदशषडंशः ।
पञ्चाष्टादशभागात् त्रयोदशांशोऽष्टमान्नवमः ॥ १०५ ॥
नवमाच्चतुस्त्रयोदशभागः पञ्चांशकात् त्रिपादार्धम् ।
सङ्क्षिप्याचक्ष्वैतान् प्रभागजातौ श्रमोऽस्ति यदि ॥ १०६ ॥
अत्रैकाव्यक्तानयनसूत्रम् -
रूपं न्यस्याव्यक्ते प्राग्विधिना यत्फलं भवेत्तेन ।
भक्तं परिदृष्टफलं प्रभागजातौ तदज्ञातम् ॥ १०७ ॥

---

**105.** Tryaṁśāddvipañcamāṁśastṛtīyabhāgāt trayodaśaṣaḍaṁśaḥ, pañcāṣṭādaśabhāgāt trayodaśāṁśo'ṣṭamānnavamaḥ.

**106.** Navamāccatustrayodaśabhāgaḥ pañcāṁśakāt tripādārdham, saṅkṣipyācakṣvaitān prabhāgajātau śramo'sti yadi.

Atraikāvyaktānayanasūtram-

**107.** Rūpaṁ nyasyāvyakte prāgvidhinā yatphalaṁ bhavettena, bhaktaṁ paridṛṣṭaphalaṁ prabhāgajātau tadajñātam.

---

**105-106.** If you have taken pains in connection with compound fractions, give out (the resulting sum) after adding these (following fractions) : $\frac{2}{5}$ of $\frac{1}{3}$, $\frac{13}{6}$ of $\frac{1}{3}$, $\frac{1}{13}$ of $\frac{5}{18}$, $\frac{1}{9}$ of $\frac{1}{8}$, $\frac{4}{13}$ of $\frac{1}{9}$ and $\frac{1}{2}$ of $\frac{3}{4}$ of $\frac{1}{5}$.

The rule for finding out the one unknown (element common to each of a set of compound fractions whose sum is given) :

**107.** The given sum, when divided by whatever happens to be the sum arrived at in accordance with the rule (mentioned) before by putting down one in the place of the unknown (element in the compound fractions), gives rise to the (required) unknown (element) in (the summing up of) compound fractions.

---

೧೦೫-೧೦೬. ಸಂಯುಕ್ತ ಭಿನ್ನರಾಶಿಗಳ ಸಂಬಂಧದಲ್ಲಿ, ಒಂದು ವೇಳೆ ಶ್ರಮವಹಿಸಿದ್ದೇ ಆದರೆ ಮುಂದೆ ತಿಳಿಸಿರುವ ಭಿನ್ನರಾಶಿಗಳನ್ನು ಕೂಡಿದ ನಂತರ ಬರುವ ಮೊತ್ತವನ್ನು ತಿಳಿಸು :

$\frac{೧}{೩}$ ರ $\frac{೨}{೫}$ , $\frac{೧}{೩}$ ರ $\frac{೧೩}{೬}$ , $\frac{೫}{೧೮}$ ರ $\frac{೧}{೧೩}$ , $\frac{೧}{೯}$ ರ $\frac{೧}{೮}$ , $\frac{೧}{೯}$ ರ $\frac{೪}{೧೩}$ ಮತ್ತು $\frac{೧}{೫}$ ರ $\frac{೩}{೪}$ ರ $\frac{೧}{೫}$ .

ಮೊತ್ತವನ್ನು ಕೊಟ್ಟಿರುವ ಸಂಯುಕ್ತ ಭಿನ್ನರಾಶಿಗಳ ಸಮೂಹದಲ್ಲಿ, ಪ್ರತಿಯೊಂದರಲ್ಲೂ ಸಾಮಾನ್ಯವಾಗಿರುವ ಒಂದು ಅಜ್ಞಾತ (ಧಾತು)ವನ್ನು ಕಂಡುಹಿಡಿಯಲು ನಿಯಮ :

೧೦೭. ಕೊಟ್ಟಿರುವ ಮೊತ್ತವನ್ನು ಸಂಯುಕ್ತ ಭಿನ್ನರಾಶಿಗಳಲ್ಲಿ ಅಜ್ಞಾತ ವಸ್ತುವಿನ ಸ್ಥಾನದಲ್ಲಿ ಒಂದನ್ನು ಇರಿಸಿ, ಮೇಲೆ ತಿಳಿಸಿರುವ ನಿಯಮದ ಪ್ರಕಾರ ಬಂದ ಮೊತ್ತದಿಂದ ಭಾಗಿಸಿದರೆ, ಅದು ಸಂಯುಕ್ತ ಭಿನ್ನರಾಶಿಗಳ ಮೊತ್ತದ ಕ್ರಿಯೆಯಲ್ಲಿ ಬೇಕಾದ ಅಜ್ಞಾತ ವಸ್ತುವನ್ನು ಉಂಟುಮಾಡುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

राशेः कुतश्चिदष्टांशस्त्रयंशपादोऽर्धपञ्चमः। षष्ठत्रिपादपञ्चांशः किमव्यक्तं फलं दलम् ॥ १०८॥

अनेकाव्यक्तानयनसूत्रम् -

कृत्वाज्ञातानिष्टान् फलसदृशी तद्युतिर्यथा भवति ।
विभजेत पृथग्व्यक्तैरविदितराशिप्रमाणानि ॥ १०९ ॥

---

## Atroddeśakaḥ

**108.** Rāśeḥ kutaścidaṣṭāṁśastryaṁśapādo'rdhapañcamaḥ, ṣaṣṭatripādapañcāṁśaḥ kimavyaktaṁ phalaṁ dalam.

Anekāvyaktānayanasūtram-

**109.** Kṛtvājñātāniṣṭān phalasadṛśī tadyutiryathā bhavati, vibhajeta pṛthagvyaktairaviditarāśipramāṇāni.

---

## *An example in illustration thereof*

**108.** The sum of $\frac{1}{8}$, $\frac{1}{4}$ of $\frac{1}{3}$, $\frac{1}{5}$ of $\frac{1}{2}$, $\frac{1}{5}$ of $\frac{3}{4}$ of $\frac{1}{6}$, of a certain quantity is $\frac{1}{2}$. What is this unknown (quantity)?

The rule for finding out more than one unknown (element, one such occurring in each of a set of compound fractions whose sum is given):

**109.** Make the unknown (values of the various partially known compound fractions) to be (equivalent to) such optionally chosen quantities, as, (being equal in number to the given compound fractions), have their sum equal to the given sum (of the partially given compound fractions): then, divide these (optionally chosen) values of the unknown (compound-fractional) quantities by (their) known (elements) respectively.

---

## ಉದಾಹರಣೆಯಿಂದ ವಿಶ್ಲೇಷಣ

೧೦೮. ಒಂದು ಸಂಖ್ಯೆಯ $\frac{೧}{೮}$, $\frac{೧}{೪}$ ರ $\frac{೧}{೩}$, $\frac{೧}{೫}$ ರ $\frac{೧}{೨}$ ಮತ್ತು $\frac{೧}{೫}$ ರ $\frac{೩}{೪}$ ರ $\frac{೧}{೬}$(ಭಾಗಗಳ) ಮೊತ್ತವು $\frac{೧}{೨}$ ಆಗಿದೆ. ಅಜ್ಞಾತ ಸಂಖ್ಯೆಯೇನು?

ಕೊಟ್ಟಿರುವ ಮೊತ್ತಗಳನ್ನುಳ್ಳ ಸಂಯುಕ್ತ ಭಿನ್ನರಾಶಿಗಳ ಪ್ರತಿಯೊಂದು ಸಮೂಹದಲ್ಲಿ ಒಂದಕ್ಕಿಂತ ಹೆಚ್ಚು ಅಜ್ಞಾತ ವಸ್ತುಗಳನ್ನು ಕಂಡುಹಿಡಿಯಲು ನಿಯಮ :

೧೦೯. ಆಂಶಿಕರೂಪದಿಂದ ತಿಳಿದಿರುವ ವಿಭಿನ್ನ ಸಂಯುಕ್ತ ಭಿನ್ನರಾಶಿಗಳ ಅಜ್ಞಾತ ಬೆಲೆಯನ್ನು, ಕೊಟ್ಟಿರುವ ಸಂಯುಕ್ತ ಭಿನ್ನರಾಶಿಗಳ ಸಂಖ್ಯೆಗೆ ಸಮವಾಗಿರುವ ಹಾಗೂ ಆಂಶಿಕರೂಪದ ಸಂಯುಕ್ತ ಭಿನ್ನರಾಶಿಗಳ ಕೊಟ್ಟಿರುವ ಮೊತ್ತಕ್ಕೆ ಸಮವಾದ ಮೊತ್ತವನ್ನುಳ್ಳ ಯಾವುದಾದರೂ ಆರಿಸಿದ ಸಂಖ್ಯೆಗಳಿಗೆ ಸಮಾನವಾಗಿ ಮಾಡು. ನಂತರ ಈ ಅಜ್ಞಾತ ಸಂಯುಕ್ತ ಭಿನ್ನಾತ್ಮಕ ಸಂಖ್ಯೆಗಳ ಬೆಲೆಗಳನ್ನು, ಅವುಗಳ ಗೊತ್ತಿರುವ ಧಾತುಗಳಿಂದ ಕ್ರಮವಾಗಿ ಭಾಗಿಸು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**109.** This rule will be clear from the following working of the problem given in stanza No. 110 :

Splitting up $\frac{1}{2}$ , the sum of the intended fractions, into 3 fractions according to rule No. 78, we get $\frac{1}{6}$, $\frac{1}{12}$ and $\frac{1}{4}$ . Making these the values of the three partially known compound fractions, we divide them in order by $\frac{1}{2}$, $\frac{3}{5}$ of $\frac{1}{8}$ and $\frac{1}{2}$ of $\frac{2}{3}$ respectively. The fractions thus obtained, viz., $\frac{1}{3}$, $\frac{10}{9}$ and $\frac{3}{4}$ are the quantities to be found out.

೧೦೯. ಮುಂದೆ ತಿಳಿಸಿರುವ ೧೧೦ ನೇ ಶ್ಲೋಕದಲ್ಲಿ ಕೊಟ್ಟಿರುವ ಲೆಕ್ಕವನ್ನು ಬಿಡಿಸುವುದರಿಂದ ಈ ನಿಯಮವು ಸ್ಪಷ್ಟವಾಗುತ್ತದೆ. ಇಚ್ಛಿಸಿದ ಭಿನ್ನರಾಶಿಗಳ ಮೊತ್ತದ $\frac{೧}{೨}$ ಭಾಗವನ್ನು ನಿಯಮದ ಸಂಖ್ಯೆ ೭೮ ರ ಪ್ರಕಾರ ೩ ಭಿನ್ನರಾಶಿಗಳನ್ನಾಗಿ ವಿಭಜಿಸುವುದರಿಂದ ನಮಗೆ $\frac{೧}{೬}$, $\frac{೧}{೧೨}$ ಮತ್ತು $\frac{೧}{೪}$ ದೊರೆಯುತ್ತವೆ. ಇವುಗಳನ್ನು ಈ ಮೂರು ಆಂಶಿಕ ರೂಪದ ಗೊತ್ತಿರುವ ಸಂಯುಕ್ತ ಭಿನ್ನರಾಶಿಗಳ ಬೆಲೆಗಳನ್ನಾಗಿ ಮಾಡಿದ ನಂತರ, ಕ್ರಮವಾಗಿ $\frac{೧}{೨}$ , $\frac{೧}{೮}$ ರ $\frac{೫}{೫}$ ಮತ್ತು $\frac{೨}{೩}$ ರ $\frac{೧}{೨}$ ರಿಂದ ಭಾಗಿಸುತ್ತೇವೆ. ಈ ರೀತಿ ಬರುವ ಭಿನ್ನರಾಶಿಗಳು ಅಂದರೆ $\frac{೧}{೩}$, $\frac{೧೦}{೯}$ ಮತ್ತು $\frac{೩}{೪}$ ಇವುಗಳೇ ಕಂಡುಹಿಡಿಯಬೇಕಾಗಿದ್ದ ಸಂಖ್ಯೆಗಳು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

राशेः कुतश्चिदर्धं कुतश्चिदष्टांशकत्रिपञ्चांशः ।
कस्माद्द्वित्र्यंशार्धं फलमर्धं के स्युरज्ञाताः ॥ ११० ॥

**भागभागजातावुद्देशकः**

षट्सप्तभागभागस्त्र्यष्टांशांशश्चतुर्नवांशांशः। त्रिचतुर्थभागभागः किं फलमेतद्युतौ ब्रूहि ॥ १११ ॥
द्वित्र्यंशाप्तं रूपं त्रिपादभक्तं द्विकं द्वयं चापि ।
द्वित्र्यंशोद्धृतमेकं नवकात्संशोध्य वद शेषम् ॥ ११२ ॥

**इति प्रभागभागभागजाती**

---

**Atroddeśakaḥ**

**110.** Rāśeḥ kutaścidardhaṁ kutaścidaṣṭāṁśakatripañcāṁśaḥ,
kasmāddvitryaṁśārdhaṁ phalamardhaṁ ke syurajñātāḥ.

**Bhāgabhāgajātāvudde'śakaḥ**

**111.** Ṣaṭsaptabhāgabhāgastryaṣṭāṁśāṁśaścaturnavāṁśāṁśaḥ,
tricaturthabhāgabhāgaḥ kiṁ phalametadyutau brūhi.

**112.** Dvitryaṁśāptaṁ rūpaṁ tripādabhaktaṁ dvikaṁ dvayaṁ cāpi,
dvitryaṁśodghṛtamekaṁ navakātsaṁśodhya vada śeṣam.

**Iti prabhāgabhāgabhāgajātiḥ.**

---

***An Example in illustration thereof***

**110.** (The following partially known compound fractions, viz.,) $\frac{1}{2}$ of a certain quantity, $\frac{3}{5}$ of $\frac{1}{8}$ of another (quantity), and $\frac{1}{2}$ of $\frac{2}{3}$ of (yet) another (quantity give rise to) $\frac{1}{2}$ as (their) sum. What are the unknown (elements here in respect of these compound fractions)?

***Examples in complex fractions***

**111.** (Given) $\frac{1}{\frac{6}{7}}$, $\frac{1}{\frac{3}{8}}$, $\frac{1}{\frac{4}{9}}$ and $\frac{1}{\frac{3}{4}}$; say what the sum is when these are added.

**112.** After subtracting $\frac{1}{\frac{2}{3}}$, $\frac{2}{\frac{3}{4}}$ and also $\frac{2}{\frac{3}{4}}$ and $\frac{1}{\frac{2}{3}}$, from 9, give out the remainder.

**Thus end Compound and Complex Fractions.**

---

**ಉದಾಹರಣೆಯಿಂದ ವಿಶ್ಲೇಷಣ**

೧೧೦. (ಮುಂದೆ ತಿಳಿಸಿರುವ ಆಂಶಿಕರೂಪದಿಂದ ಗೊತ್ತಿರುವ ಸಂಯುಕ್ತ ಭಿನ್ನರಾಶಿಗಳು, ಅಂದರೆ), ಒಂದು ಸಂಖ್ಯೆಯ $\frac{೧}{೨}$, ಇನ್ನೊಂದು ಸಂಖ್ಯೆಯ $\frac{೧}{೮}$ ರ $\frac{೩}{೫}$ ಮತ್ತು ಮತ್ತಿನ್ನೊಂದು ಸಂಖ್ಯೆಯ $\frac{೨}{೩}$ ರ $\frac{೧}{೨}$ ಇವುಗಳ ಮೊತ್ತವು $\frac{೧}{೨}$ ಆಗುತ್ತದೆ. ಈ ಸಂಯುಕ್ತ ಭಿನ್ನರಾಶಿಗಳ ಸಂಬಂಧದಲ್ಲಿ ಅಜ್ಞಾತ (ಧಾತುಗಳು) ಏನಾಗುತ್ತವೆ?

**ಜಟಿಲ ಭಿನ್ನರಾಶಿಗಳ ಮೇಲಿನ ಉದಾಹರಣೆಗಳು**

೧೧೧. $\frac{೧}{೬/೭}$, $\frac{೧}{೩/೮}$, $\frac{೧}{೪/೯}$ ಮತ್ತು $\frac{೧}{೩/೪}$ ಇವುಗಳನ್ನು ಕೊಟ್ಟಿದೆ. ಇವುಗಳನ್ನು ಕೂಡಿದಾಗ ಬರುವ ಮೊತ್ತವೇನೆಂದು ಹೇಳು.

೧೧೨. ೯ ರಿಂದ $\frac{೧}{೨/೩}$, $\frac{೨}{೩/೪}$ ಮತ್ತು $\frac{೧}{೩/೪}$ ಹಾಗೂ $\frac{೧}{೨/೩}$ ಗಳನ್ನು ಕಳೆದ ನಂತರ ಬರುವ ಶೇಷವನ್ನು ತಿಳಿಸು.

**ಈ ರೀತಿ ಸಂಯುಕ್ತ ಮತ್ತು ಜಟಿಲ ಭಿನ್ನರಾಶಿಗಳು ಮುಕ್ತಾಯವಾದವು.**



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



भागानुबन्धजातौ सूत्रम् -
हरहतरूपेष्वंशान् सङ्क्षिप भागानुबन्धजातिविधौ ।
[1]गुणयाग्रांशच्छेदावंशयुतच्छेदहाराभ्याम् ॥ ११३ ॥

---

Bhāgānubandhajātau sūtram-

**113.** Harahatarūpeṣvaṁśān saṅkṣipa bhāgānubandhajātividhau,
guṇayāgrāṁśacchedāvaṁśayutacchedahārābhyām.

---

## *Bhāgānubandha Fractions*

The rule in respect of the (simplification of) *Bhāgānubandha* or associated fractions :

**113.** In the operation concerning (the simplification of) the *Bhāgānubandha* class (of fractions), add the numerator to the (product of the associated) whole number multiplied by the denominator. (When, however, the associated quantity is not integral, but is fractional), multiply (respectively) the numerator and denominator of the first (fraction, to which the other fraction is attached) by the denominator combined with the numerator and by the denominator (itself, of this other fraction).

---

## ಭಾಗಾನುಬಂಧ ಭಿನ್ನರಾಶಿಗಳು

*ಭಾಗಾನುಬಂಧ* (ಅಥವಾ ಸಂವಲಿತ) ಭಿನ್ನರಾಶಿಗಳನ್ನು ಸರಳೀಕರಿಸುವ ಸಂಬಂಧದ ನಿಯಮ :

೧೧೩. *ಭಾಗಾನುಬಂಧ*ಜಾತಿಯ ಭಿನ್ನರಾಶಿಗಳನ್ನು ಸರಳೀಕರಿಸುವ ಕ್ರಿಯೆಯ ಸಂಬಂಧದಲ್ಲಿ ಅಂಶವನ್ನು ಅದರ ಜೊತೆಯಾದ (ಸಂವಲಿತ ಪೂರ್ಣಾಂಕ) ಪೂರ್ಣಾಂಕ ಮತ್ತು ಛೇದಗಳ ಗುಣಲಬ್ಧದ ಜೊತೆಗೆ ಸೇರಿಸಲಾಗುತ್ತದೆ. ಒಂದು ವೇಳೆ ಸಂಬಂಧಿಸಿದ ಈ ಸಂಖ್ಯೆಯು ಪೂರ್ಣಾಂಕವಾಗಿರದೆ ಭಿನ್ನಾತ್ಮಕವಾಗಿದ್ದರೆ, ಮೊದಲನೆ ಭಿನ್ನರಾಶಿಯ ಅಂಶ ಮತ್ತು ಛೇದಗಳನ್ನು, ಇನ್ನೊಂದು ಭಿನ್ನರಾಶಿಯ ಅಂಶಸಹಿತವಾದ ಛೇದ ಹಾಗೂ ಛೇದಗಳಿಂದ ಗುಣಿಸಲಾಗುತ್ತದೆ.

---

1. B reads गुणयेदग्रांशहरौ सहितांशच्छेदं

**113.** *Bhāgānubandha* literally means an associated fraction. This rule contemplates two kinds of associated fractions. The first is what is known as a mixed number, i.e., a fraction associated with an integer. The second kind consists of fractions associated with fractions, e.g., $\frac{1}{2}$ associated with $\frac{1}{3}$, $\frac{1}{2}$ associated with its own $\frac{1}{3}$ and with $\frac{1}{4}$ of this associated quantity. The expression "$\frac{1}{2}$ associated with $\frac{1}{3}$" means $1 + \frac{1}{3}$ of $\frac{1}{2}$. The meaning of the other example here is $\frac{1}{2} + \frac{1}{2}$ of $\frac{1}{3} + \frac{1}{4}$ of $(\frac{1}{2} + \frac{1}{2}$ of $\frac{1}{3})$. This kind of relationship is what is denoted by association in additive consecution.

೧೧೩. ಭಾಗಾನುಬಂಧದ ವಾಚ್ಯಾರ್ಥ ಸಂವಲಿತ ಭಿನ್ನರಾಶಿ ಎಂದು. ಈ ನಿಯಮವು ಎರಡು ವಿಧದ ಸಂವಲಿತ ಭಿನ್ನರಾಶಿಗಳನ್ನು ಉದ್ದೇಶಿಸುತ್ತದೆ. ಮೊದಲನೆಯದು ಮಿಶ್ರ ಸಂಖ್ಯೆ ಎಂದರೆ ಪೂರ್ಣಾಂಕದ ಸಂವಲಿತ ಭಿನ್ನರಾಶಿ. ಎರಡನೆಯದು ಭಿನ್ನರಾಶಿಗಳ ಸಂವಲಿತ ಭಿನ್ನರಾಶಿಗಳು. ಉದಾಹರಣೆಗೆ $\frac{೧}{೩}$ ರಿಂದ ಸಂವಲಿತವಾಗಿರುವ $\frac{೧}{೨}$ ತನ್ನದೇ $\frac{೧}{೩}$ ರಿಂದ ಸಂವಲಿತವಾಗಿರುವ $\frac{೧}{೪}$ ಮತ್ತು ಈ ಸಂವಲಿತ ಸಂಖ್ಯೆಯ $\frac{೧}{೪}$.

" $\frac{೧}{೩}$ ರಿಂದ ಸಂವಲಿತವಾಗಿರುವ $\frac{೧}{೨}$ " ಇದರ ಅರ್ಥವೇನೆಂದರೆ $\frac{೧}{೨}$ ರ $\frac{೧}{೨} + \frac{೧}{೩}$, ಇನ್ನೊಂದು ಉದಾಹರಣೆಯ ಅರ್ಥವೇನೆಂದರೆ : $\frac{೧}{೨} + \frac{೧}{೨}$ ರ $\frac{೧}{೩} + \frac{೧}{೪}$ ರ $\frac{೧}{೨} + \frac{೧}{೨}$ ರ $\frac{೧}{೩}$ ಎಂದು.

ಈ ವಿಧವಾದ ಸಂಬಂಧವನ್ನು "ಸಂವಲಿತ ಅನುಗಮನ"ವೆಂದು ಕರೆಯಲಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



### रूपभागानुबन्ध उद्देशकः

[1] द्वित्रिषट्काष्टनिष्काणि द्वादशाष्टषडंशकैः । पञ्चाष्टमैस्समेतानि विंशतेश्शोधय प्रिय ॥ ११४ ॥
सार्धेनैकेन पङ्केजं साष्टांशैर्दशभिर्हिमम् । सार्धाभ्यां कुङ्कुमं द्वाभ्यां क्रीतं योगे कियद्भवेत्[2] ॥११५॥
[3]साष्टमाष्टौ षडंशान् षड्द्वादशांशयुतं द्वयम् । त्रय पञ्चाष्टमोपेतं विंशतेश्शोधय प्रिय ॥११६॥
सप्ताष्टौ नवदशमाषकान् सपादान् दत्त्वा ना जिननिलये चकार पूजाम् ।
उन्मीलत्कुरवककुन्दजातिमल्लीमालाभिर्गणक वदाशु तान् समस्य ॥ ११७ ॥

---

### Rūpabhāgānubandha uddeśakaḥ

**114.** Dvitriṣaṭkāṣṭaniṣkāṇi dvādaśāṣṭaṣaḍaṁśakaiḥ, pañcāṣṭamaissametāni viṁśateśśodhaya priya.

**115.** Sārdhenaikena paṅkejaṁ sāṣṭāṁśairdaśabhirhimam, sārdhābhyāṁ kuṅkumaṁ dvābhyāṁ kritaṁ yoge kiyadbhavet.

**116.** Sāṣṭamāṣṭau ṣaḍaṁśān ṣaḍdvādaśāṁśayutaṁ dvayam, trayaṁ pañcāṣṭamopetaṁ viṁśateśśodhaya priya.

**117.** Saptāṣṭau navadaśamāṣakān sapādān datvā nā jinanilaye cakāra pūjām, unmīlatkuravakakundajātimallīmālābhirgaṇaka vadāśu tān samasya.

---

### *Examples on* Bhāgānubandha *fractions containing associated integers*

೭. ಒಬ್ಬ ಶ್ರಾವಕನು ಕಮಲಗಳನ್ನು ಸಂಗ್ರಹಿಸಿ ನೂರಾರು ಸ್ತುತಿಗಳನ್ನು ಜೋರಾಗಿ ಪಠಿಸುತ್ತಾ, ಆ ಕಮಲಗಳನ್ನು ಪೂಜೆಗೆಂದು ಅರ್ಪಿಸಿದನು. ಈ ಕಮಲಗಳ $\frac{೧}{೩}$ ಭಾಗ ಮತ್ತು ಈ $\frac{೧}{೩}$ ಭಾಗದ $\frac{೧}{೩}$, $\frac{೧}{೪}$ ಮತ್ತು $\frac{೧}{೬}$ ಭಾಗಗಳನ್ನು ಕ್ರಮವಾಗಿ ಶ್ರೇಷ್ಠರಾದ ಜಿನ ವೃಷಭರಿಂದ ಆರಂಭವಾಗಿ ನಾಲ್ಕು *ತೀರ್ಥಂಕರ*ರಿಗೆ, ಈ $\frac{೧}{೩}$ ಕಮಲಗಳ $\frac{೧}{೯}$ ಮತ್ತು $\frac{೧}{೧೨}$ ಭಾಗಗಳನ್ನು ಸುಮತಿ *ತೀರ್ಥಂಕರ*ರಿಗೆ, ನಂತರ ಉಳಿದ (೧೯) *ತೀರ್ಥಂಕರ*ರಿಗೆ, ಪ್ರತಿಯೊಬ್ಬರಿಗೆ ೨ ರಂತೆ ಕಮಲಗಳನ್ನು ಸಂತೃಪ್ತ ಮನಸ್ಸಿನಿಂದ ಪೂಜೆಗೆಂದು ಅರ್ಪಿಸಿದನು. ಈ ಎಲ್ಲ ಕಮಲಗಳ ಸಂಖ್ಯಾತ್ಮಕ ಬೆಲೆಯೇನು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



स्ववशीकृतेन्द्रियाणां दूरीकृतविषकषायदोषाणाम् ।
शीलगुणाभरणानां दयाङ्गनालिङ्गिताङ्गानाम् ॥ ८ ॥
साधूनां सद्वृन्दं सन्दृष्टं द्वादशोऽस्य तर्कज्ञः । स्वत्र्यंशवर्जितोऽयं सैद्धान्तश्छान्दसस्तयोश्शेषः ॥ ९ ॥
षड्घ्नोऽयं धर्मकथी स एव नैमित्तिकः स्वपादोनः ।
वादी तयोर्विशेषः षड्गुणितोऽयं तपस्वी स्यात् ॥ १० ॥
गिरिशिखरतटे मयोपदृष्टा यतिपतयो नवसङ्गुणाष्टसङ्ख्याः ।
रविकरपरितापितोज्ज्वलाङ्गाः कथय मुनीन्द्रसमूहमाशु मे त्वम् ॥ ११ ॥

---

8. Svavaśīkṛtendriyāṇāṁ dūrīkṛtaviṣakaṣāyadoṣāṇām,
śīlaguṇābharaṇānāṁ dayaṅgānām.

9. Sādhūnāṁ sadbṛndaṁ sandṛṣṭaṁ dvādaśosya tarkajñaḥ,
svatryaṁśavarjitoyaṁ saiddhāntaścchāndasastayośśeṣaḥ

10. Ṣaḍghno'yaṁ dharmakathī sa eva naimittikaḥ svapādonaḥ, vādī
tayorviśeṣaḥ ṣaḍguṇito'yaṁ tapasvī syāt.

11. Giriśikharatate mayopadṛṣṭā yatipatayo navasaṅguṇāṣṭasaṅkhyāḥ
ravikaraparitāpitojjvalāṅgāḥ kathaya munīndrasamūhamāśu me tvam.

---

**8-11.** There was seen a collection of pious men, who had brought their senses under control, who had driven away the poison-like sin of *karma*, who were adorned with righteous conduct and virtuous qualities and whose bodies had been embraced by the Lady Mercy. Of that (collection), $\frac{1}{12}$ was made up of logicians; this ($\frac{1}{12}$) diminished by $\frac{1}{3}$ of itself was made up of the teachers of the true religion; the difference between these two, (namely, $\frac{1}{12}$ and $\frac{1}{12} - \frac{1}{3}$ of $\frac{1}{12}$) was made up of those that knew the Vedas; this (last proportional quantity) multiplied by 6 was made up of the preachers of the rules of conduct and this very same (quantity) diminished by $\frac{1}{4}$ of itself was made up of astrologers; the difference between these two (last mentioned quantities) was made up of controversialists; this (quantity) mulitplied by 6 was made up of penitent ascetics and 9 x 8 leading ascetics were (further) seen by me near the top of a mountain with their shining bodies highly heated by the rays of the sun. Tell me quickly (the measure of this) collection of prominent sages.

---

೮-೧೧. ಸಾತ್ವಿಕ ಸಾಧುಗಳ ಸಮೂಹವನ್ನು ನೋಡಲಾಯಿತು. ಆ ಸಾಧುಗಳು ಇಂದ್ರಿಯಗಳನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿದ್ದರು, ವಿಷರೂಪವಾದ ಪಾಪಕರ್ಮವನ್ನು ದೂರಮಾಡಿದ್ದರು. ಅವರ ಶರೀರವು ಸಚ್ಚಾರಿತ್ರ್ಯದಿಂದ ಮತ್ತು ಸದ್ಗುಣಗಳೆಂಬ ಆಭರಣಗಳಿಂದ ಶೋಭಾಯಮಾನವಾಗಿದ್ದವು ಹಾಗೂ ದಯಾರೂಪಿ ಹೆಂಗಸಿನಿಂದ ಆಲಿಂಗಿತವಾಗಿದ್ದವು, ಈ ಸಮೂಹದಲ್ಲಿ $\frac{೧}{೧೨}$ ಭಾಗ ತರ್ಕಶಾಸ್ತ್ರಜ್ಞರು, ತನ್ನದೇ $\frac{೧}{೩}$ ಭಾಗದಿಂದ ಕಳೆಯಲ್ಪಟ್ಟ ಈ $\frac{೧}{೧೨}$ ನೇ ಭಾಗ, ನಿಜಧರ್ಮದ ಗುರುಗಳಿಂದ ಕೂಡಿತ್ತು. ಇವೆರಡರ ವ್ಯತ್ಯಾಸವು ಅಂದರೆ $\frac{೧}{೧೨}$ ಮತ್ತು $\frac{೧}{೧೨}$ ರ $\frac{೧}{೧೨} - \frac{೧}{೩}$ ವೇದಗಳನ್ನು ತಿಳಿದಿರುವವರ ಸಂಖ್ಯೆಯಾಗಿತ್ತು. ಈ ಕಡೆಯ ಅನುಪಾತವನ್ನು, ೬ ರಿಂದ ಗುಣಿಸಿದಾಗ ಬರುವ ಸಂಖ್ಯೆಯು, ಧರ್ಮವನ್ನು ಭೋದಿಸುವವರ ಸಂಖ್ಯೆಯಾಗಿತ್ತು. ತನ್ನದೇ $\frac{೧}{೪}$ ಭಾಗದಿಂದ ಕಳೆಯಲ್ಪಟ್ಟ ಈ ಸಂಖ್ಯೆಯು ಜ್ಯೋತಿಶಾಸ್ತ್ರಜ್ಞರ ಸಂಖ್ಯೆಯಾಗಿತ್ತು. ಈ ಕಡೆಯಲ್ಲಿ ತಿಳಿಸಿದ ಎರಡು ಸಂಖ್ಯೆಗಳ ವ್ಯತ್ಯಾಸವು, ವಾದಚತುರರ ಸಂಖ್ಯೆಯಾಗಿದ್ದಿತು. ಈ ಸಂಖ್ಯೆಯನ್ನು ೬ ರಿಂದ ಗುಣಿಸಿದಾಗ, ಅದು ಕಠೋರ ತಪಸ್ವಿಗಳ ಸಂಖ್ಯೆಯಾಗುತ್ತದೆ ಮತ್ತು ೯ x ೮ ಮುಂದಾಳು ತಪಸ್ವಿಗಳು ನನ್ನಿಂದ ಬೆಟ್ಟದ ಶಿಖರದ ಹತ್ತಿರ ನೋಡಲ್ಪಟ್ಟರು. ಇವರ ಶರೀರಗಳು ಸೂರ್ಯನ ಕಿರಣಗಳಿಂದ ಪರಿತಪ್ತವಾಗಿ ಉಜ್ವಲವಾಗಿದ್ದವು. ಈ ಮುನೀಂದ್ರರ ಸಮೂಹದ ಬೆಲೆಯನ್ನು ನನಗೆ ಬೇಗನೆ ಹೇಳು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



फलभारनम्रकम्रे शालिक्षेत्रे शुकास्समुपविष्टाः ।
सहसोत्थिता मनुष्यैः सर्वे सन्त्रासितास्सन्तः ॥ १२ ॥
तेषामर्धं प्राचीमाग्नेयीं प्रति जगाम षड्भागः ।
पूर्वाग्नेयीशेषः स्वदलोनः स्वार्धवर्जितो यामीम् ॥ १३ ॥
याम्याग्नेयीशेषः स नैर्ऋतिं स्वद्विपञ्चभागोनः । यामीनैर्ऋत्यंशकपरिशेषो वारुणीमाशाम् ॥ १४ ॥

---

12. Phalabhāranamrakamre śālikṣetre śukāssamupaviṣṭāḥ, sahasotthitā manuṣyaiḥ sarve santrāsitāssantaḥ.

13. Teṣāmardhaṁ prācīmāgneyīṁ prati jagāma ṣaḍbhāgaḥ, pūrvāgreyīśeṣaḥ svadalonaḥ svārdhavarjito yāmīm.

14. Yāmyāgneyīśeṣaḥ sa nairṛtiṁ svadvipañcabhāgonaḥ, yāmīnairṛtyaṁśakapariśeṣo vāruṇīmāśām.

---

**12-16.** (A number of) parrots descended on a paddy field beautiful with (the crops) bent down through the weight of the ripe corn. Being scared away by men, all of them suddenly flew up. One-half of them went to the east and $\frac{1}{6}$ went to the south-east; the difference between those that went to the east and those that went to the south-east, diminished by half of itself and (again) diminished by the half of this (resulting difference), went to the south; the difference between those that went to the south and those that went to the south-east, diminished by $\frac{2}{5}$ of itself, went to the south-west; the difference

---

೧೨-೧೬. ಬಲಿತ ಕಾಳಿನ ಭಾರದಿಂದ ಬಾಗಿರುವ ತೆನೆಗಳಿಂದ ಕೂಡಿದ ಸುಂದರವಾದ ಭತ್ತದ ಗದ್ದೆಯಲ್ಲಿ ಕೆಲವು ಗಿಣಿಗಳು ಇಳಿದವು. ಕೆಲವು ಮನುಷ್ಯರಿಗೆ ಹೆದರಿ ಅವು ಕೂಡಲೇ ಮೇಲಕ್ಕೆ ಹಾರಿದವು. ಅವುಗಳಲ್ಲಿ ಅರ್ಧ ಪೂರ್ವದಿಕ್ಕಿಗೆ, $\frac{೧}{೬}$ ಭಾಗ ದಕ್ಷಿಣ-ಪೂರ್ವ (ಆಗ್ನೇಯ) ದಿಕ್ಕಿಗೂ ಹಾರಿದವು. ಪೂರ್ವ ದಿಕ್ಕಿಗೆ ಮತ್ತು ಆಗ್ನೇಯ ದಿಕ್ಕಿಗೆ ಹಾರಿದ ಗಿಣಿಗಳ ಸಂಖ್ಯೆಗಳ ವ್ಯತ್ಯಾಸವನ್ನು ಅದರದೇ ಅರ್ಧಭಾಗದಿಂದ ಕಳೆದು ಮತ್ತು ಪುನಃ ಹೀಗೆ ಬಂದಂತಹ ಸಂಖ್ಯೆಯನ್ನು ಅರ್ಧಮಾಡುವುದರಿಂದ, ದಕ್ಷಿಣ ದಿಕ್ಕಿಗೆ ಹಾರಿದ ಗಿಣಿಗಳ ಸಂಖ್ಯೆ ದೊರೆಯುತ್ತದೆ. ದಕ್ಷಿಣ ದಿಕ್ಕಿಗೆ ಮತ್ತು ಆಗ್ನೇಯಕ್ಕೆ ಹಾರಿದ ಗಿಣಿಗಳ ಸಂಖ್ಯೆಗಳ ವ್ಯತ್ಯಾಸವನ್ನು ಅದರದೇ $\frac{೨}{೫}$ ಭಾಗದಿಂದ ಕಳೆದರೆ, ದಕ್ಷಿಣ-ಪಶ್ಚಿಮ (ನೈರುತ್ಯ)ಕ್ಕೆ ಹೋದ ಗಿಣಿಗಳ ಸಂಖ್ಯೆ ಲಭಿಸುತ್ತದೆ. ದಕ್ಷಿಣಕ್ಕೆ ಮತ್ತು ನೈರುತ್ಯಕ್ಕೆ ಹಾರಿದ ಗಿಣಿಗಳ ಸಂಖ್ಯೆಗಳ ವ್ಯತ್ಯಾಸವು, ಪಶ್ಚಿಮಕ್ಕೆ ಹಾರಿದ ಗಿಣಿಗಳ ಸಂಖ್ಯೆಯಾಗಿರುತ್ತದೆ. ನೈರುತ್ಯಕ್ಕೆ ಮತ್ತು ಪಶ್ಚಿಮಕ್ಕೆ ಹಾರಿದ ಗಿಣಿಗಳ ಸಂಖ್ಯೆಗಳ ವ್ಯತ್ಯಾಸವನ್ನು ಅದರದೇ $\frac{೩}{೭}$ ಭಾಗಕ್ಕೆ ಸೇರಿಸಿದರೆ,



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



नैऋत्यपरविशेषो वायव्यां सस्वकत्रिसप्तांशः । वायव्यपरविशेषो युतस्वसप्ताष्टमः सौमीम् ॥ १५ ॥
वायव्युत्तरयोर्युतिरैशानीं स्वत्रिभागयुगहीना ।
दशगुणिताष्टाविंशतिरवशिष्टा व्योम्नि कति कीराः ॥ १६ ॥

---

**15.** Nairṛtyaparaviśeṣo vāyavyāṁ sasvakatrisaptāṁśaḥ, vāyavyaparaviśeṣo yutasvasaptāṣṭamaḥ saumīm.

**16.** Vāyavyuttarayoryutiraiśānīṁ svatribhāgayugahīnā,
daśaguṇitāṣṭāviṁśatiravasiṣṭā vyomni kati kīrāḥ.

---

between those that went to the south and those that went to the south-west, went to the west; the difference between those that went to the south-west and those that went to the west, together with $\frac{3}{7}$ of itself, went to the north-west; the difference between those that went to the north-west and those that went to the west, together with $\frac{7}{8}$ of itself, went to the north; the sum of those that went to the north-west and those that went to the north, diminished by $\frac{2}{3}$ of itself, went to the north-east and 280 parrots were found to remain in the sky (above). How many were the parrots (in all)?

---

ಉತ್ತರ-ಪಶ್ಚಿಮ (ವಾಯವ್ಯ) ದಿಕ್ಕಿಗೆ ಹಾರಿದ ಗಿಣಿಗಳ ಸಂಖ್ಯೆಯಾಗಿರುತ್ತದೆ. ವಾಯವ್ಯ ಮತ್ತು ಪಶ್ಚಿಮಕ್ಕೆ ಹಾರಿದ ಗಿಣಿಗಳ ಸಂಖ್ಯೆಗಳ ವ್ಯತ್ಯಾಸವನ್ನು ಅದರದೇ $\frac{೭}{೮}$ ಭಾಗಕ್ಕೆ ಸೇರಿಸಿದರೆ, ಉತ್ತರಕ್ಕೆ ಹಾರಿದ ಗಿಣಿಗಳ ಸಂಖ್ಯೆ ದೊರೆಯುತ್ತದೆ. ವಾಯವ್ಯಕ್ಕೆ ಮತ್ತು ಉತ್ತರಕ್ಕೆ ಹಾರಿದ ಗಿಣಿಗಳ ಸಂಖ್ಯೆಗಳ ಮೊತ್ತದಲ್ಲಿ ಅದರದೇ $\frac{೨}{೩}$ ಭಾಗವನ್ನು ಕಳೆದರೆ, ಉತ್ತರ-ಪೂರ್ವ (ಈಶಾನ್ಯ) ದಿಕ್ಕಿಗೆ ಹಾರಿದ ಗಿಣಿಗಳ ಸಂಖ್ಯೆಯಾಗುತ್ತದೆ ಮತ್ತು ೨೮೦ ಗಿಣಿಗಳು ಮೇಲೆ ಆಕಾಶದಲ್ಲಿ ಉಳಿದವು. ಒಟ್ಟು ಎಷ್ಟು ಗಿಣಿಗಳಿದ್ದವು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



काचिद्वसन्तमासे प्रसूनफलगुच्छभारनम्रोद्याने ।
कुसुमासवरसरञ्जितशुककोकिलमधुपमधुरनिस्वननिचिते ॥ १७ ॥
हिमकरधवले पृथुले सौधतले सान्द्ररुन्द्रमृदुतल्पे ।
फणिफणनितम्बबिम्बा कनदमलाभरणशोभाङ्गी ॥ १८ ॥
पाठीनजठरनयना कठिनस्तनहारनम्रतनुमध्या ।
सह निजपतिना युवती रात्रौ प्रीत्यानुरममाणा ॥ १९ ॥

---

17. Kācidvasantamāse prasūnaphalagucchabhāranamrodyāne, kusumāsavarasarañjitaśukakokilamadhupamadhuranisvananicite.

18. Himakaradhavale pṛthule saudhatale sāndrarundramṛdutalpe, phaṇiphaṇanitambabimbā kanadamalābharaṇaśobhāṅgī.

19. Pāṭhīnajaṭharanayanā kaṭhinastanahāranamratanumadhyā, saha nijapatinā yuvatī rātrau prītyānuramamāṇā.

---

**17-22.** One night, in a month of the spring season, a certain young lady .... was lovingly happy along with her husband on . . . the floor of a big mansion, white like the moon and situated in a pleasure garden with trees bent down with the load of the bunches of flowers and fruits and resonant with the sweet sounds of parrots, cuckoos and bees which were all intoxicated with the honey obtained from the flowers therein. Then on a love quarrel arising between the husband and the wife, that lady's necklace made up of pearls became sundered and fell on the floor. One-third of that necklace of pearls reached the

---

೧೭-೨೨. ವಸಂತ ಋತುವಿನ ತಿಂಗಳ ಒಂದು ರಾತ್ರಿಯಲ್ಲಿ, ಒಬ್ಬಳು ಯುವತಿ ತನ್ನ ಗಂಡನ ಜೊತೆಯಲ್ಲಿ, ಹೂವುಗಳ ಮತ್ತು ಹಣ್ಣುಗಳ ಗೊಂಚಲುಗಳ ಭಾರದಿಂದ ಬಾಗಿರುವ ಮರಗಳನ್ನುಳ್ಳ ಮತ್ತು ಹೂವುಗಳ ಮಧುವಿನಿಂದ ಮತ್ತೇರಿದ ಗಿಣಿಗಳ, ಕೋಗಿಲೆಗಳ ಮತ್ತು ಭ್ರಮರಗಳ ಮಧುರ ಸ್ವರಗಳಿಂದ ಪ್ರತಿಧ್ವನಿತವಾಗಿರುವ ಪ್ರಫುಲ್ಲಿತ ಉದ್ಯಾನವನದಲ್ಲಿದ್ದಂತಹ, ಚಂದ್ರನಂತೆ ಬೆಳ್ಳಗಿರುವ ದೊಡ್ಡ ಮಹಲಿನ ನೆಲದ ಮೇಲೆ, ಸುಖದಿಂದ ಸಂತೋಷವಾಗಿದ್ದಳು. ನಂತರ ಪತಿ ಮತ್ತು ಪತ್ನಿಯರ ಪ್ರಣಯಕಲಹವಾದ ಕಾರಣದಿಂದ ಆ ಹೆಂಗಸಿನ ಕೊರಳಲ್ಲಿದ್ದ ಮುತ್ತುಗಳ ಕಂಠಹಾರವು ಕಿತ್ತುಹೋಯಿತು ಮತ್ತು ನೆಲದ ಮೇಲೆ ಬಿದ್ದಿತು. ಆ ಮುತ್ತುಗಳ ಕಂಠಹಾರದ $\frac{೧}{೩}$ ನೇ ಭಾಗ ಅಲ್ಲಿದ್ದ ದಾಸಿಗೆ ದೊರೆಯಿತು. $\frac{೧}{೬}$ ನೇ ಭಾಗ ಹಾಸಿಗೆಯ ಮೇಲೆ ಬಿದ್ದಿತು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



प्रणयकलहे समुत्थे मुक्तामयकण्ठिका तदबलायाः ।
छिन्नावनौ निपतिता तत्रयंशश्चेठिकां प्रापत् ॥ २० ॥
षड्भागः शय्यायामनन्तरानन्तरार्धमितिभागाः ।
षट्सख्यानास्तस्याः सर्वे सर्वत्र सम्पतिताः ॥ २१ ॥
एकाग्रषष्टिशतयुतसहस्रमुक्ताफलानि दृष्टानि ।
तन्मौक्तिकप्रमाणं प्रकीर्णकं वेत्सि चेत् कथय ॥ २२ ॥

---

**20.** Praṇayakalahe samutthe muktāmayakaṇṭhikā tadabalāyāḥ chinnāvannau nipatitā tattryaṁśaśceṭhikāṁ prāpat.

**21.** Ṣaḍbhāgaḥ śayyāyāmanantarānantarārdhamitibhāgāḥ, ṣaṭsaṅkhyānāstasyāḥ sarve sarvatra sampatitāḥ.

22. Ekāgraṣaṣṭiśatayutasahasramuktāphalāni dṛṣṭāni tanmauktikapramāṇaṁ prakīrṇakaṁ vetsi cet kathaya.

---

maid-servant there; $\frac{1}{6}$ fell on the bed; then $\frac{1}{2}$ of what remained (and one half of what remained thereafter and again $\frac{1}{2}$ of what remained thereafter) and so on, counting six times (in all), fell all of them everywhere and there were found to remain (unscattered) 1,161 pearls and if you know (how to work) miscellaneous problems (on fractions), give out the (numerical) measure of the pearls (in that necklace).

---

ನಂತರ ಶೇಷ-ಭಾಗದ $\frac{೧}{೨}$ ಮತ್ತು ಪುನಃ ಅಗ್ರಿಮ ಶೇಷದ $\frac{೧}{೨}$ ,ನಂತರ ಅಗ್ರಿಮ ಶೇಷದ $\frac{೧}{೨}$ , ಇದೇ ರೀತಿ ಒಟ್ಟು ೬ ಬಾರಿ ಎಣಿಸಿದರೆ ಬರುವ ಮುತ್ತುಗಳು ಎಲ್ಲೆಡೆಯೂ ಬಿದ್ದವು. ಚದುರದೆ ಉಳಿದಿದ್ದ ಮುತ್ತುಗಳು ೧,೧೬೧. ಭಿನ್ನರಾಶಿಗಳ ಮೇಲಿನ ಮಿಶ್ರ ಲೆಕ್ಕಗಳನ್ನು ಮಾಡುವುದು ನಿನಗೆ ತಿಳಿದಿದ್ದರೆ, ಆ ಕಂಠಹಾರದಲ್ಲಿದ್ದ ಮುತ್ತುಗಳ ಸಂಖ್ಯಾತ್ಮಕ ಬೆಲೆಯನ್ನು ತಿಳಿಸು.

---

**17.** Certain epithets here have not been considered fit for translation.

೧೭. ಮೂಲ ಶ್ಲೋಕಗಳಲ್ಲಿ ಬರುವ ಕೆಲವು ಗುಣವಾಚಕ ಶಬ್ದಗಳ ಅನುವಾದವನ್ನು ಇಲ್ಲಿ ಮಾಡಲಾಗಿಲ್ಲ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



[1] स्फुरदिन्द्रनीलवर्णं षट्पदवृन्दं प्रफुल्लितोद्याने ।
दृष्टं तस्याष्टांशोऽशोके कुटजे षडंशको लीनः ॥ २३ ॥
कुटजाशोकविशेषः षड्गुणितो विपुलपाटलीषण्डे ।
पाटल्यशोकशेषः स्वनवांशोनो विशालसालवने ॥ २४ ॥
पाटल्यशोकशेषो युतस्स्वसप्तांशकेन मधुकवने । पञ्चांशस्सन्दृष्टो वकुलेषूत्फुल्लमुकुलेषु ॥ २५ ॥

---

23. Sphuradindranīlavarṇaṁ ṣaṭpadabṛndaṁ praphullitodyāne, dṛṣṭaṁ tasyāṣṭāṁśo' śoke kuṭaje ṣaḍaṁśako līnaḥ.

24. Kuṭajāśokaviśeṣaḥ ṣaḍguṇito vipulapāṭalīṣaṇḍe, pāṭalyaśokaśeṣaḥ svanavāṁśono viśālasālavane.

25. Pāṭalyaśokaśeṣo yutassvasaptāṁśakena madhukavane, pañcāṁśassandṛṣṭo vakuleṣūphullamukuleṣu.

---

**23-27.** A collection of bees characterized by the blue color of the shining *indranīla* gem was seen in a flowering pleasure garden. One-eighth of that (collection) became hidden in *aśōka* trees, $\frac{1}{6}$ in *kuṭaja* trees. The difference between those that hid themselves in the *kuṭaja* trees and the *aśōka* trees, respectively, multiplied by 6, became hidden in a crowd of big *pāṭalī* trees. The difference between those that hid themselves in the *pāṭalī* trees and the *aśōka* trees, diminished by $\frac{1}{9}$ of itself became hidden in an extensive forest of *sāla* trees. The same difference, together with $\frac{1}{7}$ of itself, became hidden in a forest of *madhuka* trees; $\frac{1}{5}$ of that whole collection of bees was seen hidden in the *vakula* trees with well-blossomed flower-buds and that same $\frac{1}{5}$ part was found

---

೨೩-೨೭. ಹೊಳೆಯುವ *ಇಂದ್ರನೀಲ*ಮಣಿಗಳಿಗೆ ಸಮಾನವಾದ ನೀಲಿಬಣ್ಣಗಳನ್ನುಳ್ಳ ಭ್ರಮರ ಸಮೂಹವೊಂದನ್ನು ಪ್ರಫುಲ್ಲಿತವಾದ ಉದ್ಯಾನವನದಲ್ಲಿ ನೋಡಲಾಯಿತು. ಆ ಸಮೂಹದ $\frac{೧}{೮}$ ಭಾಗ ಅಶೋಕ ವೃಕ್ಷಗಳಲ್ಲಿ ಹಾಗೂ $\frac{೧}{೬}$ ಭಾಗ *ಕುಟಜ* ವೃಕ್ಷಗಳಲ್ಲಿ ಅಡಗಿಕೊಂಡವು. *ಕುಟಜ* ಮತ್ತು *ಅಶೋಕ* ವೃಕ್ಷಗಳಲ್ಲಿ ಅಡಗಿಕೊಂಡ ಭ್ರಮರ ಸಮೂಹದ ವ್ಯತ್ಯಾಸವನ್ನು ಕ್ರಮವಾಗಿ ೬ ರಿಂದ ಗುಣಿಸಿದರೆ, ವಿಪುಲವಾದ *ಪಾಟಲೀ* ವೃಕ್ಷಗಳಲ್ಲಿ ಅಡಗಿಕೊಂಡ ಭ್ರಮರಗಳ ಸಂಖ್ಯೆಯಾಗುತ್ತದೆ. *ಪಾಟಲೀ* ಮತ್ತು ಅಶೋಕ ವೃಕ್ಷಗಳಲ್ಲಿ ಅಡಗಿಕೊಂಡ ಭ್ರಮರಗಳ ಸಮೂಹದ ಅಂತರವನ್ನು ಅದರದೇ $\frac{೧}{೯}$ ಭಾಗದಿಂದ ಕಳೆದರೆ, ವಿಶಾಲವಾದ ಸಾಲ ವೃಕ್ಷಗಳ ಕಾಡಿನಲ್ಲಿ ಅಡಗಿಕೊಂಡ ಭ್ರಮರಗಳ ಸಂಖ್ಯೆಯಾಗುತ್ತದೆ. ಇದೇ ವ್ಯತ್ಯಾಸವನ್ನು ಅದರದೇ $\frac{೧}{೭}$ ಭಾಗದೊಂದಿಗೆ ಸೇರಿಸಿದಾಗ, ಮಧುಕ ವೃಕ್ಷಗಳ ವನದಲ್ಲಿ ಅಡಗಿದ ಭ್ರಮರಗಳ ಸಂಖ್ಯೆಯಾಗುತ್ತದೆ.

---

1. M reads स्फुरेतेन्द्र



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



तिलकेषु कुरवकेषु च सरलेष्वाम्रेषु पद्मषण्डेषु ।
वनकरिकपोलमूलेष्वपि सन्तस्थे स एवांशः ॥ २६ ॥
किञ्जल्कपुञ्जपिञ्जरकञ्जवने मधुकरास्त्रयस्त्रिंशत् ।
दृष्टा भ्रमरकुलस्य प्रमाणमाचक्ष्व गणक त्वम् ॥ २७ ॥
गोयूथस्य क्षितिभृति दलं तद्दलं शैलमूले षट् तस्यांशा विपुलविपिने पूर्वपूर्वार्धमानाः ।
सन्तिष्ठन्ते नगरनिकटे धेनवो दृश्यमाना द्वात्रिंशत् त्वं वद मम सखे गोकुलस्य प्रमाणम् ॥ २८ ॥

**इति भागजात्युद्देशकः ।**

---

**26.** Tilakeṣu kuravakeṣu ca saraleṣvāmreṣu padmaṣaṇḍeṣu, vanakarikapolamūlaṣvapi santasthe sa evāṁśaḥ.

**27.** Kiñjalkapuñjapiñjarakañjavane madhukarāstrayastriṁśat, dṛṣṭā bhramarakulasya pramāṇamācakṣva gaṇaka tvam.

**28.** Goyūthasya kṣitibhṛti dalaṁ taddalaṁ śailamūle ṣaṭ tasyāṁśā vipulavipine pūrvapūrvārdhamānāḥ, santiṣṭante nagaranikaṭe dhenavo dṛśyamānā dvātriṁśat tvaṁ vada mama sakhe gokulasya pramāṇam.

**Iti bhāgajatyuddeśakaḥ**

---

hidden in *tilaka, kuravaka, sarala* and mango trees and on collections of lotuses and at the base of the temples of forest elephants; and 33 (remaining) bees were seen in a crowd of lotuses, that were variegated in color on account of the large quantity of (their) filaments. Give out, O you arithmetician, the (numerical) measure of that collection of bees.

**28.** Of a herd of cattle, $\frac{1}{2}$ is on a mountain; $\frac{1}{2}$ of that is at the base of the mountain and 6 more parts, each being in value half of what precedes it, are found together in an extensive forest and there are (the remaining) 32 cows seen in the neighbourhood of a city. Tell me, O you my friend, the (numerical) measure of that herd of cattle.

**Here end the examples in the *Bhāga* variety.**

---

ಭ್ರಮರಗಳ ಒಟ್ಟು ಸಮೂಹದ $\frac{೧}{೫}$ ಭಾಗ ಚೆನ್ನಾಗಿ ಅರಳಿದ ಹೂವು ಮೊಗ್ಗುಗಳಿಂದ ಕೂಡಿದ ವಕುಲ ವೃಕ್ಷಗಳಲ್ಲಿ ಅಡಗಿರುವುದನ್ನು ನೋಡಲಾಯಿತು ಮತ್ತು ಅದೇ $\frac{೧}{೫}$ ಭಾಗ ಭ್ರಮರಗಳು ತಿಲಕ, ಕುರವಕ, ಸರಲ ಮತ್ತು ಮಾವಿನ ಮರಗಳಲ್ಲಿ, ಕಮಲಗಳ ಸಮೂಹದಲ್ಲಿ ಮತ್ತು ಕಾಡಿನ ಆನೆಗಳ ಮಂದಿರಗಳ ಮೂಲಗಳಲ್ಲಿ ಅಡಗಿದ್ದವು ಮತ್ತು ಉಳಿದ ೩೩ ಭ್ರಮರಗಳನ್ನು ತಮ್ಮ ದೊಡ್ಡ ಸಂಖ್ಯೆಯ ಕೇಸರ ತಂತುಗಳ ಕಾರಣದಿಂದ ವಿವಿಧ ವರ್ಣಗಳನ್ನು ಹೊಂದಿರುವ ಒಂದು ಕಮಲಗಳ ಗುಂಪಿನಲ್ಲಿ ನೋಡಲಾಯಿತು. ಎಲೈ ಅಂಕಗಣಿತಜ್ಞನೇ, ಆ ಸಮೂಹದಲ್ಲಿದ್ದ ಭ್ರಮರಗಳ ಸಂಖ್ಯಾತ್ಮಕ ಬೆಲೆಯನ್ನು ಹೇಳು.

೨೮. ಒಂದು ದನಗಳ ಹಿಂಡಿನಲ್ಲಿ, $\frac{೧}{೨}$ ಭಾಗ ಪರ್ವತದ ಮೇಲೆ, ಅದರ $\frac{೧}{೨}$ ಭಾಗ ಪರ್ವತದ ಮೂಲದಲ್ಲಿ ಮತ್ತು ಪ್ರತಿಯೊಂದರ ಬೆಲೆ ಅದರ ಹಿಂದಿನ ಬೆಲೆಯ ಅರ್ಧದಷ್ಟಿರುವಂತಹ ೬ ಭಾಗಗಳು, ಒಂದು ವಿಪುಲವಾದ ಅರಣ್ಯದಲ್ಲಿ ಒಟ್ಟಿಗೆ ಇದ್ದವು ಮತ್ತು ಉಳಿದ ೩೨ ಹಸುಗಳನ್ನು ಒಂದು ಪಟ್ಟಣದ ಆಸುಪಾಸಿನಲ್ಲಿ ನೋಡಲಾಯಿತು. ಎಲೈ ನನ್ನ ಸ್ನೇಹಿತನೇ, ಆ ದನಗಳ ಹಿಂಡಿನ ಸಂಖ್ಯಾತ್ಮಕ ಬೆಲೆಯನ್ನು ನನಗೆ ಹೇಳು.

**ಇಲ್ಲಿಗೆ *ಭಾಗ* ಜಾತಿಯ ಮೇಲಿನ ಉದಾಹರಣೆಗಳು ಮುಗಿದವು.**



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## शेषजातावुद्देशकः

षड्भागमाम्रराशे राजा शेषस्य पञ्चमं राज्ञी ।
तुर्यत्र्यंशदलानि त्रयोऽग्रहीषुः कुमारवराः ॥ २९ ॥
शेषाणि त्रीणि चूतानि कनिष्ठो दारकोऽग्रहीत् ।
तस्य प्रमाणमाचक्ष्व प्रकीर्णकविशारद ॥ ३० ॥

---

### Śeṣajātāvuddeśakaḥ

**29.** Ṣaḍbhāgamāmrarāśe rājā śeṣasya pañcamaṁ rājñī, turyatryaṁśadalāni trayo'grahīṣuḥ kumāravarāḥ

**30.** Śeṣāṇi trīṇi cūtāni kaniṣṭo dārako'grahīt, tasya pramāṇamācakṣva prakīrṇakaviśārada.

---

### *Examples in the Śēṣa variety*

**29-30.** Of a collection of mango fruits, the king (took) $\frac{1}{6}$ ; then queen (took) $\frac{1}{5}$ of the remainder and three chief princes took $\frac{1}{4}$, $\frac{1}{3}$ and $\frac{1}{2}$ (of that same remainder); and the youngest child took the remaining three mangoes. O you who are clever in (working) miscellaneous problems on fractions, give out the measure of that (collection of mangoes).

---

### ಶೇಷ ಜಾತಿಯ ಮೇಲಿನ ಉದಾಹರಣೆಗಳು

**೨೯-೩೦.** ಒಂದು ಮಾವಿನ ಹಣ್ಣುಗಳ ಸಮೂಹದಲ್ಲಿ, ರಾಜನು $\frac{೧}{೬}$ ಭಾಗವನ್ನು ತೆಗೆದುಕೊಂಡನು,

ಶೇಷ - ಭಾಗದ $\frac{೧}{೫}$ ಭಾಗವನ್ನು ರಾಣಿಯು ತೆಗೆದುಕೊಂಡಳು ಮತ್ತು ಮೂರು ಪ್ರಮುಖ ರಾಜಕುಮಾರರು

ಅದೇ ಶೇಷದ $\frac{೧}{೪}$ , $\frac{೧}{೩}$ ಮತ್ತು $\frac{೧}{೨}$ ಭಾಗಗಳನ್ನು ತೆಗೆದುಕೊಂಡರು ಮತ್ತು ಎಲ್ಲರಿಗಿಂತಲೂ ಚಿಕ್ಕವನು

ಉಳಿದ ಮೂರು ಮಾವಿನ ಹಣ್ಣುಗಳನ್ನು ತೆಗೆದುಕೊಂಡನು. ಎಲೈ ಭಿನ್ನರಾಶಿಗಳ ಮೇಲಿನ ಮಿಶ್ರ ಲೆಕ್ಕಗಳನ್ನು ಬಿಡಿಸುವುದರಲ್ಲಿ ಚತುರನಾದವನೇ, ಆ ಸಮೂಹದಲ್ಲಿದ್ದ ಮಾವಿನ ಹಣ್ಣುಗಳ ಸಂಖ್ಯಾತ್ಮಕ ಬೆಲೆಯನ್ನು ತಿಳಿಸು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



चरति गिरौ सप्तांशः करिणां षष्ठादिमार्धपाश्चात्याः ।
प्रतिशेषांशा विपिने षड्दृष्टास्सरसि कति ते स्युः ॥ ३१ ॥
कोष्ठस्य लेभे नवमांशमेकः परेऽष्ठभागादिदलान्तिमांशान् ।
शेषस्य शेषस्य पुनः पुराणा दृष्टा मया द्वादश तत्प्रमा का ॥ ३२ ॥

**इति शेषजात्युद्देशकः ।**

---

**31.** Carati girau saptāṁśaḥ kariṇāṁ ṣaṣṭādimārdhapāścātyāḥ, pratiśeṣāṁśā, vipine ṣaḍdṛṣṭāssarasi kati te syuḥ.

**32.** Koṣṭasya lebhe navamāṁśamekaḥ pare'ṣṭabhāgādidalāntimāṁśān śeṣasya śeṣasya punaḥ purāṇā dṛṣṭā mayā dvādaśa tatpramā kā.

**Iti śeṣajātyuddeśakaḥ.**

---

**31.** One-seventh of (a herd of) elephants is moving on a mountain; portions of the herd, measuring from $\frac{1}{6}$ in order up to $\frac{1}{2}$, in the end, of every successive remainder, wander about in a forest and the remaining 6 (of them) are seen near a lake. How many are those elephants?

**32.** Of (the contents of) a treasury, one man obtained $\frac{1}{9}$ part; others obtained from $\frac{1}{8}$ in order to $\frac{1}{2}$, in the end, of the successive remainders and (at last) 12 *purāṇas* were seen by me (to remain). What is the (numerical) measure (of the *purāṇas* contained in the treasury)?

**Here end examples in the *Śēśa* variety.**

---

೩೧. ಒಂದು ಆನೆಗಳ ಹಿಂಡಿನಲ್ಲಿ, $\frac{೧}{೭}$ ಭಾಗ ಪರ್ವತದ ಮೇಲೆ ಚಲಿಸುತ್ತಿವೆ, ಕ್ರಮವಾಗಿ ಉತ್ತರೋತ್ತ

-ರವಾಗಿ $\frac{೧}{೬}$ ರಿಂದ ಆರಂಭವಾಗಿ $\frac{೧}{೨}$ ಕ್ಕೆ ಕೊನೆಗೊಳ್ಳುವ ಹಿಂಡಿನ ಭಾಗಗಳು, ಒಂದು ಅರಣ್ಯದಲ್ಲಿ

ತಿರುಗಾಡುತ್ತಿವೆ ಮತ್ತು ಉಳಿದ ೬ (ಆನೆಗಳು) ಒಂದು ಸರೋವರದ ಹತ್ತಿರ ಇವೆ. ಆ ಆನೆಗಳು ಎಷ್ಟಿವೆ?

೩೨. ಒಂದು ಖಜಾನೆಯಲ್ಲಿ, ಒಬ್ಬ ವ್ಯಕ್ತಿಯು $\frac{೧}{೯}$ ಭಾಗವನ್ನು ಪಡೆದುಕೊಂಡನು. ಬೇರೆಯವರಿಗೆ

ಉತ್ತರೋತ್ತರವಾಗಿ ಶೇಷಗಳ $\frac{೧}{೮}$ ರಿಂದ ಆರಂಭವಾಗಿ ಕ್ರಮವಾಗಿ $\frac{೧}{೨}$ ರಲ್ಲಿ ಕೊನೆಗೊಳ್ಳುವ ಭಾಗಗಳು

ದೊರೆತವು. ಕಡೆಯಲ್ಲಿ ೧೨ ಪುರಾಣಗಳು ಉಳಿದಿದ್ದನ್ನು ನಾನು ನೋಡಿದೆನು. ಖಜಾನೆಯಲ್ಲಿದ್ದ ಪುರಾಣಗಳ ಸಂಖ್ಯಾತ್ಮಕ ಬೆಲೆಯೇನು?

**ಇಲ್ಲಿಗೆ *ಶೇಷ* ಜಾತಿಯ ಮೇಲಿನ ಉದಾಹರಣೆಗಳು ಮುಗಿದವು.**



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अथ मूलजातौ सूत्रम् -

मूलार्धाग्रे छिन्द्यादंशोनैकेन युक्तमूलकृतेः। दृश्यस्य पदं सपदं वर्गितमिह मूलजातौ स्वम् ॥ ३३ ॥

---

Atha mūlajātau sūtram -

**33.** Mūlārdhāgre chindyādaṁśonaikena yuktamūlakṛteḥ, dṛśyasya padaṁ sapadaṁ vargitamiha mūlajātau svam.

---

The rule relating to the *mūla* variety (of miscellaneous problems on fractions):

**33.** Half of (the coefficient of) the square root (of the unknown quantity) and (then) the known remainder should be (each) divided by one as diminished by the fractional (coefficient of the unknown) quantity. The square root of the (sum of the) known remainder (so treated), as combined with the square (of the coefficient) of the square root (of the unknown quantity dealt with as above) and (then) associated with (the similarly treated coefficient of) the square root (of the unknown quantity) and (thereafter) squared (as a whole), gives rise to the (required unknown) quantity in this *mūla* variety (of miscellaneous problems on fractions).

---

(ಭಿನ್ನರಾಶಿಗಳ ಮೇಲಿನ ಮಿಶ್ರ ಲೆಕ್ಕಗಳಲ್ಲಿ) *ಮೂಲ* ಜಾತಿಗೆ ಸಂಬಂಧಪಟ್ಟ ನಿಯಮ :

೩೩. ಅಜ್ಞಾತ ಸಂಖ್ಯೆಯ ವರ್ಗಮೂಲದ ಅರ್ಧಭಾಗ (ಅಥವಾ ಗುಣಾಂಕ) ಮತ್ತು ಗೊತ್ತಿರುವ ಶೇಷದಿಂದ ಪ್ರತಿಯೊಂದನ್ನೂ, ೧ ರಲ್ಲಿ ಅಜ್ಞಾತ ಸಂಖ್ಯೆಯ ಭಿನ್ನಾತ್ಮಕ ಗುಣಾಂಕವನ್ನು ಕಳೆದ ನಂತರ ಬರುವ ಸಂಖ್ಯೆಯಿಂದ ಭಾಗಿಸಬೇಕು. (ಈ ರೀತಿ ವ್ಯವಹರಿಸಿದ) ಗೊತ್ತಿರುವ ಶೇಷವನ್ನು ಅಜ್ಞಾತ ಸಂಖ್ಯೆಯ ವರ್ಗಮೂಲದ ಗುಣಾಂಕದ ವರ್ಗದ ಜೊತೆಗೆ ಸೇರಿಸಲಾಗುತ್ತದೆ. ಹೀಗೆ ಲಭಿಸಿದ ಸಂಖ್ಯೆಯ ವರ್ಗಮೂಲದಲ್ಲಿ ಇದೇ ರೀತಿ ವ್ಯವಹರಿಸಿದ ಅಜ್ಞಾತ ರಾಶಿಯ ವರ್ಗಮೂಲದ ಗುಣಾಂಕವನ್ನು ಸೇರಿಸಲಾಗುತ್ತದೆ. ತದನಂತರ ಬಂದಂತಹ ಸಂಖ್ಯೆಯನ್ನು ಪೂರ್ಣವರ್ಗಮಾಡಿದರೆ, (ಭಿನ್ನರಾಶಿಗಳ ಮೇಲಿನ ಮಿಶ್ರ ಲೆಕ್ಕಗಳ) ಈ *ಮೂಲ* ಜಾತಿಯಲ್ಲಿ ಬೇಕಾದ ಅಜ್ಞಾತ ಸಂಖ್ಯೆಯು ಲಭಿಸುತ್ತದೆ.

---

33. Algebraically expressed, this rule comes to $x = \left\{ \frac{\frac{a}{2}}{1-b} + \sqrt{\frac{a}{1-b} + \left(\frac{\frac{c}{2}}{1-b}\right)^2} \right\}^2$; this is easily obtained from the equation $x - (bx + c\sqrt{x} + a) = 0$. This equation is the algebraical expression of problems of this variety. Here $c$ stands for the coefficient of the square root of the unknown quantity to be found out.

೩೩. ಬೀಜಗಣಿತರೂಪದಲ್ಲಿ, ಈ ನಿಯಮವು

$$ಕ = \left\{ \frac{\frac{ಸ}{೨}}{೧-ಬ} + \sqrt{\frac{ಅ}{೧-ಬ} + \left(\frac{\frac{ಸ}{೨}}{೧-ಬ}\right)^2} \right\}^2$$

ಎಂದಾಗುತ್ತದೆ. ಇದನ್ನು $ಕ - (ಬಕ + ಸ\sqrt{ಕ} + ಅ) = ೦$ ಸಮೀಕರಣದಿಂದ ಸುಲಭವಾಗಿ ಪಡೆಯಬಹುದಾಗಿದೆ.. ಈ ಸಮೀಕರಣವು ಈ ಜಾತಿಯ ಲೆಕ್ಕಗಳ ಬೀಜಗಣಿತರೂಪದ ನಿರೂಪಣೆಯಾಗಿದೆ. ಇಲ್ಲಿ *ಸ* ವು ಅಜ್ಞಾತ ಸಂಖ್ಯೆಯ ವರ್ಗಮೂಲದ ಗುಣಾಂಕವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

दृष्टोऽटव्यामु[1]ष्ट्रयूथस्य पादो मूले च द्वे शैलसानौ निविष्टे ।
[2]उष्ट्रास्त्रिघ्नाः पञ्च नद्यास्तु तीरे [3]किं तस्य स्यादुष्ट्रकस्य प्रमाणम् ॥ ३४ ॥
श्रुत्वा वर्षाभ्रमालापटहपटुरवं शैलशृङ्गोरुरङ्गे नाट्यं चक्रे प्रमोदप्रमुदितशिखिनां षोडशांशोऽष्टमश्च ।
त्र्यंशः शेषस्य षष्टो वरवकुलवने पञ्च मूलानि तस्थुः पुन्नागे पञ्च दृष्टा भण गणक गणं बर्हिणां सङ्गुणय्य ॥ ३५ ॥

---

## Atroddeśakaḥ

**34.** Dṛṣṭo'ṭavyāmuṣṭrayūthasya pādo mūle ca dve śailasānau niviṣṭe uṣṭrāstrighnāḥ pañca nadyāstu tīre kiṁ tasya syāduṣṭrakasya pramāṇam.

**35.** Śrutvā varṣābhramālāpaṭahapaṭuravaṁ śailaśṛṅgoruraṅge nāṭyaṁ cakre pramodapramuditaśikhināṁ ṣoḍaśāṁśo'ṣṭamaśca, tryaṁśaḥ śeṣasya ṣaṣṭo varavakulavane pañca mūlāni tasthuḥ punnāge pañca dṛṣṭā bhaṇa gaṇaka gaṇaṁ bahirṇāṁ saṅguṇayya.

---

## *Examples in illustration thereof*

**34.** One-fourth of a herd of camels was seen in the forest; twice the square root (of that herd) had gone on to mountain slopes and 3 times 5 camels (were), however, (found) to remain on the bank of a river. What is the (numerical) measure of that herd of camels?

**35.** After listening to the distinct sound caused by the drum made up of the series of clouds in the rainy season, $\frac{1}{16}$ and $\frac{1}{8}$ (of a collection) of peacocks, together with $\frac{1}{3}$ of the remainder and $\frac{1}{6}$ of the remainder (thereafter), gladdened with joy, kept on dancing on the big theatre of the mountain top and 5 times the square root (of that collection) stayed in an excellent forest of *vakula* trees and (the remaining) 5 were seen on a *punnāga* tree. O arithmetician, give out after calculation (the numerical measure of) the collection of peacocks.

---

## ಉದಾಹರಣೆಗಳಿಂದ ವಿಶ್ಲೇಷಣ

೩೪. ಒಂಟೆಗಳ ಹಿಂಡಿನ $\frac{೧}{೪}$ ಭಾಗ ಕಾಡಿನಲ್ಲಿ ಕಂಡವು. ಈ ಹಿಂಡಿನ ವರ್ಗಮೂಲದ ಎರಡರಷ್ಟು ಪರ್ವತದ ಇಳಿಜಾರುಗಳಿಗೆ ಹೋಗಿದ್ದವು ಮತ್ತು ೫ ಒಂಟೆಗಳ ಮೂರರಷ್ಟು ನದಿಯ ತೀರದಲ್ಲಿ ಉಳಿದಿದ್ದವು. ಆ ಒಂಟೆಗಳ ಹಿಂಡಿನ ಸಂಖ್ಯಾತ್ಮಕ ಬೆಲೆಯೇನು?

೩೫. ವರ್ಷ ಋತುವಿನಲ್ಲಿ, ಮೋಡಗಳ ಸಾಲಿನಿಂದ ಉಂಟಾದ ಡೋಲಿನ ಸ್ಪಷ್ಟ ಧ್ವನಿಯನ್ನು ಕೇಳಿದ ನಂತರ, ನವಿಲುಗಳ ಗುಂಪಿನ $\frac{೧}{೧೬}$ ಮತ್ತು $\frac{೧}{೮}$ ಭಾಗ ಹಾಗೂ ಶೇಷದ $\frac{೧}{೩}$ ಭಾಗ ಮತ್ತು ತದನಂತರ ಶೇಷದ $\frac{೧}{೬}$ ಭಾಗ, ಸಂತೋಷದಿಂದ ಪುಲಕಿತವಾಗಿ ಪರ್ವತಶಿಖರದ ಮೇಲಿದ್ದ ವಿಶಾಲವಾದ ನಾಟ್ಯಶಾಲೆಯಲ್ಲಿ ನಾಟ್ಯಮಾಡಲು ತೊಡಗಿದವು ಮತ್ತು ಆ ಸಮೂಹದ ವರ್ಗಮೂಲದ ೫ ರಷ್ಟು, *ವಕುಲ* ವೃಕ್ಷಗಳ ಶ್ರೇಷ್ಠವಾದ ಕಾಡಿನಲ್ಲಿ ಇದ್ದವು ಮತ್ತು ಉಳಿದ ೫ ಒಂದು *ಪುನ್ನಾಗ* ವೃಕ್ಷದ ಮೇಲೆ ಕಂಡವು. ಎಲೈ ಅಂಕಗಣಿತಜ್ಞನೇ, ಲೆಕ್ಕಾಚಾರ ಮಾಡಿದ ಮೇಲೆ, ಆ ಸಮೂಹದಲ್ಲಿದ್ದ ನವಿಲುಗಳ ಒಟ್ಟು ಸಂಖ್ಯೆಯನ್ನು ತಿಳಿಸು.

---

1. B reads हस्ति 2. B reads नागाः 3. B reads किं स्यात्तेषां कुञ्जराणां प्रमाणम् ।



CC-0, Gurukul Kangri Collection, Haridwar

Digitized by Arya Samaj Foundation Chennai and eGangotri



चरति कमलषण्डे सारसानां चतुर्थो नवमचरणभागौ सप्त मूलानि चाद्रौ ।
विकचवकुलमध्ये सप्तनिघ्नाष्टमानाः कति कथय सखे त्वं पक्षिणो दक्ष साक्षात् ॥ ३६ ॥
न भागः कपिबृन्दस्य त्रीणि मूलानि पर्वते । चत्वारिंशद्वने दृष्टा वानरास्तद्गणः कियान् ॥ ३७ ॥
कलकण्ठानामर्धं सहकारतरोः प्रफुल्लशाखायाम् ।
तिलकेऽष्टादश तस्थुर्नो मूलं कथय पिकनिकरम् ॥ ३८ ॥

---

36. Carati kamalaṣaṇḍe sārasānāṁ caturtho navamacarṇabhāgau sapta mūlāni cādrau, vikacavakulamadhye saptanighnāṣṭamānāḥ kati kathaya sakhe tvaṁ pakṣiṇo dakṣa sākṣāt.

37. Na bhāgaḥ kapibṛndasya triṇi mūlāni parvate, catvāriṁśadvane dṛṣṭā vānarāstadgaṇaḥ kiyān.

38. Kalakaṇṭhānāmardhaṁ sahakārataroḥ praphullaśākhāyām,
tilake'ṣṭādaśa tasthurno mūlaṁ kathaya pikanikaram.

---

**36.** One-fourth (of an unknown number) of sārasa birds is moving in the midst of a cluster of lotuses; $\frac{1}{9}$ and $\frac{1}{4}$ parts (thereof) as well as 7 times the square root (thereof) move on a mountain; (then) in the midst of (some) blossomed *vakula* trees (the remainder) is (found to be) 56 in number. O you clever friend, tell me exactly how many birds there are altogether.

**37.** No fractional part of a collection of monkeys (is distributed anywhere); three times its square root are on a mountain and 40 (remaining) monkeys are seen in a forest. What is the measure of that collection (of monkeys)?

**38.** Half (the number) of cuckoos were found on the blossomed branch of a mango tree and 18 (were found) on a *tilaka* tree. No (multiple of the) square root (of their number was to be found anywhere). Give out (the numerical value of) the collection of cuckoos.

---

೩೬. ಒಂದು ಅಜ್ಞಾತ ಸಂಖ್ಯೆಯ ಸಾರಸ ಪಕ್ಷಿಗಳ $\frac{೧}{೪}$ ಭಾಗ ಕಮಲಗಳ ಸಮೂಹದಲ್ಲಿ ಚಲಿಸುತ್ತಿವೆ. ಅದರ $\frac{೧}{೯}$ ಮತ್ತು $\frac{೧}{೪}$ ಭಾಗ ಹಾಗೂ ಅದರ ವರ್ಗಮೂಲದ ೭ ರಷ್ಟು ಭಾಗ ಪರ್ವತದ ಮೇಲೆ ಚಲಿಸುತ್ತಿವೆ. ಕೆಲವು ಪುಷ್ಪಯುಕ್ತವಾದ *ವಕುಲ* ವೃಕ್ಷಗಳ ಮಧ್ಯದಲ್ಲಿ, ಶೇಷ ೫೬ ಇದ್ದವು. ಎಲ್ಲೆ ಜಾಣ ಸ್ನೇಹಿತನೇ, ಅಲ್ಲಿ ಒಟ್ಟು ಎಷ್ಟು ಪಕ್ಷಿಗಳಿದ್ದವೆಂದು ಸರಿಯಾಗಿ ಹೇಳು.

೩೭. ಕೋತಿಗಳ ಸಮೂಹದ ಯಾವುದೇ ಭಿನ್ನಾತ್ಮಕ ಭಾಗ ಎಲ್ಲೂ ಇಲ್ಲ. ಅದರ ವರ್ಗಮೂಲದ ಮೂರರಷ್ಟು ಪರ್ವತದ ಮೇಲಿವೆ ಮತ್ತು ಉಳಿದ ೪೦ ಕೋತಿಗಳನ್ನು ಒಂದು ಕಾಡಿನಲ್ಲಿ ನೋಡಲಾಯಿತು. ಆ ಕೋತಿಗಳ ಸಂಖ್ಯೆಯೇನು?

೩೮. ಕೋಗಿಲೆಗಳ ಸಂಖ್ಯೆಯಲ್ಲಿ $\frac{೧}{೨}$ ಭಾಗ ಒಂದು ಮಾವಿನ ಮರದ ಪುಷ್ಪಯುಕ್ತವಾದ ರೆಂಬೆಯ ಮೇಲೆ ಇದ್ದವು ಮತ್ತು ೧೮ ಒಂದು *ತಿಲಕ* ವೃಕ್ಷದ ಮೇಲಿದ್ದವು. ಅವುಗಳ ಸಂಖ್ಯೆಯ ವರ್ಗಮೂಲದ ಯಾವುದೇ ಅಪವರ್ತ್ಯವು ಎಲ್ಲೂ ಕಾಣಿಸಲಿಲ್ಲ. ಆ ಕೋಗಿಲೆಗಳ ಸಂಖ್ಯೆಯನ್ನು ತಿಳಿಸು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



हंसकुलस्य दलं वकुलेऽस्थात् पञ्च पदानि तमालकुजाग्रे ।
अत्र न किञ्चिदपि प्रतिदृष्टं तत्प्रमितिं कथय प्रिय शीघ्रम् ॥ ३९ ॥

**इति मूलजातिः ।**

अथ शेषमूलजातौ सूत्रम् -

पददलवर्गयुताग्रान्मूलं सप्राक्पदार्धमस्य कृतिः ।
दृश्ये मूलं प्राप्ते फलमिह भागं तु भागजातिविधिः ॥ ४० ॥

---

**39.** Haṁsakulasya dalaṁ vakule'sthāt pañca padāni tamālakujāgre, atra na kiñcidapi pratidṛṣṭaṁ tatpramitiṁ kathaya priya śīghram.

**Iti mūlajātiḥ**

Atha śeṣamulajātau sūtram -

**40.** Padadalavargayutāgrānmūlaṁ saprākpadārdhamasya kṛtiḥ, dṛśye mūlaṁ prāpte phalamiha bhāgaṁ tu bhāgajātividhiḥ.

---

**39.** Half of a collection of swans was found in the midst of *vakula* trees, five times the square root (of that collection was found) on the top of *tamāla* trees and here nothing was seen (to remain thereafter). O friend, give out quickly the numerical measure of that (collection).

**Here ends the *mūla* variety (of miscellaneous problems on fractions).**

The rule relating to the *śēśamūla* variety (of miscellaneous problems on fractions).

**40.** (Take) the square of half (the coefficient) of the sqaure root (of the remaining part of the unknown collective quantity) and combine it with the known number remaining and (then extract) the square root (of this sum and make that square root become) combined with half of the previously mentioned (coefficient of the) square root (of the remaining part of the unknown collective quantity). The square of this (last sum) will here be the required result,

---

೩೯. ಹಂಸಗಳ $\frac{೧}{೨}$ ಭಾಗವನ್ನು *ವಕುಲ* ವೃಕ್ಷಗಳ ಮಧ್ಯದಲ್ಲಿ, ನೋಡಲಾಯಿತು. ಆ ಸಮೂಹದ ವರ್ಗಮೂಲದ ಐದರಷ್ಟು, *ತಮಾಲ* ವೃಕ್ಷಗಳ ಮೇಲಿದ್ದವು ಮತ್ತು ಶೇಷ ಏನೂ ಉಳಿದಂತೆ ಕಾಣಲಿಲ್ಲ. ಎಲೈ ಸ್ನೇಹಿತನೇ, ಆ ಸಮೂಹದ ಸಂಖ್ಯಾತ್ಮಕ ಬೆಲೆಯನ್ನು ಬೇಗನೆ ತಿಳಿಸು.

**ಇಲ್ಲಿಗೆ (ಭಿನ್ನರಾಶಿಗಳ ಮೇಲಿನ ಮಿಶ್ರ ಲೆಕ್ಕಗಳ) *ಮೂಲ* ಜಾತಿಯು ಮುಗಿಯಿತು.**

(ಭಿನ್ನರಾಶಿಗಳ ಮೇಲಿನ ಮಿಶ್ರಲೆಕ್ಕಗಳ) *ಶೇಷ ಮೂಲ* ಜಾತಿಗೆ ಸಂಬಂಧಪಟ್ಟ ನಿಯಮ :

೪೦. ಅಜ್ಞಾತ ಸಮುಚ್ಚಯ ಸಂಖ್ಯೆಯ ಶೇಷ ಭಾಗದ ವರ್ಗಮೂಲದ ಗುಣಾಂಕದ ಅರ್ಧಭಾಗದ ವರ್ಗವನ್ನು ತೆಗೆದುಕೊ ಮತ್ತು ಅದರೊಂದಿಗೆ ಗೊತ್ತಿರುವ ಶೇಷ ಸಂಖ್ಯೆಯನ್ನು ಸೇರಿಸು. ಮೊತ್ತದ ವರ್ಗಮೂಲವನ್ನು ಕಂಡುಹಿಡಿ. ಅಜ್ಞಾತ ಸಮುಚ್ಚಯ ಸಂಖ್ಯೆಯ ಶೇಷ ಭಾಗವನ್ನು ವರ್ಗಮೂಲದ ಗುಣಾಂಕದ ಅರ್ಧಭಾಗದಲ್ಲಿ, ಈ ವರ್ಗಮೂಲವನ್ನು ಸೇರಿಸು. ಒಂದು ವೇಳೆ ಅಜ್ಞಾತ ಸಮುಚ್ಚಯ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अत्रोद्देशकः

गजयूथस्य त्र्यंश[1]श्शेषपदं च त्रिसङ्गुणं सानौ ।
सरसि त्रिहस्तिनीभिर्नागो दृष्टः कतीह गजाः ॥ ४१ ॥

---

Atroddeśakaḥ

41. Gajayūthasya tryaṁśaśśeṣapadaṁ ca trisaṅguṇaṁ sānau, sarasi trihastinībhirnāgo dṛṣṭaḥ katīha gajāḥ.

---

when the remaining part (of the unknown collective quantity) is taken as the original (collective quantity itself). But when that remaining part (of the unknown collective quantity) is treated merely as a part, the rule relating to the *bhāga* variety (of miscellaneous problems on fractions) is to be applied.

***Examples in illustration thereof***

**41.** One-third of a herd of elephants and three times the square root of the remaining part (of the herd) were seen on a mountain slope and in a lake was seen a male elephant along with three female elephants (constituting the ultimate remainder). How many were the elephants here?

---

ಸಂಖ್ಯೆಯ ಮೂಲ ಸಮುಚ್ಚಯ ಸಂಖ್ಯೆಯನ್ನೇ ತೆಗೆದುಕೊಂಡಿದ್ದಾದರೆ, ಆಗ ಈ ಅಂತಿಮ ಮೊತ್ತದ ವರ್ಗವೇ ಬೇಕಾದ ಫಲವಾಗಿರುತ್ತದೆ. ಆದರೆ, ಒಂದು ವೇಳೆ ಅಜ್ಞಾತ ಸಮುಚ್ಚಯ ಸಂಖ್ಯೆಯ ಶೇಷ ಭಾಗವು ಕೇವಲ ಒಂದು ಭಾಗವಾಗಿ ಮಾತ್ರ ವರ್ತಿಸಿದರೆ ಆಗ *ಭಾಗ* ಜಾತಿಗೆ ಸಂಬಂಧಪಟ್ಟ ನಿಯಮವನ್ನು ಅನ್ವಯಿಸಲಾಗುತ್ತದೆ.

ಉದಾಹರಣೆಗಳಿಂದ ವಿಶ್ಲೇಷಣ

೪೧. ಒಂದು ಆನೆಗಳ ಹಿಂಡಿನ $\frac{೧}{೩}$ ಭಾಗ ಮತ್ತು ಆ ಹಿಂಡಿನ ಶೇಷ-ಭಾಗದ ವರ್ಗಮೂಲದ ಮೂರರಷ್ಟು, ಒಂದು ಪರ್ವತದ ಇಳಿಜಾರಿನಲ್ಲಿ ಕಂಡವು ಮತ್ತು ಒಂದು ಸರೋವರದಲ್ಲಿ ಒಂದು ಗಂಡು ಆನೆಯು ಮೂರು ಹೆಣ್ಣು ಆನೆಗಳ (ಇದು ಅಂತಿಮ ಶೇಷ) ಜೊತೆ ಇರುವುದು ಕಂಡಿತು. ಇಲ್ಲಿ ಇದ್ದ ಆನೆಗಳ ಸಂಖ್ಯೆಯೇನು?

---

1. B reads शेषस्य पदं त्रिसंगुण

**40.** Algebraically, $x - bx = \left\{\frac{c}{2} + \sqrt{\left(\frac{c}{2}\right)^2 + a}\right\}^2$. From this the value of $x$ is to be found out according to rule 4 given in this chapter. This value of $x - bx$ is obtained easily from the equation $x - bx + (c\sqrt{x - bx} + a) = 0$.

೪೦. ಬೀಜಗಣಿತರೂಪದಲ್ಲಿ $ಕ - ಬಕ = \left\{\frac{ಸ}{೨} + \sqrt{\left(\frac{ಸ}{೨}\right)^2 + ಅ}\right\}^2$. ಇದರಿಂದ, ಕ ದ ಬೆಲೆಯನ್ನು ಇದೇ ಅಧ್ಯಾಯದ ೪ ನೇ ನಿಯಮದ ಪ್ರಕಾರ ಕಂಡುಹಿಡಿಯಬೇಕಾಗಿದೆ. $ಕ - ಬಕ$ ದ ಈ ಬೆಲೆಯನ್ನು $ಕ - ಬಕ + ಸ(\sqrt{ಕ - ಬಕ} + ಅ) = ೦$ ಸಮೀಕರಣದಿಂದ ಸುಲಭವಾಗಿ ಪಡೆಯಬಹುದಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



निर्जन्तुकप्रदेशे नानाद्रुमषण्डमण्डितोद्याने । आसीनानां यमिनां मूलं तरुमूलयोगयुतम् ॥ ४२ ॥
शेषस्य दशमभागो मूलं नवमोऽथ मूलमष्टांशः। मूलं सप्तममूलं षष्ठो मूलं च पञ्चमो मूलं ॥ ४३ ॥
एते भागाः काव्यप्रवचनधर्मप्रमाणनयविद्याः । वादच्छन्दोज्यौतिषमन्त्रालङ्कारशब्दज्ञाः ॥ ४४ ॥
द्वादशतपः प्रभावा द्वादशभेदाङ्गशास्त्रकुशलधियः ।
द्वादश मुनयो दृष्टाः कियती मुनिचन्द्र यतिसमितिः ॥ ४५ ॥

---

42. Nirjantukapradeśe nānādrumaṣaṇḍamaṇḍitodyāne, āsīnānāṁ yamināṁ mūlaṁ tarumūlayogayutam.

43. Śeṣasya daśamabhāgo mūlaṁ navamo'tha mūlamaṣṭāṁśaḥ, mūlaṁ saptamamūlaṁ ṣaṣṭo mūlaṁ ca pañcamo mulaṁ.

44. Ete bhāgāḥ kāvyapravacanadharmapramāṇanayavidyāḥ, vādacchandojyautiṣamantrālaṅkāraśabdajñāḥ.

45. Dvādaśatapaḥ prabhāvā dvādaśabhedāṅgaśāstrakuśaladhiyaḥ, dvādaśa munayo dṛṣṭāḥ kiyatī municandra yatisamitiḥ.

---

**42-45.** In a garden beautified by groves of various kinds of trees, in a place free from all living animals, many ascetics were seated. Of them the number equivalent to the square root of the whole collection were practising *yōga* at the foot of the trees. One-tenth of the remainder, the square root (of the remainder after deducting this), $\frac{1}{9}$ (of the remainder after deducting this), then the square root (of the remainder after deducting this), $\frac{1}{8}$ (of the after remainder deducting this), the square root (of the remainder after deducting this), $\frac{1}{7}$ (of the remainder after deducting this), the square root (of the remainder after deducting this), $\frac{1}{6}$ (of the remainder after deducting this), the square root (of the remainder after deducting this), $\frac{1}{5}$ (of the remainder after deducting this), the square root (of the remainder after deducting this)-these parts consisted of those who were learned in the teaching of literature, in religious law, in logic and in politics, as also of those who were versed in controversy, prosody, astronomy, magic, rhetoric and grammar and of those who possessed the power derived from the 12 kinds of austerities, as well as of those who possessed an intelligent knowledge of the twelve varieties of the *aṅga-śāstra* and at last 12 ascetics were seen (to remain without being included among those mentioned before). O (you) excellent ascetic, of what numerical value was (this) collection of ascetics?

---

೪೨-೪೫. ನಾನಾವಿಧದ ಮರಗಳ ತೋಪಿನಿಂದ ಸುಂದರವಾಗಿರುವ ಒಂದು ಉದ್ಯಾನವನದಲ್ಲಿ, ಎಲ್ಲ ಜೀವಿಗಳಿಂದ ಮುಕ್ತವಾಗಿರುವ ಒಂದು ಸ್ಥಳದಲ್ಲಿ, ಕೆಲವು ತಪಸ್ವಿಗಳು ಕುಳಿತಿದ್ದರು. ಅವರಲ್ಲಿ, ಒಟ್ಟು ಸಂಖ್ಯೆಯ ವರ್ಗಮೂಲಕ್ಕೆ ಸಮವಾದ ಸಂಖ್ಯೆಯಷ್ಟು ತಪಸ್ವಿಗಳು ಮರಗಳ ಬುಡದಲ್ಲಿ ಯೋಗವನ್ನು ಅಭ್ಯಾಸಮಾಡುತ್ತಿದ್ದರು. ಶೇಷದ $\frac{೧}{೧೦}$ ಭಾಗ, (ಇದನ್ನು ಕಳೆದ) ಶೇಷದ ವರ್ಗಮೂಲ, (ಇದನ್ನು ಕಳೆದ) ಶೇಷದ $\frac{೧}{೯}$ ಭಾಗ,(ಇದನ್ನು ಕಳೆದ) ಶೇಷದ $\frac{೧}{೮}$ ಭಾಗ, (ಇದನ್ನು ಕಳೆದ) ಶೇಷದ ವರ್ಗಮೂಲ (ಇದನ್ನು ಕಳೆದ) ಶೇಷದ $\frac{೧}{೭}$ ಭಾಗ, (ಇದನ್ನು ಕಳೆದ) ಶೇಷದ ವರ್ಗಮೂಲ, (ಇದನ್ನುಕಳೆದ) ಶೇಷದ $\frac{೧}{೬}$ ಭಾಗ, (ಇದನ್ನು ಕಳೆದ) ಶೇಷದ $\frac{೧}{೫}$ ಭಾಗ, ಇದನ್ನು ಕಳೆದ ಶೇಷದ ವರ್ಗಮೂಲದಿಂದ ನಿರೂಪಿತವಾದ ಸಂಖ್ಯೆಗಳಷ್ಟು ತಪಸ್ವಿಗಳನ್ನು, ಕ್ರಮವಾಗಿ ಕಾವ್ಯಪ್ರವಚನ, ಧರ್ಮ, ತರ್ಕಶಾಸ್ತ್ರ, ರಾಜಕೀಯ, ವಾದ, ಛಂದಶಾಸ್ತ್ರ, ಜ್ಯೋತಿಷ್ಯ, ಮಂತ್ರವಿದ್ಯೆ, ಅಲಂಕಾರ ಮತ್ತು ವ್ಯಾಕರಣವನ್ನು ತಿಳಿದವರಾಗಿದ್ದರು ಹಾಗೂ ಅವರು ಹನ್ನೆರಡು ರೀತಿಯ ತಪಸ್ಸಿನ ಪ್ರಭಾವದಿಂದ ಪ್ರಾಪ್ತವಾಗುವಂತಹ ಶಕ್ತಿಯನ್ನು ಪಡೆದವರಾಗಿದ್ದರು ಹಾಗೂ ಹನ್ನೆರಡು ಪ್ರಕಾರಗಳ *ಅಂಗಶಾಸ್ತ್ರ*ಗಳನ್ನು ಬುದ್ಧಿವಂತಿಕೆಯಿಂದ ತಿಳಿಯುವವರಾಗಿದ್ದರು; ಇವರುಗಳನ್ನು ಬಿಟ್ಟು ಕಡೆಯಲ್ಲಿ ೧೨ ಮುನಿಗಳು ನೋಡಲ್ಪಟ್ಟರು. ಎಲೈ ಶ್ರೇಷ್ಠ ಮುನಿಯೇ, ಈ ತಪಸ್ವಿಗಳ ಸಮೂಹದ ಸಂಖ್ಯಾತ್ಮಕ ಬೆಲೆಯೇನು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



मूलानि पञ्च चरणेन युतानि सानौ शेषस्य पञ्चनवमः करिणां नगाग्रे ।
मूलानि पञ्च सरसीजवने रमन्ते नद्यास्तटे पडिह ते द्विरदाः कियन्तः ॥ ४६ ॥

**इति शेषमूलजातिः ।**

अथ द्विरग्रशेषमूलजातौ सूत्रम् -

मूलं दृश्यं च भजेदंशकपरिहाणरूपघातेन । पूर्वाग्रमग्रराशौ क्षिपेदतश्शेषमूलविधिः ॥ ४७ ॥

---

46. Mūlāni pañca caraṇena yutāni sānau śeṣasya pañcanavamaḥ kariṇāṁ nagāgre, mūlāni pañca sarasījavane ramante nadyāstaṭe ṣaḍiha te dviradāḥ kiyantaḥ.

**Iti śeṣamūlajātiḥ**

Atha dviragraśeṣamūlajātau sūtram-

47. Mūlaṁ dṛśyaṁ ca bhajedaṁśakaparihāṇarūpaghātena, pūrvāgramagrarāśau kṣipedataśśeṣamūlavidhiḥ.

---

**46.** Five and one-fourth times the square root (of a herd) of elephants are sporting on a mountain slope; $\frac{5}{9}$ of the remainder sport on the top of the mountain; five times the square root of the remainder (after deducting this) sport in a forest of lotuses and there are 6 elephants then (left) on the bank of a river. How many are (all) the elephants here?

**Here ends the *śēśmūla* variety (of miscellaneous problems on fractions).**

The rule relating to the *śēśamūla* variety involving two known (quantities constituting the remainders :

**47.** The (coefficient of the) square root (of the unknown collective quantity) and the (final) quantity known (to remain), should (both) be divided by the product of the fractional (proportional) quantities, as subtracted from one (in each case); then the first known quantity should be added to the (other) known quantity (treated as above). Thereafter the operation relating to the *śēśamūla* variety (of miscellaneous problems on fractions is to be adopted).

---

೪೬. ಒಂದು ಆನೆಗಳ ಹಿಂಡಿನ ವರ್ಗಮೂಲದ ೫ $\frac{೧}{೪}$ ಭಾಗ, ಪರ್ವತದ ಇಳಿಜಾರಿನಲ್ಲಿ ಕ್ರೀಡಿಸುತ್ತಿದ್ದವು. ಶೇಷದ $\frac{೫}{೯}$ ಭಾಗ ಪರ್ವತದ ಮೇಲೆ ಕ್ರೀಡಿಸುತ್ತಿದ್ದವು. (ಇದನ್ನು ಕಳೆದ) ಶೇಷದ ವರ್ಗಮೂಲದ ಐದರಷ್ಟು ಕಮಲಗಳ ಕಾಡಿನಲ್ಲಿ ಕ್ರೀಡಿಸುತ್ತಿದ್ದವು ಮತ್ತು ಶೇಷ ೬ ಆನೆಗಳು ನದೀದಡದಲ್ಲಿ ಉಳಿದಿದ್ದವು. ಇಲ್ಲಿ ಒಟ್ಟು ಎಷ್ಟು ಆನೆಗಳಿದ್ದವು?

**ಇಲ್ಲಿಗೆ, (ಭಿನ್ನರಾಶಿಗಳ ಮೇಲಿನ ಮಿಶ್ರ ಲೆಕ್ಕಗಳ) *ಶೇಷಮೂಲ* ಜಾತಿಯು ಮುಗಿಯಿತು.**

(ಶೇಷಗಳನ್ನು ಉಂಟುಮಾಡುವಂತಹ ಎರಡು ಗೊತ್ತಿರುವ ಸಂಖ್ಯೆಗಳನ್ನೊಳಗೊಂಡ) *ಶೇಷಮೂಲ* ಜಾತಿಗೆ ಸಂಬಂಧಪಟ್ಟ ನಿಯಮ :

೪೭. ಅಜ್ಞಾತ ಸಮುಚ್ಚಯದ ವರ್ಗಮೂಲದ ಗುಣಾಂಕ ಮತ್ತು (ಶೇಷವಿರುವಂತಹ) ಕಡೆಯ ಗೊತ್ತಿರುವ ಸಂಖ್ಯೆ, ಇವೆರಡನ್ನೂ ಪ್ರತಿಯೊಂದು ಪ್ರಕರಣದಲ್ಲೂ ಭಿನ್ನಾತ್ಮಕ ಅನುಪಾತಗಳನ್ನು ತೆಗೆದುಕೊಂಡು ೧ ರಲ್ಲಿ ಕಳೆದು, ಶೇಷಗಳನ್ನು ಗುಣಿಸಿದರೆ ಬರುವ ಸಂಖ್ಯೆಯಿಂದ ಭಾಗಿಸಬೇಕು. ನಂತರ ಗೊತ್ತಿರುವ ಮೊದಲನೆ ಸಂಖ್ಯೆಯನ್ನು, ಇನ್ನೊಂದು ಗೊತ್ತಿರುವ ಸಂಖ್ಯೆ (ಇದನ್ನು ಮೇಲೆ ವ್ಯವಹರಿಸಲಾಗಿದೆ) ಯೊಂದಿಗೆ ಸೇರಿಸಬೇಕು. ಇದಾದ ನಂತರ (ಭಿನ್ನರಾಶಿಗಳ ಮೇಲಿನ ಮಿಶ್ರ ಲೆಕ್ಕಗಳ) *ಶೇಷಮೂಲ* ಜಾತಿಗೆ ಸಂಬಂಧಪಟ್ಟ ಕ್ರಿಯೆಯನ್ನು ಉಪಯೋಗ ಮಾಡಿಕೊಳ್ಳಬೇಕು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**47.** Algebraically, this rule enables us to arrive at the expression $\frac{c}{(1-b_1)(1-b_2)\text{ x }....}$ and $\frac{a_2}{(1-b_1)(1-b_2)\text{ x }....} + a_1$, which are required to be substituted for c and *a* respectively in the formula for *śēṣamūla*, which is $x - bx = \left\{\frac{c}{2} + \sqrt{\left(\frac{c}{2}\right)^2 + a}\right\}^2$. In applying this formula the value of b becomes zero, as the mula or square root involved in the *dviragra-śēṣamūla* is that of the total collective quantity and not of a fractional part of that quantity. Substituting as desired, we get $x = \left\{\frac{c}{2(1-b_1)(1-b_2)\text{ x }....} + \sqrt{\left(\frac{c}{2(1-b_1)(1-b_2)\text{ x }....}\right)^2 + \frac{a_2}{(1-b_1)(1-b_2)\text{ x }....} + a_1}\right\}^2$ This result may easily be obtained from the equation $x - a_1 - b_1(x - a_1) - b_2\{x - a_1 - b_1(x - a_1)\} - .....c\sqrt{x - a_2} = 0$, where $b_1$, $b_2$, & *c.*, are the various fractional parts of the successive remainders and $a_1$ and $a_2$ are the first known quantity and the final known quantity respectively.

**೪೭.** ಬೀಜಗಣಿತರೂಪದಲ್ಲಿ ಈ ನಿಯಮದಿಂದ $\frac{ಸ}{(೧ - ಬ_೧)(೧ - ಬ_೨)\text{ x }.....}$ ಮತ್ತು $\frac{ಅ_೧}{(೧ - ಬ_೧)(೧ - ಬ_೨)\text{ x }.....} + ಅ_೧$ ಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಇವುಗಳನ್ನು *ಶೇಷಮೂಲ* ಜಾತಿಯ ಸೂತ್ರ $ಕ - ಬಕ = \left\{\frac{ಸ}{೨} + \sqrt{\left(\frac{ಕ}{೨}\right)^೨ + ಅ}\right\}^೨$ ದಲ್ಲಿ ಸ ಮತ್ತು ಅ ಗಳ ಬದಲಿಗೆ ಬಳಸಬಹುದಾಗಿದೆ. ಈ ಸೂತ್ರವನ್ನು ಉಪಯೋಗಿಸಿದಾಗ ಬಂದ ಬೆಲೆಯು ಶೂನ್ಯವಾಗುತ್ತದೆ. ಏಕೆಂದರೆ ದ್ವಿರಗ್ರಶೇಷಮೂಲದಲ್ಲಿ ಬರುವ ಮೂಲ ಅಥವಾ ವರ್ಗಮೂಲವು ಒಟ್ಟು ಸಮುಚ್ಚಯ ಸಂಖ್ಯೆಯದ್ದಾಗಿರುತ್ತದೆಯೇ ಹೊರತು ಅದರ ಭಿನ್ನಾತ್ಮಕ ಭಾಗದ್ದಾಗಿರುವುದಿಲ್ಲ. ಇಚ್ಛೆಯಂತೆ ಬದಲಿ ಮಾಡಿದಾಗ, ನಮಗೆ $ಕ = \left\{\frac{ಸ}{೨(೧ - ಬ_೧)(೧ - ಬ_೨)\text{ x...}} + \sqrt{\left(\frac{ಸ}{೨(೧ - ಬ_೧)(೧ - ಬ_೨)\text{ x...}}\right)^೨ + \frac{ಅ_೨}{೨(೧ - ಬ_೧)(೧ - ಬ_೨)\text{ x...}} + ಅ_೧}\right\}^೨$ ದೊರೆಯುತ್ತದೆ. ಇದನ್ನು ಸುಲಭವಾಗಿ ಸಮೀಕರಣ $ಕ - ಅ_೧ - ಬ_೧(ಕ - ಅ_೧) - ಬ_೨(ಕ - ಅ_೧ - ಬ_೧(ಕ - ಅ_೧)) ..... - ಸ\sqrt{ಕ - ಅ_೨} = ೦$ ದಿಂದ ಪಡೆಯಬಹುದಾಗಿದೆ. ಇಲ್ಲಿ $ಬ_೧$, $ಬ_೨$.... ಮೊದಲಾದವು ಉತ್ತರೋತ್ತರ ಶೇಷಗಳ ವಿವಿಧ ಭಿನ್ನಾತ್ಮಕ ಭಾಗಗಳಾಗಿವೆ ಮತ್ತು $ಅ_೧$ ಮತ್ತು $ಅ_೨$ ಗಳು ಕ್ರಮವಾಗಿ ಗೊತ್ತಿರುವ ಮೊದಲನೆಯ ಸಂಖ್ಯೆ ಮತ್ತು ಗೊತ್ತಿರುವ ಕಡೆಯ ಸಂಖ್ಯೆಗಳಾಗಿವೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

मधुकर एको दृष्टः खे पद्मे शेषपञ्चमचतुर्थौ । शेषत्र्यंशो मूलं द्वा[1]वाम्रे ते कियन्तः स्युः ॥ ४८ ॥
सिंहाश्चत्वारोऽद्रौ प्रतिशेषषडंशकादिमार्धान्ताः ।
मूले चत्वारोऽपि च विपिने दृष्टाः कियन्तस्ते ॥ ४९ ॥

---

**Atroddeśakaḥ**

**48.** Madhukara eko dṛṣṭaḥ khe padme śeṣapañcamacaturtho, ṣeṣatryaṁśo mūlaṁ dvāvāmre te kiyantaḥ syuḥ.

**49.** Siṁhāścatvāro'drau pratiśeṣaṣaḍaṁśakādimārdhāntāḥ, mūle catvāro'pi ca vipine dṛṣṭāḥ kiyantaste.

---

***Examples in illustration thereof***

**48.** A single bee (out of a swarm of bees) was seen in the sky; $\frac{1}{5}$ of the remainder (of the swarm) and $\frac{1}{4}$ of the remainder (left thereafter) and (again) $\frac{1}{3}$ of the remainder (left thereafter) and (a number of bees equal to) the square root (of the numercial value of the swarm, were seen) in lotuses and two (bees remaining at last were seen) on a mango tree. How many are those (bees in the swarm)?

**49.** Four (out of a collection of) lions were seen on a mountain and fractional parts commencing with $\frac{1}{6}$ and ending with $\frac{1}{2}$ of the successive remainders (of the collection) and (lions equivalent in number to) twice the square root (of the numerical value of the collection), as also (the finally remaining) four (lions), were seen in a forest. How many are those (lions in the collection)?

---

**ಉದಾಹರಣೆಗಳಿಂದ ವಿಶ್ಲೇಷಣ**

೪೮. ಭ್ರಮರಗಳ ಸಮೂಹದಿಂದ, ಒಂದು ಭ್ರಮರವನ್ನು ಆಕಾಶದಲ್ಲಿ ನೋಡಲಾಯಿತು. (ಸಮೂಹದ) $\frac{೧}{೫}$ ಭಾಗ ಮತ್ತು (ತದನಂತರ ಉಳಿದ) ಶೇಷದ $\frac{೧}{೪}$ ಭಾಗ ಮತ್ತು (ತದನಂತರ ಉಳಿದ) ಶೇಷದ $\frac{೧}{೩}$ ಭಾಗ ಮತ್ತು ಸಮೂಹದ ವರ್ಗಮೂಲದ ಸಂಖ್ಯಾತ್ಮಕ ಬೆಲೆಗೆ ಸಮವಾದ ಭ್ರಮರಗಳನ್ನು ಕಮಲಗಳಲ್ಲಿ ನೋಡಲಾಯಿತು ಮತ್ತು ಕಡೆಯಲ್ಲಿ ಉಳಿದ ಎರಡು ಭ್ರಮರಗಳನ್ನು ಮಾವಿನ ಮರದ ಮೇಲೆ ನೋಡಲಾಯಿತು. (ಆ ಸಮೂಹದಲ್ಲಿದ್ದ) ಭ್ರಮರಗಳ ಸಂಖ್ಯೆಯೇನು?

೪೯. ಸಿಂಹಗಳ ಒಂದು ಗುಂಪಿನಲ್ಲಿ, ನಾಲ್ಕನ್ನು ಪರ್ವತದ ಮೇಲೆ ನೋಡಲಾಯಿತು ಮತ್ತು ಗುಂಪಿನ ಉತ್ತರೋತ್ತರ ಶೇಷಗಳ ಭಿನ್ನಾತ್ಮಕ ಭಾಗ $\frac{೧}{೬}$ ರಿಂದ ಆರಂಭವಾಗಿ $\frac{೧}{೨}$ ಕ್ಕೆ ಕೊನೆಗೊಳ್ಳುವ ಮತ್ತು ಗುಂಪಿನ ಸಂಖ್ಯೆಯ ವರ್ಗಮೂಲದ ಎರಡರಷ್ಟಕ್ಕೆ ಸಮವಾದ ಸಂಖ್ಯೆಯ ಸಿಂಹಗಳನ್ನು ಹಾಗೂ ಕಡೆಯಲ್ಲಿ ಉಳಿದ ನಾಲ್ಕು ಸಿಂಹಗಳನ್ನು ಕಾಡಿನಲ್ಲಿ ನೋಡಲಾಯಿತು. ಆ ಗುಂಪಿನಲ್ಲಿದ್ದ ಸಿಂಹಗಳೆಷ್ಟು?

---

1. B reads द्वौ चाम्रे



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



तरुणहरिणीयुग्मं दृष्टं द्विसङ्गुणित वने कुधरनिकटे शेषाः पञ्चांशकादिदलान्तिमाः ।
विपुलकलमक्षेत्रे तासां पदं त्रिभिराहतं कमलतरसीतीरे तस्थुर्दशैव गणः कियान् ॥ ५० ॥

इति द्विरग्रशेषमूलजातिः ।

अथांशमूलजातौ सूत्रम् -

भागगुणे मूलाग्रे न्यस्य पदप्राप्तदृश्यकरणेन । यल्लब्धं भागहृतं धनं भवेदंशमूलविधौ ॥ ५१ ॥

---

50. Taruṇahariṇīyugmaṁ dṛṣṭaṁ dvisaṅguṇita vane kudharanikaṭe śeṣāḥ pañcāṁśakādidalāntimāḥ, vipulakalamakṣetre tāsāṁ padaṁ tribhirāhataṁ kamalasarasītīre tasthurdaśaiva gaṇaḥ kiyān.

**Iti dviragraśeṣamūlajātiḥ**

Athāṁśamūlajātau sūtram-

51. Bhāgaguṇe mūlāgre nyasya padaprāptadṛśyakaraṇena, yallabdhaṁ bhāgahṛtaṁ dhanaṁ bhavedaṁśamūlavidhau.

---

**50.** (Out of a herd of deer) two pairs of young female deer were seen in a forest; fractional parts commencing with $\frac{1}{5}$ and ending with $\frac{1}{2}$ of the (successive) remainders (of the herd were seen) near a mountain; (a number) of them (equivalent to) 3 times the square root (of the numerical value of the herd) were seen in an extensive paddy field and (ultimately) only ten remained on the bank of a lotus lake. What is the (numerical) measure of the herd?

**Thus ends the *śēśamūla* variety involving two known quantities.**

The rule relating to the *aṁśamūla* variety (of miscellaneous problems on fractions).

**51.** Write down (the coefficient of) the square root (of the given fraction of the unknown collective quantity) and the known quantity (ultimately remaining, both of these) having been multiplied by the (given proportional) fraction; then that result which is arrived at by means of the operation of finding out (the unknown quantity) in the *śēśamūla* variety (of miscellaneous problems of fractions), when divided by the given proportional fraction, becomes the required quantity in the *aṁśamūla* variety (of miscellaneous problems on fractions).

---

೫೦. (ಜಿಂಕೆಗಳ ಒಂದು ಗುಂಪಿನಲ್ಲಿ) ಎರಡು ಜೊತೆ ಯುವ ಹೆಣ್ಣು ಜಿಂಕೆಗಳನ್ನು ಒಂದು ಕಾಡಿನಲ್ಲಿ ನೋಡಲಾಯಿತು. ಗುಂಪಿನ ಉತ್ತರೋತ್ತರ ಶೇಷಗಳ ಭಿನ್ನಾತ್ಮಕ ಭಾಗ, $\frac{೧}{೫}$ ರಿಂದ ಆರಂಭವಾಗಿ $\frac{೧}{೨}$ ಕ್ಕೆ ಕೊನೆಗೊಳ್ಳುವ ಭಾಗಗಳನ್ನು ಒಂದು ಪರ್ವತದ ಹತ್ತಿರ ನೋಡಲಾಯಿತು. ಗುಂಪಿನ ಸಂಖ್ಯೆಯ ವರ್ಗಮೂಲದ ಮೂರರಷ್ಟಕ್ಕೆ ಸಮವಾದ ಸಂಖ್ಯೆಯ ಜಿಂಕೆಗಳನ್ನು, ವಿಶಾಲವಾದ ಭತ್ತದ ಗದ್ದೆಯಲ್ಲಿ ನೋಡಲಾಯಿತು ಮತ್ತು (ಅಂತಿಮವಾಗಿ) ಕೇವಲ ಹತ್ತು ಮಾತ್ರ ಒಂದು ತಾವರೆ ಸರೋವರದಲ್ಲಿ ಉಳಿದವು. ಗುಂಪಿನ ಸಂಖ್ಯಾತ್ಮಕ ಬೆಲೆಯೇನು?

**ಇಲ್ಲಿಗೆ ಎರಡು ಗೊತ್ತಿರುವ ಸಂಖ್ಯೆಗಳನ್ನೊಳಗೊಂಡ *ಶೇಷಮೂಲ* ಜಾತಿಯು ಮುಗಿಯಿತು.**

(ಭಿನ್ನರಾಶಿಗಳ ಮೇಲಿನ ಮಿಶ್ರ ಲೆಕ್ಕಗಳ) *ಅಂಶಮೂಲ* ಜಾತಿಗೆ ಸಂಬಂಧಪಟ್ಟ ನಿಯಮ :

೫೧. ಅಜ್ಞಾತ ಸಮುಚ್ಚಯದ ಕೊಟ್ಟಿರುವ ಭಿನ್ನಾಂಕದ ವರ್ಗಮೂಲದ ಗುಣಾಂಕವನ್ನು ಹಾಗೂ ಕೆಲವು ಶೇಷವಾಗಿ ಉಳಿದ ಗೊತ್ತಿರುವ ಸಂಖ್ಯೆಯನ್ನು ಬರೆ. ಇವೆರಡು ಸಂಖ್ಯೆಗಳನ್ನು ಕೊಟ್ಟಿರುವ ಸಮಾನುಪಾತದ ಭಿನ್ನರಾಶಿಯಿಂದ ಗುಣಿಸು. ನಂತರ (ಭಿನ್ನರಾಶಿಗಳ ಮೇಲಿನ ಮಿಶ್ರ ಲೆಕ್ಕಗಳ) *ಶೇಷಮೂಲ* ಜಾತಿಯಲ್ಲಿ ಅಜ್ಞಾತ ಸಂಖ್ಯೆಯನ್ನು ಕಂಡುಹಿಡಿಯುವ ಕ್ರಿಯೆಯಿಂದ ಯಾವ ಫಲವು ದೊರೆಯುವುದೋ ಅದನ್ನು ಕೊಟ್ಟಿರುವಂತಹ ಸಮಾನುಪಾತದ ಭಿನ್ನರಾಶಿಯಿಂದ ಭಾಗಿಸಿದಾಗ (ಭಿನ್ನರಾಶಿಗಳ ಮೇಲಿನ ಮಿಶ್ರ ಲೆಕ್ಕಗಳ) *ಅಂಶಮೂಲ* ಜಾತಿಯಲ್ಲಿ ಬೇಕಾದ ಸಂಖ್ಯೆಯು ದೊರೆಯುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**50.** The word *hariṇī* occuring in this stanza not only means 'a female deer' but is also the name of the metre in which the stanza is composed.

**51.** Algebraically stated, this rule helps us to arrive at $cb$ and $ab$, which are required to be substituted for $c$ and $b$ respectively in the formula $x - bx = \left\{\frac{c}{2} + \sqrt{\left(\frac{c}{2}\right)^2 + a}\right\}^2$, as in the *śesamūla* variety. As pointed out in the note Under stanza 47, $x - bx$ becomes $x$ here also. After substituting as desired and dividing the result by $b$, we get $x = \left\{\frac{cb}{2} + \sqrt{\left(\frac{cb}{2}\right)^2 + ab}\right\}^2 \div b$. This value of $x$ may be easily arrived at from the the equation $x - c\sqrt{bx - a} = 0$.

೫೦. ಈ ಶ್ಲೋಕದಲ್ಲಿ ಬರುವ *ಹರಿಣಿ* ಪದದ ಅರ್ಥ ಕೇವಲ *ಹೆಣ್ಣು ಜಿಂಕೆ* ಎಂದಷ್ಟೇ ಅಲ್ಲ, ಇದು ಈ ಶ್ಲೋಕವನ್ನು ರಚಿಸಿರುವ ಛಂದಸ್ಸಿನ ಹೆಸರೂ ಕೂಡ ಆಗಿದೆ.

೫೧. ಬೀಜಗಣಿತರೂಪದಲ್ಲಿ ತಿಳಿಸುವುದಾದರೆ, ಈ ನಿಯಮವು *ಸಬ* ಮತ್ತು *ಅಬ* ಗಳ ಬೆಲೆಗಳನ್ನು ಕಂಡುಹಿಡಿಯಲು ಸಹಾಯವಾಗುತ್ತದೆ. ಶೇಷಮೂಲ ಜಾತಿಯಂತೆಯೇ

$ಕ - ಬಕ = \left\{\frac{ಸ}{೨} + \sqrt{\left(\frac{ಸ}{೨}\right)^2 + ಅ}\right\}^2$ ಸೂತ್ರದಲ್ಲಿ ಕ್ರಮವಾಗಿ *ಸ* ಮತ್ತು *ಅ* ಗಳ ಬದಲಿಗೆ, *ಸಬ* ಮತ್ತು *ಅಬ* ಗಳನ್ನು ಬಳಸಲಾಗುತ್ತದೆ. ೪೭ ನೇ ಶ್ಲೋಕದ ಟಿಪ್ಪಣಿಯಲ್ಲಿ ತಿಳಿಸಿರುವಂತೆ ಇಲ್ಲಿಯೂ ಕೂಡ *ಕ - ಬಕ* ವು *ಕ* ಆಗುತ್ತದೆ. ಇಚ್ಛೆಯಂತೆ ಬದಲಿಸಿದ ನಂತರ ಫಲವನ್ನು *ಬ* ದಿಂದ ಭಾಗಿಸಿದಾಗ, ನಮಗೆ

$ಕ = \left\{\frac{ಸಬ}{೨} + \sqrt{\left(\frac{ಸಬ}{೨}\right)^2 + ಅಬ}\right\}^2 \div ಬ$ ದೊರೆಯುತ್ತದೆ. *ಕ* ದ ಈ ಬೆಲೆಯನ್ನು ಸಮೀಕರಣ $ಕ - ಸ\sqrt{ಬಕ - ಅ} = ೦$ ದಿಂದ ಸುಲಭವಾಗಿ ಪಡೆಯಬಹುದಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अन्यदपि सूत्रम् -

दृश्यादंशकभक्ताच्चतुर्गुणान्मूलकृतियुतान्मूलम् ।
सपदं दलितं वर्गितमंशाभ्यस्तं भवेत् सारम् ॥ ५२ ॥

---

Anyadapi sūtram-

**52.** Dṛśyādaṁśakabhaktāccaturguṇānmūlakṛtiyutānmūlam, sapadaṁ dalitaṁ vargitamaṁśābhyastaṁ bhavet sāram.

---

Another rule relating to the *aṁśamūla* variety.

**52.** The known quantity given as the (ultimate) remainder is divided by the (given proportional) fraction and multiplied by *four*; to this the square (of the coefficient) of the square root (of the given fraction of the unknown collective quantity) is added; then the square root (of this sum), combined with (the above mentioned coefficient of) the square root (of the fractional unknown quantity) and (then) halved and (then) squared and (then) multiplied by the (given proportional) fraction, becomes the required result.

---

*ಅಂಶಮೂಲ* ಜಾತಿಗೆ ಸಂಬಂಧಪಟ್ಟ ಇನ್ನೊಂದು ನಿಯಮ :

**೫೨.** ಅಂತಿಮ ಶೇಷದ ರೂಪದಲ್ಲಿ ಕೊಟ್ಟಿರುವ ಗೊತ್ತಿರುವ ಸಂಖ್ಯೆಯನ್ನು, ಕೊಟ್ಟಿರುವ ಸಮಾನುಪಾತದ ಭಿನ್ನರಾಶಿಯಿಂದ ಭಾಗಿಸಲಾಗುತ್ತದೆ ಮತ್ತು ೪ ರಿಂದ ಗುಣಿಸಲಾಗುತ್ತದೆ. ಹೀಗೆ ಬಂದಂತಹ ಸಂಖ್ಯೆಗೆ ಅಜ್ಞಾತ ಸಮುಚ್ಚಯದ ಕೊಟ್ಟಿರುವ ಭಿನ್ನರಾಶಿಯ ವರ್ಗಮೂಲದ ಗುಣಾಂಕದ ವರ್ಗವನ್ನು ಸೇರಿಸಲಾಗುತ್ತದೆ. ಈ ಮೊತ್ತದ ವರ್ಗಮೂಲಕ್ಕೆ ಮೇಲೆ ಹೇಳಿದ ಅಜ್ಞಾತ ಸಂಖ್ಯೆಯ ಭಿನ್ನಾತ್ಮಕ ಭಾಗದ ವರ್ಗಮೂಲದ ಗುಣಾಂಕವನ್ನು ಸೇರಿಸಲಾಗುತ್ತದೆ. ನಂತರ ಅರ್ಧಮಾಡಿ (ನಂತರ) ವರ್ಗಮಾಡಲಾಗುತ್ತದೆ ಮತ್ತು (ನಂತರ) ಕೊಟ್ಟಿರುವ ಸಮಾನುಪಾತದ ಭಿನ್ನರಾಶಿಯಿಂದ ಗುಣಿಸುವುದರಿಂದ, ಬೇಕಾದ ಫಲವು ಪ್ರಾಪ್ತವಾಗುತ್ತದೆ.

---

**52.** Algebraically stated, $x = \left\{ \frac{c + \sqrt{c^2 + \frac{4a}{b}}}{2} \right\}^2 \times b$. This is obvious from the equation given in the note under the previous stanza.

**೫೨.** ಬೀಜಗಣಿತರೂಪದಲ್ಲಿ ತಿಳಿಸಿದರೆ, ಇದು $ಕ = \left\{ \frac{ಸ + \sqrt{ಸ^2 + \frac{೪ಲ}{ಬ}}}{೨} \right\}^2 \times ಬ$ ಎಂದಾಗುತ್ತದೆ.

ಹಿಂದಿನ ಶ್ಲೋಕದ ಟಿಪ್ಪಣಿಯಲ್ಲಿ ಕೊಟ್ಟಿರುವ ಸಮೀಕರಣದಿಂದ ಇದು ಸ್ಪಷ್ಟವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

पद्मनालत्रिभागस्य जले मूलाष्टकं स्थितम् । षोडशाङ्गुलमाकाशे जलनालोदयं वद ॥ ५३ ॥
द्वित्रिभागस्य यन्मूलं नवघ्नं हस्तिनां पुनः । शेषत्रिपञ्चमांशस्य मूलं षड्भिस्समाहतम् ॥ ५४ ॥
विगलद्दान[1]धारार्द्रगण्डमण्डलदन्तिनः । चतुर्विंशतिरादृष्टा मयाटव्यां कति द्विपाः ॥ ५५ ॥

---

**Atroddeśakaḥ**

**53.** Padmanālatribhāgasya jale mūlāṣṭakaṁ sthitam, ṣoḍaśāṅgulamākāśe jalanālodayaṁ vada.

**54.** Dvitribhāgasya yanmūlaṁ navaghnaṁ hastināṁ punaḥ,
śeṣatripañcamāṁśasya mūlaṁ ṣaḍbhissamāhatam.

**55.** Vigaladdānadhārārdraganḍamaṇḍaladantinaḥ, caturviṁśatirādṛṣṭā mayāṭavyāṁ kati dvipāḥ.

---

***Examples in illustration thereof.***

**53.** Eight times the square root of $\frac{1}{3}$ part of the stalk of a lotus is within water and 16 aṅgulas (thereof are) in the air (above water); give out the height of the water (above the bed) as well as of the stalk (of the lotus).

**54-55.** (Out of a herd of elephants) nine times the square root of $\frac{2}{3}$ part of their number and six times the square root of $\frac{3}{5}$ of the remainder (left thereafter), and (finally) 24 (remaining) elephants with their broad temples wetted with the stream of the exuding ichor, were seen by me in a forest. How many are (all) the elephants?

---

**ಉದಾಹರಣೆಗಳಿಂದ ವಿಶ್ಲೇಷಣ**

೫೩. ಕಮಲದ ತೊಟ್ಟಿನ $\frac{೧}{೩}$ ಭಾಗದ ವರ್ಗಮೂಲದ ಎಂಟರಷ್ಟು ನೀರಿನ ಒಳಭಾಗದಲ್ಲಿದೆ ಮತ್ತು ೧೬ ಅಂಗುಲಗಳು ನೀರಿನ ಮೇಲೆ ಗಾಳಿಯಲ್ಲಿ ಇವೆ. ತಳದಿಂದ ಮೇಲಿರುವ, ನೀರಿನ ಹಾಗೂ (ಕಮಲ್ಲದ) ತೊಟ್ಟಿನ ಎತ್ತರಗಳನ್ನು ತಿಳಿಸು.

೫೪-೫೫. ಆನೆಗಳ ಒಂದು ಹಿಂಡಿನಲ್ಲಿ ಅವುಗಳ ಸಂಖ್ಯೆಯ $\frac{೨}{೩}$ ಭಾಗದ ವರ್ಗಮೂಲದ ಒಂಭತ್ತರಷ್ಟು ಮತ್ತು (ತದನಂತರ ಉಳಿದ) ಶೇಷದ $\frac{೩}{೫}$ ಭಾಗದ ವರ್ಗಮೂಲದ ಆರರಷ್ಟು ಮತ್ತು (ಅಂತಿಮವಾಗಿ) ಜಿನುಗುತ್ತಿರುವ ಮದಜಲದ ಹೊಳೆಯಿಂದ ತಮ್ಮ ಅಗಲವಾದ ಗಂಡಸ್ಥಲಗಳನ್ನು ಒದ್ದೆಮಾಡಿಕೊಂಡಂತಹ (ಉಳಿದ) ೨೪ ಆನೆಗಳು, ಒಂದು ಕಾಡಿನಲ್ಲಿ ನನ್ನಿಂದ ನೋಡಲ್ಪಟ್ಟವು. ಒಟ್ಟು ಎಷ್ಟು ಆನೆಗಳಿದ್ದವು?

---

1. B reads वारार्द्रं



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



क्रोडौघार्धचतुः पदानि विपिनं शार्दूलविक्रीडितं प्रापुश्शेषदशांशमूलयुगलं शैलं चतुस्ताडितम् ।
शषार्धस्य पदं त्रिवर्गगुणितं वप्रं वराहा वने दृष्टास्सप्तगुणाष्टकप्रमितयस्तेषां प्रमाणं वद ॥ ५६ ॥

**इत्यंशमूलजातिः ।**

---

$$\div \left\{\frac{ಧ_1 \times ೧ \times ಬ್ಬಾ_1}{ಆ \times ಧಾ} + \frac{ಧ_2 \times ೧ \times ಬ್ಬಾ_2}{ಆ \times ಧಾ} + \ldots..\right\} = ಅ_ಪ್ರ \text{ ಅಥವಾ ಸರಾಸರಿ ಅವಧಿ.}$$

$$\text{ಮತ್ತು } \frac{ಧಾ \times ಆ}{ಅ_ಪ್ರ} \times \left\{\frac{ಧ_1 \times ಅ_1 \times ಬ್ಬಾ_1}{ಆ \times ಧಾ} + \frac{ಧ_2 \times ಅ_2 \times ಬ್ಬಾ_2}{ಆ \times ಧಾ} + \ldots..\right\}$$

$\div (ಧ_1 + ಧ_2 + \ldots..) = ಬ್ಬ_ಪ್ರ$ ಅಥವಾ ಸರಾಸರಿ ಬಡ್ಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## प्रक्षेपककुट्टीकारः

इतः परं मिश्रकव्यवहारे प्रक्षेपककुट्टीकारगणितं व्याख्यास्यामः ।
प्रक्षेपककरणमिदं सवर्गविच्छेदनांशयुतिहृतमिश्रः ।
प्रक्षेपकगुणकारः कुट्टीकारो बुधैस्समुद्दिष्टम् ॥ ७९ $\frac{1}{2}$ ॥

---

## Prakṣepakakuṭṭīkāraḥ

Itaḥ paraṁ miśrakavyavahāre prakṣepakakuṭṭīkāraganitaṁ vyākhyāsyāmaḥ.

**79$\frac{1}{2}$.** Prakṣepakakaraṇamidaṁ savargavicchedanāṁśayutihṛtamiśraḥ, prakṣepakaguṇakāraḥ kuṭṭīkāro budhaissamuddiṣṭam.

---

## Proportionate Division

Hereafter we shall expound in (this) chapter on mixed problems the working of proportionate division :

**79$\frac{1}{2}$.** The operation of proportionate division is that wherein the (given) collective quantity (to be divided) is first divided by the sum of the numerators of the common-denominator-fractions (representing the various proportionate parts), the denominators of which fractions are struck off out of consideration and (then it) has to be multiplied (respectively in each case) by (these) proportional numerators. This is called *kuṭṭīkāra* by the learned.

---

## ಪ್ರಕ್ಷೇಪಕ ಕುಟ್ಟೀಕಾರ
### (ಸಮಾನುಪಾತದ ಭಾಗಾಹಾರ)

ಇದಾದ ಮೇಲೆ ನಾವು ಮಿಶ್ರಕ ವ್ಯವಹಾರದಲ್ಲಿನ ಸಮಾನುಪಾತದ ಭಾಗಾಹಾರದ ಗಣಿತವನ್ನು ಪ್ರಕಟಿಸುತ್ತೇವೆ:

೭೯$\frac{೧}{೨}$. ಕೊಟ್ಟಿರುವ ಸಮೂಹ ವಾಚಕ ಸಂಖ್ಯೆಯನ್ನು ಮೊದಲು ವಿಭಿನ್ನ ಸಮಾನುಪಾತವುಳ್ಳ ಭಾಗಗಳನ್ನು ನಿರೂಪಿಸುವ ಸಮಾನ ಛೇದವುಳ್ಳ ಭಿನ್ನರಾಶಿಗಳ ಅಂಶಗಳ ಮೊತ್ತದಿಂದ ಭಾಗಿಸುವುದೇ ಸಮಾನುಪಾತವುಳ್ಳ ಭಾಗಾಹಾರದ ಕ್ರಿಯೆಯಾಗಿದೆ. ಇಂತಹ ಸಮಾನ ಛೇದವುಳ್ಳ ಭಿನ್ನರಾಶಿಗಳ ಛೇದಗಳನ್ನು ಹೊಡೆದುಹಾಕಿ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಲಭಿಸಿದ ಫಲವನ್ನು ಪ್ರತಿಯೊಂದು ಪ್ರಕರಣದಲ್ಲಿ ಕ್ರಮವಾಗಿ ಈ ಸಮಾನುಪಾತವುಳ್ಳ ಅಂಶಗಳಿಂದ ಗುಣಿಸುತ್ತೇವೆ. ಇದನ್ನು ವಿದ್ವಾಂಸರು ***ಕುಟ್ಟೀಕಾರ***ವೆಂದು ಕರೆಯುತ್ತಾರೆ.

---

**79$\frac{1}{2}$.** In working the example in stanza 80$\frac{1}{2}$ according to this rule we get; $\frac{1}{2}, \frac{1}{3}, \frac{1}{4}, \frac{1}{6} = \frac{6}{12}$ $\frac{4}{12}, \frac{3}{12}, \frac{2}{12}$. After removing the denominators here, we have 6, 4, 3 and 2. These are also called *prakṣēpas* or proportional numerators. The sum of these is 15, by which the amount to be distributed, viz., 120, is divided and the resulting quotient 8 is separately multiplied by the proportional numerators 6, 4, 3 and 2. Then the amounts thus obtained are 6 x 8 or 48, 4 x 8 or 32, 3 x 8 or 24, 2 x 8 or 16. It is worthy of note that *prakṣēpa* means both the operation of proportionate division and a proportional numerator.

೭೯$\frac{೧}{೨}$. ಈ ನಿಯಮದ ಪ್ರಕಾರ ಅಂ $\frac{೧}{೨}$ ಶ್ಲೋಕದ ಉದಾಹರಣೆಯನ್ನು ಸಾಧಿಸುವುದರಿಂದ ನಮಗೆ $\frac{೧}{೨}$ , $\frac{೧}{೩}$ , $\frac{೧}{೪}$ , $\frac{೧}{೬} = \frac{೬}{೧೨}$ , $\frac{೪}{೧೨}$ , $\frac{೩}{೧೨}$ , $\frac{೨}{೧೨}$ ದೊರೆಯುತ್ತವೆ. ಇಲ್ಲಿ ಛೇದಗಳನ್ನು ತೆಗೆದ ನಂತರ ನಮಗೆ ೬, ೪, ೩ ಮತ್ತು ೨ ಲಭಿಸುತ್ತವೆ. ಇವುಗಳನ್ನು *ಪ್ರಕ್ಷೇಪ*ಗಳು ಅಥವಾ ಸಮಾನುಪಾತವುಳ್ಳ ಅಂಶಗಳೆಂದೂ ಸಹ ಕರೆಯಲಾಗುತ್ತದೆ. ಇವುಗಳ ಮೊತ್ತ ೧೫. ಇದರಿಂದ, ಹಂಚಬೇಕಾಗಿರುವ ರಕಮು ೧೨೦ ನ್ನು ಭಾಗಿಸಲಾಗುತ್ತದೆ ಮತ್ತು ಬಂದ ಭಾಗಲಬ್ಧ ೮ ನ್ನು ಬೇರೆ ಬೇರೆ ಸಮಾನುಪಾತವುಳ್ಳ ಅಂಶಗಳಾದ ೬, ೪, ೩, ೨ ರಿಂದ ಗುಣಿಸುತ್ತೇವೆ. ಈ ರೀತಿ ಪ್ರಾಪ್ತವಾದ ರಕಮುಗಳು ೬ x ೮ ಅಂದರೆ ೪೮, ೪ x ೮ ಅಥವಾ ೩೨, ೩ x ೮ ಅಂದರೆ ೨೪, ೨ x ೮ ಅಥವಾ ೧೬ ಆಗಿವೆ. *ಪ್ರಕ್ಷೇಪ*ದ ಅರ್ಥ ಸಮಾನುಪಾತವುಳ್ಳ ಭಾಗದ ಕ್ರಿಯೆ ಎಂದೂ ಆಗುತ್ತದೆ ಹಾಗೂ ಸಮಾನುಪಾತವುಳ್ಳ ಅಂಶವೆಂದೂ ಸಹ ಆಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

द्वित्रिचतुष्षड्भागैर्विभाज्यते द्विगुणषष्टिरिह हेम्नाम् ।
भृत्येभ्यो हि चतुर्भ्यो गणकाचक्ष्वाशु मे भागान् ॥ ८०$\frac{1}{2}$॥
प्रथमस्यांशत्रितयं त्रिगुणोत्तरतश्च पञ्चभिर्भक्तम् ।
दीनाराणां त्रिशतं त्रिषष्टिसहितं क एकांशः ॥ ८१$\frac{1}{2}$॥

---

**Atroddeśakaḥ**

**80$\frac{1}{2}$.** Dvitricatuṣṣaḍbhāgairvibhājyate dviguṇaṣaṣṭiriha hemnām, bhṛtyebhyo hi caturbhyo gaṇakācakṣvāśu me bhāgān.

**81$\frac{1}{2}$.** Prathamasyāṁśatritayaṁ triguṇottaratašca pañcabhirbhaktam, dīnārāṇāṁ triśataṁ triṣaṣṭisahitaṁ ka ekāṁśaḥ.

---

***Examples in illustration thereof***

**80$\frac{1}{2}$.** Here, (in this problem,) 120 gold pieces are divided among 4 servants in the (respective) proportional parts of $\frac{1}{2}$, $\frac{1}{3}$, $\frac{1}{4}$ and $\frac{1}{6}$. O arithmetician, tell me quickly what they obtained.

**81$\frac{1}{2}$.** (The sum of) 363 *dīnāras* was divided among five, the first one (among them) getting 3 parts and 3 being the common ratio successively (in relation to the shares of the others). What was the share of each?

---

**ಉದಾಹರಣೆಗಳಿಂದ ವಿಶ್ಲೇಷಣ**

೮೦$\frac{೧}{೨}$. ಇಲ್ಲಿ (ಈ ಲೆಕ್ಕದಲ್ಲಿ) ೧೨೦ ಚಿನ್ನದ ಚೂರುಗಳನ್ನು ೪ ನೌಕರರಲ್ಲಿ ಕ್ರಮವಾಗಿ $\frac{೧}{೨}$, $\frac{೧}{೩}$, $\frac{೧}{೪}$ ಮತ್ತು $\frac{೧}{೬}$ ರ ಭಿನ್ನಾತ್ಮಕ ಭಾಗಗಳಲ್ಲಿ ಹಂಚಲಾಯಿತು. ಎಲೈ ಅಂಕಗಣಿತಜ್ಞನೇ, ಅವರಿಗೆ ಏನು ದೊರೆಯಿತೆಂದು ನನಗೆ ಬೇಗನೆ ಹೇಳು.

೮೧$\frac{೧}{೨}$. ೩೬೩ *ದೀನಾರ*ಗಳನ್ನು ಐದು ವ್ಯಕ್ತಿಗಳಲ್ಲಿ ಹಂಚಲಾಯಿತು. ಅದರಲ್ಲಿ ಮೊದಲನೆಯವನಿಗೆ ೩ ಭಾಗಗಳು ಲಭಿಸಿದವು ಮತ್ತು ಶೇಷ ಭಾಗವನ್ನು ಉತ್ತರೋತ್ತರ ೩ ರ ಸಾಮಾನ್ಯ ಅನುಪಾತದಲ್ಲಿ ಹಂಚಲಾಯಿತು. ಪ್ರತಿಯೊಬ್ಬನ ಭಾಗವೇನು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



आदाय चाम्बुजानि प्रविश्य सच्छ्रावकोऽथ जिननिलयम् ।
पूजां चकार भक्त्या पूजार्हेभ्यो जिनेन्द्रेभ्यः ॥ ८२$\frac{1}{2}$॥
वृषभाय चतुर्थांशं षष्ठांशं शिष्टपार्श्वाय । द्वादशमथ जिनपतये त्र्यंशं मुनिसुव्रताय ददौ ॥ ८३$\frac{1}{2}$॥
नष्टाष्टकर्मणे जगदिष्टायारिष्टनेमयेऽष्टांशम् । षष्ठघ्नचतुर्भागं भक्त्या जिनशान्तये प्रददौ ॥ ८४$\frac{1}{2}$॥
कमलान्यशीतिमिश्राण्यायातान्यथ शतानि चत्वारि ।
कुसुमानां भागाख्यं कथय प्रक्षेपकाख्यकरणेन ॥ ८५$\frac{1}{2}$॥

---

**82$\frac{1}{2}$.** Ādāya cāmbujāni praviśya sacchrāvako'tha jinanilayam, pūjāṁ cakāra bhaktyā pūjārhebhyo jinendrebhyaḥ.

**83$\frac{1}{2}$.** Vṛṣabhāya caturthāṁśaṁ ṣaṣṭāṁśaṁ śiṣṭapārśvāya, dvādaśamatha jinapataye tryaṁśaṁ Munisuvratāya dadau.

**84$\frac{1}{2}$.** Naṣṭāṣṭakarmaṇe jagadiṣṭāyāriṣṭanemaye'ṣṭāṁśam, ṣaṣṭaghnacaturbhāgaṁ bhaktyā jinaśāntaye pradadau.

**85$\frac{1}{2}$.** Kamalānyaśītimiśrāṇyāyātānyatha śatāni catvāri, kusumānāṁ bhāgākhyaṁ kathaya prakṣepakākhyakaraṇena.

---

**82$\frac{1}{2}$-85$\frac{1}{2}$.** A certain faithful *śrāvaka* took a number of lotus flowers and going into the Jina temple conducted (therein) with devotion the worship of the chief Jinas that were worthy of worship. He offered $\frac{1}{4}$ part to Vṛṣabha, $\frac{1}{6}$ to worthy Pārśva and $\frac{1}{12}$ to Jinapati and $\frac{1}{3}$ to sage Suvrata; he devotedly gave $\frac{1}{8}$ to Ariṣṭanémi who destroyed all the eight kinds of *karmas* and who was beloved by the world and $\frac{1}{6}$ of $\frac{1}{4}$ to Jinaśānti; 480 lotuses were brought (for this purpose.) By adopting the operation known as *prakṣēpaka*, give out the proportionate distribution of the flowers.

---

೮೨ $\frac{೧}{೨}$ - ೮೫ $\frac{೧}{೨}$. ಒಬ್ಬ ಪ್ರಾಮಾಣಿಕನಾದ *ಶ್ರಾವಕ*ನು ಯಾವುದೋ ಸಂಖ್ಯೆಯ ಕಮಲದ ಹೂವುಗಳನ್ನು ತೆಗೆದುಕೊಂಡನು ಮತ್ತು ಜಿನಮಂದಿರಕ್ಕೆ ಹೋಗಿ ಪೂಜನೀಯ ಜಿನೇಂದ್ರರನ್ನು ಭಕ್ತಿಭಾವದಿಂದ ಪೂಜಿಸಿದನು. ಅವನು ವೃಷಭನಿಗೆ $\frac{೧}{೪}$ , $\frac{೧}{೬}$ ಪೂಜ್ಯ ಪಾರ್ಶ್ವನಿಗೆ, $\frac{೧}{೧೨}$ ನ್ನು ಜಿನಪತಿಗೆ ಮತ್ತು $\frac{೧}{೩}$ ನ್ನು ಮುನಿಸುವ್ರತನಿಗೆ ಅರ್ಪಿಸಿದನು. $\frac{೧}{೮}$ ಭಾಗವನ್ನು ಎಂಟು *ಕರ್ಮ*ಗಳನ್ನು ನಾಶಮಾಡಿದ ಮತ್ತು ಜಗದಿಷ್ಟನಾದ ಅರಿಷ್ಟನೇಮಿಗೆ ಮತ್ತು $\frac{೧}{೪}$ ರ $\frac{೧}{೬}$ ಭಾಗವನ್ನು ಶಾಂತಿಜಿನರಿಗೆ ಭಕ್ತಿಪೂರ್ವಕವಾಗಿ ಕೊಟ್ಟನು. (ಈ ಉದ್ದೇಶಕ್ಕಾಗಿ) ೪೮೦ ಕಮಲಗಳನ್ನು ತರಲಾಯಿತು. *ಪ್ರಕ್ಷೇಪಕ*ವೆಂಬ ಹೆಸರಿನ ಕ್ರಿಯೆಯನ್ನು ಉಪಯೋಗಿಸಿಕೊಂಡು, ಹೂವುಗಳ ಸಮಾನುಪಾತದ ವಿತರಣೆಯನ್ನು ತಿಳಿಸು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



चत्वारि शतानि सखे युतान्यशीत्या नरैर्विभक्तानि ।
पञ्चभिराचक्ष्व त्वं द्वित्रिचतुःपञ्चषड्गुणितैः ॥ ८६$\frac{1}{2}$॥
इष्टगुणफलानयनसूत्रम् -
भक्तं शेषैर्मूलं गुणगुणितं तेन योजितं प्रक्षेपम् ।
तद्द्रव्यं मूल्यघ्नं क्षेपविभक्तं हि मूल्यं स्यात् ॥ ८७$\frac{1}{2}$॥

---

**86$\frac{1}{2}$.** Catvāri śatāni sakhe yutānyaśītyā narairvibhaktāni, pañcabhirācakṣva tvaṁ dvitricatuḥpañcaṣaḍgaṇitaiḥ.

Iṣṭaguṇaphalānayanasūtram -

**87$\frac{1}{2}$.** Bhaktaṁ śeṣairmūlaṁ guṇaguṇitaṁ tena yojitaṁ prakṣepam, taddravyaṁ mūyaghnaṁ kṣepavibhaktaṁ hi mūlyaṁ syāt.

---

**86$\frac{1}{2}$.** (A sum of) 480 was divided among five men in the proportion of 2, 3, 4, 5 and 6. O friend, give out (the share of each).

The rule for arriving at (certain) result in required proportions :

**87$\frac{1}{2}$.** The (number representing the) rate-price is divided by (the number representing) the thing purchasable therewith; (it) is (then) multiplied by the (given) proportional number; by means of this, (we get at) the sum of the proportional parts, (through) the process of addition. Then the given amount multiplied by the (respective) proportionate parts and then divided by (this sum of) the proportionate parts gives rise to the value (of the various things in the required proportion).

---

೮೬$\frac{೧}{೨}$. ೪೮೦ ರ ರಕಮನ್ನು ೫ ವ್ಯಕ್ತಿಗಳಲ್ಲಿ ೨, ೩, ೪, ೫ ಮತ್ತು ೬ ರ ಅನುಪಾತದಲ್ಲಿ ಹಂಚಲಾಯಿತು. ಎಲ್ಲೆ ಮಿತ್ರನೇ, ಪ್ರತಿಯೊಬ್ಬನಿಗೆ ದೊರೆತ ಭಾಗವೇನು?

ಬೇಕಾದ ಅನುಪಾತದಲ್ಲಿ ಕೆಲವು ಫಲಗಳನ್ನು ಪಡೆಯಲು ನಿಯಮ :

೮೭$\frac{೧}{೨}$. ಮೂಲ್ಯದರವನ್ನು ಯೋಗ್ಯವಸ್ತುವನ್ನು ನಿರೂಪಿಸುವ ಸಂಖ್ಯೆಯಿಂದ ಭಾಗಿಸಲಾಗುತ್ತದೆ. ನಂತರ ಇದನ್ನು (ಕೊಟ್ಟಿರುವ) ಸಮಾನುಪಾತದ ಸಂಖ್ಯೆಯಿಂದ ಗುಣಿಸುತ್ತೇವೆ. ಇದರಿಂದ ನಮಗೆ ಮೊತ್ತವನ್ನು ಕಂಡುಹಿಡಿಯುವ ವಿಧಾನದಿಂದ ಸಮಾನುಪಾತವುಳ್ಳ ಭಾಗಗಳ ಮೊತ್ತವು ಲಭಿಸುತ್ತದೆ. ಆಗ ಕೊಟ್ಟಿರುವ ಸಂಖ್ಯೆಯು, (ಅನುಗುಣವಾದ) ಸಮಾನುಪಾತವುಳ್ಳ ಭಾಗಗಳಿಂದ ಗುಣಿಸಲ್ಪಟ್ಟು ಹಾಗೂ ಅದನ್ನು ಮೇಲೆ ಹೇಳಿದ ಮೊತ್ತದಿಂದ ಭಾಗಿಸಲ್ಪಟ್ಟಾಗ, ಬೇಕಾದ ಸಮಾನುಪಾತದಲ್ಲಿರುವ ವಿಭಿನ್ನ ವಸ್ತುಗಳ ಬೆಲೆಯನ್ನು ಉತ್ಪನ್ನಮಾಡುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अस्मिन्नर्थे पुनरपि सूत्रम् -
फलगुणकारैर्हत्वा पणान् फलैरेव भागमादाय ।
प्रक्षेपके गुणास्स्युस्त्रैराशिकतः फलं वदेन्मतिमान् ॥ ८८$\frac{1}{2}$॥
अस्मिन्नर्थे पुनरपि सूत्रम् -
स्वफलहृताः स्वगुणघ्नाः पणास्तु तैर्भवति पूर्ववच्छेषः ।
इष्टफलं निर्दिष्टं त्रैराशिकसाधितं सम्यक् ॥ ८९$\frac{1}{2}$॥

---

Asminnarthe punarapi sūtram -

**88$\frac{1}{2}$.** Phalaguṇakārairhatvā paṇān phalaireva bhāgamādāya, prakṣepake guṇāssyustrairāśikataḥ phalaṁ vadenmatimān.

Asminnarthe punarapi sūtram -

**89$\frac{1}{2}$.** Svaphalahṛtāḥ svaguṇaghnāḥ paṇāstu tairbhavati pūrvavaccheṣaḥ, iṣṭaphalaṁ nirdiṣṭaṁ trairāśikasādhitaṁ samyak.

---

Another rule for this (same) purpose :

**88$\frac{1}{2}$.** Multiply the numbers representing the rate-prices (respectively) by the numbers representing the (given) proportions of the (various) things (to be purchased) then divide (the result) by the (respective) numbers measuring the things purchasable for the rate-price; the resulting quantities happen to be the (requisite) multipliers in the operation of *prakṣēpaka*. The intelligent man may (then) give out the required answer by adopting the rule-of-three.

Again a rule for this (same) purpose :

**89$\frac{1}{2}$.** The (numbers representing the various) rate-prices are respectively divided by their own related (numbers representing the) things purchasable therefor and are (then) multiplied by their related proportional numbers. With the help of these, the remainder (of the operation should be carried out) as before.

---

ಇದೇ ಉದ್ದೇಶಕ್ಕಾಗಿ ಮತ್ತೊಂದು ನಿಯಮ:

೮೮$\frac{೧}{೨}$. ಮೂಲ್ಯದರಗಳನ್ನು (ನಿರೂಪಿಸುವ ಸಂಖ್ಯೆಗಳನ್ನು) ಕ್ರಮವಾಗಿ, ಖರೀದಿಸುವಂತಹ ವಿಭಿನ್ನ ವಸ್ತುಗಳ (ಕೊಟ್ಟಿರುವಂತಹ) ಸಮಾನುಪಾತಗಳನ್ನು ನಿರೂಪಿಸುವ ಸಂಖ್ಯೆಗಳಿಂದ, ಗುಣಿಸುತ್ತೇವೆ. ನಂತರ ಫಲವನ್ನು, ಮೂಲ್ಯದರಕ್ಕೆ ಖರೀದಿಸಲು ಯೋಗ್ಯವಾದ ವಸ್ತುಗಳ ಸಂಖ್ಯೆಗಳಿಂದ ಕ್ರಮವಾಗಿ ಭಾಗಿಸುತ್ತೇವೆ.

ಹೀಗೆ ದೊರೆತ ಸಂಖ್ಯೆಗಳು *ಪ್ರಕ್ಷೇಪಕ್ರಿಯೆಯಲ್ಲಿ* (ಬೇಕಾದ) ಗುಣಕಗಳಾಗಿರುತ್ತವೆ. ಬುದ್ಧಿವಂತ ಜನರು ಮತ್ತೆ ಬೇಕಾದ ಉತ್ತರವನ್ನು ತ್ರೈರಾಶಿಕವನ್ನು ಉಪಯೋಗಿಸಿಕೊಂಡು ಪಡೆಯಬಹುದಾಗಿದೆ.

ಪುನಃ ಇದೇ ಉದ್ದೇಶಕ್ಕಾಗಿ ನಿಯಮ :

೮೯$\frac{೧}{೨}$. ವಿಭಿನ್ನ ಮೂಲ್ಯದರಗಳನ್ನು ನಿರೂಪಿಸುವ ಸಂಖ್ಯೆಗಳನ್ನು ಕ್ರಮವಾಗಿ, ಅವುಗಳ ಸ್ವಸಂಬಂಧಿತವಾದ ಖರೀದಿಸಲು ಯೋಗ್ಯವಾದ ವಸ್ತುಗಳನ್ನು ನಿರೂಪಿಸುವ ಸಂಖ್ಯೆಗಳಿಂದ ಭಾಗಿಸಲಾಗುತ್ತದೆ. ನಂತರ ಅವುಗಳ ಸಂಬಂಧಪಟ್ಟ, ಸಮಾನುಪಾತದ ಸಂಖ್ಯೆಗಳಿಂದ ಗುಣಿಸಲಾಗುತ್ತದೆ. ಇವುಗಳ ಸಹಾಯದಿಂದ, ಉಳಿದ ಕ್ರಿಯೆಗಳನ್ನು ಮೊದಲಿನಂತೆ ಮಾಡಲಾಗುತ್ತದೆ. ಬೇಕಾದ ಫಲವನ್ನು ತ್ರೈರಾಶಿಕದ ನಿರ್ದಿಷ್ಟವಾದ ಕ್ರಿಯೆಯಿಂದ ಸಮರ್ಪಕವಾಗಿ ಪಡೆಯಲಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**87½ - 89½.** In working the example in stanza 90½ and 91½ according to these rules 2, 3 and 5 are divided by 3, 5 and 7 respectively and are similarly multiplied by 6, 3 and 1. Thus we have $\frac{2}{3}$ x 6, $\frac{3}{5}$ x 3, $\frac{5}{7}$ x 1 = 4, $\frac{9}{5}$ , $\frac{5}{7}$. These are the proportional parts. The rules in stanzas 88½ and 89½ require thereafter the operation of *prakṣēpa* to be applied in relation to these proportional parts but the rule in stanza 87½ expressly describes this operation.

೮೭ $\frac{೧}{೨}$ - ೮೯ $\frac{೧}{೨}$ . ಈ ನಿಯಮಗಳ ಪ್ರಕಾರ ೯೦ $\frac{೧}{೨}$ ಮತ್ತು ೯೧ $\frac{೧}{೨}$ ಶ್ಲೋಕಗಳಲ್ಲಿನ ಉದಾಹರಣೆಯನ್ನು ಸಾಧಿಸಲು, ೨, ೩ ಮತ್ತು ೫ ನ್ನು ಕ್ರಮವಾಗಿ ೩, ೫ ಮತ್ತು ೭ ರಿಂದ ಭಾಗಿಸುತ್ತೇವೆ ಮತ್ತು ೬, ೩ ಮತ್ತು ೧ ರಿಂದ ಗುಣಿಸುತ್ತೇವೆ. ಈ ರೀತಿ ನಮಗೆ $\frac{೨}{೩}$ x ೬, $\frac{೩}{೫}$ x ೩, $\frac{೫}{೭}$ x ೧ = ೪, $\frac{೯}{೫}$ , $\frac{೫}{೭}$ ದೊರೆಯುತ್ತವೆ. ಇವುಗಳು ಸಮಾನುಪಾತವುಳ್ಳ ಭಾಗಗಳಾಗಿವೆ. ೮೮ $\frac{೧}{೨}$ ಮತ್ತು ೮೯ $\frac{೧}{೨}$ ಸೂತ್ರಗಳಲ್ಲಿ ಈ ಸಮಾನುಪಾತವುಳ್ಳ ಭಾಗಗಳ ಸಂಬಂಧದಲ್ಲಿ *ಪ್ರಕ್ಷೇಪದ* ಕ್ರಿಯೆಯ ಪ್ರಯೋಗವನ್ನು ಮಾಡಬೇಕಾಗುತ್ತದೆ. ಆದರೆ ೮೭ $\frac{೧}{೨}$ ಶ್ಲೋಕದಲ್ಲಿ ಇದು ಪೂರ್ಣರೀತಿಯಲ್ಲಿ ವರ್ಣಿತವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

द्वाभ्यां त्रीणि त्रीभिः पञ्च पञ्चभिस्सप्त मानकैः ।
दाडिमाम्रकपित्थानां फलानि गणितार्थवित् ॥ ९० $\frac{1}{2}$॥
कपित्थात् त्रिगुणं ह्याम्रं दाडिमं षड्गुणं भवेत् ।
क्रीत्वानय सखे शीघ्रं त्वं षट्सप्ततिभिः पणैः ॥ ९१ $\frac{1}{2}$॥

---

**Atroddeśakaḥ**

**90$\frac{1}{2}$.** Dvābhyāṁ trīṇi tribhiḥ pañca pañcabhissapta mānakaiḥ, dāḍimāmrakapitthānāṁ phalāni gaṇitarthavit.

**91$\frac{1}{2}$.** Kapitthāt triguṇaṁ hyāmraṁ dāḍimaṁ ṣaḍguṇaṁ bhavet, krītvānaya sakhe śīghraṁ tvam ṣaṭsaptatibhiḥ paṇaiḥ.

---

***Examples in illustration thereof***

**90$\frac{1}{2}$-91$\frac{1}{2}$.** Pomegranates, mangoes and woodapples are obtainable at the (respective) rates of 3 for 2, 5 for 3 and 7 for 5 *paṇas*. O you friend, who know the principles of calculation, come quickly having purchased fruits for 76 *paṇas*, so that the mangoes may be three times as the woodapples and the pomegranates six times as much.

---

**ಉದಾಹರಣೆಗಳಿಂದ ವಿಶ್ಲೇಷಣ**

೯೦ $\frac{೧}{೨}$ - ೯೧ $\frac{೧}{೨}$. ದಾಳಿಂಬೆ ಹಣ್ಣುಗಳನ್ನು, ಮಾವಿನ ಹಣ್ಣುಗಳನ್ನು ಮತ್ತು ಮರಸೇಬುಗಳನ್ನು ಕ್ರಮವಾಗಿ, ೨ *ಪಣ*ಗಳಿಗೆ ೩, ೩ *ಪಣ*ಗಳಿಗೆ ೫ ಮತ್ತು ೫ *ಪಣ*ಗಳಿಗೆ ೭ ನ್ನು ಪಡೆಯಬಹುದಾಗಿದೆ. ಎಲೈ ಲೆಕ್ಕಾಚಾರದ ತತ್ವಗಳನ್ನು ತಿಳಿದಿರುವ ಮಿತ್ರನೇ, ಮಾವಿನ ಹಣ್ಣುಗಳ ಸಂಖ್ಯೆಯು ಮರಸೇಬುಗಳ ಸಂಖ್ಯೆಯ ಮೂರರಷ್ಟು ಮತ್ತು ದಾಳಿಂಬೆ ಹಣ್ಣುಗಳ ಸಂಖ್ಯೆಯ ೬ ರಷ್ಟು ಇರುವಂತೆ, ೭೬ *ಪಣ*ಗಳಿಗೆ ಹಣ್ಣುಗಳನ್ನು ತೆಗೆದುಕೊಂಡು ಬೇಗನೆ ಬಾ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



दध्याज्यक्षीरघटैर्जिनबिम्बस्याभिषेचनं कृतवान् ।
जिनपुरुषो द्वासप्ततिपलैस्त्रयः पूरिताः कलशाः ॥ ९२$\frac{1}{2}$॥
द्वात्रिंशत्प्रथमघटे पुनश्चतुर्विंशतिर्द्वितीयघटे ।
षोडश तृतीयकलशे पृथक् पृथक् कथय मे कृत्वा ॥ ९३$\frac{1}{2}$॥
तेषां दधिघृतपयसां ततश्चतुर्विंशतिर्घृतस्य पलानि ।
षोडश पयःपलानि द्वात्रिंशद् दधिपलानीह ॥ ९४$\frac{1}{2}$॥

---

92$\frac{1}{2}$. Dadhyājyakṣīraghatairjinabimbasyābhiṣecanaṁ kṛtavān, jinapuruṣo dvāsaptatipalaistrayaḥ pūritāḥ kalaśāḥ.

93$\frac{1}{2}$. Dvātriṁśatprathamaghaṭe punaścaturviṁśatirdvitīyaghaṭe, ṣoḍaśa tṛtīyakalaśe pṛthak pṛthak kathaya me kṛtvā.

94$\frac{1}{2}$. Teṣāṁ dadhighṛtapayasāṁ tataścaturviṁśatirghṛtasya palāni, ṣoḍaśa payaḥpalāni dvātriṁśad dadhipalānīha.

---

**92$\frac{1}{2}$-94$\frac{1}{2}$.** A follower of Jina had the image of Jina bathed in potfuls of curds, ghee and milk. Three pots became filled with 72 *palas* (of these); 32 *palas* were found in the first pot and 24 in the second pot and 16 in the third pot. From these (potfuls of mixedup) curds, ghee and milk, find out each of those (ingredients) separately and give them out, there being altogether 24 palas of ghee, 16 *palas* of milk and 32 *palas* of curds.

---

೯೨ $\frac{೧}{೨}$ - ೯೪ $\frac{೧}{೨}$. ಒಬ್ಬ ಜಿನನ ಅನುಯಾಯಿಯು ಜಿನಪ್ರತಿಮೆಗೆ ಮೊಸರು, ತುಪ್ಪ ಮತ್ತು ಹಾಲಿನಿಂದ ತುಂಬಿದ ಕಲಶಗಳಿಂದ ಅಭಿಷೇಕ ಮಾಡಿದನು. ಇವುಗಳ ೭೨ *ಪಲ*ಗಳಿಂದ ಮೂರು ಪಾತ್ರೆಗಳು ತುಂಬಿದವು. ಮೊದಲನೆಯ ಪಾತ್ರೆಯಲ್ಲಿ ೩೨ *ಪಲ*ಗಳು ಮತ್ತು ಎರಡನೆಯ ಪಾತ್ರೆಯಲ್ಲಿ ೨೪ ಮತ್ತು ಮೂರನೆಯ ಪಾತ್ರೆಯಲ್ಲಿ ೧೬ *ಪಲ*ಗಳು ಕಂಡುಬಂದವು. (ಎಲ್ಲಾ ಒಟ್ಟು ೨೪ *ಪಲ*ಗಳ ತುಪ್ಪ, ೧೬ *ಪಲ*ಗಳ ಹಾಲು ಮತ್ತು ೩೨ *ಪಲ*ಗಳ ಮೊಸರು ಆಗಿದ್ದಾಗ) ಈ ಮೊಸರು, ತುಪ್ಪ ಮತ್ತು ಹಾಲುಗಳ ಮಿಶ್ರಿತ ಪಾತ್ರೆಗಳಲ್ಲಿ ಮಿಶ್ರಿತ ದ್ರವ್ಯಗಳನ್ನು ಬೇರೆ ಬೇರೆಯಾಗಿ ಕಂಡುಹಿಡಿ ಮತ್ತು ತಿಳಿಸು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



वृत्तिस्त्रयः पुराणाः पुंसश्चारोहकस्य तत्रापि। सर्वेऽपि पञ्चषष्टिः केचिद्भग्ना धनं तेषाम् ॥ ९५½॥
सन्निहितानां दत्तं लब्धं पुंसा दशैव चैकस्य ।
के सन्निहिता भग्नाः के मम सञ्चिन्त्य कथय त्वम् ॥ ९६½॥
इष्टरूपाधिकहीनप्रक्षेपककरणसूत्रम् -
पिण्डोऽधिकरूपोनो हीनोत्तररूपसंयुतः शेषात्। प्रक्षेपककरणमतः कर्तव्यं तैर्युता हीनाः ॥ ९७ ½॥

---

**95½.** Vṛttistrayaḥ purāṇāḥ puṁsaścārohakasya tatrāpi, sarve'pi pañcaṣaṣṭiḥ kecidbhagnā dhanaṁ teṣām.

**96½.** Sannihitānāṁ dattaṁ labdhaṁ puṁsā daśaiva caikasya, ke sannihitā bhagnāḥ ke mama sañcintya kathaya tvam.

Iṣṭarūpādhikahīnaprakṣepakakaraṇasūtram -

**97½.** Piṇḍo'dhikarūpono hīnottararūpasaṁyutaḥ śeṣāt, prakṣepaka-karaṇamataḥ kartavyaṁ tairyutā hīnāḥ.

---

**95½-96½.** Three *puraṇas* formed the pay of one man who is a mounted soldier and at that rate there were 65 men in all. Some (among them) broke down and the amount of their pay was given to those that remained in the field. Of this, each man obtained 10 *purāṇas*. You tell me, after thinking well, how many remained in the field and how many broke down.

The rule for the operation of proportionate division, wherein there is the addition or the subtraction of certain optionally chosen integral quantities :

**97½.** The given total quantity is diminished by the integral quantities that are to be added or is combined with the positive integral quantities that are to be subtracted; then with the help of this resulting quantity the operation of proportionate division is to be conducted and the resulting proportionate parts are respectively combined with those (integral quantities that are to be added to them) or they are diminished (respectively) by those (integral quantities that are to be subtracted).

---

೯೫ ೧/೨ - ೯೬ ೧/೨. ಒಬ್ಬ ಅಶ್ವಾರೋಹಿ ಸೈನಿಕನ ಸಂಬಳವು ೩ *ಪುರಾಣ*ಗಳಾಗಿದ್ದವು ಮತ್ತು ಈ ದಳದಲ್ಲಿ ಒಟ್ಟು ೬೫ ವ್ಯಕ್ತಿಗಳಿದ್ದರು. ಅವರಲ್ಲಿ ಕೆಲವರು ಮಡಿದರು ಮತ್ತು ಅವರ ವೇತನದ ರಕಮನ್ನು ಯುದ್ಧಭೂಮಿಯಲ್ಲಿ ಉಳಿದಿರುವ ಸೈನಿಕರಿಗೆ ಕೊಡಲಾಯಿತು. ಇದರಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ೧೦ *ಪುರಾಣ*ಗಳು ದೊರೆತವು. ಚೆನ್ನಾಗಿ ಯೋಚಿಸಿದ ನಂತರ ಯುದ್ಧಭೂಮಿಯಲ್ಲಿ ಎಷ್ಟು ಸೈನಿಕರು ಉಳಿದರು ಮತ್ತು ಎಷ್ಟು ಸೈನಿಕರು ಮಡಿದರು ಎಂದು ನೀನು ನನಗೆ ಹೇಳು.

ಇಚ್ಛಾನುಸಾರವಾಗಿ ಆಯ್ದ ಕೆಲವು ಪೂರ್ಣಾಂಕಗಳ ಸೇರಿಸುವಿಕೆ ಅಥವಾ ಕಳೆಯುವಿಕೆಯನ್ನೊಳಗೊಂಡ ಸಮಾನುಪಾತವುಳ್ಳ ಭಾಗಗಳ ಸಂಬಂಧದ ನಿಯಮ :

೯೭ ೧/೨. ಕೊಟ್ಟಿರುವಂತಹ ಒಟ್ಟು ಸಂಖ್ಯೆಯನ್ನು, ಸೇರಿಸಬೇಕಾಗಿರುವ ಪೂರ್ಣಾಂಕಗಳಿಂದ ಕಳೆಯಲಾಗುತ್ತದೆ ಅಥವಾ ಕಳೆಯಬೇಕಾಗಿರುವ ಧನಾತ್ಮಕ ಪೂರ್ಣಾಂಕಗಳೊಂದಿಗೆ ಸೇರಿಸಲಾಗುತ್ತದೆ. ನಂತರ ಹೀಗೆ ದೊರೆತ ಸಂಖ್ಯೆಯ ಸಹಾಯದಿಂದ ಸಮಾನುಪಾತವಿರುವ ಭಾಗದ ಕ್ರಿಯೆಯನ್ನು ಮಾಡಲಾಗುತ್ತದೆ ಮತ್ತು ಈ ರೀತಿ ಲಭಿಸಿದ ಸಮಾನುಪಾತವಿರುವ ಭಾಗಗಳನ್ನು ಕ್ರಮವಾಗಿ ಅವುಗಳೊಂದಿಗೆ ಸೇರಿಸಬೇಕಾಗಿದ್ದ ಪೂರ್ಣಾಂಕಗಳನ್ನು ಸೇರಿಸಲಾಗುತ್ತದೆ ಅಥವಾ ಅವುಗಳನ್ನು ಕಳೆಯಬೇಕಾಗಿದ್ದ ಆ ಪೂರ್ಣಾಂಕಗಳಿಂದ ಕ್ರಮವಾಗಿ ಕಳೆಯಲಾಗುತ್ತದೆ.

---

**97½.** The operation of proportionate division to be conducted here is according to any of the rules in stanzas 87½ to 89½.

೯೭ ೧/೨. ಸಮಾನುಪಾತವಿರುವ ಭಾಗದ ಕ್ರಿಯೆಯನ್ನು ಇಲ್ಲಿ ಶ್ಲೋಕ ೮೭ ೧/೨ ಯಿಂದ ೮೯ ೧/೨ ಯವರೆಗೆ ಕೊಟ್ಟಿರುವ ನಿಯಮಗಳಲ್ಲಿ ಯಾವುದಾದರೂ ಒಂದರ ಪ್ರಕಾರ ಮಾಡಲಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अत्रोद्देशकः

प्रथमस्यैकांशोऽतो द्विगुणद्विगुणोत्तराद्भजन्ति नराः ।
चत्वारोंऽशः कस्यादेकस्य हि सप्तषष्टिरिह ॥ ९८$\frac{1}{2}$॥
प्रथमादध्यर्धगुणात् त्रिगुणाद्रूपोत्तराद्विभाज्यन्ते। साष्टा सप्ततिरेभिश्चतुर्भिराप्तांशकान् ब्रूहि ॥९९$\frac{1}{2}$॥

---

Atroddeśakaḥ

98$\frac{1}{2}$. Prathamasyaikāṁśo'to dviguṇadviguṇottarādbhajanti narāḥ, catvāroṁ-'śaḥ kassyādekasya hi saptaṣaṣṭiriha.

99$\frac{1}{2}$. Prathamādadhyardhaguṇāt triguṇādrūpottarādvibhājyante, sāṣṭā saptatirebhiścaturbhirāptāṁśakān brūhi.

---

***Examples in illustration thereof***

98$\frac{1}{2}$. Four men obtained their shares in successively doubled proportions and with successively doubled differences in addition, the first man obtaining one share: 67 (is the quantity so to be distributed) here. What is the share of each?

99$\frac{1}{2}$. (A sum of) 78 is divided by these four (among themselves) in proportions which are successively from the first $1\frac{1}{2}$ times (what precedes) and with differences (in addition, which,) commencing with 1, (go on) increasing three-fold. Give out the (value of the) parts obtained (by each).

---

ಉದಾಹರಣೆಗಳಿಂದ ವಿಶ್ಲೇಷಣ

೯೮$\frac{೧}{೨}$. ನಾಲ್ಕು ಮನುಷ್ಯರು ಉತ್ತರೋತ್ತರವಾಗಿ ದ್ವಿಗುಣವಾಗುವ ಸಮಾನುಪಾತವಿರುವ ಭಾಗಗಳಲ್ಲಿ ಮತ್ತು ಉತ್ತರೋತ್ತರವಾಗಿ ವ್ಯತ್ಯಾಸಗಳು ದ್ವಿಗುಣವಾಗುವಂತಹ ಮೊತ್ತಗಳಲ್ಲಿ ಅವರ ಭಾಗಗಳನ್ನು ಪಡೆದರು. ಮೊದಲನೆಯ ಮನುಷ್ಯನಿಗೆ ೧ ಭಾಗ ದೊರೆಯಿತು. ಇಲ್ಲಿ ಹಂಚಬೇಕಾಗಿರುವ ಸಂಖ್ಯೆ ೬೭ ಆಗಿದೆ. ಪ್ರತಿಯೊಬ್ಬನ ಭಾಗವೇನು?

೯೯$\frac{೧}{೨}$. ೭೮ ರ ರಕಮನ್ನು ಈ ನಾಲ್ಕು ಮನುಷ್ಯರಲ್ಲಿ, ಉತ್ತರೋತ್ತರವಾಗಿ ಪ್ರಥಮದಿಂದ ಆರಂಭವಾಗಿ ಪ್ರತಿಯೊಂದು ಅದರ ಹಿಂದಿನದಕ್ಕಿಂತ ೧$\frac{೧}{೨}$ ಯಷ್ಟು ಆಗಿರುವಂತಹ ಮತ್ತು (ಮೊತ್ತದಲ್ಲಿ) ಇವುಗಳ ಅಂತರ ಒಂದರಿಂದ ಆರಂಭವಾಗಿ ಮೂರರಷ್ಟು ಹೆಚ್ಚುವಂತಹ ಸಮಾನುಪಾತವಿರುವ ಭಾಗಗಳಲ್ಲಿ ಹಂಚಲಾಗುತ್ತದೆ. ಪ್ರತಿಯೊಬ್ಬನಿಗೆ ಬರುವ ಭಾಗಗಳ ಬೆಲೆಗಳನ್ನು ಕಂಡುಹಿಡಿ.

---

98$\frac{1}{2}$. The difference quantity to be added to the shares here is 1 in the case of the second man and twice the preceding difference in the case of each of the remaining two men and this difference in the case of the second man is not expressly mentioned as 1 in this example as well as the examples in stanzas100$\frac{1}{2}$ and 101$\frac{1}{2}$.

೯೮$\frac{೧}{೨}$. ಎರಡನೇ ಮನುಷ್ಯನ ಸಂಬಂಧದಲ್ಲಿ, ಭಾಗಗಳಲ್ಲಿ ಸೇರಿಸಬೇಕಾಗಿರುವ ವ್ಯತ್ಯಾಸವು ಇಲ್ಲಿ ೧ ಆಗಿದೆ. ಇದು ಉಳಿದ ಇನ್ನಿಬ್ಬರು ಮನುಷ್ಯರಲ್ಲಿ ಪ್ರತಿಯೊಬ್ಬರಿಗೂ ಹಿಂದೆ ಹೇಳಿದ ಅಂತರದ ಎರಡರಷ್ಟಾಗಿದೆ. ಈ ಅಂತರವನ್ನು ಎರಡನೆ ಮನುಷ್ಯನ ವಿಷಯದಲ್ಲಿ ಸ್ಪಷ್ಟವಾಗಿ ೧ ಎಂದು ಈ ಉದಾಹರಣೆಯಲ್ಲಿ ಹಾಗೂ ೧೦೦$\frac{೧}{೨}$ ಮತ್ತು ೧೦೧$\frac{೧}{೨}$ ಶ್ಲೋಕಗಳ ಉದಾಹರಣೆಗಳಲ್ಲೂ ಕೂಡ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



प्रथमादध्यर्धगुणाः पञ्चार्धगुणोत्तराणि रूपाणि ।
पञ्चानां पञ्चाशत्सैका चरणत्रयाभ्यधिका ॥ १००$\frac{1}{2}$॥
प्रथमात्पञ्चार्धगुणाश्चतुर्गुणोत्तरविहीनभागेन ।
भक्तं नरैश्चतुर्भिः पञ्चदशोनं शतचतुष्कम् ॥ १०१$\frac{1}{2}$॥

---

**100$\frac{1}{2}$.** Prathamādadhyardhaguṇāḥ pañcārdhaguṇottarāṇi rūpāṇi, pañcānāṁ pañcāśatsaikā caraṇatrayābhyadhikā.

**101$\frac{1}{2}$.** Prathamātpañcārdhaguṇāścaturguṇottaravihīnabhāgena, bhaktaṁ naraiścaturbhiḥ pañcadaśonaṁ śatacatuṣkam.

---

**100$\frac{1}{2}$.** (The shares of) five (persons) are (successively) from the first 1$\frac{1}{2}$ times (what goes before) and the differences in addition are quantities which are (successively) 2$\frac{1}{2}$ times (the preceding difference) 51$\frac{3}{4}$ is (the total quantity) to be divided. (Find out the values of the portions obtained by each.)

**101$\frac{1}{2}$.** (A sum of) 400 *minus* 15 is divided by four men (among themselves) in proportions which from the first are 2$\frac{1}{2}$ times (what precedes) and which (besides) are less by differences which are (successively) 4 times (the preceding difference). (Find out the values of the various portions obtained.)

---

೧೦೦$\frac{೧}{೨}$. ಐದು ಮನುಷ್ಯರ ಭಾಗಗಳು ಅನುಕ್ರಮವಾಗಿ ಪ್ರಥಮದಿಂದ ಆರಂಭವಾಗಿ ಪ್ರತಿಯೊಂದು ಅದರ ಹಿಂದಿನದಕ್ಕಿಂತ ೧$\frac{೧}{೨}$ ಯಷ್ಟು ಇರುತ್ತದೆ ಮತ್ತು ಮೊತ್ತದಲ್ಲಿ ಅಂತರಗಳು ಪ್ರತಿಯೊಂದೂ ಅವುಗಳ ಹಿಂದಿನ ಅಂತರಕ್ಕಿಂತ ೨$\frac{೧}{೨}$ ಯಷ್ಟು ಇರುತ್ತದೆ. ೫೧$\frac{೩}{೪}$ ಹಂಚಬೇಕಾಗಿರುವ ಒಟ್ಟು ಸಂಖ್ಯೆಯಾಗಿದೆ. ಪ್ರತಿಯೊಬ್ಬನಿಗೆ ದೊರೆತ ಭಾಗಗಳ ಬೆಲೆಗಳನ್ನು ಕಂಡುಹಿಡಿ.

೧೦೧$\frac{೧}{೨}$. ೪೦೦ ಋಣ ೧೫ ನ್ನು ನಾಲ್ಕು ಮನುಷ್ಯರ ನಡುವೆ, ಯಾವುವು ಪ್ರಥಮದಿಂದ ಆರಂಭವಾಗಿ ಪ್ರತಿಯೊಂದೂ ಅದರ ಹಿಂದಿನದಕ್ಕಿಂತ ೨$\frac{೧}{೨}$ ಯಷ್ಟು ಇವೆಯೋ ಮತ್ತು ಯಾವ ಅಂತರಗಳು (ಉತ್ತರೋತ್ತರವಾಗಿ) ಪ್ರತಿಯೊಂದೂ ಅದರ ಹಿಂದಿನ ಅಂತರದ ನಾಲ್ಕರಷ್ಟಿದೆಯೋ ಅಂತಹ ಅಂತರಗಳಿಂದ ಕಳೆಯಲ್ಪಟ್ಟ ಭಾಗಗಳಲ್ಲಿ ಹಂಚಲಾಗುತ್ತದೆ. ವಿಭಿನ್ನ ಭಾಗಗಳ ಬೆಲೆಗಳನ್ನು ಕಂಡುಹಿಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



समधनार्घानयनतज्ज्येष्ठधनसङ्ख्यानयनसूत्रम् -
ज्येष्ठधनं सैकं स्यात् स्वविक्रयेऽन्त्यार्घगुणमपैकं तत् ।
क्रयणे ज्येष्ठानयनं समानयेत् करणविपरीतात् ॥ १०२$\frac{1}{2}$॥

**अत्रोद्देशकः**

द्वावष्टौ षट्त्रिंशन्मूलं नृणां षडेव चरमार्घः। एकार्घेण क्रीत्वा विक्रीय च समधना जाताः ॥१०३$\frac{1}{2}$॥

---

Samadhanārghānayanatajjyeṣṭadhanasaṅkhyānayanasūtram -

**102$\frac{1}{2}$.** Jyeṣṭadhanaṁ saikaṁ syāt svavikraye'ntyārghaguṇamapaikaṁ tat,
krayaṇe jyeṣṭānayanaṁ samānayet karaṇaviparītāt.

**Atroddeśakaḥ**

**103$\frac{1}{2}$.** Dvāvaṣṭau ṣaṭtriṁśanmūlaṁ nṛṇāṁ ṣaḍeva caramārghaḥ, ekārgheṇa krītvā vikrīya ca samadhanā jātāḥ.

---

The rule for arriving at the value of the prices producing equal sale-proceeds and at the value of the highest capital (invested in the transactions concerned):

**102$\frac{1}{2}$.** The largest capital (invested) combined with one becomes the vending rate of the commodity (to be sold). That (same vending rate), multiplied by the (given) price at which the remnant is to be sold and diminished by *one*, gives rise to the purchasing rate. By reversing the processes, one may arrive at the valuation of the highest capital (invested in the transaction).

***Examples in illustration thereof***

**103$\frac{1}{2}$.** The capital amounts invested by (three) men are (respectively) 2, 8 and 36, 6 is the price at which the remnants of the commodity are to be sold. Having purchased and sold at the same rates, they became possessors of equal wealth. (Find out the buying and selling prices.)

---

(ವ್ಯಾಪಾರದಲ್ಲಿ ತೊಡಗಿಸಿದ) ಎಲ್ಲಕ್ಕಿಂತಲೂ ಹೆಚ್ಚಿನ ಮೂಲಧನದ ಬೆಲೆ ಹಾಗೂ ಮಾರುವ ಬೆಲೆಗೆ ಸಮವಾದ ರಕಮುಗಳನ್ನು ಉತ್ಪನ್ನಮಾಡುವ ಬೆಲೆಗಳನ್ನು ಪಡೆಯಲು ನಿಯಮ :

೧೦೨$\frac{೧}{೨}$. ತೊಡಗಿಸಿದ ಎಲ್ಲಕ್ಕಿಂತ ಹೆಚ್ಚಿನ ಧನವನ್ನು ೧ ರಲ್ಲಿ ಸೇರಿಸಲಾಗಿ (ಮಾರಲ್ಪಟ್ಟ) ವಸ್ತುವಿನ ಮಾರುವ ದರವಾಗುತ್ತದೆ. ಅದೇ (ಮಾರುವ ದರವು) ಶೇಷ ವಸ್ತುವಿನ (ಕೊಟ್ಟಿರುವ) ಮಾರುವ ಬೆಲೆಯಿಂದ ಗುಣಿಸಲ್ಪಟ್ಟು ಒಂದರಿಂದ ಕಳೆಯಲ್ಪಟ್ಟರೆ, ಆಗ ಅದು ಖರೀದಿಸುವ, ದರವನ್ನು ಉತ್ಪನ್ನಮಾಡುತ್ತದೆ. ಈ ವಿಧಾನವನ್ನು ತಿರುಗು ಮುರುಗು ಮಾಡಿದರೆ ವ್ಯವಹಾರದಲ್ಲಿ ತೊಡಗಿಸಿದ, ಎಲ್ಲದಕ್ಕಿಂತಲೂ ಅಧಿಕವಾದ ಧನವನ್ನು ಪಡೆಯಬಹುದಾಗಿದೆ.

**ಉದಾಹರಣೆಗಳಿಂದ ವಿಶ್ಲೇಷಣ**

೧೦೩$\frac{೧}{೨}$. ಮೂರು ಮನುಷ್ಯರು ತೊಡಗಿಸಿದ ಮೂಲಧನಗಳು ಕ್ರಮವಾಗಿ ೨, ೮ ಮತ್ತು ೩೬. ಶೇಷ ವಸ್ತುಗಳ ಮಾರಲ್ಪಡುವ ಬೆಲೆಯು ೬ ಆಗಿದೆ. ಅದೇ ದರದಲ್ಲಿ ಖರೀದಿಸಿ ಮತ್ತು ಮಾರಿ, ಅವರು ಸಮಧನವುಳ್ಳವರಾದರು. ಕೊಳ್ಳುವ ಮತ್ತು ಮಾರುವ ಬೆಲೆಗಳನ್ನು ಕಂಡುಹಿಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**102½.** The examples bearing on this rule contemplate the purchase of a commodity at a certain common rate for various capital amounts; then the commodity so purchased is to be sold at a certain other common rate. That quantity of the commodity which is left over, owing to its not being enough to be sold for a unit of the kind of money employed in the transaction, is here spoken of as the remnant and the price at which this remnant is sold is the remnant-price.

Symbolically, let $a$, $a + b$ and $a + b + c$ be the capitals, where the last is the ज्येष्ठधन or the largest capital and let $p$ be the चरमार्घ or the remnant price; then, according to the rule, $a + b + c + 1$ = the *vending* rate and $(a + b + c + 1)\ p - 1$ = the *purchasing* rate.

From these, it can be easily shown that the sum of the amounts realised by selling the commodity at the vending rate and the remnant at the remnant price turns out to be the same in each case.

It may be noted that the *purchasing* rate happens in problems bearing on this rule to be the same in value as the समधन or the equal sale-proceeds.

೧೦೨ ೧/೨. ಈ ನಿಯಮದ ಮೇಲೆ ಆಧಾರವಾಗಿರುವ ಉದಾಹರಣೆಗಳಲ್ಲಿ ವಿಭಿನ್ನ ಮೂಲಧನಗಳಿಂದ, ಒಂದು ಸಾಮಾನ್ಯ ದರದಲ್ಲಿ ಒಂದು ವಸ್ತುವನ್ನು ಖರೀದಿಸಲಾಗಿದೆ ಎಂದು ತಿಳಿದುಕೊಳ್ಳಲಾಗುತ್ತದೆ. ನಂತರ ಈ ರೀತಿ ಖರೀದಿಸಿದ ವಸ್ತುವನ್ನು, ಬೇರೆ ಇನ್ನೊಂದು ಸಾಮಾನ್ಯ ದರದಲ್ಲಿ ಮಾರಲಾಗುತ್ತದೆ. ವ್ಯಾಪಾರದಲ್ಲಿ ತೊಡಗಿಸಿದ ಹಣದ ಏಕಮಾನದಲ್ಲಿ ಮಾರಲು ಸಾಕಷ್ಟು ಇಲ್ಲದಿರುವ ಕಾರಣದಿಂದ, ವಸ್ತುವಿನ ಎಷ್ಟು ಭಾಗ ಉಳಿದಿರುತ್ತದೋ ಅದನ್ನು ಇಲ್ಲಿ *ಶೇಷ* ವೆಂದು ಕರೆಯಲಾಗುತ್ತದೆ. ಈ ಶೇಷವು ಯಾವ ಬೆಲೆಯಲ್ಲಿ ಮಾರಲ್ಪಡುತ್ತದೋ ಅದನ್ನು ಅವಶಿಷ್ಟ ಮೂಲ್ಯ (ಅಂತ್ಯಾರ್ಧ) ವೆಂದು ಕರೆಯಲಾಗುತ್ತದೆ.

ಸಾಂಕೇತಿಕವಾಗಿ, ಅ, ಅ + ಬ ಮತ್ತು ಅ + ಬ + ಸ ಮೂಲಧನಗಳಾಗಿರಲಿ. ಇಲ್ಲಿ ಕಡೆಯದು *ಜ್ಯೇಷ್ಠಧನ* ಅಥವಾ ಎಲ್ಲದಕ್ಕಿಂತಲೂ ದೊಡ್ಡ ಮೂಲಧನವಾಗಿದೆ. ಪ ವು *ಚರಮಾರ್ಘ್ಯ* ಅಥವಾ ಅವಿಶಿಷ್ಟ ಮೂಲ್ಯವಾಗಿರಲಿ. ಆಗ, ಈ ನಿಯಮದ ಪ್ರಕಾರ, ಅ + ಬ + ಸ + ೧ = ಮಾರುವ ಬೆಲೆ ಮತ್ತು (ಅ + ಬ + ಸ + ೧) ಪ - ೧ = ಖರೀದಿಸುವ ದರವಾಗಿರುತ್ತದೆ. ವಸ್ತುವನ್ನು ಮಾರುವ ದರಗಳಲ್ಲಿ ಮತ್ತು ಶೇಷವನ್ನು ಅವಶಿಷ್ಟ ಮೂಲ್ಯದಲ್ಲಿ ಮಾರಿದಾಗ ದೊರೆಯುವ ರಕಮುಗಳ ಮೊತ್ತಗಳು ಪ್ರತಿಯೊಂದು ಪ್ರಕರಣದಲ್ಲೂ ಒಂದೇ ಆಗಿರುತ್ತದೆ ಎಂಬುದನ್ನು ಸುಲಭವಾಗಿ ತೋರಿಸಬಹುದು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಖರೀದಿಸುವ ದರವು, ಈ ನಿಯಮದ ಮೇಲೆ ಆಧಾರವಾಗಿರುವ ಲೆಕ್ಕಗಳಲ್ಲಿ ಸಮಧನ ಅಥವಾ ಸಮಾನ ವಿಕ್ರಯದರದ ಬೆಲೆಗೆ ಸಮವಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



सार्धैकमर्धमर्धद्वयं च संगृह्य ते त्रयः पुरुषाः ।
क्रयविक्रयौ च कृत्वा षड्भिः पश्चार्घात्समधना जाताः ॥ १०४$\frac{2}{2}$॥
चत्वारिंशत् सैका समधनसङ्ख्या षडेव चरमार्घः ।
आचक्ष्व गणक शीघ्रं ज्येष्ठधनं किं च कानि मूलानि ॥ १०५$\frac{2}{2}$॥

---

**104$\frac{1}{2}$.** Sārdhaikamardhamardhadvayaṁ ca saṅgṛhya te trayaḥ puruṣāḥ, krayavikrayau ca kṛtvā ṣaḍbhiḥ paścārghātsamadhanā jātāḥ.

**105$\frac{1}{2}$.** Catvāriṁśat saikā samadhanasaṅkhyā ṣaḍeva caramārghaḥ, ācakṣva gaṇaka śīghraṁ jyeṣṭadhanaṁ kiṁ ca kāni mūlāni.

---

**104$\frac{1}{2}$.** Those three persons took up $1\frac{1}{2}$, $\frac{1}{2}$ and $2\frac{1}{2}$ (as their respective capital amounts) and conducted the operations of buying and selling (in relation to the same commodity at the same rates of price). By selling the remnant (in the end) at a price represented by 6, they became possessors of equal wealth. (Find out their buying and selling prices.)

**105$\frac{1}{2}$.** The quantity measuring the equal wealth is 41 and the price at which the remnants of the commodity are sold is 6. O arithmetician, tell me quickly what the highest capital (invested) is and what the (various) capitals are.

---

೧೦೪ $\frac{೧}{೨}$. ಅದೇ ಮೂರು ಮನುಷ್ಯರು ಕ್ರಮವಾಗಿ ೧ $\frac{೧}{೨}$, $\frac{೧}{೨}$ ಮತ್ತು ೨ $\frac{೧}{೨}$ ಮೂಲಧನಗಳನ್ನು ತೆಗೆದು ಕೊಂಡರು ಮತ್ತು ಅದೇ ಬೆಲೆಗಳಲ್ಲಿ ಅದೇ ವಸ್ತುವಿನ ಕ್ರಯ ಮತ್ತು ವಿಕ್ರಯಗಳನ್ನು ಮಾಡಿದರು. ಕಡೆಯಲ್ಲಿ, ಶೇಷವನ್ನು, ೬ ರಿಂದ ನಿರೂಪಿತವಾಗುವ ಸಂಖ್ಯೆಯಿಂದ ಮಾರಿದಾಗ, ಅವರು ಸಮಾನಧನವುಳ್ಳವರಾದರು. ಅವರ ಕೊಳ್ಳುವ ಮತ್ತು ಮಾರುವ ಬೆಲೆಗಳನ್ನು ಕಂಡುಹಿಡಿ.

೧೦೫ $\frac{೧}{೨}$. ಸಮಾನಧನವುಳ್ಳ ಸಂಖ್ಯೆಯು ೪೧ ಆಗಿದೆ. ಶೇಷ ವಸ್ತುಗಳನ್ನು ಮಾರುವ ಬೆಲೆಯು ೬ ಆಗಿದೆ. ಎಲೈ ಅಂಕಗಣಿತಜ್ಞನೇ, ಎಲ್ಲದಕ್ಕಿಂತಲೂ ಹೆಚ್ಚಿನ ಮೂಲಧನವೇನು ಮತ್ತು (ವಿಭಿನ್ನ) ಬೇರೆ ಮೂಲಧನಗಳೇನು ಎಂಬುದನ್ನು ನನಗೆ ಬೇಗನೆ ಹೇಳು.

---

**105$\frac{1}{2}$.** It may be noted here that, according to the rule, it is only the largest capital that is found out; while the other capitals required in the problem are optionally chosen, so as to be less than the largest capital.

೧೦೫ $\frac{೧}{೨}$. ಇಲ್ಲಿ ಗಮನಿಸಬೇಕಾದ ಅಂಶವೆಂದರೆ: ಈ ನಿಯಮದ ಪ್ರಕಾರ ಎಲ್ಲದಕ್ಕಿಂತಲೂ ಅತಿಹೆಚ್ಚಿನ ಮೂಲಧನವನ್ನು ಮಾತ್ರ ಕಂಡುಹಿಡಿಯಲಾಗಿದೆ. ಈ ಲೆಕ್ಕದಲ್ಲಿನ ಇತರ ಮೂಲಧನಗಳನ್ನು ಎಲ್ಲದಕ್ಕಿಂತ ಅತಿಹೆಚ್ಚಿನ ಮೂಲಧನಕ್ಕಿಂತ ಕಡಿಮೆಯಾಗಿರುವಂತೆ, ಇಚ್ಛಾನುಸಾರವಾಗಿ ಆರಿಸಲಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



समधनसङ्ख्या पञ्चत्रिंशद्भवन्ति यत्र दीनाराः ।
चत्वारश्चरमार्घो ज्येष्ठधनं किं च गणक कथय त्वम् ॥ १०६$\frac{1}{2}$॥
चरमार्घभिन्नजातौ समधनार्घानयनसूत्रम् -
तुल्यापच्छेदधनान्त्यार्घाभ्यां विक्रयक्रयार्घौ प्राग्वत् ।
छेदच्छेदकृतिघ्नावनुपातात् समधनानि भिन्नेऽन्त्यार्घे ॥ १०७$\frac{1}{2}$॥

---

**106$\frac{1}{2}$.** Samadhanasaṅkhyā pañcatriṁśadbhavanti yatra dinārāḥ,
catvāraścaramārgho jyeṣṭadhanaṁ kiṁ ca gaṇaka kathaya tvam.

Caramārghabhinnajātau samadhanārghānayanasūtram -

**107$\frac{1}{2}$.** Tulyāpacchedadhanāntyārghābhyāṁ vikrayakrayārghau prāgvat,
chedacchedakṛtighnāvanupātāt samadhanāni bhinne' ntyārghe.

---

**106$\frac{1}{2}$.** In the case where 35 *dīnāras* give the numerical measure of the equal wealth and 4 is the price at which the remnant is to be sold, you tell me O arithmetician, what the highest capital (invested), is.

The rule for arriving at the value of the prices producing equal sale-proceeds when the price of the remnant is fractional in character :

**107$\frac{1}{2}$.** When the remnant price is fractional in character, the selling and the buying rates are to be derived as before with (the data consisting of) the (invested) capitals and the remnant-price reduced to the same denominator, which is (however) ignored (for the time being); these selling and buying rates are (then respectively) to be multiplied by (this) denominator and the square of (this) denominator (for arriving at the required selling and buying rates). The value of the equal sale-proceeds is (then obtained) by means of the rule-of-three.

---

೧೦೬ $\frac{೧}{೨}$. ಆ ಪ್ರಕರಣದಲ್ಲಿ ೩೫ *ದೀನಾರ*ಗಳು ಸಮಾನಧನ ಸಂಖ್ಯೆಯಾಗಿದೆ ಮತ್ತು ಶೇಷ ವಸ್ತುಗಳನ್ನು ಮಾರುವ ಬೆಲೆಯು ೪ ಆಗಿದೆ. ಎಲೈ ಗಣಿತಜ್ಞನೇ, ಎಲ್ಲದಕ್ಕಿಂತಲೂ ಅತಿಹೆಚ್ಚಿನ (ತೊಡಗಿಸಿದ) ಮೂಲ-ಧನವೇನೆಂದು ನನಗೆ ಹೇಳು.

ಅವಶಿಷ್ಟ ಮೂಲ್ಯ (ಅಂತ್ಯಾರ್ಘ) ವು ಭಿನ್ನಾತ್ಮಕವಾಗಿದ್ದಾಗ, ಸಮವಾಗಿರುವ ಮಾರುವ ರಕಮುಗಳನ್ನು ಉತ್ಪನ್ನಮಾಡುವ ಬೆಲೆಗಳನ್ನು ಪಡೆಯಲು ನಿಯಮ :

೧೦೭ $\frac{೧}{೨}$. ಅವಶಿಷ್ಟ ಮೂಲ್ಯ (ಅಂತ್ಯಾರ್ಘ) ವು ಭಿನ್ನಾತ್ಮಕವಾಗಿದ್ದಾಗ ಮಾರುವ ಮತ್ತು ಖರೀದಿಸುವ ದರಗಳನ್ನು ಮೊದಲಿನ ರೀತಿಯಲ್ಲೇ ಪಡೆಯಲಾಗುತ್ತದೆ. ಇಲ್ಲಿ ತೊಡಗಿಸಿದ ರಕಮುಗಳು ಮತ್ತು ಅವಶಿಷ್ಟ ಮೂಲ್ಯಗಳನ್ನು ಸಮಾನ ಛೇದಗಳಿರುವಂತೆ ಮಾಡಿ ಉಪಯೋಗಕ್ಕೆ ತರಲಾಗುತ್ತದೆ. ಈ ಛೇದವನ್ನು ಸದ್ಯಕ್ಕೆ ಉಪೇಕ್ಷಿಸಲಾಗಿದೆ, ನಂತರ ಬೇಕಾದ ಮಾರುವ ಮತ್ತು ಖರೀದಿಸುವ ದರಗಳನ್ನು ಪಡೆಯಲು, ಈ ಮಾರುವ ಮತ್ತು ಖರೀದಿಸುವ ದರಗಳನ್ನು ಈ ಛೇದ ಮತ್ತು ಛೇದದ ವರ್ಗದಿಂದ ಗುಣಿಸುತ್ತೇವೆ. ನಂತರ ಸಮಾನ ವಿಕ್ರಯದರ (ಮಾರುವ ರಕಮುಗಳನ್ನು) ವನ್ನು ತ್ರೈರಾಶಿಕದ ನಿಯಮದಿಂದ ಪಡೆಯುತ್ತೇವೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अर्धत्रिपादभागा धनानि षट्पञ्चमांशकाश्चरमार्घः ।
एकार्घेण क्रीत्वा विक्रीय च समधना जाताः ॥ १०८$\frac{1}{2}$॥
पुनरपि अन्त्यार्घे भिन्ने सति समधनानयनसूत्रम् -
ज्येष्ठांशद्विहरहतिः सान्त्यहरा विक्रयोऽन्त्यमूल्यघ्नः ।
नैको द्व्यखिलहरघ्नः स्यात्क्रयसङ्ख्यानुपातोऽथ ॥ १०९$\frac{1}{2}$॥

---

**108$\frac{1}{2}$.** Ardhatripādabhāgā dhanāni ṣaṭpancamāṁśakāścaramārghaḥ, ekārgheṇa krītvā vikrīya ca samadhanā jātāḥ.

Punarapi antyārghe bhinne sati samadhanānayanasūtram -

**109$\frac{1}{2}$.** Jyeṣṭāṁśadviharahatiḥ sāntyaharā vikrayo'ntyamūlyaghnaḥ, naiko dvayakhilaharaghnaḥ syātkrayasaṅkhyānupāto'tha.

---

### *An example in illustration thereof*

**108$\frac{1}{2}$.** (In a transaction) $\frac{1}{2}, \frac{1}{3}, \frac{1}{4}$ are the capital amounts (invested respectively by three persons); the remnant-price is $\frac{6}{5}$. By purchasing and selling at the same prices, they became possessed of equal sale-proceeds. (What is the buying price, what is the selling price and what is the equal sale-amount?)

Again, another rule for arriving at the value of the equal sale-proceeds, when the remnant-price is fractional :

**109$\frac{1}{2}$.** The continued product of the highest numerator, of two and of (all) the denominators (to be found in the values of the capital amounts invested), when combined with the (last) denominator belonging to the value of the remnant-price, gives rise to the selling rate. This multiplied by the remnant-price and then diminished by *one* and then multiplied (successively) by two and all the denominators, becomes the purchasing rate. Then the rule-of-three (is to be used for arriving at the common value of the sale-amounts).

---

### ಉದಾಹರಣೆಯಿಂದ ವಿಶ್ಲೇಷಣ

೧೦೮$\frac{೧}{೨}$. ಒಂದು ವ್ಯಾಪಾರದಲ್ಲಿ ಮೂರು ವ್ಯಕ್ತಿಗಳಿಂದ ತೊಡಗಿಸಲಾದ ಮೂಲಧನಗಳು ಕ್ರಮವಾಗಿ $\frac{೧}{೨}$, $\frac{೧}{೩}$ ಮತ್ತು $\frac{೧}{೪}$ ಆಗಿವೆ. ಅವಶಿಷ್ಟ ಮೂಲ್ಯ (ಅಂತ್ಯಾರ್ಘ್ಯ) ವು $\frac{೬}{೫}$ ಆಗಿದೆ. ಅದೇ ಬೆಲೆಗಳಲ್ಲಿ ಖರೀದಿಸಿದ್ದರಿಂದ ಮತ್ತು ಮಾರಿದ್ದರಿಂದ, ಅವರು ಸಮಾನಧನವುಳ್ಳವರಾದರು. ಮಾರುವ ಬೆಲೆಯೇನು? ಖರೀದಿಸುವ ಬೆಲೆಯೇನು ಮತ್ತು ಸಮಾನ ವಿಕ್ರಯಧನವೇನು?

ಅವಶಿಷ್ಟ ಮೂಲ್ಯ (ಅಂತ್ಯಾರ್ಘ್ಯ) ವು ಭಿನ್ನಾತ್ಮಕವಾಗಿದ್ದಾಗ ಸಮಾನ ವಿಕ್ರಯ ದರ (ಮಾರುವ ರಕಮು) ವನ್ನು ಪಡೆಯಲು ಮತ್ತೊಂದು ನಿಯಮ :

೧೦೯$\frac{೧}{೨}$. ಎಲ್ಲದಕ್ಕಿಂತಲೂ ಅತಿಹೆಚ್ಚಿನ ಅಂಶ, ಎರಡು ಮತ್ತು (ಕಂಡುಹಿಡಿಯಬೇಕಾಗಿರುವ ತೊಡಗಿಸಲಾದ ಮೂಲಧನಗಳ ರಕಮುಗಳ) ಅಂಶಗಳ ಸತತವಾದ ಗುಣಲಬ್ಧವನ್ನು, ಅವಶಿಷ್ಟ ಮೂಲ್ಯದ ಬೆಲೆಯ ಛೇದದಲ್ಲಿ ಸೇರಿಸಿದಾಗ, ಮಾರುವ ದರವು ಉತ್ಪನ್ನವಾಗುತ್ತದೆ. ಇದನ್ನು ಅವಶಿಷ್ಟ ಮೂಲ್ಯದಿಂದ ಗುಣಿಸಿ ಮತ್ತು ೧ ರಿಂದ ಕಳೆದು ಮತ್ತು ಪುನಃ ಉತ್ತರೋತ್ತರವಾಗಿ ಎರಡು ಹಾಗೂ ಎಲ್ಲ ಛೇದಗಳಿಂದ ಗುಣಿಸಿದಾಗ, ಖರೀದಿಸುವ ದರವು ಲಭಿಸುತ್ತದೆ, ಇದಾದ ನಂತರ, ತ್ರೈರಾಶಿಕದ ಸಹಾಯದಿಂದ ಮಾರುವ ರಕಮುಗಳ ಸಾಮಾನ್ಯ ಬೆಲೆಯನ್ನು ಪಡೆಯಬಹುದಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

अर्धं द्वौ त्र्यंशौ च त्रीन् पादांशांश्च[1] सङ्गृह्य ।
विक्रीय क्रीत्वान्ते पञ्चभिरङ्घ्र्यंशकैस्समानधनाः ॥ ११० $\frac{1}{2}$॥
इष्टगुणेष्टसङ्ख्यायामिष्टसङ्ख्यासमर्पणानयनसूत्रम् -
अन्त्यपदे स्वगुणहृते क्षिपेदुपान्त्यं च तस्यान्तम्। तेनोपान्त्येन भजेद्यल्लब्धं तद्भवेन्मूलम् ॥१११ $\frac{1}{2}$॥

---

## Atroddeśakaḥ

**110 $\frac{1}{2}$.** Ardhaṁ dvau tryaṁśau ca trīn pādāṁśāṁśca saṅgṛhya, vikrīya krītvānte pañcabhiraṅghnyaṁśakaissamānadhanāḥ.

Iṣṭaguṇeṣṭasaṅkhyāyāmiṣṭasaṅkhyāsamarpaṇānayanasūtram -

**111 $\frac{1}{2}$.** Antyapade svaguṇahṛte kṣipedupāntyaṁ ca tasyāntam, tenopāntyena bhajedyallabdhaṁ tadbhavenmūlam.

---

## *An example in illustration thereof*

**110 $\frac{1}{2}$.** Having invested $\frac{1}{2}, \frac{2}{3}, \frac{3}{4}$ (respectively) and having bought and sold (the same commodity) and with $\frac{5}{4}$ as the remnant-price, three merchants became possessors of equal sale-proceeds (in the end. What is the buying price, what is the selling price and what is the equal sale-amount?)

The rule for arriving at (the solution of a problem wherein) optionally chosen quantities (are) bestowed in optionally chosen multiples for an optionally chosen number of times :

**111 $\frac{1}{2}$.** Let the penultimate quantity be added to the ultimate quantity as divided by its own corresponding multiple number and let the result of this operation be divided by that (multiple number which is associated with this) penultimate quantity (given in the problem). What results (from carrying out this operation throughout in relation to all the various quantities bestowed) happens to be the (required) original quantity.

---

## ಉದಾಹರಣೆಯಿಂದ ವಿಶ್ಲೇಷಣ

೧೧೦ $\frac{೧}{೨}$. $\frac{೧}{೨}$, $\frac{೨}{೩}$, $\frac{೩}{೪}$ ನ್ನು ಕ್ರಮವಾಗಿ ವ್ಯಾಪಾರದಲ್ಲಿ ತೊಡಗಿಸಿ ಅದೇ ವಸ್ತುವನ್ನು ಖರೀದಿಸಿ ಮತ್ತು ಮಾರಿ ಹಾಗೂ $\frac{೫}{೪}$ ಅವಶಿಷ್ಟ ಮೂಲ್ಯದಿಂದ, ಮೂರು ವ್ಯಾಪಾರಿಗಳು ಕಡೆಯಲ್ಲಿ ಸಮಾನವಾದ ಮಾರುವ ರಕಮುಗಳನ್ನು ಹೊಂದಿರುವವರಾದರು. ಖರೀದಿಸುವ ಬೆಲೆಯೇನು? ಮಾರುವ ಬೆಲೆಯೇನು ಮತ್ತು ಮಾರುವ ಸಮಾನವಾದ ರಕಮುಗಳೇನು?

ಇಚ್ಛಾನುಸಾರವಾಗಿ ಆಯ್ದ ಸಂಖ್ಯೆಯಷ್ಟು ಇಚ್ಛಾನುಸಾರವಾಗಿ ಆರಿಸಿದ ಅಪವರ್ತ್ಯಗಳಲ್ಲಿ ಇಚ್ಛಾನುಸಾರವಾಗಿ ಆರಿಸಿದ ಸಂಖ್ಯೆಗಳು ಸಮರ್ಪಿತವಾಗಿರುವಂತಹ ಲೆಕ್ಕದ ಉತ್ತರವನ್ನು ಪಡೆಯಲು ನಿಯಮ:

೧೧೧ $\frac{೧}{೨}$. ಉಪಾಂತ್ಯ ಸಂಖ್ಯೆಯನ್ನು, ಅಂತಿಮ ಸಂಖ್ಯೆಯದೇ ಅನುಗುಣವಾದ ಅಪವರ್ತ್ಯ ಸಂಖ್ಯೆಯಿಂದ ಭಾಗಿಸಲ್ಪಟ್ಟ ಅಂತಿಮ ಸಂಖ್ಯೆಯಲ್ಲಿ ಜೋಡಿಸಲಿ. ಈ ಕ್ರಿಯೆಯಿಂದ ಪ್ರಾಪ್ತವಾದ ಫಲವನ್ನು, ಈ ಕೊಟ್ಟಿರುವ ಉಪಾಂತ ಸಂಖ್ಯೆಯೊಂದಿಗೆ ಸಂವಲಿತವಾಗಿರುವ ಅಪವರ್ತ್ಯ ಸಂಖ್ಯೆಯಿಂದ ಭಾಗಿಸು. ಕೊಟ್ಟಿರುವ ಎಲ್ಲ ವಿಭಿನ್ನ ಸಂಖ್ಯೆಗಳ ಸಂಬಂಧದಲ್ಲಿ ಈ ಕ್ರಿಯೆಯನ್ನು ಮಾಡಿದರೆ, ಬೇಕಾದ ಮೂಲಸಂಖ್ಯೆಯು ದೊರೆಯುತ್ತದೆ.

---

1. The following stanza is added in M after stanza No. 110½, but it is not found in B :-
अर्धत्रिपादभागा धनानि षट्पञ्चमांशकान्त्यार्घः । एकार्घेण क्रीत्वा विक्रीय च समधना जाताः ।।



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अत्रोद्देशकः

कश्चिच्छ्रावकपुरुषश्चतुर्मुखं जिनगृहं समासाद्य ।
पूजां चकार भक्त्या सुरभीण्यादाय कुसुमानि ॥ ११२$\frac{1}{2}$॥
द्विगुणमभूदाद्यमुखे त्रिगुणं च चतुर्गुणं च पञ्चगुणम् ।
सर्वत्र पञ्च पञ्च च तत्सङ्ख्याम्भोरुहाणि कानि स्युः ॥ ११३$\frac{1}{2}$॥
द्वित्रिचतुर्भागगुणाः पञ्चार्धगुणास्त्रिपञ्चसप्ताष्टौ ।
भक्तैर्भक्त्यार्हेभ्यो दत्तान्यादाय कुसुमानि ॥ ११४$\frac{1}{2}$॥

इति मिश्रकव्यवहारे प्रक्षेपककुट्टीकारः समाप्तः ।।

---

Atroddeśakaḥ

112$\frac{1}{2}$. Kaścicchrāvakapuruṣaścaturmukhaṁ jinagṛhaṁ samāsādya, pūjāṁ cakāra bhaktyā surabhīṇyādāya kusumāni.

113$\frac{1}{2}$. Dviguṇamabhūdādyamukhe triguṇaṁ ca caturguṇaṁ ca pañcaguṇam, sarvatra pañca pañca ca tatsaṅkhyāmbhoruhāṇi kāni syuḥ.

114$\frac{1}{2}$. Dvitricaturbhāgaguṇāḥ pañcārdhaguṇāstripañcasaptāṣṭau, bhaktairbhaktyārhebhyo dattānyādāya kusumāni.

Iti miśrakavyavahāre prakṣepakakuṭṭīkāraḥ samāptaḥ.

---

***Examples in illustration thereof***

**112$\frac{1}{2}$-113$\frac{1}{2}$.** A certain lay follower of Jainism went to a Jina temple with four gate-ways and having taken (with him) fragrant flowers offered them (thus) in worship with devotion : At the four gate-ways, they became doubled, then trebled, then quadrupled and then quintupled (respectively in order.) The number of flowers offered by him was five at every (gate-way). How many were the lotuses (originally taken by him)?

**114$\frac{1}{2}$.** Flowers were obtained and offered in worship by devotees with devotion, the flowers (so offered) being (successively) 3, 5, 7 and 8; (their corresponding) multiple quantities being $\frac{1}{2}$, $\frac{1}{3}$, $\frac{1}{4}$ and $\frac{5}{2}$ (in order. Find out the original number of flowers).

**Thus ends proportionate division in this chapter on mixed problems.**

---

ಉದಾಹರಣೆಗಳಿಂದ ವಿಶ್ಲೇಷಣ

೧೧೨ $\frac{೧}{೨}$ - ೧೧೩ $\frac{೧}{೨}$ . ಒಬ್ಬ ಶ್ರಾವಕನು ನಾಲ್ಕು ದ್ವಾರವಿರುವ ಒಂದು ಜಿನಮಂದಿರಕ್ಕೆ ಹೋದನು ಮತ್ತು (ತನ್ನ ಜೊತೆಯಲ್ಲಿ) ಸುಗಂಧ ಪುಷ್ಪಗಳನ್ನು ತೆಗೆದುಕೊಂಡು ಭಕ್ತಿಯಿಂದ ಅವುಗಳನ್ನು ಪೂಜೆಗಾಗಿ ಈ ರೀತಿ ಅರ್ಪಿಸಿದನು: ನಾಲ್ಕು ದ್ವಾರಗಳಲ್ಲಿ ಅವುಗಳು ಕ್ರಮವಾಗಿ ಎರಡರಷ್ಟಾದವು, ನಂತರ ಮೂರರಷ್ಟಾದವು, ನಂತರ ನಾಲ್ಕರಷ್ಟಾದವು ಮತ್ತು ನಂತರ ಐದರಷ್ಟಾದವು. ಪ್ರತಿಯೊಂದು ದ್ವಾರದಲ್ಲಿ ಅವನು ಅರ್ಪಿಸಿದ ಹೂವುಗಳ ಸಂಖ್ಯೆ ೫. ಅವನು ಮೊದಲು ತೆಗೆದುಕೊಂಡ ಕಮಲಗಳೆಷ್ಟು?

೧೧೪ $\frac{೧}{೨}$. ಭಕ್ತರಿಂದ ಭಕ್ತಿಪೂರ್ವಕವಾಗಿ ಹೂವುಗಳನ್ನು ಪಡೆಯಲಾಯಿತು ಮತ್ತು ಪೂಜೆಗಾಗಿ ಅರ್ಪಿಸಲಾಯಿತು. ಈ ರೀತಿ ಅರ್ಪಿಸಿದ ಹೂವುಗಳು ಉತ್ತರೋತ್ತರವಾಗಿ ೩, ೫, ೭ ಮತ್ತು ೮ ಆಗಿವೆ. ಅವುಗಳ ಅನುಗುಣವಾದ ಅಪವರ್ತ್ಯ ಸಂಖ್ಯೆಗಳು ಕ್ರಮವಾಗಿ $\frac{೧}{೨}$ , $\frac{೧}{೩}$ , $\frac{೧}{೪}$ ಮತ್ತು $\frac{೫}{೨}$ ಆಗಿವೆ. ಹೂವುಗಳ ಮೂಲ ಸಂಖ್ಯೆಯನ್ನು ಕಂಡುಹಿಡಿ.

**ಈ ರೀತಿ ಮಿಶ್ರಕ ವ್ಯವಹಾರದಲ್ಲಿ, ಪ್ರಕ್ಷೇಪಕ ಕುಟ್ಟೀಕಾರವೆಂಬ ಹೆಸರಿನ ಪ್ರಕರಣವು ಸಮಾಪ್ತಿಯಾಯಿತು.**



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## वल्लिकाकुट्टीकारः

इतः परं वल्लिकाकुट्टीकारगणितं व्याख्यास्यामः । कुट्टीकारे वल्लिकागणितन्यायसूत्रम् -
छित्वा छेदेन राशिं प्रथमफलमपोह्याप्तमन्योन्यभक्तं स्थाप्योर्ध्वाधर्यतोऽधो मतिगुणमयुजात्पेऽवशिष्टे धनर्णम् । छित्वाधः स्वोपरिघ्नोपरियुतहरभागोऽधिकाग्रस्य हारं छित्वा छेदेन साग्रान्तरफलमधिकाग्रान्वितं हारघातम् ॥ ११५$\frac{1}{2}$॥

---

## Vallikākuṭṭīkāraḥ

Itaḥ paraṁ vallikākuṭṭīkāragaṇitaṁ vyākhyāsyāmaḥ. Kuṭṭīkāre vallikāgaṇitanyāyasūtram -

**115$\frac{1}{2}$.** Chitvā chedena rāśiṁ prathamaphalamapohyāptamanyonyabhaktaṁ,
Sthāpyordhvārdhayato'dho matiguṇamayujālpe' vaśiṣṭe dhanarṇam,
chitvādhaḥ svoparighnopariyutaharabhāgo'dhikāgrasya hāraṁ chitvā chedena sāgrāntaraphalamadhikāgrānvitaṁ hāraghātam.

---

## *Vallikā-kuṭṭīkāra*

Hereafter we shall explain the process of calculation known as *Vallikā-kuṭṭīkāra* * :

The rule underlying the process of calculation known as *Vallikā* in relation to *Kuṭṭīkāra* (which is a special kind of division or distribution) :

**115$\frac{1}{2}$.** Divide the (given) group-number by the (given) divisor; discard the first quotient; then put down one below the other the (various) quotients obtained by the successive division (of the various resulting divisors by the various resulting remainders; again), put down below this the optionally chosen number, with which the least remainder in the odd position of order (in the above-mentioned process of successive division) is to be multiplied and (then put down) below (this again) this product increased or decreased (as the case may be by the given known number) and then divided (by the last divisor in the above mentioned process of successive division.

---

## ವಲ್ಲಿಕಾ ಕುಟ್ಟೀಕಾರ

ಇನ್ನುಮುಂದೆ ನಾವು ***ವಲ್ಲಿಕಾ ಕುಟ್ಟೀಕಾರ***ವೆಂಬ ಹೆಸರಿನ ಗಣನಾವಿಧಿ*ಯನ್ನು ವಿವರಿಸುತ್ತೇವೆ.

(ಒಂದು ವಿಶೇಷ ವಿಧವಾದ ಭಾಗಾಹಾರ ಅಥವಾ ವಿಭಜನೆಯಾಗಿರುವ) ***ಕುಟ್ಟೀಕಾರ***ದ ಸಂಬಂಧದ ವಲ್ಲಿಕಾ ಎಂಬ ಹೆಸರಿನ ಗಣನಾವಿಧಿಗಾಗಿ ನಿಯಮ :

೧೧೫ $\frac{೧}{೨}$. ಕೊಟ್ಟಿರುವ ಸಂಖ್ಯೆ (ಸಮೂಹವಾಚಕ ಸಂಖ್ಯೆ) ಯನ್ನು ಕೊಟ್ಟಿರುವ ಭಾಜಕದಿಂದ ಭಾಗಿಸು. ಪ್ರಥಮ ಭಾಗಲಬ್ಧವನ್ನು ತೆಗೆದುಹಾಕು, ನಂತರ (ವಿಭಿನ್ನ ಪರಿಣಾಮೀ ಶೇಷಗಳಿಂದ ವಿಭಿನ್ನ ಪರಿಣಾಮೀ ಭಾಜಕಗಳ ಉತ್ತರೋತ್ತರ ಭಾಗಗಳಿಂದ ಪ್ರಾಪ್ತವಾದ ವಿಭಿನ್ನ) ಭಾಗಲಬ್ಧಗಳನ್ನು ಒಂದರ ಕೆಳಗೆ ಇನ್ನೊಂದನ್ನು ಇಡು ಮತ್ತು ಪುನಃ ಇದರ ಕೆಳಗೆ (ಯಾವುದರಿಂದ ಉತ್ತರೋತ್ತರ ಭಾಗದ ಮೇಲೆ ಹೇಳಿದ ವಿಧಿಯಲ್ಲಿ ಬೆಸ ಸ್ಥಿತಿಯ ಕ್ರಮದ ಲಘುತಮ ಶೇಷವನ್ನು ಗುಣಿಸಲಾಗುತ್ತದೆಯೋ ಅಂತಹ) ಇಚ್ಛಾನುಸಾರವಾಗಿ ಆಯ್ದ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



Thus the *Vallikā* or the creeper-like chain of figures is obtained. In this) the sum obtained by adding (the lowermost number in the chain) to the product obtained by multiplying the number above it with the number (immediately) above (this upper number, this process of addition being in the same way continued till the whole chain is exhausted,) this sum, is to be divided by the (originally given) divisor. (The remainder in this last division becomes the multiplier with which the originallly given group-number is to be multiplied for the purpose of arriving at the quantity which is to be divided or distributed in the manner indicated in the problem. Where, however, the given group-numbers, increased or decreased in more than one way, are to be divided or distributed in more than one proportion,) the divisor related to the larger group-value, (arrived at as explained above in relation to either of two specified distributions), is to be divided (as above) by the divisor (related to the smaller group-value, so that a creeper-like chain of successive quotients may be obtained in this case also as before. Below the lowermost quotient in this chain, the optionally chosen multiplier of the least remainder in the odd position of order in this last successive division is to be put down and below this again is to be put down the number which is obtained by) adding the difference between the two group-values (already referred to) to the product (of the least remainder in the last odd position of order multiplied by the above optionally chosen multiplier thereof and then by dividing the resulting sum by the last divisor in the above division chain. Thus the creeper-like chain

---

ಸಂಖ್ಯೆಯನ್ನು ಇಡು. ಅನಂತರ ಇದರ ಕೆಳಗೆ ಈ ಗುಣಲಬ್ಧವನ್ನು (ಪ್ರಶ್ನೆಯಲ್ಲಿ ಕೊಟ್ಟಿರುವ ಗೊತ್ತಿರುವ ಸಂಖ್ಯೆಯಿಂದ) ಹೆಚ್ಚಿಸಿ ಅಥವಾ ಕುಗ್ಗಿಸಿ ಮತ್ತು ನಂತರ (ಮೇಲೆ ಹೇಳಿದ ಉತ್ತರೋತ್ತರ ಭಾಗದ ವಿಧಿಯಲ್ಲಿ ಅಂತಿಮ ಭಾಜಕದಿಂದ) ಭಾಗಿಸಿ, ಇಡು. ಈ ಪ್ರಕಾರವಾಗಿ *ವಲ್ಲಿಕಾ* ಅಥವಾ ಬಳ್ಳಿಯಂತಿರುವ ಅಂಕಿಗಳ ಸರಪಣಿಯು ಪ್ರಾಪ್ತವಾಗುತ್ತದೆ. ಇದರಲ್ಲಿ ಸರಪಣಿಯ ನಿಮ್ನತಮ ಸಂಖ್ಯೆಯನ್ನು, (ಸರಿಯಾಗಿ ಇದರ ಮೇಲಿರುವ ಸಂಖ್ಯೆಯಲ್ಲಿ ಮೇಲಿನ ಸರಿಯಾಗಿ ಇದರ ಮೇಲಿರುವ ಸಂಖ್ಯೆಯನ್ನು ಗುಣಿಸುವುದರಿಂದ ದೊರೆತ) ಗುಣಲಬ್ಧದಲ್ಲಿ ಸೇರಿಸುತ್ತೇವೆ. ಈ ವಿಧಾನವನ್ನು ಪೂರ್ತಿ ಸರಪಣಿಯು ಮುಗಿಯುವವರೆಗೂ ಮಾಡುತ್ತಲೇ ಇರುತ್ತೇವೆ. ಈ ಮೊತ್ತವನ್ನು ಮೊದಲೇ ಕೊಟ್ಟಿದ್ದಂತಹ ಭಾಜಕದಿಂದ ಭಾಗಿಸುತ್ತೇವೆ. ಈ ಅಂತಿಮ ಭಾಗಾಹಾರದಲ್ಲಿ ಶೇಷವು ಗುಣಕವಾಗುತ್ತದೆ. ಇದರಲ್ಲಿ (ಈ ಲೆಕ್ಕದಲ್ಲಿ ಹೇಳಲಾಗಿರುವ ವಿಧಿಯಲ್ಲಿ) ಭಾಗಿಸಬೇಕಾಗಿರುವ ಅಥವಾ ವಿತರಿಸಬೇಕಾಗಿರುವ ಸಂಖ್ಯೆಯನ್ನು ಪಡೆಯಲು, ಮೊದಲೇ ಕೊಟ್ಟಿರುವ (ಸಮೂಹವಾಚಕ) ಸಂಖ್ಯೆಯನ್ನು ಗುಣಿಸಲಾಗುತ್ತದೆ. ಆದರೆ, ಒಂದಕ್ಕಿಂತ ಅಧಿಕ ಸಲ ಹೆಚ್ಚಿಸಲಾಗಿ ಅಥವಾ ಕಳೆದ ಕೊಟ್ಟಿರುವ ಸಂಖ್ಯೆಗಳನ್ನು (ಸಮೂಹವಾಚಕ ಸಂಖ್ಯೆಗಳನ್ನು) ಒಂದಕ್ಕಿಂತ ಹೆಚ್ಚಿನ ಸಮಾನುಪಾತದಲ್ಲಿ ಭಾಗಿಸಬೇಕಾಗುತ್ತದೆ.

ಇಲ್ಲಿ ಎರಡು ವಿಶಿಷ್ಟ ಭಾಗಾಹಾರಗಳಲ್ಲಿ ಯಾವುದಾದರೂ ಒಂದರ ಸಂಬಂಧದಲ್ಲಿ ಪ್ರಾಪ್ತವಾದ ಅತಿಹೆಚ್ಚಿನ ಸಮೂಹವಾಚಕ ಬೆಲೆಯ ಸಂಬಂಧದ ಭಾಜಕವನ್ನು (ಚಿಕ್ಕ ಸಮೂಹವಾಚಕ ಬೆಲೆಯ ಸಂಬಂಧದ) ಭಾಜಕದಿಂದ ಮೇಲೆ ಹೇಳಿದ ರೀತಿಯಲ್ಲಿ ಭಾಗಿಸಲಾಗುತ್ತದೆ. ಇದರಿಂದ ಉತ್ತರೋತ್ತರ ಭಾಗಲಬ್ಧಗಳ ಬಳ್ಳಿಗೆ ಸಮಾನವಾದ ಸರಪಣಿಯು ಹಿಂದಿನ ಕ್ರಮದ ಅನುಸಾರವಾಗಿ ಈ ಪ್ರಕರಣದಲ್ಲೂ ಸಹ ಉಂಟಾಗುತ್ತದೆ. ಈ ಸರಪಣಿಯಲ್ಲಿ ನಿಮ್ನತಮ ಭಾಗಲಬ್ಧದ ಕೆಳಗೆ, ಈ ಅಂತಿಮ ಉತ್ತರೋತ್ತರ ಭಾಗದಲ್ಲಿ ಬೆಸಸ್ಥಿತಿಕ್ರಮದ ಲಘುತಮ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



of figures required for the solution of this latter combined problem is obtained. This chain is to be dealt with as before from below upwards and the resulting number is to be divided as before by the first divisor in this last division chain. The remainder obtained in this operation is then) to be multiplied by the divisor (related to the larger group-value and to the resulting product, this) larger group-value is to be added. (Thus the value of the required multiplier of the given group-number is obtained and this will satisfy both the specified distributions taken together into consideration).

---

ಶೇಷದ ಮನಸ್ಸಿನಲ್ಲಿ ಆರಿಸಿದ ಗುಣಕವನ್ನು ಇಡಲಾಗುತ್ತದೆ ಮತ್ತು ಪುನಃ ಇದರ ಕೆಳಗೆ ಮೊದಲೇ ಹೇಳಿದ ಎರಡು ಸಮೂಹವಾಚಕ ಬೆಲೆಗಳ ವ್ಯತ್ಯಾಸವನ್ನು, ಮೇಲೆ ತಿಳಿಸಿದ, ಮನಸ್ಸಿನಲ್ಲಿ ಆರಿಸಿದ ಗುಣಕದಿಂದ ಗುಣಿಸಿ, ಅಂತಿಮ ಬೆಸಸ್ಥಿತಿಯ ಕ್ರಮದಲ್ಲಿರುವ ಲಘುತಮ ಶೇಷದಲ್ಲಿ ಸೇರಿಸಿ, ಬಂದ ಮೊತ್ತವನ್ನು ಮೇಲೆ ಹೇಳಿದ ಸರಪಣಿ ಭಾಗಾಹಾರದ ಅಂತಿಮ ಭಾಜಕದಿಂದ ಭಾಗಿಸಿದ ನಂತರ ಬಂದ ಸಂಖ್ಯೆಯನ್ನು ಇಡಬೇಕು. ಈ ರೀತಿ, ಈ ನಂತರದ ಮಿಶ್ರಿತ ಪ್ರಶ್ನೆಯ ಉತ್ತರಕ್ಕಾಗಿ ಬೇಕಾದ ಬಳ್ಳಿಗೆ ಸಮಾನವಾದ ಅಂಕಿಗಳ ಸರಪಣಿಯನ್ನು ಪಡೆಯಬಹುದು. ಈ ಸರಪಣಿಯನ್ನು ಮೊದಲಿನ ತರಹ, ಕೆಳಗಿನಿಂದ ಮೇಲಕ್ಕೆ ವರ್ತಿಸಬೇಕು ಮತ್ತು ಮೊದಲಿನ ರೀತಿಯಲ್ಲಿ, ಲಭಿಸಿದ ಸಂಖ್ಯೆಯನ್ನು ಈ ಅಂತಿಮ ಭಾಗಾಹಾರದ ಸರಪಣಿಯ ಪ್ರಥಮ ಭಾಜಕದಿಂದ ಭಾಗಿಸುತ್ತೇವೆ. (ಈ ಕ್ರಿಯೆಯಲ್ಲಿ ಪ್ರಾಪ್ತವಾದ) ಶೇಷವನ್ನು (ಅತಿಹೆಚ್ಚಿನ ಸಮೂಹವಾಚಕ ಬೆಲೆಯ ಸಂಬಂಧದ) ಭಾಜಕದಿಂದ ಗುಣಿಸುತ್ತೇವೆ ಮತ್ತು ಹೀಗೆ ಬಂದ ಗುಣಲಬ್ಧದಲ್ಲಿ ಈ ಅತಿಹೆಚ್ಚಿನ ಸಮೂಹವಾಚಕ ಬೆಲೆಯನ್ನು ಸೇರಿಸುತ್ತೇವೆ. ಈ ಪ್ರಕಾರವಾಗಿ ಕೊಟ್ಟಿರುವ ಸಮೂಹ ಸಂಖ್ಯೆಯ ಬೇಕಾದ ಗುಣಕದ ಬೆಲೆಯನ್ನು ಪಡೆಯಲಾಗುತ್ತದೆ ಮತ್ತು ಇದು ಗಣನೆಗೆ ತೆಗೆದುಕೊಂಡ ಎರಡು ವಿಶಿಷ್ಟ ವಿತರಣೆಗಳನ್ನು ಸಮಾಧಾನಪಡಿಸುತ್ತದೆ.

---

* It is so called because the method of *kuṭṭīkāra* explained in the rule is based upon a creeper-like chain of figures.

**115½.** The rule will become clear from the following working of the problem in stanza No. 117½.

Here it is stated that 63 heaps of plantains together with 7 separate fruits are exactly divisible among 23 persons; it is required to find out the number of fruits in a heap. Here the 63 is called the 'group-number' and the numerical value of the fruits contained in each heap is called the 'group-value' and it is this latter which has to be found out.

* ಇದನ್ನು ಹೀಗೆ (ಅಂದರೆ *ವಲ್ಲಿಕಾ ಕುಟ್ಟೀಕಾಡ*ಎಂದು) ಕರೆಯಲು ಕಾರಣವೇನೆಂದರೆ ಈ ನಿಯಮದಲ್ಲಿ ವಿವರಿಸಿರುವ *ಕುಟ್ಟೀಕಾರ* ವಿಧಾನವು ಬಳ್ಳಿಗೆ ಸಮಾನವಾಗಿರುವ ಅಂಕಿಗಳ ಸರಪಣಿಯ ಮೇಲೆ ಆಧಾರಿತವಾಗಿದೆ.

೧೧೫$\frac{೧}{೨}$ . ೧೧೭$\frac{೧}{೨}$ ಶ್ಲೋಕದಲ್ಲಿರುವ ಲೆಕ್ಕವನ್ನು ಸಾಧಿಸುವುದರಿಂದ ಈ ನಿಯಮವು ಸ್ಪಷ್ಟವಾಗುತ್ತದೆ.

ಇಲ್ಲಿ ೭ ಪ್ರತ್ಯೇಕ ಹಣ್ಣುಗಳ ಜೊತೆಗಿರುವ ೬೩ ಬಾಳೆಹಣ್ಣುಗಳ ಗುಡ್ಡೆಗಳು ೨೩ ವ್ಯಕ್ತಿಗಳಲ್ಲಿ ಸರಿಯಾಗಿ ಹಂಚಲು ಯೋಗ್ಯವಾಗಿವೆ ಎಂದು ತಿಳಿಸಲಾಗಿದೆ. ಒಂದು ಗುಡ್ಡೆಯಲ್ಲಿರುವ ಹಣ್ಣುಗಳ ಸಂಖ್ಯೆಯನ್ನು ಕಂಡುಹಿಡಿಯಬೇಕಾಗಿದೆ. ಇಲ್ಲಿ ೬೩ ನ್ನು *ಸಮೂಹ ವಾಚಕ ಸಂಖ್ಯೆ* ಎಂದು ಕರೆಯಲಾಗಿದೆ ಮತ್ತು ಪ್ರತಿಯೊಂದು ಗುಡ್ಡೆಯಲ್ಲಿರುವ ಹಣ್ಣುಗಳ ಸಂಖ್ಯಾತ್ಮಕ ಬೆಲೆಯನ್ನು *ಸಮೂಹ ವಾಚಕ ಬೆಲೆ* ಎಂದು ಕರೆಯಲಾಗಿದೆ ಮತ್ತು ಈ *ಸಮೂಹ ವಾಚಕ ಬೆಲೆ*ಯನ್ನು ಕಂಡುಹಿಡಿಯಬೇಕಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



Now, according to the rule, we divide first the rāśi or group-number 63, by the cheda or the divisor 23 and then we continue the process of division as in finding out H.C.F. of two numbers :

```
23)  63 (2
     46
      17) 23 (1
          17
           6)17 (2          1
                12          2
                 5) 6 (1    1
                    5       4
                     1) 5 (4
                        4
                        1
```

The rationale of this may be made out thus :

$(n+1)^2 - n^2 = 2n + 1$, an odd number and $(n+2)^2 - n^2 = 4n + 4$, an even number; where $n$ is any integer.

From $2n + 1$ and $4n + 4$, the rule shows how we may arrive at $n^2 + a$ when we know $2n + 1$ or $4n + 4$, to be equal to $a + b$.

*Rangācārya has given this as mentioned below which cannot be obtained from the rule.

$$\left\{\frac{(a+b)+(1+1)\div 2}{4}\right\}^2 - 1 + 1 \pm \frac{a \sim b \pm 1}{2}$$

---

೨೭೫½. *ಬೀಜಗಣಿತರೂಪದಲ್ಲಿ ಕ ವು ಕಂಡುಹಿಡಿಯಬೇಕಾಗಿರುವ ರಾಶಿಯಾಗಿರಲಿ ಮತ್ತು ಅದರಲ್ಲಿ ಸೇರಿಸಬೇಕಾಗಿರುವ ಅಥವಾ ಅದರಿಂದ ಕಳೆಯಬೇಕಾಗಿರುವ ರಾಶಿಗಳು ಕ್ರಮವಾಗಿ ಅ, ಬ ಆಗಿರಲಿ. ಆಗ ಈ ನಿಯಮವನ್ನು ನಿರೂಪಿಸುವ ಸೂತ್ರವು ಹೀಗಿದೆ.

$$\left\{\frac{[(ಅ+ಬ)\times(೧+೧)\div೨]^೨ - ೧}{೪}\right\} + ೧ \pm \frac{ಅ \sim ಬ \pm ೧}{೨}$$

ಇದರ ಸಿದ್ಧಾಂತವನ್ನು ಈ ರೀತಿ ಕಂಡುಹಿಡಿಯಬಹುದಾಗಿದೆ;

$(ನ+೧)^೨ - ನ^೨ = ೨ನ + ೧$, ಒಂದು ಬೆಸಸಂಖ್ಯೆ ಮತ್ತು $(ನ+೨)^೨ - ನ^೨ = ೪ನ + ೪$ ಒಂದು ಸಮಸಂಖ್ಯೆ. ಇಲ್ಲಿ ನ ಒಂದು ಪೂರ್ಣಾಂಕವಾಗಿದೆ. ನಮಗೆ ೨ನ + ೧ ಅಥವಾ ೪ನ + ೪ ಗಳು (ಅ + ಬ)ಗೆ ಸಮವಾಗಿರುತ್ತವೆ ಎಂದು ಗೊತ್ತಿದ್ದಾಗ, ೨ನ + ೧ ಮತ್ತು ೪ನ + ೪ ಗಳಿಂದ $ನ^೨ + ಅ$ ವನ್ನು ಹೇಗೆ ಪಡೆಯಬಹುದೆಂದು ನಿಯಮವು ತೋರಿಸುತ್ತದೆ.

*ರಂಗಾಚಾರ್ಯರು ಇದನ್ನು ಈ ಕೆಳಗೆ ತಿಳಿಸಿರುವ ರೀತಿಯಲ್ಲಿ ಕೊಟ್ಟಿದ್ದಾರೆ. ಆದರೆ ಇದು ನಿಯಮದಿಂದ ದೊರೆಯುವುದಿಲ್ಲ.

$$\left\{\frac{(ಅ+ಬ)\times(೧+೧)\div೨}{೪}\right\}^೨ - ೧ + ೧ \pm \frac{ಅ \sim ಬ \pm ೧}{೨}$$



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

राशिः कश्चिद्दशभिः संयुक्तः सप्तदशभिरपि हीनः ।
मूलं ददाति शुद्धं तं राशिं स्यान्ममाशु वद गणक ॥ २७६$\frac{1}{2}$॥
राशिस्सप्तभिरूनो यः सोऽष्टादशभिरन्वितः कश्चित् ।
मूलं यच्छति शुद्धं विगणय्याचक्ष्व तं गणक ॥ २७७$\frac{1}{2}$॥
राशिर्द्वित्र्यंशोनस्त्रिसप्तभागान्वितस्स एव पुनः ।
मूलं यच्छति कोऽसौ कथय विचिन्त्याशु तं गणक ॥ २७८$\frac{1}{2}$॥

---

**Atroddeśakaḥ**

**276$\frac{1}{2}$.** Rāśiḥ kaściddaśabhiḥ saṁyuktaḥ saptadaśabhirapi hīnaḥ, mūlaṁ dadāti śuddhaṁ taṁ rāśiṁ syānmamāśu vada gaṇaka.

**277$\frac{1}{2}$.** Rāsi'ssaptabhirūno yaḥ so'ṣṭādaśabhiranvitaḥ kaścit, mūlaṁ yacchati śuddaṁ vigaṇayyācakṣva taṁ gaṇaka.

**278$\frac{1}{2}$.** Rāśirdvitryaṁśonastrisaptabhāgānvitassa eva punaḥ, mūlaṁ yacchati ko'sau kathaya vicintyāśu taṁ gaṇaka.

---

***Examples in illustration thereof***

**276$\frac{1}{2}$.** A certain number when increased by 10 or decreased by 17 yields an exact square root. If possible, O arithmetician, tell me quickly that number.

**277$\frac{1}{2}$.** A certain quantity either as diminished by 7 or as added to by 18, yields the square root exactly. O arithmetician, give it out after calculation.

**278$\frac{1}{2}$.** A certain quantity diminished by $\frac{2}{3}$ or again that same (quantity) increased by $\frac{3}{7}$, yields the square root (exactly). Tell me that quantity quickly, O arithmetician after thinking out what it may be.

---

**ಉದಾಹರಣೆಗಳಿಂದ ವಿಶ್ಲೇಷಣ**

೨೭೬ $\frac{೧}{೨}$. ಒಂದು ಸಂಖ್ಯೆಯನ್ನು ೧೦ ರಿಂದ ಹೆಚ್ಚಿಸಿದರೆ ಅಥವಾ ೧೭ ರಿಂದ ಕಡಿಮೆಮಾಡಿದರೆ, ಆಗ ಅದು ಒಂದು ಯಥಾರ್ಥವಾದ ವರ್ಗಮೂಲವಾಗುತ್ತದೆ. ಎಲೈ ಗಣಿತಜ್ಞನೇ, ಸಾಧ್ಯವಾದರೆ ಆ ಸಂಖ್ಯೆಯನ್ನು ಬೇಗನೆ ನನಗೆ ಹೇಳು.

೨೭೭ $\frac{೧}{೨}$. ಒಂದು ಸಂಖ್ಯೆಯಲ್ಲಿ ೭ ನ್ನು ಕಡಿಮೆಮಾಡಿದಾಗ ಅಥವಾ ಅದಕ್ಕೆ ೧೮ ನ್ನು ಸೇರಿಸಿದಾಗ, ಅದು ಒಂದು ಯಥಾರ್ಥವಾದ ವರ್ಗಮೂಲವಾಗುತ್ತದೆ. ಎಲೈ ಗಣಿತಜ್ಞನೇ, ಲೆಕ್ಕಾಚಾರಮಾಡಿದ ನಂತರ ಅದನ್ನು ತಿಳಿಸು.

೨೭೮ $\frac{೧}{೨}$. ಒಂದು ಸಂಖ್ಯೆಯಿಂದ $\frac{೨}{೩}$ ನ್ನು ಕಳೆದಾಗ ಅಥವಾ ಪುನಃ ಅದೇ ಸಂಖ್ಯೆಯನ್ನು $\frac{೩}{೭}$ ರಿಂದ ಹೆಚ್ಚಿಸಿದಾಗ, ಒಂದು ಯಥಾರ್ಥವಾದ ವರ್ಗಮೂಲವಾಗುತ್ತದೆ. ಎಲೈ ಗಣಿತಜ್ಞನೇ, ಅದು ಏನೆಂದು ಯೋಚಿಸಿ ನನಗೆ ಬೇಗನೆ ಹೇಳು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**278½.** Since the quantities represented by $b$ and $a$ in the note on stanza 275½ are seen to be fractional in this problem, being actually $\frac{2}{3}$ and $\frac{3}{7}$, it is necessary to have these fractional quantities removed from the process of working out the problem in accordance with the given rule. For this purpose they are first reduced to the same denominator and come to be represented by $\frac{14}{21}$ and $\frac{9}{21}$ respectively : then these quantities are multiplied by $(21)^2$, so as to yield 294 and 189, which are assumed to be the $b$ and the $a$ in the problem. The result arrived at with these assumed values of $b$ and $a$ is divided by $(21)^2$ and the quotient is taken to be the answer of the problem.

೨೭೮$\frac{೧}{೨}$. ೨೭೫ $\frac{೧}{೨}$ ಶ್ಲೋಕದ ಟಿಪ್ಪಣಿಯಲ್ಲಿ ಬ ಮತ್ತು ಅ ಗಳಿಂದ ನಿರೂಪಿತವಾಗುವ ಸಂಖ್ಯೆಗಳು (ವಾಸ್ತವವಾಗಿ $\frac{೨}{೩}$ ಮತ್ತು $\frac{೩}{೭}$ ಆಗಿರುವ), ಈ ಲೆಕ್ಕದಲ್ಲಿ ಭಿನ್ನಾತ್ಮಕವಾಗಿರುವುದರಿಂದ, ಕೊಟ್ಟಿರುವ ನಿಯಮದ ಪ್ರಕಾರ ಅವುಗಳನ್ನು, ಲೆಕ್ಕವನ್ನು ಬಿಡಿಸುವ ವಿಧಾನದಿಂದ ತೆಗೆದುಹಾಕುವುದು ಅವಶ್ಯಕವಾಗಿದೆ. ಈ ಉದ್ದೇಶಕ್ಕಾಗಿ ಮೊದಲು ಅವುಗಳನ್ನು ಸಮವಾದ ಛೇದಗಳಿರುವಂತೆ ಮಾಡಲಾಗುತ್ತದೆ ಮತ್ತು ಕ್ರಮವಾಗಿ $\frac{೧೪}{೨೧}$ ಮತ್ತು $\frac{೯}{೨೧}$ ರಿಂದ ನಿರೂಪಿಸಲಾಗುತ್ತದೆ. ನಂತರ ಈ ಸಂಖ್ಯೆಗಳನ್ನು $(೨೧)^೨$ ನಿಂದ ಗುಣಿಸಲಾಗುತ್ತದೆ. ಇದರಿಂದ ೨೯೪ ಮತ್ತು ೧೮೯ ದೊರೆಯುತ್ತವೆ. ಇವುಗಳನ್ನು ಲೆಕ್ಕದಲ್ಲಿ ಬ ಮತ್ತು ಅ ಗಳನ್ನಾಗಿ ತೆಗೆದುಕೊಳ್ಳಲಾಗಿದೆ. ಈ ರೀತಿ ತೆಗೆದುಕೊಂಡ ಬ ಮತ್ತು ಅ ಗಳ ಬೆಲೆಗಳಿಂದ ಲಭಿಸಿದ ಫಲವನ್ನು $(೨೧)^೨$ ನಿಂದ ಭಾಗಿಸಲಾಗುತ್ತದೆ ಮತ್ತು ಭಾಗಲಬ್ಧವನ್ನು ಲೆಕ್ಕದ ಉತ್ತರವನ್ನಾಗಿ ತೆಗೆದುಕೊಳ್ಳಲಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



इष्टसङ्ख्याहीनयुक्तवर्गमूलानयनसूत्रम् -
उद्दिष्टो यो राशिस्त्वर्धीकृतवर्गितोऽथ रूपयुतः ।
यच्छति मूलं स्वेष्टात्संयुक्ते चापनीते च ॥ २७९$\frac{1}{2}$॥

**अत्रोद्देशकः**

दशभिस्सम्मिश्रोऽयं दशभिस्तैर्वर्जितस्तु संशुद्धम् ।
यच्छति मूलं गणक प्रकथय सञ्चिन्त्य राशिं मे ॥ २८०$\frac{1}{2}$॥

---

Iṣṭasaṅkhyāhīnayuktavargamūlānayanasutram -

**279$\frac{1}{2}$.** Uddiṣṭo yo rāśistvardhīkṛtavargito'tha rūpayutaḥ, yacchati mūlaṁ sveṣṭātsaṁyukte cāpanīte ca.

**Atroddeśakaḥ**

**280$\frac{1}{2}$.** Daśabhissammiśro'yaṁ daśabhistairvarjitastu saṁśuddham, yacchati mūlaṁ gaṇaka prakathaya sañcintya rāśiṁ me.

---

The rule for arriving at the square root of (an unknown) number as increased or diminished by a known number :

**279$\frac{1}{2}$.** The known quantity which is given is first halved and (then) squared and then one is added (to it). The resulting quantity either when increased by the desired given quantity or when diminished by the (same) quantity yields the square root (exactly).

***An example in illustration thereof***

**280$\frac{1}{2}$.** Here is a number which, when increased by 10 or diminished by the same 10, yields an exact square root. Think out and tell me that number, O mathematician.

---

ಒಂದು ಗೊತ್ತಿರುವ ಸಂಖ್ಯೆಯಿಂದ ಹೆಚ್ಚಿಸಲ್ಪಟ್ಟ, ಅಥವಾ ಕುಗ್ಗಿಸಲ್ಪಟ್ಟ, ಒಂದು (ಅಜ್ಞಾತ) ಸಂಖ್ಯೆಯ ವರ್ಗಮೂಲವನ್ನು ಪಡೆಯಲು ನಿಯಮ :

೨೭೯$\frac{೧}{೨}$. ಗೊತ್ತಿರುವ ಕೊಟ್ಟಿರುವ ಸಂಖ್ಯೆಯನ್ನು ಮೊದಲು ಅರ್ಧಮಾಡಲಾಗುತ್ತದೆ ಮತ್ತು (ನಂತರ) ವರ್ಗಮಾಡಲಾಗುತ್ತದೆ. ಅನಂತರ (ಇದಕ್ಕೆ) ೧ ನ್ನು ಸೇರಿಸಲಾಗುತ್ತದೆ. ಹೀಗೆ ದೊರೆತ ಸಂಖ್ಯೆಯನ್ನು ಬೇಕಾದ ಕೊಟ್ಟಿರುವ ಸಂಖ್ಯೆಯಿಂದ ಹೆಚ್ಚಿಸಿದರೆ ಅಥವಾ ಅದೇ ಸಂಖ್ಯೆಯಿಂದ ಕುಗ್ಗಿಸಿದರೆ (ಆಗ) ಅದು ಬೇಕಾದ (ಯಥಾರ್ಥವಾದ) ವರ್ಗಮೂಲವಾಗುತ್ತದೆ.

**ಉದಾಹರಣೆಯಿಂದ ವಿಶ್ಲೇಷಣ**

೨೮೦$\frac{೧}{೨}$. ೧೦ ರಿಂದ ಹೆಚ್ಚಿಸಿದರೆ ಅಥವಾ ಅದೇ ೧೦ ರಿಂದ ಕುಗ್ಗಿಸಿದರೆ, ಒಂದು ಯಥಾರ್ಥವಾದ ವರ್ಗಮೂಲವನ್ನು ಕೊಡುವ ಒಂದು ಸಂಖ್ಯೆಯು ಇಲ್ಲಿದೆ. ಎಲ್ಲೆ ಗಣಿತಜ್ಞನೇ, ಯೋಚಿಸು ಮತ್ತು ಆ ಸಂಖ್ಯೆಯನ್ನು ನನಗೆ ಹೇಳು.

---

**279$\frac{1}{2}$.** This is merely a particular case of the rule given in stanza 275$\frac{1}{2}$ wherein $a$ is taken to equal to $b$.

೨೭೯$\frac{೧}{೨}$. ಇದು ಕೇವಲ $a$ ವನ್ನು $b$ ಗೆ ಸಮವಾಗಿ ತೆಗೆದುಕೊಂಡಂತಹ ೨೭೫$\frac{೧}{೨}$ ಶ್ಲೋಕದಲ್ಲಿ ಕೊಟ್ಟಿರುವ ನಿಯಮದ ಒಂದು ವಿಶೇಷ ಪ್ರಕರಣವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



इष्टवर्गीकृतराशिद्वयादिष्टघ्नादन्तरमूलादिष्टानयनसूत्रम् -
सैकेष्टव्येकेष्टावर्धीकृत्याथ वर्गितौ राशी । एताविष्टघ्नावथ तद्विश्लेषस्य मूलमिष्टं स्यात् ॥ २८१½॥

---

Iṣṭavargīkṛtarāśidvayādiṣṭaghnādantaramūlādiṣṭānayanasūtram -

**281½.** Saikeṣṭavyekeṣṭāvardhīkṛtyātha vargitau rāśī, etāviṣṭaghnāvatha tadviśleṣasya mūlamiṣṭaṁ syāt.

---

The rule for arriving at the two required square quantities, with the aid of those required quantities as multiplied by a known number and also with the aid of (the same known number as forming the value of) the square root of the difference (between these products) :

**281½.** The given number is increased by one and the given number is also diminished by one. The resulting quantities when halved and then squared give rise to the two (required) quantities. Then if these be (separately) multiplied by the given quantity, the square root of the difference between these (products) becomes the given quantity.

---

ಒಂದು ಗೊತ್ತಿರುವ ಸಂಖ್ಯೆಯಿಂದ ಗುಣಿಸಲ್ಪಟ್ಟ ಬೇಕಾದ ಸಂಖ್ಯೆಗಳ ಸಹಾಯದಿಂದ ಮತ್ತು ಜೊತೆಗೆ ಈ ಗುಣಲಬ್ಧಗಳ ಅಂತರಗಳ ವರ್ಗಮೂಲದ ಬೆಲೆಯನ್ನು ಉತ್ಪನ್ನಮಾಡುವ ಅದೇ ಗೊತ್ತಿರುವ ಸಂಖ್ಯೆಯ ಸಹಾಯದಿಂದ ಆ ಎರಡು ಬೇಕಾದ ವರ್ಗರಾಶಿಗಳನ್ನು ಪಡೆಯಲು ನಿಯಮ :

೨೮೧ $\frac{೧}{೨}$. ಕೊಟ್ಟಿರುವ ಸಂಖ್ಯೆಯನ್ನು ೧ ರಿಂದ ಹೆಚ್ಚಿಸಲಾಗುತ್ತದೆ ಮತ್ತು ಕೊಟ್ಟಿರುವ ಸಂಖ್ಯೆಯನ್ನು ೧ ರಿಂದ ಕುಗ್ಗಿಸುವುದನ್ನೂ ಸಹ ಮಾಡಲಾಗುತ್ತದೆ. ಹೀಗೆ ದೊರೆತ ರಾಶಿಗಳನ್ನು ಅರ್ಧಮಾಡಿದಾಗ ಮತ್ತು ನಂತರ ವರ್ಗಮಾಡಿದಾಗ (ಬೇಕಾದ) ಎರಡು ರಾಶಿಗಳು ಉತ್ಪನ್ನವಾಗುತ್ತವೆ, ನಂತರ ಇವುಗಳನ್ನು (ಬೇರೆ ಬೇರೆಯಾಗಿ) ಕೊಟ್ಟಿರುವ ರಾಶಿಯಿಂದ ಗುಣಿಸಿದಾಗ, ಈ ಗುಣಲಬ್ಧಗಳ ವ್ಯತ್ಯಾಸದ ವರ್ಗಮೂಲವು ಕೊಟ್ಟಿರುವ ರಾಶಿಯಾಗುತ್ತದೆ.

---

**281½.** Algebraically, when the given number is $d$, $\left|\frac{d+1}{2}\right|^2$ and $\left|\frac{d-1}{2}\right|^2$ are the required square quantities.

೨೮೧ $\frac{೧}{೨}$. ಬೀಜಗಣಿತರೂಪದಲ್ಲಿ ಕೊಟ್ಟಿರುವ ಸಂಖ್ಯೆಯು $ದ$ ಆಗಿದ್ದಾಗ $\left|\frac{ದ+೧}{೨}\right|^2$ ಮತ್ತು $\left|\frac{ದ-೧}{೨}\right|^2$ ಗಳು ಬೇಕಾದ ವರ್ಗರಾಶಿಗಳಾಗಿರುತ್ತವೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अत्रोद्देशकः

यौकौचिद्वर्गीकृतराशी गुणितौ तु सैकसप्तत्या । सद्विश्लेषपदं स्यादेकोत्तरसप्ततिश्च राशी कौ ।।
विगणय्य चित्रकुट्टिकगणितं यदि वेत्सि गणक मे ब्रूहि ॥ २८३ ॥

युतहीनप्रक्षेपकगुणकारानयनसूत्रम् -

संवर्गितेष्टशेषं द्विष्ठं रूपेष्टयुतगुणाभ्यां तत्। विपरीताभ्यां विभजेत्प्रक्षेपौ तत्र हीनौ वा ॥ २८४ ॥

---

**Atroddeśakaḥ**

**283.** Yaukaucidvargīkṛtarāśī guṇitau tu saikasaptatyā, sadviśleṣapadaṁ syādekottarasaptatiśca rāśī kau, vigaṇayya citrakuṭṭikagaṇitaṁ yadi vetsi gaṇaka me brūhi.

Yutahīnaprakṣepakaguṇakārānayanasūtram -

**284.** Saṁvargiteṣṭaśeṣaṁ dviṣṭaṁ rupeṣṭayutaguṇābhyāṁ tat, viparītābhyāṁ vibhajetprakṣepau tatra hīnau vā.

---

***An example in illustration thereof***

**282$\frac{1}{2}$-283.** Two unknown squared quantities are multiplied by 71. The square root of the difference between these (two resulting products) is also 71. O mathematician, if you know the process of calculation known as *citra-kuṭṭīkāra*, calculate and tell me what (those two unknown) quantities are.

The rule for arriving at the required increase or decrease in relation to a given multiplicand and a given multiplier (so as to arrive at a given product) :

**284.** The difference between the required product and the resulting product (of the given multiplicand and the multiplier) is written down in two places. To (one of) the factors (of the resulting product) one is added and (to the other) the required product is added. That (difference written above in two positions as desired) is (severally) divided in the inverse order by the sums (resulting thus). These give rise to the quantities that are to be added (respectively to the given multiplicand and the multiplier) or (to the quantities that are) to be (respectively) subtracted (from them).

---

ಉದಾಹರಣೆಯಿಂದ ವಿಶ್ಲೇಷಣ

೨೮೨ $\frac{೧}{೨}$-೨೮೩. ಎರಡು ಅಜ್ಞಾತ ವರ್ಗರಾಶಿಗಳನ್ನು ೭೧ ರಿಂದ ಗುಣಿಸಲಾಗುತ್ತದೆ, ಹೀಗೆ ದೊರೆತ ಈ ಎರಡು ಗುಣಲಬ್ಧಗಳ ವ್ಯತ್ಯಾಸದ ವರ್ಗಮೂಲವೂ ಕೂಡ ೭೧ ಆಗಿರುತ್ತದೆ. ಎಲ್ಯೆ ಗಣಿತಜ್ಞನೇ, *ಚಿತ್ರ-ಕುಟ್ಟೀಕಾರ*ವೆಂಬ ಲೆಕ್ಕಾಚಾರದ ವಿಧಾನವು ನಿನಗೆ ತಿಳಿದಿದ್ದರೆ, ಲೆಕ್ಕಾಚಾರಮಾಡಿ, ಈ ಎರಡು ಅಜ್ಞಾತರಾಶಿಗಳೇನೆಂದು ನನಗೆ ಹೇಳು.

ಒಂದು ಕೊಟ್ಟಿರುವ ಗುಣ್ಯ ಮತ್ತು ಕೊಟ್ಟಿರುವ ಗುಣಕಗಳ ಸಂಬಂಧದಲ್ಲಿ, ಬೇಕಾದ ಹೆಚ್ಚಳ ಅಥವಾ ಕಡಿತವನ್ನು (ಕೊಟ್ಟಿರುವ ಗುಣಲಬ್ಧವನ್ನು ಪಡೆಯುವ ಸಲುವಾಗಿ) ಕಂಡುಹಿಡಿಯಲು ನಿಯಮ :

೨೮೪. ಬೇಕಾದ ಗುಣಲಬ್ಧ ಮತ್ತು ಕೊಟ್ಟಿರುವ ಗುಣ್ಯ ಹಾಗೂ ಗುಣಕಗಳ ಲಭಿಸಿದ ಗುಣಲಬ್ಧಗಳ (ಈ ಎರಡು ಗುಣಲಬ್ಧಗಳ) ವ್ಯತ್ಯಾಸವನ್ನು ಎರಡು ಸ್ಥಾನಗಳಲ್ಲಿ ಬರೆಯಲಾಗುತ್ತದೆ. ಹೀಗೆ ದೊರೆತ ಗುಣಲಬ್ಧದ ಅಪವರ್ತನಗಳಲ್ಲಿ ಯಾವುದಾದರೂ ಒಂದಕ್ಕೆ, ೧ ನ್ನು ಸೇರಿಸುತ್ತೇವೆ ಮತ್ತು ಇನ್ನೊಂದರಲ್ಲಿ ಬೇಕಾದ ಗುಣಲಬ್ಧವನ್ನು ಸೇರಿಸುತ್ತೇವೆ. ಮೇಲೆ ಎರಡು ಸ್ಥಾನಗಳಲ್ಲಿ ಬೇಕಾದಂತೆ ಬರೆಯಲಾದ ಆ ವ್ಯತ್ಯಾಸವನ್ನು ಬೇರೆ ಬೇರೆಯಾಗಿ ಈ ರೀತಿ ದೊರೆಯುವ ಮೊತ್ತಗಳಿಂದ ವ್ಯತಿರಿಕ್ತ ಕ್ರಮದಲ್ಲಿ ಭಾಗಿಸಲಾಗುತ್ತದೆ. ಇವುಗಳು, ಕ್ರಮವಾಗಿ ಕೊಟ್ಟಿರುವ ಗುಣ್ಯ ಮತ್ತು ಗುಣಕ ಅಥವಾ ಕ್ರಮವಾಗಿ ಅವುಗಳಿಂದ ಕಳೆಯಬೇಕಾಗಿರುವ ರಾಶಿಗಳಲ್ಲಿ, ಸೇರಿಸಬೇಕಾಗಿರುವಂತಹ ರಾಶಿಗಳನ್ನು ಉತ್ಪನ್ನಮಾಡುತ್ತವೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**284.** The quantities to be added or subtracted are $\frac{d \sim ab}{d + b}$ and $\frac{d \sim ab}{a + 1}$

For $\left(a \pm \frac{d \sim ab}{d+b}\right)\left(b \pm \frac{d \sim ab}{a+1}\right) = d$, where $a$ and $b$ are the given factors and $d$ the required multiple.

**೨೮೪.** ಸೇರಿಸಬೇಕಾಗಿರುವ ಅಥವಾ ಕಳೆಯಬೇಕಾಗಿರುವ ರಾಶಿಗಳೆಂದರೆ $\frac{ದ \sim ಅಬ}{ದ + ಬ}$ ಮತ್ತು $\frac{ದ \sim ಅಬ}{ಅ + ೧}$ ಏಕೆಂದರೆ

$\left(ಅ \pm \frac{ದ \sim ಅಬ}{ದ + ಬ}\right)\left(ಬ \pm \frac{ದ \sim ಅಬ}{ಅ + ೧}\right) = ದ$, ಇಲ್ಲಿ ಅ ಮತ್ತು ಬ ಗಳು ಕೊಟ್ಟಿರುವ ಅಪವರ್ತನಗಳಾಗಿವೆ ಮತ್ತು ದ ವು ಬೇಕಾದ ಗುಣಕವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

त्रिक पञ्चकसंवर्गः पञ्चदशाष्टादशैव चेष्टमपि। इष्टं चतुर्दशात्र प्रक्षेपः कोऽत्र हानिर्वा ॥ २८५ ॥

विपरीतकरणानयनसूत्रम् -

प्रत्युत्पन्ने भागो भागे गुणितोऽधिके पुनश्शोध्यः। वर्गे मूलं मूले वर्गो विपरीतकरणमिदम् ॥२८६॥

**अत्रोद्देशकः**

सप्तहृते को राशिस्त्रिगुणो वर्गीकृतः शरैर्युक्तः ।
त्रिगुणितपञ्चांशहृतस्त्वर्घितमूलं च पञ्चरूपाणि ॥ २८७ ॥

---

**Atroddeśakaḥ**

**285.** Trika pañcakasaṁvargaḥ pañcadaśāṣṭādaśaiva ceṣṭamapi, iṣṭaṁ caturdaśātra prakṣepaḥ ko'tra hānirvā.

Viparītakaraṇānayanasūtram -

**286.** Pratyutpanne bhāgo bhāge guṇito'dhike punaśśodhyaḥ, varge mūlaṁ mūle vargo viparītakaraṇamidam.

**Atroddeśakaḥ**

**287.** Saptahṛte ko rāśistriguṇo vargīkṛtaḥ śarairyuktaḥ, triguṇitapañcāṁśahṛtastvarghitamūlaṁ ca pañcarūpāṇi.

---

***Examples in illustration thereof***

**285.** The product of 3 and 5 is 15 and the required product is 18 and it is also 14. What are the quantities to be added (respectively to the multiplicand and the multiplier) here or what to be subtracted (from them)?

The rule for arriving at (the required result by) the process of working backwards :

**286.** To divide where there has been a multiplication, to multiply where there has been a division, to subtract where there has been an addition, to get at the square root where there has been a squaring, to get at the squaring where the root has been given-this is the process of working backwards.

***An example in illustration thereof***

**287.** What is that quantity which when divided by 7, (then) multiplied by 3, (then) squared, (then) increased by 5, (then) divided by $\frac{3}{5}$, (then) halved and then reduced to its square root, happens to be the number 5?

---

**ಉದಾಹರಣೆಗಳಿಂದ ವಿಶ್ಲೇಷಣ**

**೨೮೫.** ೩ ಮತ್ತು ೫ ರ ಗುಣಲಬ್ಧ ೧೫ ಮತ್ತು ಬೇಕಾದ ಗುಣಲಬ್ಧವು ೧೮ ಆಗಿದೆ ಮತ್ತು ಇದು ೧೪ ಸಹ ಆಗಿದೆ. ಗುಣ್ಯ ಮತ್ತು ಗುಣಕಗಳಲ್ಲಿ ಯಾವ ರಾಶಿಗಳನ್ನು ಸೇರಿಸಬೇಕು ಅಥವಾ ಅವುಗಳಿಂದ ಕಳೆಯಬೇಕು?

ಹಿಂದು ಮುಂದಾಗಿ ಕೆಲಸಮಾಡುವ ವಿಧಾನದಿಂದ ಬೇಕಾದ ಫಲವನ್ನು ಪಡೆಯಲು ನಿಯಮ :

**೨೮೬.** ಎಲ್ಲಿ ಗುಣಾಕಾರವಿದೆಯೋ ಅಲ್ಲಿ ಭಾಗಾಹಾರ, ಎಲ್ಲಿ ಭಾಗಾಹಾರವಿದೆಯೋ ಅಲ್ಲಿ ಗುಣಾಕಾರ, ಎಲ್ಲಿ ಸೇರಿಸಬೇಕಾಗಿದೆಯೋ ಅಲ್ಲಿ ಕಳೆಯುವುದು, ಎಲ್ಲಿ ವರ್ಗಮಾಡಲಾಗಿದೆಯೋ ಅಲ್ಲಿ ವರ್ಗಮೂಲವನ್ನು ಕಂಡುಹಿಡಿಯುವುದು, ಎಲ್ಲಿ ವರ್ಗಮೂಲವನ್ನು ಕೊಡಲಾಗಿದೆಯೋ ಅಲ್ಲಿ ವರ್ಗಮಾಡುವುದು -ಇದೇ ಹಿಂದು ಮುಂದಾಗಿ ಕೆಲಸಮಾಡುವ ವಿಧಾನವಾಗಿದೆ.

**ಉದಾಹರಣೆಯಿಂದ ವಿಶ್ಲೇಷಣ**

**೨೮೭.** ೭ ರಿಂದ ಭಾಗಿಸಲ್ಪಟ್ಟು (ನಂತರ) ೩ ರಿಂದ ಗುಣಿಸಲ್ಪಟ್ಟು (ನಂತರ) ವರ್ಗಮಾಡಲ್ಪಟ್ಟು (ನಂತರ) ೫ ರಿಂದ ಹೆಚ್ಚಿಸಲ್ಪಟ್ಟು, (ನಂತರ) $\frac{3}{5}$ ರಿಂದ ಭಾಗಿಸಲ್ಪಟ್ಟು (ನಂತರ) ಅರ್ಧಮಾಡಲ್ಪಟ್ಟು ಮತ್ತು ಅನಂತರ ಇದರ ವರ್ಗಮೂಲಕ್ಕೆ ಇಳಿಸಿದಾಗ ೫ ಆಗುವಂತಹ ಆ ಸಂಖ್ಯೆ ಯಾವುದು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



साधारणशरपरिध्यानयनसूत्रम् -

शरपरिधित्रिकमिलनं वर्गितमेतत्पुनस्त्रिभिस्सहितम् ।
द्वादशहृतेऽपि लब्धं शरसंख्या स्यात्कलापकाविष्टा ॥ २८८ ॥

**अत्रोद्देशकः**

परिधिशरा अष्टादश तूणिरस्थाः शराः के स्युः ।
गणितज्ञ यदि विचित्रे कुट्टीकारे श्रमोऽस्ति ते कथय ॥ २८९ ॥

**इति मिश्रकव्यवहारे विचित्रकुट्टीकारः समाप्तः ।**

---

Sādhāraṇaśaraparidhyānayanasūtram -

**288.** Śaraparidhitrikamilanaṁ vargitametatpunastribhissahitam,
dvādaśahṛte'pi labdhaṁ śarasaṅkhyā syātkalāpakāviṣṭā.

**Atroddeśakaḥ**

**289.** Paridhiśarā aṣṭādaśa tūṇīrasthāḥ śarāḥ ke syuḥ, gaṇitajña yadi vicitre kuṭṭīkāre śramo'sti te kathaya.

**Iti miśrakavyavahāre vicitrakuṭṭīkāraḥ samāptaḥ.**

---

The rule for arriving at (the number of arrows in a bundle with the aid of the even number of) arrows constituting the common circumferential layer (of the bundle) :

**288.** Add three to the number of arrows forming the circumferential layer; then square this (resulting sum) and add again three (to this square quantity). If this be further divided by 12, the quotient becomes the number of arrows to be found in the bundle.

***An example in illustration thereof***

**289.** The circumferential arrows are 18 in number. How many (in all) are the arrows to be found (in the bundle) within the quiver? O mathematician, give this out if you have taken pains in relation to the process of calculation known as vicitra-*kuṭṭīkāra*.

**Thus ends *vicitra-kuṭṭīkāra* in the chapter on mixed problems.**

---

ಕಟ್ಟಿನ ಸಾಮಾನ್ಯ ಪರಿಧಿಯ ಪದರವನ್ನು ರಚಿಸುವ ಸಮಸಂಖ್ಯೆಯ ಬಾಣಗಳ ಸಹಾಯದಿಂದ ಒಂದು ಕಟ್ಟಿನಲ್ಲಿರುವ ಬಾಣಗಳ ಸಂಖ್ಯೆಯನ್ನು ಪಡೆಯಲು ನಿಯಮ :

೨೮೮. ಪರಿಧಿಯ ಪದರವನ್ನುಂಟುಮಾಡುವ ಬಾಣಗಳ ಸಂಖ್ಯೆಗೆ ಮೂರನ್ನು ಸೇರಿಸು. (ಹೀಗೆ ದೊರೆತ ಮೊತ್ತವನ್ನು) ವರ್ಗಮಾಡು ಮತ್ತು (ಈ ವರ್ಗಮಾಡಿದ ರಾಶಿಗೆ) ಪುನಃ ಮೂರನ್ನು ಸೇರಿಸು. ಇದನ್ನು ಮತ್ತೆ ೧೨ ರಿಂದ ಭಾಗಿಸಿದಾಗ, ಭಾಗಲಬ್ಧವು ಕಂಡುಹಿಡಿಯಬೇಕಾಗಿರುವ ಕಟ್ಟಿನಲ್ಲಿರುವ ಬಾಣಗಳ ಸಂಖ್ಯೆಯಾಗುತ್ತದೆ.

**ಉದಾಹರಣೆಯಿಂದ ವಿಶ್ಲೇಷಣ**

೨೮೯. ಪರಿಧಿಯ ಬಾಣಗಳ ಸಂಖ್ಯೆ ೧೮ ಆಗಿದೆ. ಬತ್ತಳಿಕೆಯೊಳಗಿರುವ ಕಟ್ಟಿನಲ್ಲಿ ಕಂಡುಹಿಡಿಯಬೇಕಾಗಿರುವ ಬಾಣಗಳ ಒಟ್ಟು ಸಂಖ್ಯೆಯೇನು? ಎಲೈ ಗಣಿತಜ್ಞನೇ, ಒಂದು ವೇಳೆ ನೀನು *ವಿಚಿತ್ರ-ಕುಟ್ಟೀಕಾರದ* ಲೆಕ್ಕಾಚಾರದ ವಿಧಿಯಲ್ಲಿ ತೊಂದರೆತೆಗೆದುಕೊಂಡಿದ್ದರೆ, ಇದನ್ನು ತಿಳಿಸು.

**ಈ ರೀತಿ, ಮಿಶ್ರಕ ವ್ಯವಹಾರದಲ್ಲಿ *ವಿಚಿತ್ರ-ಕುಟ್ಟೀಕಾರವು* ಸಮಾಪ್ತಿಯಾಯಿತು.**



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**288.** The formula here given to find out the total number of arrows is $\frac{(n+3)^2+3}{12}$, where $n$ is the number of circumferential arrows. This formula can be arrived at from the following considerations. It can be proved geometrically that only six circles can be described round another circle, all of them being equal and each of them touching its two neighbouring circles as well as the central circle; that, round these circles again, only twelve circles of the same dimension can be described similarly and that round these again, only 18 such circles are possible and so on. Thus, the first round has 6 circles, the second 12, the third 18 and so on. So that the number of circles in any round, say $p$, is equal to $6p$.

Now, the total number of circles in the given number of rounds p, calculated from the central circle, is $1 + 1 \times 6 + 2 \times 6 + 3 \times 6 + \ldots + p \times 6 = 1 + 6\,(1 + 2 + 3 + \ldots + p) = 1 + 6\,\frac{p\,(p+1)}{2}$ $= 1 + 3\,p\,(p+1)$. If the value of $6p$ is given, say, as $n$, the total number of circles is $1 + 3 \times \frac{n}{6} \times \left(\frac{n}{6} + 1\right)$, which is easily reducible to the formula given at the beginning of this note.

೨೮೮. ಬಾಣಗಳ ಒಟ್ಟು ಸಂಖ್ಯೆಯನ್ನು ಕಂಡುಹಿಡಿಯಲು ಇಲ್ಲಿ ಕೊಟ್ಟಿರುವ ಸೂತ್ರವು $\frac{(ನ+೩)^೨+೩}{೧೨}$ ಆಗಿದೆ. ಇಲ್ಲಿ ನವು ಪರಿಧಿಯ ಬಾಣಗಳ ಸಂಖ್ಯೆಯಾಗಿದೆ. ಈ ಸೂತ್ರವನ್ನು ಮುಂದೆ ತಿಳಿಸಿರುವ ರೀತಿಯಿಂದಲೂ ಸಹ ಪಡೆಯಬಹುದಾಗಿದೆ. ರೇಖಾಗಣಿತದಲ್ಲಿ ಮುಂದೆ ತಿಳಿಸಿರುವುದನ್ನು ಸಾಧಿಸಬಹುದಾಗಿದೆ: ಯಾವುದಾದರೂ ಒಂದು ವೃತ್ತದ ಸುತ್ತ ಕೇವಲ ೬ ವೃತ್ತಗಳನ್ನು ರಚಿಸಬಹುದಾಗಿದೆ. ಇಂತಹ ಎಲ್ಲಾ ವೃತ್ತಗಳೂ ಸಮವಾಗಿರುತ್ತವೆ ಹಾಗೂ ಪ್ರತಿಯೊಂದು ವೃತ್ತವೂ ತನ್ನ ಅಕ್ಕಪಕ್ಕದ ಎರಡು ವೃತ್ತಗಳನ್ನು ಸ್ಪರ್ಶಿಸುತ್ತದೆ ಹಾಗೂ ಕೇಂದ್ರದ ವೃತ್ತವನ್ನೂ ಸಹ ಸ್ಪರ್ಶಿಸುತ್ತದೆ. ಈ ವೃತ್ತಗಳ ಸುತ್ತ ಪುನಃ ಅದೇ ಅಳತೆಯ ೧೨ ವೃತ್ತಗಳನ್ನು ಇದೇ ರೀತಿ ರಚಿಸಬಹುದು ಮತ್ತು ಪುನಃ ಈ ವೃತ್ತಗಳ ಸುತ್ತ ಕೇವಲ ಇಂತಹುದೇ ೧೮ ವೃತ್ತಗಳನ್ನು ರಚಿಸುವ ಸಾಧ್ಯತೆಯಿದೆ, ಇತ್ಯಾದಿ, ಈ ರೀತಿ, ಮೊದಲನೆ ಸುತ್ತಿನಲ್ಲಿ ೬ ವೃತ್ತಗಳು, ಎರಡನೆಯದರಲ್ಲಿ ೧೨, ಮೂರನೆಯದರಲ್ಲಿ ೧೮, ಇತ್ಯಾದಿ, ಆದ್ದರಿಂದ ಪ ಸುತ್ತಿನಲ್ಲಿ ೬ ಪ ವೃತ್ತಗಳಾಗುತ್ತವೆ.

ಈಗ, ಪ ಸುತ್ತಿನಲ್ಲಿ ವೃತ್ತಗಳ ಒಟ್ಟು ಸಂಖ್ಯೆ (ಕೇಂದ್ರದ ವೃತ್ತದಿಂದ ಎಣಿಸಿದರೆ) $೧ + ೧ \times ೬ + ೨ \times ೬ + ೩ \times ೬ + \ldots\ldots + ಪ \times ೬ = ೧ + ೬\,(೧ + ೨ + \ldots + ಪ) = ೧ + ೬\,\frac{ಪ\,(ಪ+೧)}{೨} = ೧ + ೩\,ಪ\,(ಪ+೧)$ ಆಗುವುದು.

ಒಂದು ವೇಳೆ ೬ ಪ ದ ಬೆಲೆಯನ್ನು ನ ಎಂದು ಕೊಟ್ಟಿದ್ದರೆ, ಆಗ ಒಟ್ಟು ವೃತ್ತಗಳ ಸಂಖ್ಯೆಯು $೧ + ೩ \times \frac{ನ}{೬} \left(\frac{ನ}{೬} + ೧\right)$ ಆಗುವುದು. ಇದನ್ನು ಈ ಟಿಪ್ಪಣಿಯ ಆರಂಭದಲ್ಲಿ ಕೊಟ್ಟಿರುವ ಸೂತ್ರಕ್ಕೆ ಮಾರ್ಪಡಿಸಬಹುದಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## श्रेढीबद्धसङ्कलितम्

इतः परं मिश्रकगणिते श्रेढीबद्धसङ्कलितं व्याख्यास्यामः ।
हीनाधिकचयसङ्कलितधनानयनसूत्रम् -
व्येकार्धपदोनाधिकचयघातोनान्वितः पुनः प्रभवः ।
गच्छाभ्यस्तो हीनाधिकचयसमुदायसङ्कलितम् ॥ २९० ॥

---

## Śreḍhībaddhasaṅkalitam

Itaḥ paraṁ miśrakagaṇite śreḍhībaddhasaṅkalitaṁ vyākhyāsyāmaḥ.
Hīnādhikacayasaṅkalitadhanānayanasūtram -
**290.** Vyekārdhapadonādhikacayaghātonānvitaḥ punaḥ prabhavaḥ,
gacchābhyasto hīnādhikacayasamudāyasaṅkalitam.

---

## Summation of Series

Hereafter we shall expound in (this) chapter on mixed problems the summation of quantities in progressive series.

The rule for arriving at the sum of a series in arithmetical progression, of which the common difference is either positive or negative :

**290.** The first term is either decreased or increased by the product of the negative or the positive common difference and the quantity obtained by halving the number of terms in the series as diminished by one. (Then) this is (further) multiplied by the number of terms in the series. (Thus) the sum of a series of terms in arithmetical progression with positive or negative common difference is obtained.

---

## ಶ್ರೇಣಿಗಳ ಸಂಕಲನ

ಇನ್ನು ಮುಂದೆ ನಾವು ಮಿಶ್ರಕ ಗಣಿತದಲ್ಲಿ ಶ್ರೇಣಿಗಳ ಸಂಕಲನವನ್ನು ವ್ಯಾಖ್ಯಾನಿಸುತ್ತೇವೆ.

ಧನಾತ್ಮಕ ಅಥವಾ ಋಣಾತ್ಮಕ ಸಾಮಾನ್ಯ ವ್ಯತ್ಯಾಸವನ್ನುಳ್ಳ ಕಲನ ಶ್ರೇಣಿಯ ಮೊತ್ತವನ್ನು ಪಡೆಯಲು ನಿಯಮ :

**೨೯೦.** ಋಣಾತ್ಮಕ ಅಥವಾ ಧನಾತ್ಮಕವಾದ ಸಾಮಾನ್ಯ ವ್ಯತ್ಯಾಸ ಹಾಗೂ ಶ್ರೇಣಿಯ ಒಂದನ್ನು ಕಡಿಮೆಮಾಡಿದ ಪದಗಳ ಸಂಖ್ಯೆಯ ಅರ್ಧಭಾಗಗಳನ್ನು ಗುಣಿಸುವುದರಿಂದ ಲಭಿಸುವ ಗುಣಲಬ್ಧದಿಂದ, ಪ್ರಥಮ ಪದವನ್ನು ಕಳೆಯಲಾಗುತ್ತದೆ ಅಥವಾ ಹೆಚ್ಚಿಸಲಾಗುತ್ತದೆ. ಅನಂತರ ಇದನ್ನು ಮತ್ತೆ ಶ್ರೇಣಿಯ ಪದಗಳ ಸಂಖ್ಯೆಯಿಂದ ಗುಣಿಸಲಾಗುತ್ತದೆ. ಈ ರೀತಿ ಧನಾತ್ಮಕ ಅಥವಾ ಋಣಾತ್ಮಕವಾದ ಸಾಮಾನ್ಯ ವ್ಯತ್ಯಾಸವಿರುವ ಕಲನ ಶ್ರೇಣಿಯ ಮೊತ್ತವು ದೊರೆಯುತ್ತದೆ.

---

**290.** Algebraically, $\left(\frac{n-1}{2}\, b \pm a\right) n = s$, where $n$ is the number of terms, $a$ the first term, $b$ the common difference and $s$ the sum of the series.

**೨೯೦.** ಬೀಜಗಣಿತರೂಪದಲ್ಲಿ $\left(\frac{ನ-೧}{೨}\, ಬ \pm ಆ\right) ನ = ಶ$, ಇಲ್ಲಿ $ನ$ ಪದಗಳ ಸಂಖ್ಯೆಯಾಗಿದೆ, $ಆ$ ಪ್ರಥಮ ಪದವಾಗಿದೆ, $ಬ$ ಸಾಮಾನ್ಯ ವ್ಯತ್ಯಾಸವಾಗಿದೆ ಮತ್ತು $ಶ$ ಶ್ರೇಣಿಯ ಮೊತ್ತವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

चतुरुत्तरदश चादिर्हीनचयस्त्रीणि पञ्च गच्छः किम् ।
द्वावादिर्वृद्धिचयः षट् पदमष्टौ धनं भवेदत्र ॥ २९१ ॥
अधिकहीनोत्तरसङ्कलितधने आद्युत्तरानयनसूत्रम् -
गच्छविभक्ते गणिते रूपोनपदार्धगुणितचयहीने ।
आदिः पदहृतवित्तं चाद्यूनं व्येकपददलहृतः प्रचयः ॥ २९२ ॥

---

**Atroddeśakaḥ**

**291.** Caturuttaradaśa cādirhīnacayastrīṇi pañca gacchaḥ kiṁ, dvāvādirvṛddhicayaḥ ṣaṭ padamaṣṭau dhanaṁ bhavedatra.

Adhikahīnottarasaṅkalitadhane ādyuttarānayanasūtram -

**292.** Gacchavibhakte gaṇite rūponapadārdhaguṇitacayahīne, ādiḥ padahṛtavittaṁ cādyūnaṁ vyekapadadalahṛtaḥ pracayaḥ.

---

***Examples in illustration thereof***

**291.** The first term is 14; the negative common difference is 3; the number of terms is 5. The first term is 2; the positive common difference is 6 and the number of terms is 8. What is the sum of the series in (each of) these cases?

The rule for arriving at the first term and the common difference in relation to the sum of a series in arithmetical progression, the common difference whereof is positive or negative :

**292.** Divide the (given) sum of the series by the number of terms (therein) and subtract (from the resulting quotient) the product obtained by multiplying the common difference by the half of the number of terms in the series as diminished by one. (Thus) the first term (in the series) is arrived at. The sum of the series is divided by the number of terms (therein). The first term is subtracted (from the resulting quotient); the remainder when divided by half of the number of terms in the series as diminished by one becomes the common difference.

---

**ಉದಾಹರಣೆಗಳಿಂದ ವಿಶ್ಲೇಷಣ**

೨೯೧. ಪ್ರಥಮ ಪದವು ೧೪, ಋಣಾತ್ಮಕ ಸಾಮಾನ್ಯ ವ್ಯತ್ಯಾಸ ೩, ಪದಗಳ ಸಂಖ್ಯೆ ೫, ಪ್ರಥಮ ಪದ ೨, ಧನಾತ್ಮಕ ಸಾಮಾನ್ಯ ವ್ಯತ್ಯಾಸ ೬ ಮತ್ತು ಪದಗಳ ಸಂಖ್ಯೆ ೮. ಪ್ರತಿಯೊಂದು ಪ್ರಕರಣದಲ್ಲಿ ಶ್ರೇಣಿಯ ಮೊತ್ತವೇನು?

ಧನಾತ್ಮಕ ಅಥವಾ ಋಣಾತ್ಮಕವಾದ ಸಾಮಾನ್ಯ ವ್ಯತ್ಯಾಸವಿರುವ ಕಲನಶ್ರೇಣಿಯ ಮೊತ್ತದ ಸಂಬಂಧದಲ್ಲಿ, ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳನ್ನು ಪಡೆಯಲು ನಿಯಮ :

೨೯೨. ಶ್ರೇಣಿಯ ಕೊಟ್ಟಿರುವ ಮೊತ್ತವನ್ನು ಪದಗಳ ಸಂಖ್ಯೆಯಿಂದ ಭಾಗಿಸು ಮತ್ತು ಹೀಗೆ ಬಂದ ಭಾಗಲಬ್ಧದಿಂದ, ಸಾಮಾನ್ಯ ವ್ಯತ್ಯಾಸದಿಂದ ಗುಣಿಸಲ್ಪಟ್ಟ ಒಂದನ್ನು ಕಡಿಮೆಮಾಡಿದ ಪದಗಳ ಸಂಖ್ಯೆಯ ಅರ್ಧಭಾಗವನ್ನು ಕಳೆ. ಈ ರೀತಿ, ಶ್ರೇಣಿಯ ಪ್ರಥಮ ಪದವು ಪ್ರಾಪ್ತವಾಗುತ್ತದೆ. ಶ್ರೇಣಿಯ ಮೊತ್ತವನ್ನು ಪದಗಳ ಸಂಖ್ಯೆಯಿಂದ ಭಾಗಿಸುತ್ತೇವೆ. ಹೀಗೆ ದೊರೆತ ಭಾಗಲಬ್ಧದಿಂದ ಪ್ರಥಮ ಪದವನ್ನು ಕಳೆಯುತ್ತೇವೆ. ಶೇಷವನ್ನು, ೧ ನ್ನು ಕಡಿಮೆಮಾಡಿದ ಪದಗಳ ಸಂಖ್ಯೆಯ ಅರ್ಧಭಾಗದಿಂದ ಭಾಗಿಸಿದರೆ, ಸಾಮಾನ್ಯ ವ್ಯತ್ಯಾಸವು ಲಭಿಸುತ್ತದೆ.

---

**292.** Algebraically, $a = \frac{s}{n} - \frac{n-1}{2} b$ and $b = \left(\frac{s}{n} - a\right) \div \frac{n-1}{2}$

೨೯೨. ಬೀಜಗಣಿತರೂಪದಲ್ಲಿ $ಅ = \frac{ಶ}{ನ} - \frac{ನ-೧}{೨} ಬ$ ಮತ್ತು $ಬ = \left(\frac{ಶ}{ನ} - ಅ\right) \div \frac{ನ-೧}{೨}$



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

चत्वारिंशद्गणितं गच्छः पञ्च त्रयः प्रचयः। न ज्ञायतेऽधुनादिः प्रभवो द्विः प्रचयमाचक्ष्व ॥ २९३ ॥

श्रेढीसङ्कलितगच्छानयनसूत्रम् -

आदिविहीनो लाभः प्रचयार्धहृतस्स एव रूपयुतः ।
गच्छो लाभेन गुणो गच्छस्सङ्कलितधनं च सम्भवति ॥ २९४ ॥

---

## Atroddeśakaḥ

**293.** Catvāriṁśadgaṇitaṁ gacchaḥ pañca trayaḥ pracayaḥ, na jñāyate'dhunādiḥ prabhavo dviḥ pracayamācakṣva.

Śreḍhīsaṅkalitagacchānayanasūtram -

**294.** Ādivihīno lābhaḥ pracayārdhahṛtassa eva rūpayutaḥ, gaccho lābhena guṇo gacchassaṅkalitadhanaṁ ca sambhavati.

---

## *Examples in illustration thereof*

**293.** The sum of the series is 40; the number of terms is 5 and the common difference is 3; the first term is not known now. (Find it out.) When the first term is 2, find out the common difference.

The rule for arriving at the sum and the number of terms in a series in arithmetical progression (with the aid of the known labha, which is the same as the quotient obtained by dividing the sum by the unknown number of terms therein) :

**294.** The lābha is diminished by the first term and (then) divided by the half of the common difference and on adding one to this same (resulting quantity), the number of terms in the series (is obtained). The number of terms in the series multiplied by the lābha becomes the sum of the series.

---

## ಉದಾಹರಣೆಗಳಿಂದ ವಿಶ್ಲೇಷಣ

**೨೯೩.** ಶ್ರೇಣಿಯ ಮೊತ್ತ ೪೦, ಪದಗಳ ಸಂಖ್ಯೆ ೫ ಮತ್ತು ಸಾಮಾನ್ಯ ವ್ಯತ್ಯಾಸ ೩. ಈಗ ಪ್ರಥಮ ಪದವು ಗೊತ್ತಿಲ್ಲ. (ಅದನ್ನು ಕಂಡುಹಿಡಿ). ಪ್ರಥಮ ಪದವು ೨ ಆಗಿದ್ದಾಗ ಸಾಮಾನ್ಯ ವ್ಯತ್ಯಾಸವನ್ನು ಕಂಡುಹಿಡಿ.

ಯಾವುದು, ಮೊತ್ತದ ಪದಗಳ ಅಜ್ಞಾತ ಸಂಖ್ಯೆಯಿಂದ ಭಾಗಿಸಿದಾಗ ಭಾಗಲಬ್ಧದ ರೂಪದಲ್ಲಿ ಪ್ರಾಪ್ತವಾಗುತ್ತದೋ ಅಂತಹ ಗೊತ್ತಿರುವ ಲಾಭದ ಸಹಾಯದಿಂದ ಕಲನಶ್ರೇಣಿಯ ಮೊತ್ತ ಮತ್ತು ಪದಗಳ ಸಂಖ್ಯೆಯನ್ನು ಪಡೆಯಲು ನಿಯಮ :

**೨೯೪.** ಲಾಭವನ್ನು ಪ್ರಥಮ ಪದದಿಂದ ಕಳೆಯಲಾಗುತ್ತದೆ. ಅನಂತರ ಸಾಮಾನ್ಯ ವ್ಯತ್ಯಾಸದ ಅರ್ಧಭಾಗದಿಂದ ಭಾಗಿಸಲಾಗುತ್ತದೆ. ಹೀಗೆ ದೊರೆತ ರಾಶಿಗೆ ೧ ನ್ನು ಸೇರಿಸುವುದರಿಂದ ಶ್ರೇಣಿಯ ಪದಗಳ ಸಂಖ್ಯೆಯು ಲಭಿಸುತ್ತದೆ. ಶ್ರೇಣಿಯ ಪದಗಳ ಸಂಖ್ಯೆಯನ್ನು, ಲಾಭದಿಂದ ಗುಣಿಸುವುದರಿಂದ ಶ್ರೇಣಿಯ ಮೊತ್ತವು ಪ್ರಾಪ್ತವಾಗುತ್ತದೆ.

---

**294.** Algebraically, $n = \dfrac{l - a}{\dfrac{b}{2}} + 1$, where $l = \dfrac{s}{n}$, which is the lābha.

**೨೯೪.** ಬೀಜಗಣಿತರೂಪದಲ್ಲಿ, $ನ = \dfrac{ಲ - ಆ}{\dfrac{ಬ}{೨}} + ೧$. ಇಲ್ಲಿ $ಲ = \dfrac{ಶ}{ನ}$. ಇದು ಲಾಭವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अत्रोद्देशकः

त्रीण्युत्तरमादिर्द्वे वनिताभिश्चोत्पलानि भक्तानि ।
एकस्या भागोऽष्टौ कति वनिताः कति च कुसुमानि ॥ २९५ ॥

---

**Atroddeśakaḥ**

**295.** Trīṇyuttaramādirdve vanitābhiścotpalāni bhaktāni, ekasyā bhāgo'ṣṭau kati vanitāḥ kati ca kusumāni.

---

***An example in illustration thereof***

**295.** (There were a number of utpala flowers, representable as the sum of a series in arithmetical progression, whereof) 2 is the first term and 3 the common difference. A number of women divided (these) utpala flowers (equally among them). Each woman had 8 for her share. How many were the women and how many were the flowers?

---

**ಉದಾಹರಣೆಯಿಂದ ವಿಶ್ಲೇಷಣ**

೨೯೫. ಕಲನ ಶ್ರೇಣಿಯ ಮೊತ್ತವನ್ನು ನಿರೂಪಿಸುವ ಕೆಲವು ಸಂಖ್ಯೆಯ ಉತ್ಪಲ ಹೂವುಗಳಿದ್ದವು. ೨ ಪ್ರಥಮ ಪದ ಮತ್ತು ೩ ಸಾಮಾನ್ಯ ವ್ಯತ್ಯಾಸ. ಕೆಲವು ಸಂಖ್ಯೆಯ ಸ್ತ್ರೀಯರು (ಈ) ಉತ್ಪಲ ಹೂವುಗಳನ್ನು ತಮ್ಮ ತಮ್ಮಲ್ಲೇ ಸಮವಾಗಿ ಹಂಚಿಕೊಂಡರು. ಪ್ರತಿಯೊಬ್ಬ ಸ್ತ್ರೀ ಗೂ ೮ (ಹೂವುಗಳು) ಭಾಗವಾಗಿ ದೊರೆತವು. ಸ್ತ್ರೀಯರು ಎಷ್ಟಿದ್ದರು? ಮತ್ತು ಹೂವುಗಳು ಎಷ್ಟಿದ್ದವು?

---

**295.** The number of women in this problem is conceived to be equal to the number of terms in the series.

೨೯೫. ಈ ಲೆಕ್ಕದಲ್ಲಿ ಸ್ತ್ರೀಯರ ಸಂಖ್ಯೆಯು ಶ್ರೇಣಿಯ ಪದಗಳ ಸಂಖ್ಯೆಯಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



वर्गसङ्कलितानयनसूत्रम् -
सैकेष्टकृतिर्द्विघ्ना सैकेष्टोनेष्टदलगुणिता ।
कृतिघनचितिसङ्घातस्त्रिकभक्तो वर्गसङ्कलितम् ॥ २९६ ॥

---

Vargasaṅkalitānayanasūtram -

**296.** Saikeṣṭakṛtirdvighnā saikeṣṭoneṣṭadalaguṇitā,
kṛtighanacitisaṅghātastrikabhakto vargasaṅkalitam.

---

The rule for arriving at the sum of the squares (of a given number of natural numbers beginning with one) :

**296.** The given number is increased by one and (then) squared; (this squared quantity is) multiplied by two and (then) diminished by the given quantity as increased by one. (The remainder thus arrived at is) multiplied by the half of the given number. This gives rise to the combined sum of the square (of the given number), the cube (of the given number) and the sum of the natural numbers (up to the given number). This combined sum, divided by three, gives rise to the sum of the squares (of the given number of natural numbers).

---

ಒಂದರಿಂದ ಆರಂಭವಾಗುವ ಕೊಟ್ಟಿರುವ ಸಂಖ್ಯೆಯ ಸಹಜ ಸಂಖ್ಯೆಗಳ ವರ್ಗಗಳ ಮೊತ್ತವನ್ನು ಪಡೆಯಲು ನಿಯಮ :

**೨೯೬.** ಕೊಟ್ಟಿರುವ ಸಂಖ್ಯೆಯನ್ನು ಒಂದರಿಂದ ಹೆಚ್ಚಿಸುತ್ತೇವೆ ಮತ್ತು (ನಂತರ) ವರ್ಗಮಾಡುತ್ತೇವೆ. ಈ ವರ್ಗಮಾಡಲಾದ ರಾಶಿಯನ್ನು ೨ ರಿಂದ ಗುಣಿಸುತ್ತೇವೆ. ಅನಂತರ ೧ ರಿಂದ ಹೆಚ್ಚಿಸಲಾದ ಕೊಟ್ಟಿರುವ ಸಂಖ್ಯೆಯಿಂದ ಕಳೆಯುತ್ತೇವೆ. ಈ ರೀತಿ ದೊರೆತ ಶೇಷವನ್ನು ಕೊಟ್ಟಿರುವ ಸಂಖ್ಯೆಯ ಅರ್ಧಭಾಗದಿಂದ ಗುಣಿಸುತ್ತೇವೆ. ಇದರಿಂದ ನಮಗೆ, ಕೊಟ್ಟಿರುವ ಸಂಖ್ಯೆಯ ವರ್ಗ, ಕೊಟ್ಟಿರುವ ಸಂಖ್ಯೆಯ ಘನ ಮತ್ತು ಕೊಟ್ಟಿರುವ ಸಂಖ್ಯೆಯವರೆಗಿನ ಸಹಜ ಸಂಖ್ಯೆಗಳ ಮೊತ್ತ-ಇವುಗಳ (ಈ ಮೂರರ) ಮಿಶ್ರಮೊತ್ತವು ದೊರೆಯುತ್ತದೆ. ಈ ಮಿಶ್ರ ಮೊತ್ತವನ್ನು ಮೂರರಿಂದ ಭಾಗಿಸಿದರೆ, ಕೊಟ್ಟಿರುವ ಸಂಖ್ಯೆಯ ಸಹಜ ಸಂಖ್ಯೆಗಳ ವರ್ಗಗಳ ಮೊತ್ತವನ್ನು ಕೊಡುತ್ತದೆ.

---

**296.** Algebraically, $\left\{\frac{2(n+1)^2 - (n+1)}{3}\right\}\frac{n}{2} = S_2$, which is the sum of the squares of the natural numbers up to $n$.

**೨೯೬.** ಬೀಜಗಣಿತರೂಪದಲ್ಲಿ, $\left\{\frac{೨\,(ನ+೧)^೨ - (ನ+೧)}{೩}\right\}\frac{ನ}{೨} = ಶ್ರ_೨$, ಇದು ನ ವರೆಗಿನ ಸಹಜ ಸಂಖ್ಯೆಗಳ ವರ್ಗಗಳ ಮೊತ್ತವಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अत्रोद्देशकः

अष्टाष्टादशविंशतिषष्ट्येकाशीतिषट्कृतीनां च ।
कृतिघनचितिसङ्कलितं वर्गचितिं चाशु मे कथय ॥ २९७ ॥
इष्टाद्युत्तरपदवर्गसङ्कलितधनानयनसूत्रम् -
द्विगुणैकोनपदोत्तरकृतिहतिषष्ठांशमुखचयहतयुतिः ।
व्येकपदघ्ना मुखकृतिसहिता पदताडितेष्टकृतिचितिका ॥ २९८ ॥

---

Atroddeśakaḥ

**297.** Aṣṭāṣṭādaśaviṁśatiṣaṣṭyekāśītiṣaṭkṛtīnāṁ ca, kṛtighanacitisaṅkalitaṁ vargacitiṁ cāśu me kathaya.

Iṣṭādyuttarapadavargasaṅkalitadhanānayanasūtram -

**298.** Dviguṇaikonapadottarakṛtihatiṣaṣṭāṁśamukhacayahatayutiḥ, vyekapadaghnā mukhakṛtisahitā padatāḍiteṣṭakṛticitikā.

---

***Examples in illustration thereof***

**297.** (In a number of series of natural numbers), the number of natural numbers is (in order) 8, 18, 20, 60, 81 and 36. Tell me quickly (in each case) the combined sum of the square (of the given number), the cube (of the given number) and the sum of the given number of natural numbers. (Tell me) also the sum of the squares of the natural numbers (up to the given number).

The rule for arriving at the sum of the square of a number of terms in arithmetical progression, whereof the first term, the common difference and the number of terms are given :

**298.** Twice the number of terms is diminished by one and (then) multiplied by the square of the common difference and is (then) divided by six. (To this), the product of the first term and the common difference is added. The resulting sum is multiplied by the number of terms as diminished by one. (To the product so arrived at), the square of the first term is added. This sum multiplied by the number of terms becomes the sum of the squares of the terms in the given series.

---

ಉದಾಹರಣೆಗಳಿಂದ ವಿಶ್ಲೇಷಣ

**೨೯೭.** (ಸಹಜ ಸಂಖ್ಯೆಗಳ ಕೆಲವು ಸಂಖ್ಯೆಯ ಶ್ರೇಣಿಗಳಲ್ಲಿ) ಸಹಜ ಸಂಖ್ಯೆಗಳ ಸಂಖ್ಯೆಯು (ಕ್ರಮವಾಗಿ) ೮, ೧೮, ೨೦, ೬೦, ೮೧ ಮತ್ತು ೩೬ ಆಗಿವೆ. (ಪ್ರತಿಯೊಂದು ಪ್ರಕರಣದಲ್ಲಿ) ಕೊಟ್ಟಿರುವ ಸಂಖ್ಯೆಯ ವರ್ಗ, ಕೊಟ್ಟಿರುವ ಸಂಖ್ಯೆಯ ಘನ ಮತ್ತು ಕೊಟ್ಟಿರುವ ಸಂಖ್ಯೆಯ ಸಹಜ ಸಂಖ್ಯೆಗಳ ಮೊತ್ತ-ಈ ಮೂರರ ಮಿಶ್ರ ಮೊತ್ತವನ್ನು ನನಗೆ ಬೇಗನೆ ಹೇಳು. (ಕೊಟ್ಟಿರುವ ಸಂಖ್ಯೆಯವರೆಗಿನ)ಸಹಜ ಸಂಖ್ಯೆಗಳ ವರ್ಗಗಳ ಮೊತ್ತವನ್ನೂ ಸಹ ನನಗೆ ಹೇಳು.

ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಪದಗಳ ಸಂಖ್ಯೆಯನ್ನು ಕೊಟ್ಟಿರುವಂತಹ ಒಂದು ಕಲನ ಶ್ರೇಣಿಯಲ್ಲಿ, ಕೆಲವು ಸಂಖ್ಯೆಯ ಪದಗಳ ವರ್ಗಗಳ ಮೊತ್ತವನ್ನು ಪಡೆಯಲು ನಿಯಮ :

**೨೯೮.** ಪದಗಳ ಸಂಖ್ಯೆಯ ಎರಡರಷ್ಟನ್ನು ೧ ರಿಂದ ಕಳೆಯುತ್ತೇವೆ. ನಂತರ ಸಾಮಾನ್ಯ ವ್ಯತ್ಯಾಸದ ವರ್ಗದಿಂದ ಗುಣಿಸುತ್ತೇವೆ. ಆನಂತರ ೬ ರಿಂದ ಭಾಗಿಸುತ್ತೇವೆ. (ಇದಕ್ಕೆ) ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳ ಗುಣಲಬ್ಧವನ್ನು ಸೇರಿಸುತ್ತೇವೆ. ಹೀಗೆ ದೊರೆತ ಮೊತ್ತವನ್ನು, ಒಂದನ್ನು ಕಡಿಮೆಮಾಡಿದ ಪದಗಳ ಸಂಖ್ಯೆಯಿಂದ ಗುಣಿಸುತ್ತೇವೆ. (ಈ ರೀತಿ ಬಂದ ಭಾಗಲಬ್ಧಕ್ಕೆ) ಪ್ರಥಮ ಪದದ ವರ್ಗವನ್ನು ಸೇರಿಸುತ್ತೇವೆ. ಈ ಮೊತ್ತವನ್ನು, ಪದಗಳ ಸಂಖ್ಯೆಯಿಂದ ಗುಣಿಸಿದಾಗ ಕೊಟ್ಟಿರುವ ಶ್ರೇಣಿಯ ಪದಗಳ ವರ್ಗಗಳ ಮೊತ್ತವಾಗಿ ಪರಿಣಮಿಸುತ್ತದೆ.

---

**298.** $\left[\left\{\frac{(2n-1)b^2}{6} + ab\right\}(n-1) + a^2\right] n$ = sum of the squares of the terms in a series in arithmetical progression.

**೨೯೮.** $\left[\left\{\frac{(೨\,ನ - ೧)ಬ^2}{೬} + ಅಬ\right\}(ನ - ೧) + ಅ^2\right]$ ನ = ಕಲನ ಶ್ರೇಣಿಯ ಪದಗಳ ವರ್ಗಗಳ ಮೊತ್ತ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



पुनरपि इष्टाद्युत्तरपदवर्गसङ्कलितानयनसूत्रम् -
द्विगुणैकोनपदोत्तरकृतिहतिरेकोनपदहताङ्गहृता ।
व्येकपदादिचयाहतिमुखकृतियुक्ता पदाहता सारम् ॥ २९९ ॥

**अत्रोद्देशकः**

त्रीण्यादिः पञ्च चयो गच्छः पञ्चास्य कथय कृतिचितिकाम् ।
पञ्चादिस्त्रीणि चयो गच्छः सप्तास्य का च कृतिचितिका ॥ ३०० ॥

---

Punarapi iṣṭādyuttarapadavargasaṅkalitānayanasūtram -

**299.** Dviguṇaikonapadottarakṛtihatirekonapadahatāṅgahṛtā,
vyekapadādicayāhatimukhakṛtiyuktā padāhatā sāram.

**Atroddeśakaḥ**

**300.** Trīṇyādiḥ pañca cayo gacchaḥ pañcāsya kathaya kṛticitikām,
pañcādistrīṇi cayo gacchaḥ saptāsya kā ca kṛticitikā.

---

Again, another rule for arriving at the sum of the squares of a number of terms in arithmetical progression, whereof the first term, the common difference and the number of terms are given :

**299.** Twice the number of terms (in the series) is diminished by one and (then) multiplied by the square of the common difference and (also) by the number of terms as diminished by one. This product is divided by six. (To this resulting quotient), the square of the first term and the (continued product) of the number of terms as diminished by one, the first term and the common difference, are added. The whole (of this) multiplied by the number of terms becomes the required result.

***Examples in illustration thereof***

**300.** (In a series in arithmetical progression), the first term is 3, the common difference is 5, the number of terms is 5. Give out the sum of the squares (of the terms) in the series. (Similarly, in another series), 5 is the first term, 3 the common difference and 7 the number of terms. What is the sum of the squares (of the terms) in this series?

---

ಪುನಃ, ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಪದಗಳ ಸಂಖ್ಯೆಯನ್ನು ಕೊಟ್ಟಿರುವಂತಹ ಒಂದು ಕಲನ ಶ್ರೇಣಿಯಲ್ಲಿ, ಕೆಲವು ಸಂಖ್ಯೆಯ ಪದಗಳ ವರ್ಗಗಳ ಮೊತ್ತವನ್ನು ಪಡೆಯಲು ಮತ್ತೊಂದು ನಿಯಮ:

**೨೯೯.** (ಶ್ರೇಣಿಯಲ್ಲಿನ) ಪದಗಳ ಸಂಖ್ಯೆಯ ಎರಡರಷ್ಟನ್ನು ೧ ರಿಂದ ಕಳೆಯಲಾಗುತ್ತದೆ, ನಂತರ ಸಾಮಾನ್ಯ ವ್ಯತ್ಯಾಸದ ವರ್ಗದಿಂದ ಗುಣಿಸಲಾಗುತ್ತದೆ ಮತ್ತು ಒಂದನ್ನು ಕಡಿಮೆಮಾಡಿದ ಪದಗಳ ಸಂಖ್ಯೆಯಿಂದಲೂ ಸಹ ಗುಣಿಸಲಾಗುತ್ತದೆ. (ಹೀಗೆ ದೊರೆತ ಭಾಗಲಬ್ಧಕ್ಕೆ) ಪ್ರಥಮ ಪದದ ವರ್ಗವನ್ನು ಮತ್ತು ಒಂದನ್ನು ಕಡಿಮೆಮಾಡಿದ ಪದಗಳ ಸಂಖ್ಯೆ. ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳ ಸತತ ಗುಣಲಬ್ಧವನ್ನು ಸೇರಿಸಲಾಗುತ್ತದೆ. ಈ ಪ್ರಕಾರವಾಗಿ ಲಭಿಸಿದ ಸಂಖ್ಯೆಯನ್ನು, ಪದಗಳ ಸಂಖ್ಯೆಯಿಂದ ಗುಣಿಸಿದರೆ, ಬೇಕಾದ ಫಲವು ಉತ್ಪನ್ನವಾಗುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

**೩೦೦.** (ಒಂದು ಕಲನಶ್ರೇಣಿಯಲ್ಲಿ) ಪ್ರಥಮ ಪದ ೩, ಸಾಮಾನ್ಯ ವ್ಯತ್ಯಾಸ ೫, ಪದಗಳ ಸಂಖ್ಯೆ ೫ ಆಗಿದೆ. ಶ್ರೇಣಿಯಲ್ಲಿನ ಪದಗಳ ವರ್ಗಗಳ ಮೊತ್ತವನ್ನು ತಿಳಿಸು. ಇದೇ ರೀತಿ, ಇನ್ನೊಂದು ಶ್ರೇಣಿಯಲ್ಲಿ ೫ ಪ್ರಥಮ ಪದ, ೩ ಸಾಮಾನ್ಯ ವ್ಯತ್ಯಾಸ ಮತ್ತು ೭ ಪದಗಳ ಸಂಖ್ಯೆಯಾಗಿದೆ. ಈ ಶ್ರೇಣಿಯಲ್ಲಿ ಪದಗಳ ವರ್ಗಗಳ ಮೊತ್ತವೇನು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



घनसङ्कलितानयनसूत्रम् -

गच्छार्धवर्गराशी रूपाधिकगच्छवर्गसङ्गुणितः ।
घनसङ्कलितं प्रोक्तं गणितेऽस्मिन् गणिततत्त्वज्ञैः ॥ ३०१ ॥

**अत्रोद्देशकः**

षण्णामष्टानामपि सप्तानां पञ्चविंशतीनां च ।
षट्पञ्चाशन्मिश्रितशतद्वयस्यापि कथय घनपिण्डम् ॥ ३०२ ॥

---

Ghanasaṅkalitānayanasūtram -

**301.** Gacchārdhavargarāśī rūpādhikagacchavargasaṅguṇitaḥ,
ghanasaṅkalitaṁ proktaṁ gaṇite'smin gaṇitatattvajñaiḥ.

**Atroddeśakaḥ**

**302.** Ṣaṇṇāmaṣṭānāmapi saptānāṁ pañcaviṁśatīnāṁ ca,
ṣaṭpañcāśanmiśritaśatadvayasyāpi kathaya ghanapiṇḍam.

---

The rule for arriving at the sum of the cubes (of a given number of natural numbers) :

**301.** The quantity represented by the square of half the (given) number of terms is multiplied by the square of the sum of one and the number of terms. In this (science of) arithmetic, this result is said to be the sum of the cubes (of the given number of natural numbers) by those who know the secret of calculation.

***Examples in illustration thereof***

**302.** Give out (in each case) the sum of the cubes of (the natural numbers up to) 6, 8, 7, 25 and 256.

---

ಕೊಟ್ಟಿರುವ ಸಂಖ್ಯೆಯ ಸಹಜ ಸಂಖ್ಯೆಗಳ ವರ್ಗಗಳ ಮೊತ್ತವನ್ನು ಪಡೆಯಲು ನಿಯಮ :

೩೦೧. ಪದಗಳ ಕೊಟ್ಟಿರುವ ಸಂಖ್ಯೆಯ ಅರ್ಧಭಾಗದ ವರ್ಗದಿಂದ ನಿರೂಪಿತವಾದ ರಾಶಿಯನ್ನು, ೧ ಮತ್ತು ಪದಗಳ ಸಂಖ್ಯೆಗಳ ಮೊತ್ತದ ವರ್ಗದಿಂದ ಗುಣಿಸುತ್ತೇವೆ. ಈ ಗಣಿತದಲ್ಲಿ, ಈ ಫಲವು ಕೊಟ್ಟಿರುವ ಸಂಖ್ಯೆಯ ಸಹಜ ಸಂಖ್ಯೆಗಳ ಘನಗಳ ಮೊತ್ತವೆಂದು ಗಣಿತ ತತ್ವಜ್ಞರಿಂದ ಹೇಳಲ್ಪಡುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

೩೦೨. ಪ್ರತಿಯೊಂದು ಪ್ರಕರಣದಲ್ಲಿ ೬, ೮, ೭, ೨೫ ಮತ್ತು ೨೫೬ ನ್ನು ಪದಗಳನ್ನಾಗಿ ಉಳ್ಳ, ಸಹಜ ಸಂಖ್ಯೆಗಳ ಘನಗಳ ಮೊತ್ತವನ್ನು ತಿಳಿಸು.

---

**301.** Algebraically, $\left(\frac{n}{2}\right)^2 (n+1)^2 = s_3$, which is the sum of the cubes of the natural numbers up to $n$.

೩೦೧. ಬೀಜಗಣಿತರೂಪದಲ್ಲಿ, $\left(\frac{ನ}{೨}\right)^೨ (ನ+೧)^೨ = ಶ್ರಾ$ ಇದು ನ ಪದಗಳವರೆಗಿನ ಸಹಜ ಸಂಖ್ಯೆಗಳ ಘನಗಳ ಮೊತ್ತವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



इष्टाद्युत्तरगच्छघनसङ्कलितानयनसूत्रम् -
चित्यादिहतिर्मुखचयशेषघ्ना प्रचयनिघ्नचितिवर्गे ।
आदौ प्रचयादूने वियुता युक्ताधिके तु घनचित्तिका ॥ ३०३ ॥

**अत्रोद्देशकः**

आदिस्त्रयश्चयो द्वौ गच्छः पञ्चास्य घनचितिका ।
पञ्चादिस्सप्तचयो गच्छष्ट् का भवेच्च घनचितिका ॥ ३०४ ॥

---

Iṣṭādyuttaragacchaghanasaṅkalitānayanasūtram -

**303.** Cityādihatirmukhacayaśeṣaghnā pracayanighnacitivarge, ādau pracayādūne viyutā yuktādhike tu ghanacitikā.

**Atroddeśakaḥ**

**304.** Ādistrayaścayo dvau gacchaḥ pañcāsya ghanacitikā,
pañcādissaptacayo gacchaṣṣaṭ kā bhavecca ghanacitikā.

---

The rule for arriving at the sum of the cubes (of the terms in a series in arithmetical progression), the first term, the common difference and the number of terms whereof are optionally chosen :

**303.** The sum (of the simple terms in the given series), as multiplied by the first term (therein), is (further) multiplied by the difference between the first term and the common difference (in the series). (Then) the square of the sum (of the series) is multiplied by the common difference. If the first term is smaller than the common difference, then (the first of the products obtained above is) subtracted (from the second product). If, however, (the first term is) greater (than the common difference), then (the first product above mentioned is) added (to the second product). (Thus) the (required) sum of the cubes is obtained.

***Examples in illustration thereof***

**304.** What may be the sum of the cubes when the first term is 3, the common difference 2 and the number of terms 5 or when the first term is 5, the common difference 7 and the number of terms 6?

---

ಮನಸ್ಸಿನಲ್ಲಿ ಆಯ್ದ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಪದಗಳ ಸಂಖ್ಯೆಯಿರುವ, ಒಂದು ಕಲನ ಶ್ರೇಣಿಯಲ್ಲಿ ಪದಗಳ ಘನಗಳ ಮೊತ್ತವನ್ನು ಪಡೆಯಲು ನಿಯಮ :

೩೦೩. (ಕೊಟ್ಟಿರುವ ಶ್ರೇಣಿಯ ಸರಳ ಪದಗಳ)ಮೊತ್ತವನ್ನು ಪ್ರಥಮ ಪದದಿಂದ ಗುಣಿಸಿ, ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳ ವ್ಯತ್ಯಾಸದಿಂದ ಗುಣಿಸುತ್ತೇವೆ. ಅನಂತರ ಶ್ರೇಣಿಯ ಮೊತ್ತದ ವರ್ಗವನ್ನು, ಸಾಮಾನ್ಯ ವ್ಯತ್ಯಾಸದಿಂದ ಗುಣಿಸುತ್ತೇವೆ. ಪ್ರಥಮ ಪದವು ಸಾಮಾನ್ಯ ವ್ಯತ್ಯಾಸಕ್ಕಿಂತ ಚಿಕ್ಕದಾಗಿದ್ದರೆ, ಮೇಲೆ ಪಡೆದ ಗುಣಲಬ್ಧಗಳಲ್ಲಿ ಮೊದಲನೆಯದನ್ನು ಎರಡನೆಯ ಗುಣಲಬ್ಧದಿಂದ ಕಳೆಯುತ್ತೇವೆ. ಆದರೆ ಒಂದು ವೇಳೆ ಪ್ರಥಮ ಪದವು ಸಾಮಾನ್ಯ ವ್ಯತ್ಯಾಸಕ್ಕಿಂತ ಹೆಚ್ಚಾಗಿದ್ದರೆ, ಆಗ ಮೇಲೆ ತಿಳಿಸಿದ ಮೊದಲನೆ ಗುಣಲಬ್ಧವನ್ನು ಎರಡನೆಯ ಗುಣಲಬ್ಧದೊಂದಿಗೆ ಸೇರಿಸುತ್ತೇವೆ. ಈ ರೀತಿ ಬೇಕಾದ ಘನಗಳ ಮೊತ್ತವು ದೊರೆಯುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

೩೦೪. ಪ್ರಥಮ ಪದ ೩, ಸಾಮಾನ್ಯ ವ್ಯತ್ಯಾಸ ೨ ಮತ್ತು ಪದಗಳ ಸಂಖ್ಯೆ ೫ ಅಥವಾ ಪ್ರಥಮ ಪದ ೫, ಸಾಮಾನ್ಯ ವ್ಯತ್ಯಾಸ ೭ ಮತ್ತು ಪದಗಳ ಸಂಖ್ಯೆ ೬ ಆಗಿದ್ದಾಗ, ಘನಗಳ ಮೊತ್ತವೇನಾಗಬಹುದು?

---

**303.** Algebraically, $\pm sa\ (a \sim b) + s^2 b$ = the sum of the cubes of the terms in a series in arithmetical progression, where $s$ = the sum of the simple terms of the series. The sign of the first term in the formula is + or - according as $a >$ or $< b$.

೩೦೩. ಬೀಜಗಣಿತರೂಪದಲ್ಲಿ, $\pm$ *ಶಲ* $(ಅ \sim ಬ) + ಶ^2\ ಬ$ = ಕಲನ ಶ್ರೇಣಿಯ ಪದಗಳ ಘನಗಳ ಮೊತ್ತ. ಇಲ್ಲಿ *ಶ*, ಶ್ರೇಣಿಯ ಸರಳ ಪದಗಳ ಮೊತ್ತವಾಗಿದೆ, ಸೂತ್ರದಲ್ಲಿ ಪ್ರಥಮ ಪದದ ಚಿಹ್ನೆಯು $ಅ > ಬ$ ಆಗಿದ್ದಾಗ + (ಧನ) ವಾಗಿರುತ್ತದೆ ಮತ್ತು $ಅ < ಬ$ ಆಗಿದ್ದಾಗ ಇದು - (ಋಣ) ವಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



सङ्कलितसङ्कलितानयनसूत्रम् -
द्विगुणैकोनपदोत्तरकृतिहतिरङ्गाहृता चयार्धयुता । आदिचयाहतियुक्ता व्येकपदघ्नादिगुणितेन ।।
सैकप्रभवेन युता पददलगुणितैव चितिचितिका ॥ ३०५$\frac{1}{2}$॥

---

Saṅkalitasaṅkalitānayanasūtram -

**305$\frac{1}{2}$.** Dviguṇaikonapadottarakṛtihatiraṅgāhṛtā cayārdhayutā, ādicayāhatiyuktā vyekapadaghnādiguṇitena, saikaprabhavena yutā padadalaguṇitaiva citicitikā.

---

The rule for arriving at the sum of (a number of terms in a series wherein the terms themselves are successively) the sums of the natural numbers (from 1 up to a specified limit, these limiting numbers being the terms in the given series in arithmetical progression) :

**305-305$\frac{1}{2}$.** Twice the number of terms (in the given series in arithmetical progression) is diminished by one and (then) multiplied by the square of the common difference. This product is divided by six and increased by half of the common difference and (also) by the product of the first term and the common difference. The sum (so obtained) is multiplied by the number of terms as diminished by one and then increased by the product obtained by multiplying the first term as increased by one by the first term itself. The quantity (so resulting) when multiplied by half the number of terms (in the given series) gives rise to the required sum of the series wherein the terms themselves are sums (of specified series).

---

ಪದಗಳು ಉತ್ತರೋತ್ತರವಾಗಿ ೧ ರಿಂದ ನಿರ್ದಿಷ್ಟ ಸೀಮೆಯವರೆಗೆ ಸಹಜ ಸಂಖ್ಯೆಗಳ ಮೊತ್ತವಾಗಿರುವ ಹಾಗೂ ಈ ಸೀಮಿತ ಸಂಖ್ಯೆಗಳು ಕೊಟ್ಟಿರುವ ಕಲನಶ್ರೇಣಿಯ ಪದಗಳಾಗಿರುವಂತಹ ಶ್ರೇಣಿಯ, ಕೊಟ್ಟಿರುವ ಸಂಖ್ಯೆಯ ಪದಗಳ ಮೊತ್ತವನ್ನು ಪಡೆಯಲು ನಿಯಮ :

೩೦೫-೩೦೫$\frac{೧}{೨}$. ಕೊಟ್ಟಿರುವ ಕಲನಶ್ರೇಣಿಯಲ್ಲಿ, ಪದಗಳ ಸಂಖ್ಯೆಯ ಎರಡರಷ್ಟನ್ನು ಒಂದರಿಂದ ಕಡಿಮೆಮಾಡಲಾಗುತ್ತದೆ. ನಂತರ ಸಾಮಾನ್ಯ ವ್ಯತ್ಯಾಸದ ವರ್ಗದಿಂದ ಗುಣಿಸಲಾಗುತ್ತದೆ. ಈ ಗುಣಲಬ್ಧವನ್ನು ೬ ರಿಂದ ಭಾಗಿಸಲಾಗುತ್ತದೆ ಮತ್ತು (ಪ್ರಾಪ್ತವಾದ ಫಲವನ್ನು) ಸಾಮಾನ್ಯ ವ್ಯತ್ಯಾಸದ ಅರ್ಧಭಾಗದೊಂದಿಗೆ ಸೇರಿಸಲಾಗುತ್ತದೆ ಮತ್ತು (ಜೊತೆಗೆ) ಪ್ರಥಮ ಪದ ಮತ್ತು ಸಾಮಾನ್ಯ ವ್ಯತ್ಯಾಸಗಳ ಗುಣಲಬ್ಧವನ್ನೂ ಸಹ ಸೇರಿಸಲಾಗುತ್ತದೆ. ಹೀಗೆ ದೊರೆತ ಮೊತ್ತವನ್ನು ಒಂದನ್ನು ಕಡಿಮೆಮಾಡಿದ ಪದಗಳ ಸಂಖ್ಯೆಯಿಂದ ಗುಣಿಸಲಾಗುತ್ತದೆ. ಬಂದ ಗುಣಲಬ್ಧವನ್ನು ಪ್ರಥಮ ಪದ ಹಾಗೂ ೧ ರಲ್ಲಿ ಪ್ರಥಮ ಪದವನ್ನು ಸೇರಿಸುವುದರಿಂದ ದೊರೆತ ಸಂಖ್ಯೆಯ ಗುಣಲಬ್ಧದೊಂದಿಗೆ ಸೇರಿಸಲಾಗುತ್ತದೆ. ಈ ರೀತಿ ಪ್ರಾಪ್ತವಾದ ಸಂಖ್ಯೆಯನ್ನು ಶ್ರೇಣಿಯ ಪದಗಳ ಸಂಖ್ಯೆಯ ಅರ್ಧಭಾಗದಿಂದ ಗುಣಿಸಿದರೆ, ಪದಗಳೇ ನಿರ್ದಿಷ್ಟ ಶ್ರೇಣಿಯ ಮೊತ್ತವಾಗಿರುವಂತಹ ಶ್ರೇಣಿಯ ಬೇಕಾದ ಮೊತ್ತವು ಲಭಿಸುತ್ತದೆ.

---

**305-305$\frac{1}{2}$.** Algebraically, $\left\{\left(\frac{(2n-1)b^2}{6} + \frac{b}{2} + ab\right)(n-1) + a(a+1)\right\}\frac{n}{2}$ is the sum of the series in arithmetical progression, wherein each term, represents the sum of a series of natural numbers up to a limiting number, which is itself a member in a series in arithmetical progression.

೩೦೫-೩೦೫$\frac{೧}{೨}$. ಬೀಜಗಣಿತರೂಪದಲ್ಲಿ, $\left\{\left(\frac{(೨ನ-೧)ಬ^೨}{೬} + \frac{ಬ}{೨} + ಅಬ\right)(ನ-೧) + ಅ(ಅ+೧)\right\}\frac{ನ}{೨}$ ಕಲನ ಶ್ರೇಣಿಯ ಮೊತ್ತವಾಗಿದೆ. ಇಲ್ಲಿ ಪ್ರತಿಯೊಂದು ಪದವು ಒಂದು ಸೀಮಿತ ಸಂಖ್ಯೆಯವರೆಗಿನ ಸಹಜ ಸಂಖ್ಯೆಗಳನ್ನುಳ್ಳ ಶ್ರೇಣಿಯ ಮೊತ್ತದ ನಿರೂಪಣೆಯನ್ನು ಮಾಡುತ್ತದೆ. ಈ ಸೀಮಿತ ಸಂಖ್ಯೆಯು ಒಂದು ಕಲನಶ್ರೇಣಿಯ ಒಂದು ಪದವಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

आदिष्ट् पञ्च चयः पदमप्यष्टादशाथ सन्दृष्टम् ।
एकाद्येकोत्तरचितिसङ्कलितं किं पदाष्टदशकस्य ॥ ३०६$\frac{1}{2}$॥
चतुस्सङ्कलितानयनसूत्रम् -
सैकपदार्धपदाहतिरश्वैर्निहता पदोनिता त्र्याप्ता ।
सैकपदघ्ना चितिचितिचितिकृतिघनसंयुतिर्भवति ॥ ३०७$\frac{1}{2}$॥

---

## Atroddeśakaḥ

**306$\frac{1}{2}$.** Ādiṣṣaṭ pañca cayaḥ padamapyaṣṭādaśātha sandṛṣṭam,
ekādyekottaracitisaṅkalitaṁ kiṁ padāṣṭadaśakasya.

Catussaṅkalitānayanasūtram -

**307$\frac{1}{2}$.** Saikapadārdhapadāhatiraśvairnihatā padonitā tryāptā, saikapadaghnā citiciticitikṛtighanasaṁyutirbhavati.

---

## *Examples in illustration thereof*

**306$\frac{1}{2}$.** It is seen that (in a given series) the first term is 6, the common difference 5 and the number of terms 18. In relation to (those) 18 terms, what is the sum of the sums of (the various) series having 1 for the first term and 1 for the common difference.

The rule for arriving at the sum of the four quantities (specified below and represented by a certain given number) :

**307$\frac{1}{2}$.** The given number is increased by one and (then) halved. This is multiplied by the given number and (then) by seven. From the (resulting) product, the given number is subtracted and the (resulting) remainder is divided by three. The quotient (thus obtained), when multiplied by the given number as increased by one, gives rise to the (required) sum of (the four specified quantities, namely) the sum of the natural numbers (up to the given number), the sum of the sums of the natural numbers (up to the given number), the square (of the given number) and the cube (of the given number).

---

## ಉದಾಹರಣೆಯಿಂದ ವಿಶ್ಲೇಷಣ

೩೦೬$\frac{೧}{೨}$. ಕೊಟ್ಟಿರುವ ಒಂದು ಶ್ರೇಣಿಯಲ್ಲಿ ಪ್ರಥಮ ಪದ ೬, ಸಾಮಾನ್ಯ ವ್ಯತ್ಯಾಸ ೫ ಮತ್ತು ಪದಗಳ ಸಂಖ್ಯೆ ೧೮ ಎಂದು ನೋಡಲಾಯಿತು. ಈ ೧೮ ಪದಗಳ ಸಂಬಂಧದಲ್ಲಿ, ೧ ನ್ನು ಪ್ರಥಮ ಪದವನ್ನಾಗಿ ಮತ್ತು ೧ ನ್ನು ಸಾಮಾನ್ಯ ವ್ಯತ್ಯಾಸವನ್ನಾಗಿ ಉಳ್ಳ, ವಿಭಿನ್ನ ಶ್ರೇಣಿಗಳ ಮೊತ್ತಗಳ ಮೊತ್ತವೇನು?

(ಕೆಳಗೆ ತಿಳಿಸಿರುವ ನಿರ್ದಿಷ್ಟವಾದ ಮತ್ತು ಒಂದು ಕೊಟ್ಟಿರುವ ಸಂಖ್ಯೆಯಿಂದ ನಿರೂಪಿತವಾಗಿರುವ) ನಾಲ್ಕು ಸಂಖ್ಯೆಗಳ ಮೊತ್ತವನ್ನು ಪಡೆಯಲು ನಿಯಮ :

೩೦೭$\frac{೧}{೨}$. ಕೊಟ್ಟಿರುವ ಸಂಖ್ಯೆಯನ್ನು ಒಂದರಿಂದ ಹೆಚ್ಚಿಸಲಾಗುತ್ತದೆ. ನಂತರ ಅರ್ಧಮಾಡಲಾಗುತ್ತದೆ. ಇದನ್ನು ಕೊಟ್ಟಿರುವ ಸಂಖ್ಯೆಯಿಂದ ಮತ್ತು (ನಂತರ) ೭ ರಿಂದ ಗುಣಿಸಲಾಗುತ್ತದೆ. ಹೀಗೆ ಲಭಿಸಿದ ಗುಣಲಬ್ಧದಿಂದ, ಕೊಟ್ಟಿರುವ ಸಂಖ್ಯೆಯನ್ನು ಕಳೆಯಲಾಗುತ್ತದೆ ಮತ್ತು ಶೇಷವನ್ನು ಮೂರರಿಂದ ಭಾಗಿಸಲಾಗುತ್ತದೆ. ಬಂದ ಭಾಗಲಬ್ಧವನ್ನು, ಒಂದನ್ನು ಸೇರಿಸಿದ ಕೊಟ್ಟಿರುವ ಸಂಖ್ಯೆಯಿಂದ ಗುಣಿಸಿದಾಗ ಅದು, (ನಾಲ್ಕು ನಿರ್ದಿಷ್ಟ ಸಂಖ್ಯೆಗಳು ಅಂದರೆ) ಕೊಟ್ಟಿರುವ ಸಂಖ್ಯೆಯವರೆಗಿನ ಸಹಜ ಸಂಖ್ಯೆಗಳ ಮೊತ್ತ, ಕೊಟ್ಟಿರುವ ಸಂಖ್ಯೆಯವರೆಗಿನ ಸಹಜ ಸಂಖ್ಯೆಗಳ ಮೊತ್ತಗಳ ಮೊತ್ತ, ಕೊಟ್ಟಿರುವ ಸಂಖ್ಯೆಯ ವರ್ಗ ಮತ್ತು ಕೊಟ್ಟಿರುವ ಸಂಖ್ಯೆಯ ಘನ-ಇವುಗಳ ಬೇಕಾದ ಮೊತ್ತವಾಗಿ ಪರಿಣಮಿಸುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**307½.** Algebraically, $\frac{\frac{n \times (n+1) \times 7}{2} - n}{3} \times (n+1)$ is the sum of the four quantities specified in the rule. These are (i) the sum of the natural numbers up to n (ii) the sum of the sums of the various series of natural numbers respectively limited by the various natural numbers up to n (iii) the square of $n$ and (iv) the cube of $n$.

**೩೦೭½.** ಬೀಜಗಣಿತರೂಪದಲ್ಲಿ $\frac{\frac{ನ \times (ನ+೧) \times ೭}{೨} - ನ}{೩} \times (ನ+೧)$ ಈ ನಿಯಮದಲ್ಲಿನ ನಿರ್ದಿಷ್ಟವಾದ ನಾಲ್ಕು ರಾಶಿಗಳ ಮೊತ್ತವಾಗಿದೆ. ಇವುಗಳು ಕ್ರಮವಾಗಿ (೧) ನ ಸಹಜ ಸಂಖ್ಯೆಗಳವರೆಗಿನ ಮೊತ್ತ (೨) ನ ವರೆಗಿನ ವಿಭಿನ್ನ ಸಹಜ ಸಂಖ್ಯೆಗಳಿಂದ ಕ್ರಮವಾಗಿ ಸೀಮಿತವಾದ ವಿಭಿನ್ನ ಸಹಜ ಸಂಖ್ಯೆಗಳ ಮೊತ್ತ (೩) ನ ದ ವರ್ಗ ಮತ್ತು (೪) ನ ದ ಘನಗಳಾಗಿವೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

सप्ताष्टनवदशानां षोडशपञ्चाशदेकषष्टीनाम् ।
ब्रूहि चतुःसङ्कलितं सूत्राणि पृथक् पृथक् कृत्वा ॥ ३०८$\frac{1}{2}$॥
सङ्घातसङ्कलितानयनसूत्रम् -
गच्छस्त्रिरूपसहितो गच्छचतुर्भागताडितस्सैकः ।
सपदपदकृतिविनिघ्नो भवति हि सङ्घातसङ्कलितम् ॥ ३०९$\frac{1}{2}$॥

---

## Atroddeśakaḥ

**308$\frac{1}{2}$.** Saptāṣṭanavadaśānāṁ ṣoḍaśapañcāśadekaṣaṣṭīnām, brūhi catuḥ saṅkalitaṁ sūtrāṇi pṛthak pṛthak kṛtvā.

Saṅghātasaṅkalitānayanasūtram -

**309$\frac{1}{2}$.** Gacchastrirūpasahito gacchacaturbhāgatāḍitassaikaḥ, sapadapadakṛtivinighno bhavati hi saṅghātasaṅkalitam.

---

## *Examples in illustration thereof*

**308$\frac{1}{2}$.** The given numbers are 7, 8, 9, 10, 16, 50 and 61. Taking into consideration the required rules, separately give out in the case of each of them the sum of the four (specified) quantities.

The rule for arriving at the collective sum (of the four different kinds of series already dealt with) :

**309$\frac{1}{2}$.** The number of terms is combined with three; it is (then) multiplied by the fourth part of the number of terms; (then) one is added (thereunto). The (resulting) quantity when multiplied by the square of the number of terms as increased by the number of terms gives rise to the (required) collective sum.

---

## ಉದಾಹರಣೆಗಳಿಂದ ವಿಶ್ಲೇಷಣ

೩೦೮$\frac{೧}{೨}$. ಕೊಟ್ಟಿರುವ ಸಂಖ್ಯೆಗಳು ೭, ೮, ೯, ೧೦, ೧೬, ೫೦ ಮತ್ತು ೬೧. ಬೇಕಾದ ನಿಯಮಗಳನ್ನು ಗಣನೆಗೆ ತೆಗೆದುಕೊಂಡು, ಅವುಗಳಲ್ಲಿ ಪ್ರತಿಯೊಂದು ಪ್ರಕರಣದಲ್ಲಿ ನಾಲ್ಕು ನಿರ್ದಿಷ್ಟವಾದ ರಾಶಿಗಳ ಮೊತ್ತವನ್ನು ಬೇರೆ ಬೇರೆಯಾಗಿ ತಿಳಿಸು.

(ಈಗಾಗಲೇ ವ್ಯವಹರಿಸಿದ ನಾಲ್ಕು ಪ್ರಕಾರಗಳ ಶ್ರೇಣಿಗಳ) ಸಾಮೂಹಿಕ ಮೊತ್ತವನ್ನು ಪಡೆಯಲು ನಿಯಮ:

೩೦೯$\frac{೧}{೨}$. ಪದಗಳ ಸಂಖ್ಯೆಯನ್ನು ೩ ರಲ್ಲಿ ಸೇರಿಸುತ್ತೇವೆ. (ನಂತರ) ಇದನ್ನು ಪದಗಳ ಸಂಖ್ಯೆಯ ನಾಲ್ಕನೆಯ ಭಾಗದಿಂದ ಗುಣಿಸುತ್ತೇವೆ. (ನಂತರ) ಇದರಲ್ಲಿ ಒಂದನ್ನು ಸೇರಿಸಲಾಗುತ್ತದೆ. ಈ ರೀತಿ ದೊರೆತ ರಾಶಿಯನ್ನು, ಪದಗಳ ಸಂಖ್ಯೆಯ ವರ್ಗವನ್ನು ಪದಗಳ ಸಂಖ್ಯೆಯಿಂದ ಹೆಚ್ಚಿಸಿದ್ದರಿಂದ ಲಭಿಸಿದ ರಾಶಿಯಿಂದ ಗುಣಿಸಿದರೆ, (ಬೇಕಾದ) ಸಾಮೂಹಿಕ ಮೊತ್ತವು ಪ್ರಾಪ್ತವಾಗುತ್ತದೆ.

---

**309$\frac{1}{2}$.** Algebraically, $\left\{(n+3)\frac{n}{4}+1\right\}(n^2+n)$ is the collective sum of the sums, namely, of the sums of the different series dealt with in rules 296, 301, 305 to 305$\frac{1}{2}$ above and also of the sum of the series of natural numbers up to $n$.

೩೦೯$\frac{೧}{೨}$. ಬೀಜಗಣಿತರೂಪದಲ್ಲಿ, $\left\{(ನ+೩)\frac{ನ}{೪}+೧\right\}(ನ^೨+ನ)$ ವು ಮೊತ್ತಗಳ ಸಾಮೂಹಿಕ ಮೊತ್ತವಾಗಿದೆ. ಅಂದರೆ ೨೯೬, ೩೦೧ ಮತ್ತು ೩೦೫ ರಿಂದ ೩೦೫$\frac{೧}{೨}$ ನಿಯಮಗಳಲ್ಲಿ ತಿಳಿಸಲಾದ ಶ್ರೇಣಿಗಳ ಮೊತ್ತಗಳು ಹಾಗೂ ನ ವರೆಗಿನ ಸಹಜ ಸಂಖ್ಯೆಗಳ ಮೊತ್ತ (ಈ ಎಲ್ಲಾ ಮೊತ್ತ) ಗಳ ಸಾಮೂಹಿಕ ಮೊತ್ತವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अत्रोद्देशकः

सप्तकृतेः षट्षष्ट्यास्त्रयोदशानां चतुर्दशानां च ।
पञ्चाग्रविंशतीनां किं स्यात् सङ्घातसङ्कलितम् ॥ ३१०$\frac{1}{2}$॥
भिन्नगुणसङ्कलितानयनसूत्रम् -
समदलविषमखरूपं गुणगुणितं वर्गताडितं द्विष्ठम् ।
अंशाप्तं व्येकं फलमाद्यन्यघ्नं गुणोनरूपहृतम् ॥ ३११$\frac{1}{2}$॥

**Atroddeśakaḥ**

**310$\frac{1}{2}$.** Saptakṛteḥ ṣaṭṣaṣṭyāstrayodaśānāṁ caturdaśānāṁ ca,
pañcāgraviṁśatīnāṁ kiṁ syāt saṅghātasaṅkalitam.

Bhinnaguṇasaṅkalitānayanasūtram -

**311$\frac{1}{2}$.** Samadalaviṣamakharūpaṁ guṇaguṇitaṁ vargatāḍitaṁ dviṣṭam,
aṁśāptaṁ vyekaṁ phalamādyanyaghnaṁ guṇonarūpahṛtam.

***Examples in illustration thereof***

**310$\frac{1}{2}$.** What would be the (required) collective sum in relation to the (various) series represented by (each of) 49, 66, 13, 14 and 25?

The rule for arriving at the sum of a series of fractions in geometrical progression :

**311$\frac{1}{2}$.** The number of terms (in the series) is caused to be marked (in a separate column) by zero and by one (respectively), corresponding to the even (value) which is halved and to the uneven (value from which one is subtracted, till by continuing these processes zero is ultimately reached); then this (representative series made up of zero and one is used in order from the last one therein, so that this one multiplied by the common ratio is again) multiplied by the common ratio (wherever one happens to be the denoting item) and multiplied so as to obtain the square (wherever zero happens to be the denoting item). The result (of this operation) is written down in two positions. (In one of them, what happens to be) the numerator in the result (thus obtained) is divided (by the result itself; then) one is subtracted (from it); the (resulting) quantity is multiplied by the first term (in the series) and (then) by (the quantity placed in) the other (of the two positions noted above). The product (so obtained), when divided by one as diminished by the common ratio, gives rise to the required sum of the series.

**ಉದಾಹರಣೆಗಳಿಂದ ವಿಶ್ಲೇಷಣ**

೩೧೦ $\frac{೧}{೨}$. ೪೯, ೬೬, ೧೩, ೧೪ ಮತ್ತು ೨೫ ರಿಂದ ನಿರೂಪಿತವಾದ ವಿಭಿನ್ನ ಶ್ರೇಣಿಗಳ ಸಂಬಂಧದಲ್ಲಿ (ಬೇಕಾದ) ಸಾಮೂಹಿಕ ಮೊತ್ತವೇನಾಗುತ್ತದೆ?

ಗುಣೋತ್ತರ ಶ್ರೇಣಿಯಲ್ಲಿ ಭಿನ್ನರಾಶಿಗಳ ಶ್ರೇಣಿಯ ಮೊತ್ತವನ್ನು ಪಡೆಯಲು ನಿಯಮ :

೩೧೧ $\frac{೧}{೨}$. ಶ್ರೇಣಿಯ ಪದಗಳ ಸಂಖ್ಯೆಯನ್ನು ಬೇರೆ ಬೇರೆ ಸ್ತಂಭಗಳಲ್ಲಿ ಕ್ರಮವಾಗಿ ಶೂನ್ಯ ಹಾಗೂ ೧ ರಿಂದ ಗುರುತು ಮಾಡಲಾಗುತ್ತದೆ. ಗುರುತುಮಾಡುವ ವಿಧಾನವೆಂದರೆ : ಸಮಬೆಲೆಯನ್ನು ಅರ್ಧಮಾಡಲಾಗುತ್ತದೆ. ಮತ್ತು ಬೆಸ ಬೆಲೆಯಿಂದ ೧ ನ್ನು ಕಳೆಯಲಾಗುತ್ತದೆ. ಈ ವಿಧಾನಗಳನ್ನು ಅಂತಿಮವಾಗಿ ಶೂನ್ಯ ತಲುಪುವವರೆಗೂ ಮುಂದುವರೆಸಲಾಗುತ್ತದೆ. ನಂತರ ಈ ಶೂನ್ಯ ಮತ್ತು ೧ ರಿಂದ ನಿರೂಪಿತವಾಗಿರುವ ಶ್ರೇಣಿಯನ್ನು, ಕ್ರಮವಾಗಿ ಅಂತಿಮ ೧ ರಿಂದ ಉಪಯೋಗಕ್ಕೆ ತರಲಾಗುತ್ತದೆ, ಈ ೧ ಸಾಮಾನ್ಯ ನಿಷ್ಪತ್ತಿಯಿಂದ ಗುಣಿಸಲ್ಪಡುತ್ತದೆ. ಎಲ್ಲಿ ೧ ಸೂಚಕ ಪದವಾಗಿರುತ್ತದೋ ಅಲ್ಲಿ ಇದನ್ನು ಪುನಃ ಸಾಮಾನ್ಯ ನಿಷ್ಪತ್ತಿಯಿಂದ ಗುಣಿಸಲಾಗುತ್ತದೆ ಮತ್ತು ಎಲ್ಲಿ ಶೂನ್ಯವು ಸೂಚಕ ಪದವಾಗಿರುತ್ತದೋ ಅಲ್ಲಿ ವರ್ಗವನ್ನು ಪಡೆಯುವ ಸಲುವಾಗಿ ಅದನ್ನು ಸಾಮಾನ್ಯ ನಿಷ್ಪತ್ತಿಯಿಂದ ಗುಣಿಸಲಾಗುತ್ತದೆ. ಈ ಕ್ರಿಯೆಯ ಫಲವನ್ನು ಎರಡು ಸ್ಥಾನಗಳಲ್ಲಿ ಬರೆಯಲಾಗುತ್ತದೆ. ಈ ರೀತಿ ಪ್ರಾಪ್ತವಾದ, ಒಂದು ಸ್ಥಾನದಲ್ಲಿ ಇಡಲಾದ ಫಲದ ಅಂಶವನ್ನು, ಫಲದಿಂದಲೇ ಭಾಗಿಸಲಾಗುತ್ತದೆ. ನಂತರ ಅದರಲ್ಲಿ ೧ ನ್ನು ಕಳೆಯಲಾಗುತ್ತದೆ. ಹೀಗೆ ದೊರೆತ ರಾಶಿಯನ್ನು ಶ್ರೇಣಿಯ ಪ್ರಥಮ ಪದದಿಂದ ಗುಣಿಸಲಾಗುತ್ತದೆ. ಅನಂತರ ಬೇರೊಂದು ಸ್ಥಾನದಲ್ಲಿ ಇಡಲಾದ ರಾಶಿಯಿಂದ ಗುಣಿಸಲಾಗುತ್ತದೆ. ಈ ಪ್ರಕಾರವಾಗಿ ಲಭಿಸಿದ ಗುಣಲಬ್ಧವನ್ನು ೧ ನ್ನು ಕಡಿಮೆಮಾಡಿದ ಸಾಮಾನ್ಯ ನಿಷ್ಪತ್ತಿಯಿಂದ ಭಾಗಿಸಿದರೆ, ಶ್ರೇಣಿಯ ಬೇಕಾದ ಮೊತ್ತವು ಉತ್ಪನ್ನವಾಗುತ್ತದೆ.

311$\frac{1}{2}$. In this rule, the numerator of the fractional common ratio is taken to be always 1. See stanza 94, Ch. II and the note thereunder.

೩೧೧ $\frac{೧}{೨}$. ಈ ನಿಯಮದಲ್ಲಿ ಭಿನ್ನಾತ್ಮಕವಾದ ಸಾಮಾನ್ಯ ನಿಷ್ಪತ್ತಿಯ ಅಂಶವನ್ನು ಯಾವಾಗಲೂ ೧ ಎಂದು ತೆಗೆದುಕೊಳ್ಳಲಾಗುತ್ತದೆ. ೨ ನೇ ಅಧ್ಯಾಯದ ೯೪ ನೇ ಶ್ಲೋಕವನ್ನು ಮತ್ತು ಅದರ ಕೆಳಗಿರುವ ಟಿಪ್ಪಣಿಯನ್ನು ನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

दीनारार्धं पञ्चसु नगरेषु चयस्त्रिभागोऽभूत् ।
आदिस्त्रयंशः पादो गुणोत्तरं सप्त भिन्नगुणचितिका ।
का भवति कथय शीघ्रं यदि तेऽस्ति परिश्रमो गणिते ॥ ३१३ ॥

---

**Atroddeśakaḥ**

**313.** Dīnārārdhaṁ pañcasu nagareṣu cayastribhāgo'bhūt, ādistryaṁśaḥ pādo guṇottaraṁ sapta bhinnaguṇacitikā, kā bhavati kathaya śighraṁ yadi te'sti pariśramo gaṇite.

---

***Examples in illustration thereof***

**312$\frac{1}{2}$-313.** In relation to 5 cities, (the first term is) $\frac{1}{2}$ dīnāra and the common ratio is $\frac{1}{3}$. (Find out the sum of the dīnāras obtained in all of them.) The first term is $\frac{1}{3}$, the common ratio is $\frac{1}{4}$ and 7 is the number of terms. If you are acquainted with calculation, then tell me quickly what the sum of the series of fractions in geometrical progression here is.

---

**ಉದಾಹರಣೆಗಳಿಂದ ವಿಶ್ಲೇಷಣ**

೩೧೨ $\frac{೧}{೨}$-೩೧೩. ೫ ಪಟ್ಟಣಗಳ ಸಂಬಂಧದಲ್ಲಿ, ಪ್ರಥಮ ಪದವು $\frac{೧}{೨}$ ದೀನಾರ ಮತ್ತು ಸಾಮಾನ್ಯ ನಿಷ್ಪತ್ತಿ $\frac{೧}{೩}$ (ಇವೆಲ್ಲವುಗಳಲ್ಲಿ ಪಡೆಯಲಾದ ದೀನಾರಗಳ ಮೊತ್ತವನ್ನು ಕಂಡುಹಿಡಿ). ಪ್ರಥಮ ಪದ $\frac{೧}{೩}$, ಸಾಮಾನ್ಯ ನಿಷ್ಪತ್ತಿ $\frac{೧}{೪}$ ಮತ್ತು ಪದಗಳ ಸಂಖ್ಯೆ ೭ ಆಗಿದೆ. ನೀನು ಲೆಕ್ಕಾಚಾರದಲ್ಲಿ ಪರಿಚಿತನಾಗಿದ್ದರೆ, ಇಲ್ಲಿ ಗುಣೋತ್ತರ ಶ್ರೇಣಿಯಲ್ಲಿರುವ ಭಿನ್ನರಾಶಿಗಳ ಶ್ರೇಣಿಯ ಮೊತ್ತವನ್ನು ನನಗೆ ಬೇಗನೆ ಹೇಳು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अधिकहीनगुणसङ्कलितानयनसूत्रम् -
गुणचितिरन्यादिहृता विपदाधिकहीनसङ्गुणा भक्ता ।
व्येकगुणेनान्या फलरहिता हीनेऽधिके तु फलयुक्ता ॥ ३१४ ॥

---

Adhikahīnaguṇasaṅkalitānayanasūtram -

**314.** Guṇacitiranyādihṛtā vipadādhikahīnasaṅguṇā bhaktā, vyekaguṇenānyā palarahitā hīne'dhike tu phalayuktā.

---

The rule for arriving at the sum of a series in geometrical progression wherein the terms are either increased or decreased (in a specified manner by a given known quantity) :

**314.** The sum of the series in (pure) geometrical progression (with the given first term, given common ratio and the given number of terms, is written down in two positions); one (of these sums so written down) is divided by the (given) first term. From the (resulting) quotient, the (given) number of terms is subtracted. The (resulting) remainder is (then) multiplied by the (given) quantity which is to be added to or to be subtracted (from the terms in the proposed series). The quantity (so arrived at) is (then) divided by the common ratio as diminished by one. (The sum of the series in pure geometrical progression written down in) the other (position) has to be diminished by the (last) resulting quotient quantity, if the given quantity is to be subtracted (from the terms is the series). If, however, it is to be added, (then the sum of the series in geometrical progression written down in the other position) has to be increased by the resulting quotient (already referred to. The result in either case gives the required sum of the specified series).

---

ಕೊಟ್ಟಿರುವ ಒಂದು ಗೊತ್ತಿರುವ ರಾಶಿಯಿಂದ ಒಂದು ನಿರ್ದಿಷ್ಟವಾದ ರೀತಿಯಲ್ಲಿ ಪದಗಳು ಹೆಚ್ಚುವಂತಹ ಅಥವಾ ಕುಗ್ಗುವಂತಹ ಗುಣೋತ್ತರ ಶ್ರೇಣಿಯ ಮೊತ್ತವನ್ನು ಪಡೆಯಲು ನಿಯಮ :

೩೧೪. ಕೊಟ್ಟಿರುವ ಪ್ರಥಮ ಪದ, ಸಾಮಾನ್ಯ ನಿಷ್ಪತ್ತಿ ಮತ್ತು ಪದಗಳ ಸಂಖ್ಯೆಯಿರುವ (ಶುದ್ಧವಾದ) ಗುಣೋತ್ತರ ಶ್ರೇಣಿಯ ಮೊತ್ತವನ್ನು ಎರಡು ಸ್ಥಾನಗಳಲ್ಲಿ ಬರೆಯಲಾಗುತ್ತದೆ. ಹೀಗೆ ಬರೆದ ಮೊತ್ತಗಳಲ್ಲಿ ಒಂದನ್ನು (ಕೊಟ್ಟಿರುವ) ಪ್ರಥಮ ಪದದಿಂದ ಭಾಗಿಸಲಾಗುತ್ತದೆ. ಬಂದ ಭಾಗಲಬ್ಧದಿಂದ (ಕೊಟ್ಟಿರುವ) ಪದಗಳ ಸಂಖ್ಯೆಯನ್ನು ಕಳೆಯಲಾಗುತ್ತದೆ. ಈ ರೀತಿ ಲಭಿಸಿದ ಶೇಷದ ಪ್ರಸ್ತಾಪಿಸಲಾದ ಶ್ರೇಣಿಯ ಪದಗಳಲ್ಲಿ, ಸೇರಿಸಬೇಕಾಗಿರುವ ಅಥವಾ ಅವುಗಳಿಂದ ಕಳೆಯಬೇಕಾಗಿರುವ ಕೊಟ್ಟಿರುವ ರಾಶಿಯಿಂದ ಗುಣಿಸಲಾಗುತ್ತದೆ. ಹೀಗೆ ಪ್ರಾಪ್ತವಾದ ರಾಶಿಯನ್ನು ಒಂದನ್ನು ಕಡಿಮೆ ಮಾಡಿದ ಸಾಮಾನ್ಯ ನಿಷ್ಪತ್ತಿಯಿಂದ ಭಾಗಿಸಲಾಗುತ್ತದೆ. ಇನ್ನೊಂದು ಸ್ಥಾನದಲ್ಲಿ ಇಡಲಾದ ಮೊತ್ತವನ್ನು, (ಶ್ರೇಣಿಯ ಪದಗಳಿಂದ ಕೊಟ್ಟಿರುವ ರಾಶಿಯನ್ನು ಕಳೆಯಬೇಕಾಗಿದ್ದರೆ) ಈ ಅಂತಿಮವಾಗಿ ದೊರೆತ ಭಾಗಲಬ್ಧದಿಂದ ಕಳೆಯಲಾಗುತ್ತದೆ. ಆದರೆ, ಒಂದು ವೇಳೆ ಕೂಡಬೇಕಾಗಿದ್ದರೆ ಆಗ ಇನ್ನೊಂದು ಸ್ಥಾನದಲ್ಲಿ ಇಡಲಾದ ಗುಣೋತ್ತರ ಶ್ರೇಣಿಯ ಮೊತ್ತವನ್ನು (ಈಗಾಗಲೇ ತಿಳಿಸಿದ) ಬಂದ ಭಾಗಲಬ್ಧದಿಂದ ಹೆಚ್ಚಿಸಲಾಗುತ್ತದೆ. ಪ್ರತಿಯೊಂದು ಪ್ರಕರಣದಲ್ಲಿ ಲಭಿಸುವ ಫಲವು, ನಿರ್ದಿಷ್ಟವಾದ ಶ್ರೇಣಿಯ ಬೇಕಾದ ಮೊತ್ತವಾಗಿರುತ್ತದೆ.

---

**314.** Algebraically, $\pm \left( \frac{s}{a} - n \right) m \div (r - 1) + s$ is the sum of the series of the following form :

$a, ar \pm m, (ar \pm m) r \pm m, \{(ar \pm m) r \pm m\} r \pm m$ and so on.

೩೧೪. ಬೀಜಗಣಿತರೂಪದಲ್ಲಿ, $\pm \left( \frac{ಶ}{ಆ} - ನ \right)$ ಮ ÷ (ರ - ೧) + ಶ ಇದು ಮುಂದೆ ತಿಳಿಸಿರುವ ರೀತಿಯ ಶ್ರೇಣಿಯ ಮೊತ್ತವಾಗಿದೆ. ಆ, ಆರ ± ಮ, (ಆರ ± ಮ) ರ ± ಮ, {(ಆರ ± ಮ)} ರ ± ಮ ..... ಇತ್ಯಾದಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

पञ्च गुणोत्तरमादिर्द्वौ त्रीण्यधिकं पदं हि चत्वारः ।
अधिकगुणोत्तरचितिका कथय विचिन्त्याशु गणिततत्त्वज्ञ ॥ ३१५ ॥
आदिस्त्रीणि गुणोत्तरमष्टौ हीनं द्वयं च दश गच्छः ।
हीनगुणोत्तरचितिका का भवति विचिन्त्य कथय गणकाशु ॥ ३१६ ॥

---

## Atroddeśakaḥ

**315.** Pañca guṇottaramādirdvau trīṇyadhikaṁ padaṁ hi catvāraḥ, adhikaguṇottaracitikā kathaya vicintyāśu gaṇitatattvajña.

**316.** Ādistrīṇi guṇottaramaṣṭau hīnaṁ dvayaṁ ca daśa gacchaḥ, hīnaguṇottaracitikā kā bhavati vicintya kathaya gaṇakāśu.

---

## *Examples in illustration thereof*

**315.** The common ratio is 5, the first term is 2 and the quantity to be added (to the various terms) is 3 and the number of terms is 4. O you who know the secret of calculation, think out and tell me quickly the sum of the series in geometrical progression, wherein the terms are increased (by the specified quantity in the specified manner).

**316.** The first term is 3, the common ratio is 8, the quantity to be subtracted (from the terms) is 2 and the number of terms is 10. O you mathematician, think out and tell me quickly what happens to be here the sum of the series in geometrical progression, whereof the terms are diminished (by the specified quantity in the specified manner).

---

## ಉದಾಹರಣೆಗಳಿಂದ ವಿಶ್ಲೇಷಣ

೩೧೫. ಸಾಮಾನ್ಯ ನಿಷ್ಪತ್ತಿ ೫, ಪ್ರಥಮ ಪದ ೨ ಮತ್ತು (ವಿಭಿನ್ನ ಪದಗಳಿಗೆ) ಸೇರಿಸಬೇಕಾಗಿರುವ ರಾಶಿ ೩ ಮತ್ತು ಪದಗಳ ಸಂಖ್ಯೆ ೪ ಆಗಿದೆ. ಎಲೈ ಗಣಿತತತ್ವಜ್ಞನೇ, ಯೋಚಿಸು ಮತ್ತು ನಿರ್ದಿಷ್ಟವಾದ ರೀತಿಯಲ್ಲಿ ನಿರ್ದಿಷ್ಟವಾದ ರಾಶಿಯಿಂದ ಹೆಚ್ಚಿಸಲ್ಪಡುವ ಪದಗಳಿರುವ ಗುಣೋತ್ತರ ಶ್ರೇಣಿಯ ಮೊತ್ತವನ್ನು ನನಗೆ ಶೀಘ್ರವಾಗಿ ಹೇಳು.

೩೧೬. ಪ್ರಥಮ ಪದ ೩, ಸಾಮಾನ್ಯ ನಿಷ್ಪತ್ತಿ ೮, (ಪದಗಳಿಂದ) ಕಳೆಯಬೇಕಾಗಿರುವ ರಾಶಿ ೨ ಮತ್ತು ಪದಗಳ ಸಂಖ್ಯೆ ೧೦ ಆಗಿದೆ. ಎಲೈ ಗಣಿತಜ್ಞನೇ, ಯೋಚಿಸು ಮತ್ತು ನಿರ್ದಿಷ್ಟವಾದ ರೀತಿಯಲ್ಲಿ ನಿರ್ದಿಷ್ಟವಾದ ರಾಶಿಯಿಂದ ಕಳೆಯಲ್ಪಡುವ ಪದಗಳಿರುವ ಗುಣೋತ್ತರ ಶ್ರೇಣಿಯ ಮೊತ್ತವು ಇಲ್ಲಿ ಏನಾಗಿರಬಹುದು ಎಂದು ನನಗೆ ಬೇಗನೆ ಹೇಳು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



आद्युत्तरगच्छधनमिश्राद्युत्तरगच्छानयनसूत्रम् -
मिश्रादुद्धृत्य पदं रूपोनेच्छाधनेन सैकेन । लब्धं प्रचयः शेषः सरूपपदभाजितः प्रभवः ॥ ३१७ ॥

**अत्रोद्देशकः**

आद्युत्तरपदमिश्रं पञ्चाशद्धनमिहैव सन्दृष्टम्। गणितज्ञाचक्ष्व त्वं प्रभवोत्तरपदधनान्याशु ॥ ३१८ ॥

---

Ādyuttaragacchadhanamiśrādyuttaragacchānayanasūtram -

**317.** Miśrāduddhṛtya padaṁ rūponecchādhanena saikena, labdhaṁ pracayaḥ śeṣaḥ sarūpapadabhājitaḥ prabhavaḥ.

**Atroddeśakaḥ**

**318.** Ādyuttarapadamiśraṁ pañcāśaddhanamihaiva sandṛṣṭam, gaṇitajñācakṣva tvaṁ prabhavottarapadadhanānyāśu.

---

The rule for arriving at the first term, the common difference and the number of terms, from the mixed sum of the first term, the common difference, the number of terms and the sum (of a given series in arithmetical progression) :

**317.** (An optionally chosen number representing) the number of terms (in the series) is subtracted from the (given) mixed sum. (Then) the sum of the natural numbers (beginning with one and going up to) one less than this optionally chosen number is combined with one. By means of this as the divisor (the remainder from the mixed sum as above obtained is divided). The quotient here happens to be the (required) common difference and the remainder (in this operation of division) when divided by the (above optionally chosen) number of terms as increased by one gives rise to the (required) first term.

***An example in illustration thereof***

**318.** It is seen here that the sum (of a series in arithmetical progression) as combined with the first term, the common difference and the number of terms (therein) is 50. O you who know calculation, give out quickly the first term, the common difference, the number of terms and the sum of the series (in this case).

---

ಕೊಟ್ಟಿರುವ ಒಂದು ಕಲನ ಶ್ರೇಣಿಯಲ್ಲಿ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ, ಪದಗಳ ಸಂಖ್ಯೆ ಮತ್ತು ಮೊತ್ತ- ಇವುಗಳ ಮಿಶ್ರಮೊತ್ತದಿಂದ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಪದಗಳ ಸಂಖ್ಯೆಗಳನ್ನು ಕಂಡುಹಿಡಿಯಲು ನಿಯಮ :

೩೧೭. ಶ್ರೇಣಿಯಲ್ಲಿ ಪದಗಳ ಸಂಖ್ಯೆಯನ್ನು ನಿರೂಪಿಸುವ ಮನಸ್ಸಿನಲ್ಲಿ ಆಯ್ದ ಸಂಖ್ಯೆಯನ್ನು, ಕೊಟ್ಟಿರುವ ಮಿಶ್ರ ಮೊತ್ತದಿಂದ ಕಳೆಯಲಾಗುತ್ತದೆ. (ನಂತರ) ೧ ರಿಂದ ಆರಂಭವಾಗಿ ಮತ್ತು ಈ ಮನಸ್ಸಿನಲ್ಲಿ ಆರಿಸಿದ ಸಂಖ್ಯೆಗಿಂತ ೧ ಕಡಿಮೆಯಾದ ಸಂಖ್ಯೆಯವರೆಗೂ ಹೋಗುವ ಸಹಜ ಸಂಖ್ಯೆಗಳ ಮೊತ್ತವನ್ನು ೧ ರೊಂದಿಗೆ ಸೇರಿಸಲಾಗುತ್ತದೆ. ಹೀಗೆ ದೊರೆತ ಫಲವನ್ನು ಭಾಜಕವೆಂದು ಪರಿಗಣಿಸಿ, ಮೇಲೆ ಹೇಳಿದ ಮಿಶ್ರಮೊತ್ತದಿಂದ ಬಂದ ಶೇಷವನ್ನು ಭಾಗಿಸಲಾಗುತ್ತದೆ. ಈ ಭಾಗಲಬ್ಧವು ಬೇಕಾದ ಸಾಮಾನ್ಯ ವ್ಯತ್ಯಾಸವಾಗಿರುತ್ತದೆ ಮತ್ತು ಈ ಭಾಗಾಹಾರ ಕ್ರಿಯೆಯಲ್ಲಿ ಉಳಿಯುವ ಶೇಷವನ್ನು, ಒಂದು ಅಧಿಕವಾಗಿರುವ (ಮನಸ್ಸಿನಲ್ಲಿ ಆಯ್ದ) ಪದಗಳ ಸಂಖ್ಯೆಯಿಂದ ಭಾಗಿಸಿದರೆ, ಬೇಕಾದ ಪ್ರಥಮ ಪದವು ಪ್ರಾಪ್ತವಾಗುತ್ತದೆ.

**ಉದಾಹರಣೆಯಿಂದ ವಿಶ್ಲೇಷಣ**

೩೧೮. ಒಂದು ಕಲನಶ್ರೇಣಿಯ ಮೊತ್ತವನ್ನು ಅದರ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ ಮತ್ತು ಪದಗಳ ಸಂಖ್ಯೆಯೊಂದಿಗೆ ಸೇರಿಸಿದಾಗ ಅದು ೫೦ ಎಂದು ಇಲ್ಲಿ ನೋಡಲಾಯಿತು. ಲೆಕ್ಕಾಚಾರ ತಿಳಿದಿರುವವನೇ, ಶ್ರೇಣಿಯ ಪ್ರಥಮ ಪದ, ಸಾಮಾನ್ಯ ವ್ಯತ್ಯಾಸ, ಪದಗಳ ಸಂಖ್ಯೆ ಮತ್ತು ಮೊತ್ತಗಳನ್ನು ಬೇಗನೆ ತಿಳಿಸು.

---

**317.** See stanzas 80-82 in Ch. II and the note relating to them.

೩೧೭. ೨ ನೇ ಅಧ್ಯಾಯದ ೮೦-೮೨ ಶ್ಲೋಕಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಟಿಪ್ಪಣಿಯನ್ನು ನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



सङ्कलितगतिध्रुवगतिभ्यां समानकालानयनसूत्रम् -
ध्रुवगतिरादिविहीनश्चयदलभक्तस्सरूपकः कालः ।
द्विगुणो मार्गस्तद्गतियोगहृतो योगकालस्स्यात् ॥ ३१९ ॥

---

Saṅkalitagatidhruvagatibhyāṁ samānakālānayanasūtram -

**319.** Dhruvagatirādivihīnaścayadalabhaktassarūpakaḥ kālaḥ, dviguṇo mārgastadgatiyogahṛto yogakālassyāt.

---

The rule for arriving at the common limit of time when one, who is moving (with successive velocities representable) as the terms in an arithmetical progression and another moving with steady unchanging velocity, may meet together again (after starting at the same instant of time) :

**319.** The unchanging velocity is diminished by the first term (of the velocities in series in arithmetical progression) and is (then) divided by the half of the common difference. On adding one (to the resulting quantity), the (required) time (of meeting) is arrived at. (Where two persons travel in opposite directions, each with a definite velocity), twice (the average distance to be covered by either of them) is the (whole) way (to be travelled). This when divided by the sum of their velocities gives rise to the time of (their) meeting.

---

ಇಬ್ಬರು ವ್ಯಕ್ತಿಗಳಲ್ಲಿ, ಒಬ್ಬನು ಕಲನ ಶ್ರೇಣಿಯ ಪದಗಳ ರೂಪದಲ್ಲಿ ನಿರೂಪಿತವಾದ ಉತ್ತರೋತ್ತರ ವೇಗಗಳೊಂದಿಗೆ ಚಲಿಸುತ್ತಿರುವಾಗ ಮತ್ತು ಇನ್ನೊಬ್ಬನು ಸ್ಥಿರವಾದ ಬದಲಾಯಿಸದ ವೇಗದೊಂದಿಗೆ ಚಲಿಸುತ್ತಿರುವಾಗ (ಇಬ್ಬರೂ ಒಟ್ಟಿಗೇ ಹೊರಟನಂತರ ಒಂದು ಜಾಗದಲ್ಲಿ) ಪುನಃ ಭೇಟಿಮಾಡಲು ಸಮಯದ ಸಮಾನ ಅವಧಿಯನ್ನು ಕಂಡುಹಿಡಿಯಲು ನಿಯಮ :

೩೧೯. ಬದಲಾಯಿಸದ ವೇಗವನ್ನು (ವೇಗಗಳ ಕಲನ ಶ್ರೇಣಿಯ)ಪ್ರಥಮ ಪದದಿಂದ ಕಳೆಯಲಾಗುತ್ತದೆ. ಅನಂತರ ಸಾಮಾನ್ಯ ವ್ಯತ್ಯಾಸದ ಅರ್ಧಭಾಗದಿಂದ ಭಾಗಿಸಲಾಗುತ್ತದೆ. ಹೀಗೆ ದೊರೆತ ರಾಶಿಗೆ ೧ ನ್ನು ಸೇರಿಸುವುದರಿಂದ, (ಮಿಲನದ) ಬೇಕಾದ ಸಮಯವು ದೊರೆಯುತ್ತದೆ. ಇಬ್ಬರು ವ್ಯಕ್ತಿಗಳಲ್ಲಿ ಪ್ರತಿಯೊಬ್ಬರೂ ಒಂದು ನಿಗದಿತ ವೇಗದಲ್ಲಿ ವಿರುದ್ಧ ದಿಕ್ಕಿನಲ್ಲಿ ಪ್ರಯಾಣಿಸಿದರೆ, ಅವರಲ್ಲಿ ಯಾರಾದರೂ ಒಬ್ಬರು ತಲುಪಬೇಕಾಗಿರುವ ಸರಾಸರಿ ದೂರದ ಎರಡರಷ್ಟು ಸಂಪೂರ್ಣವಾಗಿ ಪ್ರಯಾಣಿಸಬೇಕಾಗಿರುವ ದಾರಿಯಾಗಿರುತ್ತದೆ. ಇದನ್ನು ಅವರ ವೇಗಗಳ ಮೊತ್ತದಿಂದ ಭಾಗಿಸಿದರೆ ಅವರ ಮಿಲನದ ಸಮಯವು ಪ್ರಾಪ್ತವಾಗುತ್ತದೆ.

---

**319.** Algebraically, $(v - a) \div \frac{b}{2} + 1 = t$, where $v$ is the unchanging velocity, $b$ the common difference and $t$ the time.

೩೧೯. ಬೀಜಗಣಿತರೂಪದಲ್ಲಿ $(ವ - ಆ) \div \frac{ಬ}{೨} + ೧ = ಸ$, ಇಲ್ಲಿ ವ ಬದಲಾಯಿಸದ ವೇಗವಾಗಿದೆ, ಬ ಸಾಮಾನ್ಯ ವ್ಯತ್ಯಾಸವಾಗಿದೆ ಮತ್ತು ಸ ಸಮಯವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

कश्चिन्नरः प्रयाति त्रिभिरादा उत्तरैस्तथाष्टाभिः ।
नियतगतिरेकविंशतिरनयोः कः प्राप्तकालः स्यात् ॥ ३२० ॥

**अपरार्धोदाहरणम्**

षड् योजनानि कश्चित्पुरुषस्त्वपरः प्रयाति च त्रीणि । उभयोरभिमुखगत्योरष्टोत्तरशतकयोजनं - गम्यम् । प्रत्येकं च तयोः स्यात्कालः किं गणक कथय मे शीघ्रम् ॥ ३२१$\frac{1}{2}$॥

---

**Atroddeśakaḥ**

**320.** Kaścinnaraḥ prayāti tribhirādā uttaraistathāṣṭābhiḥ,
niyatagatirekaviṁśatiranayoḥ kaḥ prāptakālaḥ syāt.

**Aparardhodāharaṇam**

**321$\frac{1}{2}$.** Ṣaḍ yojanāni kaścitpuruṣastvaparaḥ prayāti ca trīṇi,
ubhayorabhimukhagatyoraṣṭottaraśatakayojanaṁ gamyam, pratyekaṁ ca tayoḥ
syātkālaḥ kiṁ gaṇaka kathaya me śīghram.

---

***An example in illustration thereof***

**320.** A certain person goes with a velocity of 3 in the beginning increased (regularly) by 8 as the (successive) common difference. The steady unchanging velocity (of another person) is 21. What may be the time of their meeting (again, if they start from the same place, at the same time and move in the same direction)?

**An example in illustration of the latter half (of the rule given in the stanza above).**

**321-321$\frac{1}{2}$.** One man travels at the rate of 6 yōjanas and another at the rate of 3 yōjanas. The (average) distance to be covered by either of them moving in opposite directions is 108 yōjanas. O arithmetician, tell me quickly what the time of their meeting together is.

---

**ಉದಾಹರಣೆಯಿಂದ ವಿಶ್ಲೇಷಣ**

೩೨೦. ಒಬ್ಬ ವ್ಯಕ್ತಿಯು ಆರಂಭದಲ್ಲಿ ೩ ರ ವೇಗದಿಂದ ಮತ್ತು ಉತ್ತರೋತ್ತರವಾಗಿ ಸಾಮಾನ್ಯ ವ್ಯತ್ಯಾಸ ೮ ರಿಂದ ನಿಯಮಿತ ರೂಪದಿಂದ ಹೆಚ್ಚುವಂತಹ ವೇಗದಿಂದ ಹೋಗುತ್ತಾನೆ. ಇನ್ನೊಬ್ಬ ವ್ಯಕ್ತಿಯ ಸ್ಥಿರವಾದ ನಿಶ್ಚಿತ ವೇಗವು ೨೧ ಆಗಿದೆ. (ಒಂದು ವೇಳೆ ಅವರು ಒಂದೇ ದಿಕ್ಕಿನಲ್ಲಿ, ಒಂದೇ ಸಮಯದಲ್ಲಿ ಅದೇ ಸ್ಥಾನದಿಂದ ಹೊರಟಿದ್ದರೆ, ಅವರು ಪುನಃ) ಭೇಟಿಯಾಗುವ ಸಮಯವೇನಾಗಬಹುದು?

**(ಮೇಲಿನ ಶ್ಲೋಕದ) ಉತ್ತರಾರ್ಧಕ್ಕಾಗಿ ಉದಾಹರಣೆಯೊಂದಿಗೆ ವಿಶ್ಲೇಷಣ**

೩೨೧-೩೨೧$\frac{1}{2}$. ಒಬ್ಬ ಮನುಷ್ಯನು ೬ ಯೋಜನಗಳ ದರದಲ್ಲಿ ಮತ್ತು ಇನ್ನೊಬ್ಬನು ೩ ಯೋಜನಗಳ ದರದಲ್ಲಿ ಪ್ರಯಾಣಿಸುತ್ತಾರೆ. ವಿರುದ್ಧ ದಿಕ್ಕುಗಳಲ್ಲಿ ಚಲಿಸುವ ಇವರಲ್ಲಿ ಯಾರಾದರೂ ಒಬ್ಬರು ತಲುಪಬೇಕಾಗಿರುವ (ಸರಾಸರಿ) ದೂರ ೧೦೮ ಯೋಜನಗಳು. ಎಲೈ ಗಣಿತಜ್ಞನೇ, ಅವರ ಮಿಲನದ ಸಮಯವೇನೆಂದು ನನಗೆ ಬೇಗನೆ ಹೇಳು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



सङ्कलितसमागमकालयोजनानयनसूत्रम् -
उभयोराद्योश्शेषश्चयशेषहृतो द्विसङ्गुणः सैकः ।
युगपत्प्रयाणयोस्स्यान्मार्गे तु समागमः कालः ॥ ३२२$\frac{1}{2}$॥

**अत्रोद्देशकः**

चत्वार्याद्यष्टोत्तरमेको गच्छत्यथो द्वितीयो ना ।
द्वौ प्रचयश्च दशादिः समागमे कस्तयोः कालः ॥ ३२३$\frac{1}{2}$॥

---

Saṅkalitasamāgamakālayojanānayanasūtram -

**322$\frac{1}{2}$.** Ubhayorādyośśeṣaścayaśeṣahṛto dvisaṅguṇaḥ saikaḥ, yugapat-prayāṇayossyānmārge tu samāgamaḥ kālaḥ.

**Atroddeśakaḥ**

**323$\frac{1}{2}$.** Catvāryādyaṣṭottarameko gacchatyatho dvitīyo nā, dvau pracayaśca daśādiḥ samāgame kastayoḥ kālaḥ.

---

The rule for arriving at the time and distance of meeting together, (when two persons start from the same place at the same time and travel) with (varying) velocities in arithmetical progression.

**322$\frac{1}{2}$.** The difference between the two first terms divided by the difference between the two common differences, when multiplied by two and increased by one, gives rise to the time of coming together on the way by the two persons travelling simultaneously (with two series of velocities varying in arithmetical progression).

***An example in illustration thereof***

**323$\frac{1}{2}$.** A person travels with velocities beginning with 4 and increasing (successively) by the common difference of 8. Again a second person travels with velocities beginning with 10 and increasing (successively) by the common difference of 2. What is the time of their meeting?

---

ಇಬ್ಬರು ವ್ಯಕ್ತಿಗಳು ಒಂದೇ ಸ್ಥಳದಿಂದ, ಒಂದೇ ಸಮಯದಲ್ಲಿ ಹೊರಟಾಗ ಮತ್ತು ಕಲನ ಶ್ರೇಣಿಯಲ್ಲಿರುವ ವೇಗಗಳೊಂದಿಗೆ ಪ್ರಯಾಣಿಸುತ್ತಿರುವಾಗ, ಅವರು ಸಂಧಿಸುವ ಸಮಯ ಮತ್ತು ದೂರಗಳನ್ನು ಪಡೆಯಲು ನಿಯಮ :

೩೨೨ $\frac{೧}{೨}$. ಎರಡು ಪ್ರಥಮ ಪದಗಳ ವ್ಯತ್ಯಾಸವನ್ನು, ಎರಡು ಸಾಮಾನ್ಯ ವ್ಯತ್ಯಾಸಗಳ ವ್ಯತ್ಯಾಸದಿಂದ ಭಾಗಿಸಿ, (ನಂತರ) ೨ ರಿಂದ ಗುಣಿಸಿ ಮತ್ತು ೧ ರಿಂದ ಹೆಚ್ಚಿಸಿದರೆ (ಕಲನ ಶ್ರೇಣಿಯಲ್ಲಿರುವ ವೇಗಗಳ ಎರಡು ಶ್ರೇಣಿಗಳೊಂದಿಗೆ) ಒಂದೇ ಸಮಯದಲ್ಲಿ ಪ್ರಯಾಣಿಸುತ್ತಿರುವ ಇಬ್ಬರು ವ್ಯಕ್ತಿಗಳು ಸಂಧಿಸುವ ಸಮಯವು ದೊರೆಯುತ್ತದೆ.

**ಉದಾಹರಣೆಯಿಂದ ವಿಶ್ಲೇಷಣ**

೩೨೩ $\frac{೧}{೨}$. ಒಬ್ಬ ವ್ಯಕ್ತಿಯು ೪ ರಿಂದ ಆರಂಭವಾಗುವ ಮತ್ತು (ಉತ್ತರೋತ್ತರವಾಗಿ) ಸಾಮಾನ್ಯ ವ್ಯತ್ಯಾಸ ೮ ರಿಂದ ಹೆಚ್ಚುವ ವೇಗಗಳೊಂದಿಗೆ ಪ್ರಯಾಣಿಸುತ್ತಾನೆ. ಪುನಃ ಎರಡನೆ ವ್ಯಕ್ತಿಯು ೧೦ ರಿಂದ ಆರಂಭವಾಗುವ ಮತ್ತು (ಉತ್ತರೋತ್ತರವಾಗಿ) ಸಾಮಾನ್ಯ ವ್ಯತ್ಯಾಸ ೨ ರಿಂದ ಹೆಚ್ಚುವ ವೇಗಗಳೊಂದಿಗೆ ಪ್ರಯಾಣಿಸುತ್ತಾನೆ. ಅವರು ಸಂಧಿಸುವ ಸಮಯವೇನು?

---

**322$\frac{1}{2}$. Algebraically,** $n = \frac{a \sim a_1}{b \sim b_1} \times 2 + 1.$

೩೨೨ $\frac{೧}{೨}$. ಬೀಜಗಣಿತರೂಪದಲ್ಲಿ, $ನ = \frac{ಅ \sim ಅ_೧}{ಬ \sim ಬ_೧} \times ೨ + ೧.$



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



वृद्ध्युत्तरहीनोत्तरयोस्समागमकालानयनसूत्रम् -
शेषश्चाद्योरुभयोश्चययुतदलभक्तरूपयुतः। युगपत्प्रयाणकृतयोर्मार्गे संयोगकालः स्यात् ॥ ३२४½॥

अत्रोद्देशकः

पञ्चाद्यष्टोत्तरतः प्रथमो नाथ द्वितीयनरः ।
आदिः पञ्चघ्नव प्रचयो हीनोऽष्ट योगकालः कः ॥ ३२५½॥

---

Vṛddhyuttarahīnottarayossamāgamakālānayanasūtram -

**324½.** Śeṣaścādyorubhayoścayayutadalabhaktarūpayutaḥ, yugapat-prayāṇakṛtayormārge saṁyogakālaḥ syāt.

**Atroddeśakaḥ**

**325½,** Pañcādyaṣṭottarataḥ prathamo nātha dvitīyanaraḥ, ādiḥ pañcaghnanava pracayo hīno'ṣṭa yogakālaḥ kaḥ.

---

The rule for arriving at the time of meeting of two persons (starting at the same time and travelling in the same direction with varying velocities in arithmetical progression), the common difference (in the one case) being positive and (in the other) negative :

**324½.** The difference between the two first terms is divided by half of the sum of the numbers representing the two (given) common differences and (then) one is added (to the resulting quantity). This becomes the time of meeting on the way by the two persons (starting at the same time and) travelling simultaneously (with velocities in arithmetical progression, the common difference in the one case being positive and in the other negative).

***An example in illustration thereof***

**325½.** The first man travels with velocities beginning with 5 and increased (successively) by 8 as the common difference. In the case of the second person, the commencing velocity is 45 and the common difference is minus 8. What is the time of meeting?

---

ಒಂದೇ ಸ್ಥಾನದಿಂದ ಹೊರಟು ಮತ್ತು ಒಂದೇ ದಿಕ್ಕಿನಲ್ಲಿ ಕಲನ ಶ್ರೇಣಿಯಲ್ಲಿ ಬದಲಾಯಿಸುವ ವೇಗಗಳಿಂದ ಪ್ರಯಾಣಿಸುವ ಇಬ್ಬರು ವ್ಯಕ್ತಿಗಳ (ಇವರಲ್ಲಿ, ಮೊದಲನೆಯ ಪ್ರಕರಣದಲ್ಲಿ ಸಾಮಾನ್ಯ ವ್ಯತ್ಯಾಸ ಧನಾತ್ಮಕವಾಗಿದೆ ಮತ್ತು ಇನ್ನೊಂದರಲ್ಲಿ ಋಣಾತ್ಮಕವಾಗಿದೆ) ಮಿಲನದ ಸಮಯವನ್ನು ಪಡೆಯಲು ನಿಯಮ:

೩೨೪ ½. ಎರಡು ಪ್ರಥಮ ಪದಗಳ ವ್ಯತ್ಯಾಸವನ್ನು, (ಕೊಟ್ಟಿರುವ) ಎರಡು ಸಾಮಾನ್ಯ ವ್ಯತ್ಯಾಸಗಳನ್ನು ನಿರೂಪಿಸುವ ಸಂಖ್ಯೆಗಳ ಮೊತ್ತದ ಅರ್ಧಭಾಗದಿಂದ ಭಾಗಿಸಲಾಗುತ್ತದೆ ಮತ್ತು (ನಂತರ, ಹೀಗೆ ದೊರೆತ ರಾಶಿಗೆ) ೧ ನ್ನು ಸೇರಿಸಲಾಗುತ್ತದೆ. ಇಬ್ಬರು ವ್ಯಕ್ತಿಗಳು (ಒಂದೇ ಸಮಯದಲ್ಲಿ ಹೊರಟು ಮತ್ತು) ಕಲನ ಶ್ರೇಣಿಯಲ್ಲಿರುವ ವೇಗಗಳೊಂದಿಗೆ (ಸಾಮಾನ್ಯ ವ್ಯತ್ಯಾಸ ಒಂದು ಪ್ರಕರಣದಲ್ಲಿ ಧನಾತ್ಮಕವಾಗಿದೆ ಮತ್ತು ಇನ್ನೊಂದರಲ್ಲಿ ಋಣಾತ್ಮಕವಾಗಿದೆ) ಒಟ್ಟಿಗೇ ಪ್ರಯಾಣಿಸುತ್ತಿರುವಾಗ, ಅವರು ದಾರಿಯಲ್ಲಿ ಸಂಧಿಸುವ ಸಮಯವು ಲಭಿಸುತ್ತದೆ.

**ಉದಾಹರಣೆಯಿಂದ ವಿಶ್ಲೇಷಣ**

೩೨೫ ½. ಪ್ರಥಮ ಮನುಷ್ಯನು ೫ ರಿಂದ ಆರಂಭವಾಗುವ ಮತ್ತು (ಉತ್ತರೋತ್ತರವಾಗಿ) ಸಾಮಾನ್ಯ ವ್ಯತ್ಯಾಸ ೮ ರಿಂದ ಹೆಚ್ಚುವ ವೇಗಗಳೊಂದಿಗೆ ಪ್ರಯಾಣಿಸುತ್ತಾನೆ, ಎರಡನೆ ವ್ಯಕ್ತಿಯ ಸಂಬಂಧದಲ್ಲಿ ಆರಂಭದ ವೇಗವು ೪೫ ಮತ್ತು ಸಾಮಾನ್ಯ ವ್ಯತ್ಯಾಸ ಋಣ ೮ ಆಗಿದೆ. ಅವರ ಮಿಲನದ ಸಮಯವೇನು?

---

**324½.** Compare this with the rule given in 322½ above.

೩೨೪ ½. ಇದನ್ನು ೩೨೨ ½ ಶ್ಲೋಕದಲ್ಲಿ ಕೊಟ್ಟಿರುವ ನಿಯಮದೊಂದಿಗೆ ಹೋಲಿಸಿನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



शीघ्रगतिमन्दगत्योस्समागमकालानयनसूत्रम् -
मन्दगतिशीघ्रगत्योरेकाशागमनमत्र गम्यं यत् ।
तद्गत्यन्तरभक्तं लब्धदिनैस्तैः प्रयाति शीघ्रोऽल्पम् ॥ ३२६$\frac{1}{2}$॥

**अत्रोद्देशकः**

नवयोजनानि कश्चित्प्रयाति योजनशतं गतं तेन ।
प्रतिदूतो व्रजति पुनस्त्रयोदशाप्नोति कैर्दिवसैः ॥ ३२७$\frac{1}{2}$॥

---

Śīghragatimandagatyossamāgamakālānayanasūtram -

**326$\frac{1}{2}$.** Mandagatisīghragatyorekāśāgamanamatra gamyaṁ yat, tadgatyantarabhaktaṁ labdhadinaistaiḥ prayāti śīghro'lpam.

**Atroddeśakaḥ**

**327$\frac{1}{2}$.** Navayojanāni kaścit prayātiyojanaśataṁ gataṁ tena, pratidūto vrajati punastrayodaśāpnoti kairdivasaiḥ.

---

The rule for arriving at the time of meeting of two persons, (starting at different times and) travelling (respectively) with a quicker and a less quick velocity (in the same direction) :

**326$\frac{1}{2}$.** He who travels less quickly and he who travels more quickly-both move in the same direction. What happens to be the distance to be overtaken here is divided by the difference between those (two) velocities. In the course of the number of days represented by the quotient (here), the more quickly moving person goes to the less quickly moving one.

***An example in illustration thereof***

**327$\frac{1}{2}$.** A certain person travels at the rate of 9 yōjanas (a day) and 100 yōjanas have already been gone over by him. Now, a messenger sent after him goes at the rate of 13 yōjanas (a day). In how many days will this (messenger) meet him?

---

ಬೇರೆ ಬೇರೆ ಸಮಯಗಳಲ್ಲಿ ಹೊರಡುವ ಮತ್ತು ಕ್ರಮವಾಗಿ ತೀವ್ರ ಮತ್ತು ಮಂದಗತಿಯಲ್ಲಿ ಒಂದೇ ದಿಕ್ಕಿನಲ್ಲಿ ಚಲಿಸುವ ಎರಡು ವ್ಯಕ್ತಿಗಳ ಮಿಲನದ ಸಮಯವನ್ನು ಪಡೆಯಲು ನಿಯಮ :

೩೨೬$\frac{೧}{೨}$. ಮಂದಗತಿಯಲ್ಲಿ ಮತ್ತು ತೀವ್ರಗತಿಯಲ್ಲಿ ಚಲಿಸುವ ಇಬ್ಬರೂ ಒಂದೇ ದಿಕ್ಕಿನಲ್ಲಿ ಚಲಿಸುತ್ತಾರೆ. ಇಲ್ಲಿ ಪ್ರಯಾಣಿಸಬೇಕಾಗಿರುವ ದೂರವನ್ನು, ಆ ಎರಡು ವೇಗಗಳ ವ್ಯತ್ಯಾಸದಿಂದ ಭಾಗಿಸಲಾಗುತ್ತದೆ, ಈ ಭಾಗಲಬ್ಧದಿಂದ ನಿರೂಪಿತವಾದ ದಿನಗಳಲ್ಲಿ ತೀವ್ರಗತಿಯಲ್ಲಿ ಚಲಿಸುವವನು ಮಂದಗತಿಯಲ್ಲಿ ಚಲಿಸುವವನ ಬಳಿಗೆ ಹೋಗುತ್ತಾನೆ.

**ಉದಾಹರಣೆಯಿಂದ ವಿಶ್ಲೇಷಣ**

೩೨೭$\frac{೧}{೨}$. ಒಬ್ಬ ವ್ಯಕ್ತಿಯು ದಿನಕ್ಕೆ ೯ ಯೋಜನಗಳ ದರದಲ್ಲಿ ಪ್ರಯಾಣಿಸುತ್ತಾನೆ ಮತ್ತು ಅವನಿಂದ ಈಗಾಗಲೇ ೧೦೦ ಯೋಜನಗಳು ಚಲಿಸಲ್ಪಟ್ಟಿವೆ. ಈಗ ಅವನ ನಂತರ ಕಳುಹಿಸಿದ ಒಬ್ಬ ಸಂದೇಶವಾಹಕನು ದಿನಕ್ಕೆ ೧೩ ಯೋಜನಗಳ ದರದಲ್ಲಿ ಹೋಗುತ್ತಾನೆ. ಈ ಸಂದೇಶವಾಹಕನು ಎಷ್ಟು ದಿನಗಳಲ್ಲಿ ಅವನನ್ನು ಸಂಧಿಸುವನು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



विषमबाणैस्सूणीरबाणपरिधिकरणसूत्रम् -
परिणाहस्त्रिभिरधिको दलितो वर्गीकृतस्त्रिभिर्भक्तः ।
सैकश्शरास्तु परिधेरानयने तत्र विपरीतम् ॥ ३२८$\frac{1}{2}$॥

**अत्रोद्देशकः**

नव परिधिस्तु शराणां संख्या न ज्ञायते पुनस्तेषाम् ।
त्र्युत्तरदशबाणास्तत्परिणाहशरांश्च कथय मे गणक ॥ ३२९$\frac{1}{2}$॥

---

Viṣamabāṇaissūṇīrabāṇaparidhikaraṇasūtram -

**328$\frac{1}{2}$.** Pariṇāhastribhiradhiko dalito vargīkṛtastribhirbhaktaḥ, saikaśśarāstu paridherānayane tatra viparītam.

**Atroddeśakaḥ**

**329$\frac{1}{2}$.** Nava paridhistu śarāṇāṁ saṅkhyā na jñāyate punasteṣām,
tryuttaradaśabāṇāstatpariṇāhaśarāṁśca kathaya me gaṇaka.

---

The rule for working out the circumferential number of arrows is the quiver with the aid of the (given) uneven number of arrows (contained in the quiver and vice versa) :

**328$\frac{1}{2}$.** The number of the circumferential arrows is increased by three and (then) halved. This is squared and (then) divided by three. On adding one (to the resulting quantity), the number of arrows (in the quiver) is obtained. When, however, the number of the circumferential arrows has to be arrived at, the reverse process is (to be adopted in relation to these operations).

***Examples in illustration thereof***

**329$\frac{1}{2}$.** The circumferential number of the arrows is 9. Their total number, however, is not known. (What is that?). The total number of arrows (in the quiver) is 13. Tell me, O arithmetician, the number of the circumferential arrows also in this case.

---

ಬತ್ತಳಿಕೆಯಲ್ಲಿ ತುಂಬಿರುವ (ಕೊಟ್ಟಿರುವ) ಬೆಸಸಂಖ್ಯೆಯ ಬಾಣಗಳ ಸಹಾಯದಿಂದ ಬತ್ತಳಿಕೆಯ ಬಾಣಗಳ ಪರಿಧಿಯ ಸಂಖ್ಯೆಯನ್ನು ಕಂಡುಹಿಡಿಯಲು (ಹಾಗೂ ವಿಲೋಮ ಕ್ರಮದಿಂದಲೂ ಪಡೆಯಲು) ನಿಯಮ :

೩೨೮$\frac{೧}{೨}$. ಪರಿಧಿಯ ಬಾಣಗಳ ಸಂಖ್ಯೆಯನ್ನು ೩ ರಿಂದ ಹೆಚ್ಚಿಸಲಾಗುತ್ತದೆ ಮತ್ತು (ನಂತರ) ಅರ್ಧಮಾಡಲಾಗುತ್ತದೆ. ಇದನ್ನು ವರ್ಗಮಾಡಲಾಗುತ್ತದೆ ಮತ್ತು (ನಂತರ) ೩ ರಿಂದ ಭಾಗಿಸಲಾಗುತ್ತದೆ. ಹೀಗೆ ದೊರೆತ ರಾಶಿಗೆ ೧ ನ್ನು ಸೇರಿಸುವುದರಿಂದ (ಬತ್ತಳಿಕೆಯಲ್ಲಿರುವ) ಬಾಣಗಳ ಸಂಖ್ಯೆಯು ದೊರೆಯುತ್ತದೆ. ಆದರೆ ಪರಿಧಿಯ ಬಾಣಗಳ ಸಂಖ್ಯೆಯನ್ನು ಪಡೆಯಬೇಕಾಗಿದ್ದಾಗ ಈ ಕ್ರಿಯೆಗಳ ಸಂಬಂಧದಲ್ಲಿ ವಿರುದ್ಧವಾದ ವಿಧಾನವನ್ನು ಅನುಸರಿಸಬೇಕಾಗುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

೩೨೯$\frac{೧}{೨}$. ಪರಿಧಿಯ ಬಾಣಗಳ ಸಂಖ್ಯೆ ೯. ಆದರೆ ಅವುಗಳ ಒಟ್ಟು ಸಂಖ್ಯೆ ತಿಳಿದಿಲ್ಲ. (ಅದು ಏನು?) (ಬತ್ತಳಿಕೆಯಲ್ಲಿರುವ) ಬಾಣಗಳ ಒಟ್ಟು ಸಂಖ್ಯೆಯು ೧೩ ಆಗಿದೆ. ಎಲ್ಲೆ ಅಂಕಗಣಿತಜ್ಞನೇ, ಈ ಪ್ರಕರಣದಲ್ಲಿ ಪರಿಧಿಯ ಬಾಣಗಳ ಸಂಖ್ಯೆಯನ್ನೂ ಸಹ ನನಗೆ ಹೇಳು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



श्रेढीबद्धे इष्टकानयनसूत्रम् -

तरवर्गो रूपोनस्त्रिभिर्विभक्तस्तरेण सङ्गुणितः ।
तरसङ्कलिते स्वेष्टप्रताडिते मिश्रतः सारम् ॥ ३३०$\frac{1}{2}$॥

---

Śreḍhībaddhe iṣṭakānayanasūtram -

**330$\frac{1}{2}$.** Taravargo rūponastribhirvibhaktastareṇa saṅguṇitaḥ, tara saṅkalite sveṣṭapratāḍite miśrataḥ sāram.

---

The rule for arriving at the number of bricks to be found in structures made up of layers (of bricks one over another) :

**330$\frac{1}{2}$.** The square of the number of layers is diminished by one, divided by three and (then), multiplied by the number of layers. On adding (to the quantity so obtained) the product, obtained by multiplying the optionally chosen number (representing the bricks in the topmost layer) by the sum of the (natural numbers beginning with one and going up to the given) number of layers, the required answer is obtained.

---

ಒಂದು ಭವನದ ಶ್ರೇಣೀಬದ್ಧ (ಒಂದರ ಮೇಲೆ ಇನ್ನೊಂದು ಇರುವ) ಇಟ್ಟಿಗೆಗಳ ಸಂಖ್ಯೆಯನ್ನು ಪಡೆಯಲು ನಿಯಮ :

೩೩೦$\frac{೧}{೨}$. ಪದರಗಳ ಸಂಖ್ಯೆಯ ವರ್ಗವನ್ನು ಒಂದರಿಂದ ಕಳೆದು, ಮೂರರಿಂದ ಭಾಗಿಸಿ ಮತ್ತು (ನಂತರ) ಪದರಗಳ ಸಂಖ್ಯೆಯಿಂದ ಗುಣಿಸಲಾಗುತ್ತದೆ. ಹೀಗೆ ದೊರೆತ ರಾಶಿಗೆ, ಎಲ್ಲಕ್ಕಿಂತ ಮೇಲಿನ ಪದರದಲ್ಲಿರುವ ಇಟ್ಟಿಗೆಗಳನ್ನು ನಿರೂಪಿಸುವ ಮನಸ್ಸಿನಲ್ಲಿ ಆಯ್ದ ಸಂಖ್ಯೆ ಮತ್ತು ೧ ರಿಂದ ಆರಂಭವಾಗಿ ಕೊಟ್ಟಿರುವ ಪದರಗಳ ಸಂಖ್ಯೆಯವರೆಗೆ ಹೋಗುವ ಸಹಜ ಸಂಖ್ಯೆಗಳ ಮೊತ್ತಗಳ ಗುಣಲಬ್ಧವನ್ನು ಸೇರಿಸುವುದರಿಂದ, ಬೇಕಾದ ಉತ್ತರವು ಲಭಿಸುತ್ತದೆ.

---

**330$\frac{1}{2}$.** Algebraically, $\frac{n^2 - 1}{3} \times n + a \times \frac{n(n+1)}{2}$ is the total number of bricks in the structure, where $n$ is the number of layers and $a$ the optionally chosen number of bricks in the topmost layer. The number of bricks along the length or breadth of any layer is one less than the same in the immediately lower layer.

೩೩೦$\frac{೧}{೨}$· ಬೀಜಗಣಿತರೂಪದಲ್ಲಿ, $\frac{ನ^೨ - ೧}{೩} \times ನ + ಅ \times \frac{ನ(ನ+೧)}{೨}$ ಭವನದಲ್ಲಿನ ಇಟ್ಟಿಗೆಗಳ ಒಟ್ಟು ಸಂಖ್ಯೆಯಾಗಿದೆ. ಇಲ್ಲಿ ನ ವು ಪದರಗಳ ಸಂಖ್ಯೆ ಮತ್ತು ಅ ಅತಿ ಎತ್ತರದ ಪದರದ ಇಟ್ಟಿಗೆಗಳ ಮನಸ್ಸಿನಲ್ಲಿ ಆರಿಸಿದ ಸಂಖ್ಯೆಯಾಗಿದೆ. ಯಾವುದಾದರೂ ಪದರದ ಉದ್ದದ ಅಥವಾ ಅಗಲದ ಮೇಲಿರುವ ಇಟ್ಟಿಗೆಗಳ ಸಂಖ್ಯೆಯು, ಅಗ್ರಿಮ ನಿಮ್ನ ಪದರದ ಇಟ್ಟಿಗೆಗಳಿಗಿಂತ ೧ ಕಡಿಮೆಯಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

पञ्चतरैकेनाग्रं व्यवघटिता गणितविन्मिश्रे । समचतुरश्रश्रेढी कतीष्टकास्युर्ममाचक्ष्व ॥ ३३१$\frac{1}{2}$॥
नन्द्यावर्ताकारं चतुस्तराः षष्टिसमघटिताः । सर्वेष्टकाः कति स्युः श्रेढीबद्धं ममाचक्ष्व ॥ ३३२$\frac{1}{2}$॥

---

**Atroddeśakaḥ**

331$\frac{1}{2}$. Pañcataraikenāgraṁ vyavaghaṭitā gaṇitavinmiśre, samacaturaśra-śreḍhī katīṣṭakāssyurmamācakṣva.

332$\frac{1}{2}$. Nandyāvartākāraṁ catustarāḥ ṣaṣṭisamaghaṭitāḥ, sarveṣṭakāḥ kati syuḥ śreḍhībaddhaṁ mamācakṣva.

---

***Examples in illustration thereof***

331$\frac{1}{2}$. There is constructed an equilateral quadrilateral structure consisting of 5 layers. The topmost layer is made up of 1 brick. O you who know the calculation of mixed problems, tell me how many bricks there are (here in all).

332$\frac{1}{2}$. There is a structure built up of successive layers of bricks, which is in the form of the nandyāvarta. There are 4 layers built symmetrically with 60 (as the numerical measure of the top-bricks in single row). Tell me how many are all the bricks (here).

---

**ಉದಾಹರಣೆಯಿಂದ ವಿಶ್ಲೇಷಣ**

೩೩೧$\frac{೧}{೨}$. ಐದು ಪದರಗಳಿರುವ ಒಂದು ವರ್ಗಾಕಾರವನ್ನು ಕಟ್ಟಲಾಯಿತು. ಎಲ್ಲಕ್ಕಿಂತ ಮೇಲಿನ ಪದರದಲ್ಲಿ ಕೇವಲ ೧ ಇಟ್ಟಿಗೆ ಮಾತ್ರವಿದೆ. ಎಲೈ ಮಿಶ್ರಲೆಕ್ಕಗಳ ಲೆಕ್ಕಾಚಾರವನ್ನು ತಿಳಿದಿರುವವನೇ, (ಇಲ್ಲಿ ಒಟ್ಟು) ಎಷ್ಟು ಇಟ್ಟಿಗೆಗಳಿವೆಯೆಂದು ನನಗೆ ಹೇಳು.

೩೩೨$\frac{೧}{೨}$. ನಂದ್ಯಾವರ್ತದ ಆಕಾರದ ಒಂದು ಕಟ್ಟಡವನ್ನು ಉತ್ತರೋತ್ತರ ಇಟ್ಟಿಗೆಗಳ ಪದರಗಳಿಂದ ಕಟ್ಟಲಾಗಿದೆ. ಒಂದು ಸಾಲಿನಲ್ಲಿ ಎಲ್ಲಕ್ಕಿಂತ ಮೇಲಿನ ಇಟ್ಟಿಗೆಗಳ ಸಂಖ್ಯಾತ್ಮಕ ಬೆಲೆಯು ೬೦ ಆಗಿದೆ. ಇದರಿಂದ ೪ ಸಮರೂಪದ ಪದರಗಳನ್ನು ಕಟ್ಟಲಾಗಿದೆ. ಇಲ್ಲಿ ಇಟ್ಟಿಗೆಗಳ ಒಟ್ಟು ಸಂಖ್ಯೆಯನ್ನು ನನಗೆ ಹೇಳು.

---

332$\frac{1}{2}$. The nandyāvarta figure referred to in the stanza is -

೩೩೨$\frac{೧}{೨}$. ಶ್ಲೋಕದಲ್ಲಿ ತಿಳಿಸಿರುವ ನಂದ್ಯಾವರ್ತ ಆಕೃತಿಯು ಇದಾಗಿದೆ -





CC-0. Gurukul Kangri Collection, Haridwar

Digitized by Arya Samaj Foundation Chennai and eGangotri



छन्दश्शास्त्रोक्तषट्प्रत्ययानां सूत्राणि -
समदलविषमखरूपं द्विगुणं वर्गीकृतं च पदसङ्ख्या ।
सङ्ख्या विषमा सैका दलतो गुरुरेव समदलतः ॥ ३३३$\frac{1}{2}$॥
स्याल्लघुरेवं क्रमशः प्रस्तारोऽयं विनिर्दिष्टः ।
नष्टाङ्कार्धे लघुरथ तत्सैकदले गुरुः पुनः पुनः स्थानम् ॥ ३३४$\frac{1}{2}$॥
रूपाद्द्विगुणोत्तरतस्तद्दिष्टे लाङ्कसंयुतिः सैका ।
एकाद्येकोत्तरतः पदैमूर्ध्वार्धर्यतः क्रमोत्क्रमशः ॥ ३३५$\frac{1}{2}$॥
स्थाप्य प्रतिलोमघ्नं प्रतिलोमघ्नेन भाजितं सारम् ।
स्याल्लघुगुरुक्रियेयं सङ्ख्या द्विगुणैकवर्जिता साध्वा ॥ ३३६$\frac{1}{2}$॥

---

Chandaśśāstroktaṣaṭpratyayānāṁsūtrāṇi -

**333$\frac{1}{2}$.** Samadalaviṣamakharūpaṁ dviguṇaṁ vargīkṛtaṁ ca padasaṅkhyā, saṅkhyā viṣamā saikā dalato gurureva samadalataḥ.

**334$\frac{1}{2}$.** Syāllaghurevaṁ kramaśaḥ prastāro'yaṁ vinirdiṣṭaḥ, naṣṭāṅkārdhe laghuratha tatsaikadale guruḥ punaḥ punaḥ sthānam.

**335$\frac{1}{2}$.** Rūpāddviguṇottaratastaddiṣṭe lāṅkasaṁyutiḥ saikā, ekādyekottarataḥ padaimūrdhvārdhayataḥ kramotkramaśaḥ.

**336$\frac{1}{2}$.** Sthāpya pratilomaghnaṁ pratilomaghnena bhājitaṁ sāram, syāllaghugurukriyeyaṁ saṅkhyā dviguṇaikavarjitā sādhvā.

---

Rules regarding the six things to be known in the science of prosody :

**333$\frac{1}{2}$-336$\frac{1}{2}$.** (The number of syllables in a given syllabic metre or chandas is caused to be marked in a separate column) by zero and by one (respectively), corresponding to the even (value) which is halved and the uneven (value from which one is subtracted, till by continuing these processes zero is ultimately reached. The numbers in the chain of figures so obtained are) all doubled, (and then in the process of continued multiplication from the bottom to the top of the chain those figures which come to have a zero above them) are squared. The (resulting) product (of this continued multiplication) gives the number (of the varieties of stanzas possible in that syllabic metre or chandas).

---

ಛಂದಶಾಸ್ತ್ರದಲ್ಲಿ ಆರು ಪ್ರತ್ಯಯಗಳನ್ನು ತಿಳಿದುಕೊಳ್ಳಲು ನಿಯಮಗಳು :

೩೩೩ $\frac{೧}{೨}$-೩೩೬ $\frac{೧}{೨}$. ಕೊಟ್ಟಿರುವ ಶಬ್ದಾಂಶಿಕ ಛಂದಸ್ಸಿನಲ್ಲಿ ಅಕ್ಷರಗಳು ಅಥವಾ ಪದಗಳ ಸಮ ಮತ್ತು ಬೆಸ ಸಂಖ್ಯೆಗಳನ್ನು ಬೇರೆ ಬೇರೆ ಸ್ತಂಭಗಳಲ್ಲಿ ಕ್ರಮವಾಗಿ ೦ ಮತ್ತು ೧ ರಿಂದ ಗುರುತು ಮಾಡಬೇಕಾಗುತ್ತದೆ. ಗುರುತುಮಾಡುವ ವಿಧಾನವೆಂದರೆ, ಸಮ ಬೆಲೆಯನ್ನು ಅರ್ಧಮಾಡಲಾಗುತ್ತದೆ ಮತ್ತು ಬೆಸಬೆಲೆಯಿಂದ ೧ ನ್ನು ಕಳೆಯಲಾಗುತ್ತದೆ. ಈ ವಿಧಾನಗಳನ್ನು ಅಂತಿಮವಾಗಿ ಶೂನ್ಯ ತಲುಪುವವರೆಗೂ ಮುಂದುವರೆಸಲಾಗುತ್ತದೆ. ಹೀಗೆ ದೊರೆತ ಅಂಕಿಗಳ ಸರಪಣಿಯಲ್ಲಿರುವ ಎಲ್ಲ ಸಂಖ್ಯೆಗಳನ್ನೂ ದ್ವಿಗುಣಿಸಲಾಗುತ್ತದೆ ಮತ್ತು ನಂತರ ಸರಪಣಿಯಲ್ಲಿ ಕೆಳಗಿನಿಂದ ಮೇಲಿನವರೆಗಿನ ಸತತ ಗುಣಾಕಾರ ವಿಧಾನದಲ್ಲಿ, ಯಾವ ಅಂಕಿಗಳ ಮೇಲೆ ಶೂನ್ಯವಿರುತ್ತದೋ ಅಂತಹ ಅಂಕಿಗಳನ್ನು ವರ್ಗಮಾಡಲಾಗುತ್ತದೆ. ಈ ಸತತ ಗುಣಾಕಾರದ ಫಲಿತಾಂಶದ ಗುಣಲಬ್ಧವು ಛಂದಸ್ಸಿನ ಸಾಧ್ಯವಾದ ವಿಭಿನ್ನ ಶ್ಲೋಕಗಳ ಸಂಖ್ಯೆಯನ್ನು ಕೊಡುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



The arrangement (of short and long syllables in all the varieties of stanzas so obtained) is shown to be arrived at thus :

(The natural numbers commencing with one and ending with the measure of the maximum number of possible stanzas in the given metre being noted down), every odd number (therein) has one added to it and is (then) halved. (Whenever this process is gone through), a long syllable is decidedly indicated. Where the number is even, it is (immediately) halved and this indicates a short syllable. In this manner, the process (of halving with or without the addition of one as the case may be noting down at the same time the corresponding long and short syllables as indicated), is to be regularly carried on (till the actual number of syllables in the metre is arrived at in each case).

(If the number representing in the natural order any given variety of a stanza), the arrangement of the syllables wherein has to be found out, (happens to be even, it) has to be halved and indicates a short syllable. (If it happens to be however odd), one has to be added to it and (then) it is to be halved and this indicates a long syllable. Thus (the long and short syllables have to be put down over and over again (in their respective positions), till the maximum number of syllables in the stanza is arrived at. This gives the arrangement (of long and short syllables in the required variety of the stanza).

---

ಈ ರೀತಿ ದೊರೆತ ಎಲ್ಲ ಪ್ರಕಾರಗಳ ಶ್ಲೋಕಗಳಲ್ಲಿ ಲಘು ಮತ್ತು ದೀರ್ಘ ಅಕ್ಷರಗಳ ವಿನ್ಯಾಸವನ್ನು ಈ ರೀತಿ ಪಡೆಯುತ್ತೇವೆ :

೧ ರಿಂದ ಆರಂಭವಾಗುವ ಮತ್ತು ಕೊಟ್ಟಿರುವ ಛಂದಸ್ಸಿನಲ್ಲಿ ಶ್ಲೋಕಗಳ ಸಾಧ್ಯವಾಗುವ ಮಹತ್ತರ ಸಂಖ್ಯೆಯ ಅಳತೆಯಲ್ಲಿ ಕೊನೆಗೊಳ್ಳುವ ಸಹಜ ಸಂಖ್ಯೆಗಳನ್ನು ಬರೆಯಲಾಗುತ್ತದೆ. ಪ್ರತಿಯೊಂದು ಬೆಸ ಸಂಖ್ಯೆಯಲ್ಲಿ ೧ ನ್ನು ಸೇರಿಸಲಾಗುತ್ತದೆ ಮತ್ತು ನಂತರ ಅದನ್ನು ಅರ್ಧಮಾಡಲಾಗುತ್ತದೆ. ಯಾವಾಗ ಈ ಕ್ರಿಯೆಯನ್ನು ಮಾಡಲಾಗುತ್ತದೋ, ಆಗ ದೀರ್ಘ ಅಕ್ಷರವು ನಿಶ್ಚಯವಾಗಿ ಸೂಚಿಸಲ್ಪಡುತ್ತದೆ. ಎಲ್ಲಿ ಸಂಖ್ಯೆಯು ಸಮವಾಗಿರುತ್ತದೋ ಅಲ್ಲಿ ಅದನ್ನು (ತಕ್ಷಣವೇ) ಅರ್ಧಮಾಡಲಾಗುತ್ತದೆ ಮತ್ತು ಇದು ಲಘು ಅಕ್ಷರವನ್ನು ಸೂಚಿಸುತ್ತದೆ. ಈ ರೀತಿ, ಪ್ರಕರಣಕ್ಕೆ ಅನುಸಾರವಾಗಿ (ಅದೇ ಸಮಯದಲ್ಲಿ ಅನುಗುಣವಾದ ದೀರ್ಘ ಮತ್ತು ಲಘು ಅಕ್ಷರಗಳನ್ನು ನೋಡುತ್ತಾ) ೧ ನ್ನು ಸೇರಿಸಿ ಅಥವಾ ಸೇರಿಸದೆ ಅರ್ಧಮಾಡುವ ಕ್ರಿಯೆಯನ್ನು ನಿಯಮಿತ ರೂಪದಲ್ಲಿ, ಪ್ರತಿಯೊಂದು ಪ್ರಕರಣದಲ್ಲಿ, ಛಂದಸ್ಸಿನ ಪ್ರತ್ಯಯಗಳ ಯಥಾರ್ಥವಾದ ಸಂಖ್ಯೆಯು ಪ್ರಾಪ್ತವಾಗುವವರೆಗೂ ಮುಂದುವರೆಸಬೇಕಾಗುತ್ತದೆ.

ಒಂದು ವೇಳೆ ಸ್ವಾಭಾವಿಕ ಕ್ರಮದಲ್ಲಿ ಯಾವುದಾದರೂ ಕೊಟ್ಟಿರುವ ಪ್ರಕಾರದ ಪದವನ್ನು ನಿರೂಪಿಸುವ ಸಂಖ್ಯೆಯು, (ಎಲ್ಲಿ ಅಕ್ಷರಗಳ ವಿನ್ಯಾಸವನ್ನು ಕಂಡುಹಿಡಿಯಬೇಕಾಗಿದೆಯೋ ಅಲ್ಲಿ) ಸಮವಾಗಿದ್ದರೆ ಆಗ ಅದನ್ನು ಅರ್ಧಮಾಡಲಾಗುತ್ತದೆ ಮತ್ತು (ಇದು) ಲಘು ಅಕ್ಷರವನ್ನು ಸೂಚಿಸುತ್ತದೆ. ಒಂದು ವೇಳೆ ಅದು ಬೆಸವಾಗಿದ್ದರೆ ಆಗ ಅದರಲ್ಲಿ ೧ ನ್ನು ಸೇರಿಸಲಾಗುತ್ತದೆ ಮತ್ತು ನಂತರ ಅದನ್ನು ಅರ್ಧಮಾಡಲಾಗುತ್ತದೆ ಮತ್ತು ಇದು ದೀರ್ಘ ಅಕ್ಷರವನ್ನು ಸೂಚಿಸುತ್ತದೆ. ಈ ರೀತಿ ದೀರ್ಘ ಮತ್ತು ಲಘು ಅಕ್ಷರಗಳನ್ನು ಅವುಗಳ ಕ್ರಮವಾರು ಸ್ಥಿತಿಗಳಲ್ಲಿ ಪದೇ ಪದೇ ಇಡಬೇಕಾಗುತ್ತದೆ. ಇದನ್ನು ಪದದಲ್ಲಿ ಅಕ್ಷರಗಳ ಮಹತ್ತರ ಸಂಖ್ಯೆಯು ದೊರೆಯುವವರೆಗೂ ಮಾಡಬೇಕಾಗುತ್ತದೆ. ಇದು ಶ್ಲೋಕದ ಬೇಕಾದ ಪ್ರಕಾರದಲ್ಲಿನ ದೀರ್ಘ ಮತ್ತು ಲಘು ಅಕ್ಷರಗಳ ವಿನ್ಯಾಸವನ್ನು ಕೊಡುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



Where (a stanza of a particular variety is given and) its ordinal position (among the varieties of stanzas possible in the metre) is to be found out, the terms (of a series in geometrical progression) commencing with one and having two as the common ratio are written down, (the number of terms in the series being equal to the number of syllables in the given metre. Above these terms, the corresponding long or short syllables are noted down). Then the terms (immediately) below the position of short syllables are all added; the sum (so obtained) is increased by one. (This gives the required ordinal number).

Natural numbers commencing with one and going up to the number (of syllables in the given metre), are written down in the regular and in the inverse (order in two rows) one below the other. When the numbers in the row are multiplied (1, 2, 3 or more at a time) from the right to the left and the products (so obtained in relation to the upper row) are divided by the (corresponding) products (in relation to the lower row), the quotient represents the result of the operation intended to arrive at (the number of varieties of stanzas in the given metre, with 1, 2, 3 or more) short or long syllables (in the verse).

The possible number (of the varieties of stanzas in the given metre) is multiplied by two and (then) diminished by one. This result gives (the measure of what is called) adhvan, (wherein an interval equivalent to a stanza is conceived to exist between every two successive varieties in the metre).

---

ಎಲ್ಲಿ, ಒಂದು ವಿಶೇಷ ಪ್ರಕಾರದ ಶ್ಲೋಕವನ್ನು ಕೊಟ್ಟಿದ್ದಾಗ ಅದರ ನಿರ್ದಿಷ್ಟವಾದ ಸ್ಥಿತಿಯನ್ನು (ಛಂದಸ್ಸಿನಲ್ಲಿ) ಸಾಧ್ಯವಾಗುವ ಪ್ರಕಾರಗಳ ಶ್ಲೋಕಗಳಲ್ಲಿ ಕಂಡುಹಿಡಿಯಬೇಕಾಗಿದೆಯೋ, ಅಲ್ಲಿ ೧ ರಿಂದ ಆರಂಭವಾಗುವ ಮತ್ತು ೨ ನ್ನು ಸಾಮಾನ್ಯ ನಿಷ್ಪತ್ತಿಯನ್ನಾಗಿ ಉಳ್ಳ ಗುಣೋತ್ತರ ಶ್ರೇಣಿಯ ಪದಗಳನ್ನು ಬರೆಯಲಾಗುತ್ತದೆ. (ಇಲ್ಲಿ ಶ್ರೇಣಿಯ ಪದಗಳ ಸಂಖ್ಯೆಯು, ಕೊಟ್ಟಿರುವ ಛಂದಸ್ಸಿನಲ್ಲಿ ಅಕ್ಷರಗಳ ಸಂಖ್ಯೆಗೆ ಸಮವಾಗಿರುತ್ತದೆ). ಈ ಪದಗಳ ಮೇಲೆ ಅನುಗುಣವಾದ ದೀರ್ಘ ಅಥವಾ ಲಘು ಅಕ್ಷರವನ್ನು ಬರೆಯಲಾಗುತ್ತದೆ. ನಂತರ ಲಘು ಅಕ್ಷರಗಳ ಸರಿಯಾಗಿ ಕೆಳಗಡೆ ಇರುವ ಎಲ್ಲಾ ಪದಗಳನ್ನೂ ಸೇರಿಸಲಾಗುತ್ತದೆ.

ಹೀಗೆ ದೊರೆತ ಮೊತ್ತವನ್ನು ೧ ರಿಂದ ಹೆಚ್ಚಿಸಲಾಗುತ್ತದೆ. ಇದು ಬೇಕಾದ ನಿರ್ದಿಷ್ಟವಾದ ಕ್ರಮ ಸಂಖ್ಯೆಯಾಗಿರುತ್ತದೆ.

೧ ರಿಂದ ಆರಂಭವಾಗುವ ಮತ್ತು ಛಂದಸ್ಸಿನಲ್ಲಿ ಕೊಟ್ಟಿರುವ ಅಕ್ಷರಗಳ ಸಂಖ್ಯೆಯವರೆಗೂ ಹೋಗುವ ಸಹಜ ಸಂಖ್ಯೆಗಳನ್ನು, ನಿಯಮಿತ ಕ್ರಮದಲ್ಲಿ ಮತ್ತು ವ್ಯತಿರಿಕ್ತ ಕ್ರಮದಲ್ಲಿ ಎರಡು ಪಂಕ್ತಿಗಳಲ್ಲಿ, ಒಂದನ್ನು ಇನ್ನೊಂದರ ಕೆಳಗೆ ಬರೆಯಲಾಗುತ್ತದೆ. ಪಂಕ್ತಿಯಲ್ಲಿರುವ ಸಂಖ್ಯೆಗಳನ್ನು ೧, ೨, ೩ ಅಥವಾ ಒಂದು ಬಾರಿಗೆ ಇದಕ್ಕಿಂತಲೂ ಅಧಿಕವಾದ ಸಂಖ್ಯೆಯಿಂದ ಬಲಗಡೆಯಿಂದ ಎಡಗಡೆಗೆ ಗುಣಿಸಲಾಗುತ್ತದೆ. ಈ ರೀತಿ ಪ್ರಾಪ್ತವಾದ ಮೇಲಿನ ಪಂಕ್ತಿಯ ಸಂಬಂಧದ ಗುಣಲಬ್ಧವನ್ನು ಕೆಳಗಿನ ಪಂಕ್ತಿಗೆ ಸಂಬಂಧಿಸಿದ ಅನುಗುಣವಾದ ಗುಣಲಬ್ಧದಿಂದ ಭಾಗಿಸಲಾಗುತ್ತದೆ. ಆಗ, ಬರುವ ಭಾಗಲಬ್ಧವು ಕವಿತೆಯಲ್ಲಿ ೧, ೨, ೩ ಅಥವಾ ಇವುಗಳಿಗಿಂತ ಅಧಿಕವಾಗಿರುವ, ಲಘು ಅಥವಾ ದೀರ್ಘ ಅಕ್ಷರಗಳ (ಕೊಟ್ಟಿರುವ ಛಂದಸ್ಸಿನಲ್ಲಿ) ಶ್ಲೋಕಗಳ ಪ್ರಕಾರಗಳ ಸಂಖ್ಯೆಯನ್ನು ನಿರೂಪಿಸುತ್ತದೆ. ಇದನ್ನೇ ನಾವು ಪಡೆಯಲು ಉದ್ದೇಶಿಸಿದ್ದು.

ಕೊಟ್ಟಿರುವ ಛಂದಸ್ಸಿನಲ್ಲಿ ಶ್ಲೋಕಗಳ ಪ್ರಕಾರಗಳ ಸಾಧ್ಯವಾದ ಸಂಖ್ಯೆಯನ್ನು ೨ ರಿಂದ ಗುಣಿಸಿ ೧ ರಿಂದ ಕಳೆಯಲಾಗುತ್ತದೆ. ಈ ಫಲವು ಅಧ್ವಾನದ ಅಳತೆಯನ್ನು ಕೊಡುತ್ತದೆ: (ಇಲ್ಲಿ ಛಂದಸ್ಸಿನ ಎರಡು ಉತ್ತರೋತ್ತರ ಪ್ರಕಾರಗಳ ಮಧ್ಯೆ, ಒಂದು ಶ್ಲೋಕಕ್ಕೆ ಸಮವಾದ ಸ್ಥಳವು ಇದೆ ಎಂದು ಭಾವಿಸಿಕೊಳ್ಳಲಾಗಿದೆ).



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**333½-336½.** As each syllable found in a line forming a quarter of a stanza may be short or long, there arises a number of varieties corresponding to the different arrangements of long and short syllables. In arranging these varieties, a certain order is followed. The rules given here enable us to find out (1) the number of varieties possible in a metre consisting of a specified number of syllables (2) the manner of arrangement of the syllables in these varieties (3) the arrangement of the syllables in a variety specified by its ordinal position (4) the ordinal position of a specified arrangement of syllables (5) the number of varieties containing a specified number of long or short syllables and (6) the amount of vertical space required for exhibiting the varieties of a particular metre.

The rules will become clear from the following working of the problems given in stanza 337½.

(1) There are 3 syllables in a metre; now, we proceed thus :

| | | |
|---|---|---|
| | 3 - 1 | 1 |
| 2 | 2 | 0 |
| | 1 - 1 | 1 |
| | 0 | |

Now, multiplying by 2 the figure in the right-hand chain, we obtain $\overset{2}{0}\cdot\overset{2}{}$ By the process of multiplication and squaring, as explained in the note to stanza 94, Ch. II, we get 8 and this is the number of varieties.

(2) The manner of arrangement of the syllables in each variety is arrived at thus :

1st variety : 1, being odd, denotes a long syllable; so the first syllable is long. Add 1 to this 1 and divide the sum by 2; the quotient is odd and denotes another long syllable. Again, 1 is added to this quotient 1 and divided by 2; the result, again odd, denotes a third long syllable. Thus the first variety consists of three long syllables and is indicated thus ⌊⌊⌊.

2nd variety : 2, being even, indicates a short syllable; when this 2 is divided by 2, the quotient is 1, which being odd indicates a long syllable. Add 1 to this 1 and divide the sum by 2; the quotient being odd indicates a long syllable; thus we get ⏑⌊⌊.

೩೩೩ -೩೩೬ ½. ದೀರ್ಘ ಮತ್ತು ಲಘು ಅಕ್ಷರಗಳ ಭಿನ್ನ-ಭಿನ್ನ ವಿನ್ಯಾಸಗಳ ಅನುಗುಣವಾದ ಅನೇಕ ಪ್ರಕಾರಗಳು ಉತ್ಪನ್ನವಾಗುತ್ತವೆ. ಏಕೆಂದರೆ ಶ್ಲೋಕದ ನಾಲ್ಕನೇ ಒಂದು ಭಾಗವನ್ನುಂಟುಮಾಡುವ ಸಾಲಿನಲ್ಲಿ ಇರಬೇಕಾಗಿರುವ ಪ್ರತಿಯೊಂದು ಅಕ್ಷರವು ಲಘು ಅಥವಾ ದೀರ್ಘವಾಗಿರುತ್ತದೆ. ಈ ಪ್ರಕಾರಗಳ ವಿನ್ಯಾಸಕ್ಕಾಗಿ ಒಂದು ನಿಶ್ಚಿತ ಕ್ರಮವನ್ನು ಅನುಸರಿಸಲಾಗುತ್ತದೆ. ಇಲ್ಲಿ ಕೊಟ್ಟಿರುವ ನಿಯಮಗಳು ನಮಗೆ ಮುಂದೆ ತಿಳಿಸಿರುವುವುಗಳನ್ನು ಕಂಡುಹಿಡಿಯಲು ಸಹಾಯಕವಾಗುತ್ತದೆ (೧) ನಿರ್ದಿಷ್ಟವಾದ ಅಕ್ಷರಗಳ ಸಂಖ್ಯೆಯ ಛಂದಸ್ಸಿನಲ್ಲಿ ಸಾಧ್ಯವಾಗುವ ಪ್ರಕಾರಗಳ ಸಂಖ್ಯೆ (೨)ಈ ಪ್ರಕಾರಗಳಲ್ಲಿ ಅಕ್ಷರಗಳ ವಿನ್ಯಾಸದ ವಿಧಾನ (೩) ಸ್ವಕ್ರಮಸೂಚಕಸ್ಥಿತಿಯಿಂದ ನಿರ್ದಿಷ್ಟವಾದ ಒಂದು ಪ್ರಕಾರದಲ್ಲಿನ ಅಕ್ಷರಗಳ ವಿನ್ಯಾಸ (೪) ಅಕ್ಷರಗಳ ನಿರ್ದಿಷ್ಟವಾದ ವಿನ್ಯಾಸದ ಕ್ರಮಸೂಚಕಸ್ಥಿತಿ (೫) ನಿರ್ದಿಷ್ಟವಾದ ಸಂಖ್ಯೆಯ, ದೀರ್ಘ ಮತ್ತು ಲಘು ಅಕ್ಷರಗಳ ಪ್ರಕಾರಗಳ ಸಂಖ್ಯೆ ಮತ್ತು (೬) ಒಂದು ವಿಶೇಷವಾದ ಛಂದಸ್ಸಿನ ಪ್ರಕಾರಗಳನ್ನು ಪ್ರದರ್ಶಿಸಲು ಬೇಕಾಗಿರುವ ಲಂಬವಾಗಿರುವ ಸ್ಥಳದ ಪರಿಮಾಣ.

ಮುಂದೆ ತಿಳಿಸಿರುವ ೩೩೭ ½ ಶ್ಲೋಕದಲ್ಲಿ ಕೊಟ್ಟಿರುವ ಲೆಕ್ಕಗಳ ಬಿಡಿಸುವಿಕೆಯಿಂದ ನಿಯಮಗಳು ಸ್ಪಷ್ಟವಾಗುತ್ತವೆ :

| | | |
|---|---|---|
| | ೩ - ೧ | ೧ |
| ೨ | ೨ | ೦ |
| | ೧ - ೧ | ೧ |
| | ೦ | |

(೧) ಒಂದು ಛಂದಸ್ಸಿನಲ್ಲಿ ೩ ಅಕ್ಷರಗಳಿವೆ. ಈಗ ನಾವು ಈ ರೀತಿ ಮುಂದುವರೆಯುತ್ತೇವೆ. ಈಗ, ಬಲಗಡೆ ಸರಪಣಿಯಲ್ಲಿರುವ ಅಂಕಿಗಳನ್ನು ೨ ರಿಂದ ಗುಣಿಸಿದರೆ ನಮಗೆ $\overset{2}{0}\cdot\overset{2}{}$ ದೊರೆಯುತ್ತದೆ. ೨ ನೇ ಅಧ್ಯಾಯದ ೯೪ ನೇ ಶ್ಲೋಕದ ಟಿಪ್ಪಣಿಯಲ್ಲಿ ವಿವರಿಸಿದಂತೆ, ಗುಣಾಕಾರ ಮತ್ತು ವರ್ಗ ಮಾಡುವಿಕೆಯ ವಿಧಾನದಿಂದ ನಮಗೆ ೮ ಲಭಿಸುತ್ತದೆ ಮತ್ತು ಇದು ಪ್ರಕಾರಗಳ ಸಂಖ್ಯೆಯಾಗಿರುತ್ತದೆ.

(೨) ಪ್ರತಿಯೊಂದು ಪ್ರಕಾರದಲ್ಲಿ ಅಕ್ಷರಗಳ ವಿನ್ಯಾಸದ ವಿಧಾನವನ್ನು ಈ ರೀತಿ ಪಡೆಯಬಹುದು :

ಪ್ರಥಮ ಪ್ರಕಾರ : ೧, ಬೆಸವಾಗಿರುವುದರಿಂದ ದೀರ್ಘ ಅಕ್ಷರವನ್ನು ಸೂಚಿಸುತ್ತದೆ. ಆದ್ದರಿಂದ ಮೊದಲನೆಯ ಅಕ್ಷರವು ದೀರ್ಘವಾಗಿರುತ್ತದೆ. ಈ ೧ ಕ್ಕೆ ೧ ನ್ನು ಸೇರಿಸು ಮತ್ತು ಮೊತ್ತವನ್ನು ೨ ರಿಂದ ಭಾಗಿಸು. ಭಾಗಲಬ್ಧವು ಬೆಸವಾಗಿರುತ್ತದೆ ಮತ್ತು ಇನ್ನೊಂದು ದೀರ್ಘ ಅಕ್ಷರವನ್ನು ಸೂಚಿಸುತ್ತದೆ. ಪುನಃ ಈ ಭಾಗಲಬ್ಧ ೧ ಕ್ಕೆ ೧ ನ್ನು ಸೇರಿಸಲಾಗುತ್ತದೆ ಮತ್ತು ೨ ರಿಂದ ಭಾಗಿಸಲಾಗುತ್ತದೆ. ಫಲವು ಪುನಃ ಬೆಸವಾಗಿರುತ್ತದೆ, ಮೂರನೆಯ ದೀರ್ಘ ಅಕ್ಷರವನ್ನು ಸೂಚಿಸುತ್ತದೆ. ಈ ರೀತಿ ಪ್ರಥಮ ಪ್ರಕಾರದಲ್ಲಿ ಮೂರು ದೀರ್ಘ ಅಕ್ಷರಗಳಿರುತ್ತವೆ ಮತ್ತು ಈ ಪ್ರಕಾರವಾಗಿ ಸೂಚಿಸಲಾಗುತ್ತದೆ : ⌊⌊⌊.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



Similarly the other six varieties are to be found out.

(3) The fifth variety, for instance, may be found out as above.

(4) To find out, for instance, the ordinal position of the variety, I ⏑ I we proceed thus : Below these syllables, write down the terms of a series in geometrical progression,

I ⏑ I
1 2 4

having 1 as the first term and 2 as the common ratio. Add the figures 4 and 1 under the short syllables and increase the sum by 1; we get 6 and we therefore, say that this is the sixth variety in the tri-syllabic metre.

(5) Suppose the problem is : How many varieties contain 2 short syllables? Write down the natural numbers in the regular and in the inverse order, one below the other thus :

1 2 3.
3 2 1

Taking two terms from right to left, both from above and from below, we divide the product of the former by the product of the latter. And the quotient 3 is the answer required.

(6) It is prescribed that the symbols representing the long and short syllables of any variety of metre should occupy an *aṅgula* of vertical space and that the intervening space between any two varieties should also be an *aṅgula*. The amount, therefore, of vertical space required for the 8 varieties of this metre is 2 x 8 - 1 or 15 *aṅgulas*.

ದ್ವಿತೀಯ ಪ್ರಕಾರ : ೨; ಸಮವಾಗಿರುವುದರಿಂದ ಲಘು ಅಕ್ಷರವನ್ನು ಸೂಚಿಸುತ್ತದೆ. ಈ ೨ ನ್ನು ೨ ರಿಂದ ಭಾಗಿಸಿದಾಗ, ಭಾಗಲಬ್ಧವು ೧ ಆಗಿರುತ್ತದೆ. ಇದು (ಈ ೧) ಬೆಸವಾಗಿರುವುದರಿಂದ ದೀರ್ಘ ಅಕ್ಷರವನ್ನು ಸೂಚಿಸುತ್ತದೆ. ಈ ೧ ಕ್ಕೆ ೧ ನ್ನು ಸೇರಿಸು ಮತ್ತು ಮೊತ್ತವನ್ನು ೨ ರಿಂದ ಭಾಗಿಸು. ಭಾಗಲಬ್ಧವು ಬೆಸವಾಗಿರುವುದರಿಂದ ದೀರ್ಘ ಅಕ್ಷರವನ್ನು ಸೂಚಿಸುತ್ತದೆ. ಈ ರೀತಿ ನಮಗೆ ದೊರೆಯುವುದು : ।।।

ಇದೇ ರೀತಿ ಇತರ ಆರು ಪ್ರಕಾರಗಳನ್ನು ಕಂಡುಹಿಡಿಯಬಹುದು.

(೩) ಉದಾಹರಣೆಗೆ, ಐದನೆಯ ಪ್ರಕಾರವನ್ನು ಮೇಲಿನ ರೀತಿಯಲ್ಲಿ ಪಡೆಯಬಹುದಾಗಿದೆ.

(೪) ಉದಾಹರಣೆಗೆ, ।⏑। ಪ್ರಕಾರದ ಕ್ರಮಸೂಚಕ ಸ್ಥಿತಿಯನ್ನು ಕಂಡುಹಿಡಿಯಲು ನಾವು ಈ ರೀತಿ ಮುಂದುವರೆಯುತ್ತೇವೆ:

ಈ ಅಕ್ಷರಗಳ ಕೆಳಗೆ, ೧ ನ್ನು ಪ್ರಥಮ ಪದವನ್ನಾಗಿ ಮತ್ತು ೨ ನ್ನು ಸಾಮಾನ್ಯ ನಿಷ್ಪತ್ತಿಯನ್ನಾಗಿ ಉಳ್ಳ ಒಂದು ಗುಣೋತ್ತರ ಶ್ರೇಣಿಯ ಪದಗಳನ್ನು ಬರೆ. ।⏑।

೧ ೨ ೪

ಲಘು ಅಕ್ಷರಗಳ ಕೆಳಗಿರುವ ಅಂಕಿಗಳಾದ ೪ ಮತ್ತು ೧ ನ್ನು ಕೂಡು ಮತ್ತು ಮೊತ್ತವನ್ನು ೧ ರಿಂದ ಹೆಚ್ಚಿಸು. ನಮಗೆ ೬ ಸಿಗುತ್ತದೆ. ಆದ್ದರಿಂದ ನಾವು ತ್ರಿ-ಅಕ್ಷರಗಳ ಛಂದಸ್ಸಿನಲ್ಲಿ ಇದು ಆರನೆಯ ಪ್ರಕಾರವೆಂದು ಹೇಳುತ್ತೇವೆ.

(೫) ಪ್ರಶ್ನೆಯು ಇದಾಗಿರಲಿ : ೨ ಲಘು ಅಕ್ಷರಗಳನ್ನುಳ್ಳ ಪ್ರಕಾರಗಳು ಎಷ್ಟಿವೆ?

ಸಹಜ ಸಂಖ್ಯೆಗಳನ್ನು ನಿಯಮಿತ ಮತ್ತು ವ್ಯತಿರಿಕ್ತ ಕ್ರಮದಲ್ಲಿ ಒಂದರ ಕೆಳಗೆ ಇನ್ನೊಂದನ್ನು ಈ ರೀತಿ ಬರೆ :

೧ ೨ ೩
೩ ೨ ೧

ಬಲಗಡೆಯಿಂದ ಎಡಗಡೆಗೆ, ಮೇಲಿನಿಂದ ಮತ್ತು ಕೆಳಗಿನಿಂದ ಎರಡು ಪದಗಳನ್ನು ತೆಗೆದುಕೊಂಡು, ನಾವು ಮೊದಲನೆಯ ಗುಣಲಬ್ಧವನ್ನು ಎರಡನೆಯ ಗುಣಲಬ್ಧದಿಂದ ಭಾಗಿಸುತ್ತೇವೆ ಮತ್ತು ಭಾಗಲಬ್ಧವಾದ ೩ ಬೇಕಾದ ಉತ್ತರವಾಗಿರುತ್ತದೆ.

(೬) ಛಂದಸ್ಸಿನ ಯಾವುದಾದರೂ ಒಂದು ಪ್ರಕಾರದ ದೀರ್ಘ ಮತ್ತು ಲಘು ಅಕ್ಷರಗಳನ್ನು ನಿರೂಪಿಸುವ ಚಿಹ್ನೆಗಳು, ಒಂದು *ಅಂಗುಲ* ಲಂಬವಾಗಿರುವ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತದೆ ಎಂದು ಇಲ್ಲಿ ಹೇಳಲಾಗಿದೆ ಮತ್ತು ಯಾವುದಾದರೂ ಎರಡು ಪ್ರಕಾರಗಳ ನಡುವಿನ ಜಾಗವೂ ಕೂಡ ಒಂದು *ಅಂಗುಲ*ವಾಗಿರಬೇಕಾಗುತ್ತದೆ. ಆದ್ದರಿಂದ ಈ ಛಂದಸ್ಸಿನ ೮ ಪ್ರಕಾರಗಳಿಗೆ ಬೇಕಾಗಿರುವ ಲಂಬವಾಗಿರುವ ಸ್ಥಳದ ಪರಿಮಾಣವು ೨ x ೮ - ೧ ಅಥವಾ ೧೫ *ಅಂಗುಲ*ಗಳಾಗಿರುತ್ತವೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अत्रोद्देशकः

सङ्ख्यां प्रस्तारविधिं नष्टोद्दिष्टे लगक्रियाध्वानौ ।
षट्प्रत्ययांश्च शीघ्रं त्र्यक्षरवृत्तस्य मे कथय ॥ ३३७$\frac{1}{2}$॥
इति मिश्रकव्यवहारे श्रेढीबद्धसङ्कलितं समाप्तम् ।

**इति सारसङ्ग्रहे गणितशास्त्रे महावीराचार्यस्य कृतौ मिश्रकगणितं नाम पञ्चमव्यवहारः समाप्तः ।।**

---

Atroddeśakaḥ

337$\frac{1}{2}$. Saṅkhyāṁ prastāravidhiṁ naṣṭoddiṣṭe lagakriyādhvānau, ṣaṭ-pratyayāṁśca śīghraṁ tryakṣaravṛttasya me kathaya.

Iti miśrakavyavahāre śreḍhībaddhasaṅkalitaṁ samāptam.

**Iti sārasaṅgrahe gaṇitaśāstre Mahāvīrācāryasya kṛtau miśrakagaṇitaṁ nāma pañcamavyavahāraḥ samāptaḥ.**

---

***Examples in illustration thereof***

**337$\frac{1}{2}$.** In relation to the metre made up of 3 syllables, tell me quickly the six things to be known-viz., (1) the (maximum) number (of possible stanzas in the metre) (2) the manner of arrangement (of the syllables in those stanzas) (3) the arrangement of the syllables (in a given variety of the stanza, the ordinal-position whereof among the possible varieties in the metre is known) (4) the ordinal position (of a given stanza) (5) the number (of stanzas in the given metre containing any given number) of short or long syllables and (6) the (quantity known as) adhvan.

Thus ends the process of summation of series in the chapter on mixed problems.

**Thus ends the fifth subject of treatment, known as Mixed Problems, in Sārasaṅgraha, which is a work on arithmetic by Mahāvīrācārya.**

---

ಉದಾಹರಣೆಗಳಿಂದ ವಿಶ್ಲೇಷಣ

೩೩೭$\frac{೧}{೨}$. ೩ ಅಕ್ಷರಗಳ ಛಂದಸ್ಸಿನ ಸಂಬಂಧದಲ್ಲಿ ತಿಳಿದುಕೊಳ್ಳಬೇಕಾಗಿರುವ ೬ ವಿಷಯಗಳನ್ನು ನನಗೆ ಬೇಗನೆ ಹೇಳು. (೧) ಛಂದಸ್ಸಿನಲ್ಲಿ ಸಾಧ್ಯವಾದ ಶ್ಲೋಕಗಳ ಮಹತ್ತರ ಸಂಖ್ಯೆ (೨) ಆ ಶ್ಲೋಕಗಳ ಅಕ್ಷರಗಳ ವಿನ್ಯಾಸದ ಕ್ರಮ (೩) ಯಾವುದಾದರೂ ಕೊಟ್ಟಿರುವ ಪ್ರಕಾರದ ಶ್ಲೋಕಗಳಲ್ಲಿ ಅಕ್ಷರಗಳ ವಿನ್ಯಾಸ (ಇಲ್ಲಿ ಛಂದಸ್ಸಿನಲ್ಲಿ ಸಾಧ್ಯವಾಗುವ ಪ್ರಕಾರಗಳ ಕ್ರಮಸೂಚಕ ಸ್ಥಿತಿಯು ಗೊತ್ತಿರುತ್ತದೆ). (೪) ಕೊಟ್ಟಿರುವ ಶ್ಲೊಕದ ಕ್ರಮಸೂಚಕ ಸ್ಥಿತಿ (೫) ಯಾವುದಾದರೂ ಕೊಟ್ಟಿರುವ ಲಘು ಅಥವಾ ದೀರ್ಘ ಅಕ್ಷರಗಳ ಸಂಖ್ಯೆಯಿರುವ ಕೊಟ್ಟಿರುವ ಛಂದಸ್ಸಿನಲ್ಲಿ ಶ್ಲೋಕಗಳ ಸಂಖ್ಯೆ ಮತ್ತು (೬) ಅಧ್ವಾನವೆಂಬ ಹೆಸರಿನ ರಾಶಿ.

ಈ ರೀತಿ, ಮಿಶ್ರಕ ವ್ಯವಹಾರದಲ್ಲಿ ಶ್ರೇಣೀಬದ್ಧ ಸಂಕಲಿತವೆಂಬ ಹೆಸರಿನ ವಿಧಾನವು ಸಮಾಪ್ತಿಯಾಯಿತು.

**ಹೀಗೆ ಮಹಾವೀರಾಚಾರ್ಯರಿಂದ ರಚಿತವಾದ ಸಾರಸಂಗ್ರಹವೆಂಬ ಹೆಸರಿನ ಗಣಿತ ಶಾಸ್ತ್ರದ ಮಿಶ್ರಕ ಗಣಿತವೆಂಬ ಹೆಸರಿನ ಐದನೆಯ ವ್ಯವಹಾರವು ಮುಗಿಯಿತು.**

CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## ७. क्षेत्रगणितव्यवहारः

सिद्धेभ्यो निष्ठितार्थेभ्यो वरिष्ठेभ्यः कृतादरः । अभिप्रेतार्थसिद्ध्यर्थं नमस्कुर्वे पुनः पुनः ॥ १ ॥
इतः परं क्षेत्रगणितं नाम षष्टगणितमुदाहरिष्यामः । तद्यथा -
क्षेत्रं जिनप्रणीतं फलाश्रयाद्व्यावहारिकं सूक्ष्ममिति ।
भेदाद् द्विधा विचिन्त्य व्यवहारं स्पष्टमेतदभिधास्ये ॥ २ ॥

---

## 7. Kṣetraganitavyavahārah

1. Siddhebhyo niṣṭitārthebhyo variṣṭebhyah kṛtādarah, abhipretārtha-siddhyartham namaskurve punah punah.

Itah param kṣetraganitam nāma ṣaṣṭaganitamudāharisyāmah. Tadyathā -

2. Kṣetram jinapraṇītam phalāśrayādvyāvahārikam sūkṣmamiti, bhedād dvidhā vicintya vyavahāram spaṣṭametadabhidhāsye.

---

## CHAPTER VII
## CALCULATION RELATING TO THE MEASUREMENT OF AREAS

**1.** For the accomplishment of the object held in view, I bow again and again with true earnestness to the most excellent Siddhas who have realized the knowledge of all things.

Hereafter we shall expound the sixth variety of calculation forming the subject known by the name of the Measurement of Areas. And that is as follows :

**2.** (The measurement of) area has been taken to be of two kinds by Jina in accordance with (the nature of) the result, namely, that which is (approximate) for practical purposes and that which is minutely accurate. Taking this into consideration, I shall clearly explain this subject.

---

## ಅಧ್ಯಾಯ ೭
## ಕ್ಷೇತ್ರಗಣಿತ ವ್ಯವಹಾರ
### (ಕ್ಷೇತ್ರಫಲದ ಅಳತೆಗೆ ಸಂಬಂಧಿಸಿದ ಲೆಕ್ಕಾಚಾರ)

೧. ನನ್ನ ಇಷ್ಟಾರ್ಥ ಸಾಧನೆಗಾಗಿ ನಾನು ಮನ, ವಚನ, ಕಾಯದಿಂದ ಕೃತಕೃತ್ಯರಾದ ಮತ್ತು ಸರ್ವೋತ್ಕೃಷ್ಟರಾದ ಸಿದ್ಧರಿಗೆ ಪುನಃ ಪುನಃ ನಮಸ್ಕರಿಸುತ್ತೇನೆ.

ಇನ್ನುಮುಂದೆ ನಾವು ಕ್ಷೇತ್ರಗಣಿತವೆಂಬ ಹೆಸರಿನ ವಿಷಯದ ಆರನೆಯ ಪ್ರಕಾರದ ಲೆಕ್ಕಾಚಾರವನ್ನು ವಿವರಿಸುತ್ತೇವೆ. ಅದು ಮುಂದೆ ತಿಳಿಸಿರುವಂತಿದೆ :

೨. ಭಗವಾನ್ ಜಿನೇಂದ್ರರು ಕ್ಷೇತ್ರಫಲದ ಎರಡು ವಿಧಗಳನ್ನು ತಿಳಿಸಿದ್ದಾರೆ. ಅವುಗಳಲ್ಲಿ ಮೊದಲನೆಯದು ಫಲದ ಸ್ವಭಾವದ ಮೇಲೆ ಆಧಾರವಾಗಿದೆ. ಅಂದರೆ ವ್ಯಾವಹಾರಿಕ ಉದ್ದೇಶಗಳಿಗೆ ಇದು ಹತ್ತಿರವಾಗಿರುತ್ತದೆ ಮತ್ತು ಎರಡನೆಯದು ಅತಿಸೂಕ್ಷ್ಮವಾಗಿ ಕರಾರುವಕ್ಕಾಗಿರುತ್ತದೆ. ಇದನ್ನು ಗಣನೆಗೆ ತೆಗೆದುಕೊಂಡು ನಾನು ಈ ವಿಷಯವನ್ನು ಸ್ಪಷ್ಟವಾಗಿ ವಿವರಿಸುತ್ತೇನೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



त्रिभुजचतुर्भुजवृत्तक्षेत्राणि स्वस्वभेदभिन्नानि । गणितार्णवपारगतैराचार्यैस्सम्यगुक्तानि ॥ ३ ॥
त्रिभुजं त्रिधा विभिन्नं चतुर्भुजं पञ्चधाष्टधा वृत्तम् । अवशेषक्षेत्राणि ह्येतेषां भेदभिन्नानि ॥ ४ ॥
त्रिभुजं तु समं द्विसमं विषमं चतुरश्रमपि समं भवति ।
द्विद्विसमं द्विसमं स्यात्त्रिसमं विषमं बुधाः प्राहुः ॥ ५ ॥
समवृत्तमर्धवृत्तं चायतवृत्तं च कम्बुकावृत्तम् । निम्नोन्नतं च वृत्तं बहिरन्तश्चक्रवालवृत्तं च ॥ ६ ॥

---

3. Tribhujacaturbhujavṛttakṣetrāṇi svasvabhedabhinnāni, gaṇitārṇavapāragatairācāryaissamyaguktāni.

4. Tribhujaṁ tridhā vibhinnaṁ caturbhujaṁ pañcadhāṣṭadhā vṛttam, avaśeṣakṣetrāṇi hyeteṣāṁ bhedabhinnāni.

5. Tribhujaṁ tu samaṁ dvisamaṁ viṣamaṁ caturaśramapi samaṁ bhavati, dvidvisamaṁ dvisamaṁ syāttrisamaṁ viṣamaṁ budhāḥ prāhuḥ.

6. Samavṛttamardhavṛttaṁ cāyatavṛttaṁ ca kambukāvṛttam, nimnonnataṁ ca vṛttaṁ bahirantaścakravālavṛttaṁ ca.

---

**3.** (Mathematical) teachers, who have reached the other shore of the ocean of calculation, have given out well (the various kinds of) areas as consisting of those that are trilateral, quadrilateral and curvi-linear, being differentiated into their respective varieties.

**4.** A trilateral area is differentiated in three ways; a quadrilateral one in five ways and a curvi-linear one in eight ways. All the remaining (kinds) of areas are indeed variations of the varieties of these (different kinds of areas).

**5.** Learned men say that the trilateral area may be equilateral, isosceles or scalene and that the quadrilateral area also may be equi-lateral, equi-dichastic, equi-bilateral, equi-trilateral and inequi-lateral.

**6.** (The curvi-linear area may be) a circle, a semicircle, an ellipse, a conchiform area, a concave circular area, a convex circular area, an out-lying annulus or an in-reaching annulus.

---

೩. ತ್ರಿಭುಜ, ಚತುರ್ಭುಜ ಮತ್ತು ವೃತ್ತ (ವಕ್ರ ರೇಖೆಯ) ಕ್ಷೇತ್ರಗಳನ್ನು ಇದೇ ಕ್ರಮವಾದ, ಪ್ರಕಾರಗಳಲ್ಲಿ ಭೇದಮಾಡಲಾಗಿದೆ ಎಂದು ಗಣಿತರೂಪವೆಂಬ ಸಮುದ್ರದ ಆಚೆ ದಡವನ್ನು ಸೇರಿರುವ ಆಚಾರ್ಯರು ಚೆನ್ನಾಗಿ (ವಿವಿಧ ಪ್ರಕಾರಗಳ ಕ್ಷೇತ್ರಫಲಗಳ ವಿಷಯದಲ್ಲಿ)ಹೇಳಿದ್ದಾರೆ.

೪. ತ್ರಿಭುಜ ಕ್ಷೇತ್ರವನ್ನು ಮೂರು ಪ್ರಕಾರಗಳಲ್ಲಿ, ಚತುರ್ಭುಜವನ್ನು ಐದು ಪ್ರಕಾರಗಳಲ್ಲಿ ಮತ್ತು ವೃತ್ತವನ್ನು ಎಂಟು ಪ್ರಕಾರಗಳಲ್ಲಿ ವಿಭಜಿಸಲಾಗಿದೆ. ಉಳಿದ ಪ್ರಕಾರಗಳ ಕ್ಷೇತ್ರಗಳು ವಾಸ್ತವದಲ್ಲಿ ಈ ವಿಭಿನ್ನ ಪ್ರಕಾರಗಳ ಕ್ಷೇತ್ರಫಲಗಳ ವಿಭಿನ್ನ ಭೇದಗಳಾಗಿವೆ.

೫. ಬುದ್ಧಿವಂತ ಜನರು ಹೇಳುವುದೇನೆಂದರೆ ತ್ರಿಭುಜ ಕ್ಷೇತ್ರವು ಸಮಭುಜಗಳು, ಸಮದ್ವಿಬಾಹುಗಳು ಅಥವಾ ಅಸಮಭುಜಗಳುಳ್ಳದ್ದಾಗಿರಬಹುದು ಮತ್ತು ಚತುರ್ಭುಜ ಕ್ಷೇತ್ರವೂ ಕೂಡ ಸಮಭುಜಗಳು (ವರ್ಗ),ದ್ವಿದ್ವಿಸಮಭುಜಗಳು (ಆಯತ), ದ್ವಿಸಮಭುಜಗಳು (ಸಮಲಂಬ ಚತುರ್ಭುಜದಲ್ಲಿ ಎರಡು ಅಸಮಾನಾಂತರ ಭುಜಗಳು ಸಮವಾಗಿರುತ್ತವೆ). ತ್ರಿಸಮಭುಜಗಳು (ಸಮಲಂಬ ಚತುರ್ಭುಜದಲ್ಲಿ ಮೂರು ಭುಜಗಳು ಸಮವಾಗಿರುತ್ತವೆ ಮತ್ತು ವಿಷಮ (ಸಾಧಾರಣ)ಚತುರ್ಭುಜಗಳಾಗಿರಬಹುದು.

೬. ವಕ್ರರೇಖೆಯ ಕ್ಷೇತ್ರವು ವೃತ್ತ, ಅರ್ಧವೃತ್ತ, ಅಂಡವೃತ್ತ, ಶಂಖಾಕಾರಕ್ಷೇತ್ರ, ನಿಮ್ನವೃತ್ತ, ಉನ್ನತಾವೃತ್ತ, ಉಂಗುರದ ಹೊರವಲಯ ಅಥವಾ ಉಂಗುರದ ಒಳವಲಯಗಳಾಗಿರಬಹುದು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**5-6.** The various kinds of enclosed areas mentioned in these stanzas are illustrated below :

೫-೬. ಈ ಶ್ಲೋಕದಲ್ಲಿ ತಿಳಿಸಿರುವ ವಿವಿಧ ಪ್ರಕಾರಗಳ ಆವೃತ ಕ್ಷೇತ್ರಗಳನ್ನು, ಈ ಕೆಳಗೆ ಉದಾಹರಿಸಲಾಗಿದೆ :



1. Samatribhuja
Equilateral trilateral figure
ಸಮಬಾಹು ತ್ರಿಭುಜ

2. Dvisamatribhuja
Isosceles trilateral figure
ದ್ವಿಸಮಬಾಹು ತ್ರಿಭುಜ



3. Viṣamatribhuja
Scalene trilateral figure
ವಿಷಮಬಾಹು ತ್ರಿಭುಜ



4. Samacaturaśra
Equi-lateral quadrilateral.
ಸಮಚತುರ್ಭುಜ



5. Dvidvisamacaturaśra
Equi-dichastic quadrilateral
ದ್ವಿದ್ವಿಸಮಚತುರ್ಭುಜ



6. Dvisamacaturaśra
Equibilateral quadrilateral.
ದ್ವಿಸಮಚತುರ್ಭುಜ



7. Trisamacaturaśra
Equi-trilateral quadrilateral.
ತ್ರಿಸಮಚತುರ್ಭುಜ



8. Viṣmacaturaśra
Inequi-lateral quadrilateral
ವಿಷಮಚತುರ್ಭುಜ



9. Samavṛtta
Circle
ಸಮವೃತ್ತ
ವೃತ್ತ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri





10. Ardhavṛtta
Semicircle
ಅರ್ಧವೃತ್ತ



11. Āyatavṛtta
Ellipse
ಆಯತವೃತ್ತ



12. Kambukāvṛtta
conchiform area
ಶಂಖಾಕಾರ ಕ್ಷೇತ್ರ



13. Nimnavṛtta
concave circular area
ನಿಮ್ನವೃತ್ತ



14. Unnatavṛtta
convex circular area
ಉನ್ನತವೃತ್ತ



15. Bahiścakravālavṛtta
Out-lying annulus
ಉಂಗುರದ ಹೊರವಲಯ



16. Antaścakravālavṛtta
Inreaching annulus
ಉಂಗುರದ ಒಳವಲಯ

From a consideration of the rules given for the measurement of the dimensions and areas of quadrilateral figures, it has to be concluded that all the quadrilateral figures mentioned in this chapter are cyclic. Hence an equilateral quadrilateral is a square, an equidichastic quadrilateral is an oblong and equibilateral and equi-trilateral quadrilaterals have their topside parallel to the base.

ಚತುರ್ಭುಜ ಕ್ಷೇತ್ರಗಳ ಕ್ಷೇತ್ರಫಲ ಮತ್ತು ಇತರ ಅಳತೆಗಾಗಿ ಕೊಟ್ಟಿರುವ ನಿಯಮಗಳನ್ನು ಪರಿಶೀಲಿಸಿದರೆ, ಈ ಅಧ್ಯಾಯದಲ್ಲಿ ತಿಳಿಸಿರುವ ಎಲ್ಲ ಚತುರ್ಭುಜ ಕ್ಷೇತ್ರಗಳು ಚಕ್ರೀಯವಾಗಿವೆ ಎಂದು ತೀರ್ಮಾನಿಸಬೇಕಾಗುತ್ತದೆ. ಆದ್ದರಿಂದ ಸಮಚತುರ್ಭುಜವು ವರ್ಗ, ದ್ವಿದ್ವಿಸಮಚತುರ್ಭುಜವು ಆಯತ ಮತ್ತು ದ್ವಿಸಮಚತುರ್ಭುಜ ಹಾಗೂ ತ್ರಿಸಮಚತುರ್ಭುಜಗಳಲ್ಲಿ ಮೇಲಿನ ಭುಜಗಳು ಪಾದಕ್ಕೆ ಸಮಾನಾಂತರವಾಗಿರುತ್ತವೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## व्यावहारिकगणितम्

त्रिभुजचतुर्भुजक्षेत्रफलानयनसूत्रम् -
त्रिभुजचतुर्भुजबाहुप्रतिबाहुसमासदलहतं गणितम् ।
नेमेर्भुजयुत्यर्धं व्यासगुणं तत्फलार्धमिह बालेन्दोः ॥ ७ ॥

### अत्रोद्देशकः

त्रिभुजक्षेत्रस्याष्टौ बाहुप्रतिबाहुभूमयो दण्डाः। तद्व्यावहारिकफलं गणयित्वाचक्ष्व मे शीघ्रम् ॥८॥

---

## Vyāvahārikagaṇitam

Tribhujacaturbhujakṣetraphalānayanasūtram -

7. Tribhujacaturbhujabāhupratibāhusamāsadalahataṁ gaṇitam,
nemerbhujayutyardhaṁ vyāsaguṇaṁ tatphalārdhamiha bālendoḥ.

### Atroddeśakaḥ

8. Tribhujakṣetrasyāṭau bāhupratibāhubhūmayo daṇḍāḥ,
tadvyāvahārikaphalaṁ gaṇayitvācakṣva me śīghram.

---

## Calculation relating to approximate measurement (of areas)

The rule for arriving at the (approximate) measure of the areas of trilateral and quadrilateral fields :

**7.** The product of the halves of the sums of the opposite sides becomes the (quantitative) measurement (of the area) of trilateral and quadrilateral figures. In the case of (a figure constituting a circular annulus like) the rim of a wheel, half of the sum of the (inner and outer) circumferences multiplied by (the measure of) the breadth (of the annulus gives the quantitative measure of the area thereof). Half of this result happens to be here the area of (a figure resembling) the crescent moon.

### *Examples in illustration thereof*

**8.** In the case of a trilateral figure, 8 *daṇḍas* happen to be the measure of the side, the opposite side and the base; tell me quickly, after calculating, the practically approximate value (of the area) thereof.

---

## ವ್ಯಾವಹಾರಿಕ ಗಣಿತ

### (ಕ್ಷೇತ್ರಫಲಗಳ ಅಂದಾಜು ಅಳತೆಗೆ ಸಂಬಂಧಪಟ್ಟ, ಲೆಕ್ಕಾಚಾರ)

ತ್ರಿಭುಜ ಮತ್ತು ಚತುರ್ಭುಜ ಕ್ಷೇತ್ರಗಳ (ಅಂದಾಜು) ಕ್ಷೇತ್ರಫಲಗಳನ್ನು ಪಡೆಯಲು ನಿಯಮ :

೭. ಸಮ್ಮುಖ ಭುಜಗಳ ಮೊತ್ತಗಳ ಅರ್ಧಭಾಗಗಳ ಗುಣಲಬ್ಧವು ತ್ರಿಭುಜ ಮತ್ತು ಚತುರ್ಭುಜ ಕ್ಷೇತ್ರ ಫಲಗಳ ಅಳತೆಯಾಗಿರುತ್ತದೆ. (ಉಂಗುರಾಕೃತಿಯ) ಚಕ್ರದ ಅಂಚಿನ ಕ್ಷೇತ್ರಫಲವು, ಒಳ ಮತ್ತು ಹೊರ ಪರಿಧಿಗಳ ಮೊತ್ತದ ಅರ್ಧಭಾಗವನ್ನು, ಉಂಗುರದ ಅಗಲದಿಂದ ಗುಣಿಸುವುದರಿಂದ ದೊರೆಯುತ್ತದೆ. ಈ ಫಲದ ಅರ್ಧಭಾಗವು ಇಲ್ಲಿ ಬಾಲಚಂದ್ರನಿಗೆ ಹೋಲುವ ಆಕೃತಿಯ ಕ್ಷೇತ್ರಫಲವಾಗುತ್ತದೆ.

### ಉದಾಹರಣೆಯಿಂದ ವಿಶ್ಲೇಷಣ

೮. ತ್ರಿಭುಜದ ಸಂಬಂಧದಲ್ಲಿ ಭುಜ, ಸಮ್ಮುಖ ಭುಜ ಮತ್ತು ಪಾದಗಳ ಅಳತೆಯು ೮ *ದಂಡ*ಗಳಾಗಿವೆ. ಇದರ ವ್ಯಾವಹಾರಿಕ ಕ್ಷೇತ್ರಫಲವೇನೆಂದು ನನಗೆ ಬೇಗನೆ ಹೇಳು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



7. A trilateral figure is here conceived to be formed by making the topside, i.e., the side opposite to the base, of a quadrilateral so small as to be neglected. Then the two lateral sides of the trilateral figure become the opposite sides, the topside being taken to be nil in value. Hence it is that the rule speaks of opposite sides even in the case of a trilateral figure.

As half the sum of the two sides of a triangle is, in all cases bigger than the altitude, the value of the area arrived at according to this rule cannot be accurate in any instance.

In regard to quadrilateral figures the value of the area arrived at according to this rule can be accurate in the case of a square and an oblong, but only approximate in other cases.

*Nēmi* is the area enclosed between the circumferences of two concentric circles and the rule here stated for finding out the approximate measure of the area of a *Nēmikṣētra* happens to give the accurate measure thereof.

In the case of a figure resembling the crescent moon, it is evident that the result arrived at according to the rule gives only an approximate measure of the area.

೭. ಇಲ್ಲಿ ತ್ರಿಭುಜವನ್ನು, ಒಂದು ಚತುರ್ಭುಜದಿಂದ ಅದರ ಮೇಲಿನ ಭುಜ ಅಂದರೆ ಪಾದಕ್ಕೆ ಎದುರಾಗಿರುವ ಭುಜವನ್ನು ಉಪೇಕ್ಷಿಸಬಹುದಾದಷ್ಟು ಚಿಕ್ಕದು ಮಾಡಿದ ಚತುರ್ಭುಜವೆಂದು ತಿಳಿಯಲಾಗುತ್ತದೆ. ಆಗ ತ್ರಿಭುಜದ ಪಕ್ಕದ ಎರಡು ಭುಜಗಳು ಸಮ್ಮುಖ ಭುಜಗಳಾಗುತ್ತವೆ ಮತ್ತು ಮೇಲಿನ ಭುಜವನ್ನು ಅಳತೆಯಲ್ಲಿ ಏನೂ ಇಲ್ಲವೆಂದು ತೆಗೆದುಕೊಳ್ಳಲಾಗುತ್ತದೆ. ಆದ್ದರಿಂದ ನಿಯಮದಲ್ಲಿ ತ್ರಿಭುಜ ಕ್ಷೇತ್ರದ ಸಂಬಂಧದಲ್ಲೂ ಕೂಡ ಸಮ್ಮುಖ ಭುಜಗಳ ಉಲ್ಲೇಖವನ್ನು ಮಾಡಲಾಗಿದೆ. ತ್ರಿಭುಜದ ಎರಡು ಭುಜಗಳ ಮೊತ್ತದ ಅರ್ಧಭಾಗವು ಎಲ್ಲ ಪ್ರಕರಣಗಳಲ್ಲಿ ಲಂಬೋನ್ನತಿಗಿಂತ ಹೆಚ್ಚಾಗಿರುತ್ತದೆ. ಆದ್ದರಿಂದ ಈ ನಿಯಮದ ಪ್ರಕಾರ ದೊರೆಯುವ ಕ್ಷೇತ್ರಫಲವು ಯಾವುದೇ ಉದಾಹರಣೆಯಲ್ಲೂ ಕರಾರುವಾಕ್ಕಾಗಿರುವುದಿಲ್ಲ.

ಚತುರ್ಭುಜ ಕ್ಷೇತ್ರಗಳ ಸಂಬಂಧದಲ್ಲಿ, ಈ ನಿಯಮದ ಅನುಸಾರವಾಗಿ ಪ್ರಾಪ್ತವಾಗುವ ಕ್ಷೇತ್ರಫಲವು ವರ್ಗ ಮತ್ತು ಆಯತಗಳ ವಿಷಯದಲ್ಲಿ ಕರಾರುವಾಕ್ಕಾಗಿರುತ್ತದೆ, ಆದರೆ ಇತರ ಪ್ರಕರಣಗಳಲ್ಲಿ ಇದು ಕೇವಲ ಅಂದಾಜಾಗಿರುತ್ತದೆ. ಕೇಂದ್ರವು ಒಂದೇ ಆಗಿರುವ ಎರಡು ವೃತ್ತಗಳ ಪರಿಧಿಗಳ ಮಧ್ಯದ ಕ್ಷೇತ್ರವನ್ನು *ನೇಮಿಕ್ಷೇತ್ರ*ವೆಂದು ಕರೆಯಲಾಗುತ್ತದೆ. ಇಲ್ಲಿ ಕೊಟ್ಟಿರುವ ನಿಯಮದ ಪ್ರಕಾರದ *ನೇಮಿಕ್ಷೇತ್ರ*ದ ವ್ಯಾವಹಾರಿಕ ಕ್ಷೇತ್ರಫಲದ ಅಳತೆಯು ಕರಾರುವಾಕ್ಕಾಗಿರುತ್ತದೆ.

ಬಾಲಚಂದ್ರನಿಗೆ ಹೋಲುವ ಆಕೃತಿಯ ವಿಷಯದಲ್ಲಿ ಈ ನಿಯಮದ ಅನುಸಾರವಾಗಿ ದೊರೆಯುವ ಕ್ಷೇತ್ರಫಲವು ಕೇವಲ ಅಂದಾಜು ಅಳತೆಯಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



द्विसमत्रिभुजक्षेत्रस्यायामः सप्तसप्ततिर्दण्डाः। विस्तारो द्वाविंशतिरथ हस्ताभ्यां च सम्मिश्राः ॥ ९ ॥
त्रिभुजक्षेत्रस्य भुजस्त्रयोदश प्रतिभुजस्य पञ्चदश ।
भूमिश्चतुर्दशास्य हि दण्डा विषमस्य किं गणितम् ॥ १० ॥
गजदन्तक्षेत्रस्य च पृष्टेऽष्टाशीतिरत्र सन्दृष्टाः। द्वासप्ततिरुदरे तन्मूलेऽपि त्रिंशदिह[1] दण्डाः ॥ ११ ॥

---

9. Dvisamatribhujakṣetrasyāyāmaḥ saptasaptatirdaṇḍāḥ, vistāro dvāviṁśatiratha hastābhyāṁ ca sammiśrāḥ.

10. Tribhujakṣetrasya bhujastrayodaśa pratibhujasya pañcadaśa, bhūmiścaturdaśāsya hi daṇḍā viṣamasya kiṁ gaṇitam.

11. Gajadantakṣetrasya ca pṛṣṭe'ṣṭāśītiratra sandṛṣṭāḥ, dvāsaptatirudare tanmūle'pi triṁśadiha daṇḍāḥ.

---

**9.** In the case of a trilateral figure with two equal sides, the length (represented by the two sides) is 77 *daṇḍas* and the breadth (measured by the base) is 22 *daṇḍas* associated with 2 *hastas*. (Find out the area).

**10.** In the case of a scalene trilateral figure, one side is 13 *daṇḍas*, the opposite side is 15 *daṇḍas* and the base is 14 *daṇḍas*. So what is the quantitative measure (of the area) of this (figure)?

**11.** In the case of a figure resembling (the medial longitudinal section of) the tusk of an elephant, the length of the outer curve is seen to be 88 *daṇḍas*; that of the inner curve is (seen to be) 72 *daṇḍas*; the measure of (the thickness at the root of the tusk is 30 *daṇḍas*; (What is the mesaure of the area?)

---

೯. ಎರಡು ಸಮಭುಜಗಳನ್ನುಳ್ಳ, ಒಂದು ತ್ರಿಭುಜದ ಸಂಬಂಧದಲ್ಲಿ ಎರಡು ಭುಜಗಳಿಂದ ನಿರೂಪಿತವಾದ ಉದ್ದವು ೭೭ *ದಂಡ*ಗಳು ಮತ್ತು (ಪಾದದಿಂದ)ಅಳೆಯಲಾದ ಅಗಲವು ೨೨ *ದಂಡ*, ೨ *ಹಸ್ತ*ಗಳು. ಕ್ಷೇತ್ರಫಲವನ್ನು ಕಂಡುಹಿಡಿ.

೧೦. ಒಂದು ವಿಷಮ ತ್ರಿಭುಜದ ಸಂಬಂಧದಲ್ಲಿ ಒಂದು ಭುಜವು ೧೩ *ದಂಡ*ಗಳು, ಸಮ್ಮುಖ ಭುಜವು ೧೫ *ದಂಡ*ಗಳು ಮತ್ತು ಪಾದವು ೧೪ *ದಂಡ*ಗಳಾಗಿವೆ. ಈ ಆಕೃತಿಯ ಕ್ಷೇತ್ರಫಲದ ಅಳತೆಯೇನು?

೧೧. ಆನೆಯ ದಂತದ (ಮಧ್ಯದಿಂದ) ಸೀಳಿದ ಭಾಗವನ್ನು ಹೋಲುವ ಆಕೃತಿಯ ವಿಷಯದಲ್ಲಿ, ಹೊರವೃತ್ತದ ಉದ್ದವು ೮೮ *ದಂಡ*ಗಳು, ಒಳವೃತ್ತದ ಉದ್ದವು ೭೨ *ದಂಡ*ಗಳು ಮತ್ತು ಬುಡದ ಗಾತ್ರವು ೩೦ *ದಂಡ*ಗಳಾಗಿವೆ. ಕ್ಷೇತ್ರಫಲವೇನು?

---

1. The reading in both B and M is त्रिंशतिः; but as this is erroneous it is corrected into त्रिंशदिह so as to meet the requirements of the metre also.

**11.** The shape of the figure mentioned in this stanza seems to be what is given here in the margin : it is intended that this should be treated as a trilateral figure and that the area thereof should be found out in accordance with the rule given in relation to trilateral figures.



೧೧. ಈ ಶ್ಲೋಕದಲ್ಲಿ ತಿಳಿಸಿರುವ ಆಕೃತಿಯ ಆಕಾರವು ಪಕ್ಕದಲ್ಲಿ ಕೊಟ್ಟಿರುವ ಆಕೃತಿಗೆ ಸಮವಾಗಿರುತ್ತದೆ. ಇದನ್ನು ತ್ರಿಭುಜ ಕ್ಷೇತ್ರಕ್ಕೆ ಸಮಾನವೆಂದು ಪರಿಗಣಿಸಬೇಕು. ನಂತರ ಇದರ ಕ್ಷೇತ್ರಫಲವನ್ನು ತ್ರಿಭುಜ ಕ್ಷೇತ್ರಗಳ ಸಂಬಂಧದಲ್ಲಿ ಕೊಡಲಾಗಿರುವ ನಿಯಮದ ಪ್ರಕಾರ ಕಂಡುಹಿಡಿಯಬೇಕು ಎಂಬುದೇ ಇಲ್ಲಿಯ ಉದ್ದೇಶವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



क्षेत्रस्य दण्डषष्टिर्बाहुप्रतिबाहुकस्य गणयित्वा ।
समचतुरश्रस्य त्वं कथय सखे गणितफलमाशु ॥ १२ ॥
आयतचतुरश्रस्य व्यायामः सैकषष्टिरिह दण्डाः। विस्तारो द्वात्रिंशद्व्यवहारं गणितमाचक्ष्व ॥ १३ ॥
दण्डास्तु सप्तषष्टिर्द्विसमचतुर्बाहुकस्य चायामः। व्यासश्चाष्टत्रिंशत् क्षेत्रस्यास्य त्रयस्त्रिंशत् ॥ १४ ॥
क्षेत्रस्याष्टोत्तरशतदण्डा बाहुत्रये मुखे चाष्टौ ।
हस्तैस्त्रिभिर्युतास्तत्त्रिसमचतुर्बाहुकस्य वद गणक ॥ १५ ॥

---

12. Kṣetrasya daṇḍaṣaṣṭirbāhupratibāhukasya gaṇayitvā, samacaturaśrasya tvaṁ kathaya sakhe gaṇitaphalamāśu.

13. Āyatacaturaśrasya vyāyāmaḥ saikaṣaṣṭiriha daṇḍāḥ, vistāro dvātriṁśadvyavahāraṁ gaṇitamācakṣva.

14. Daṇḍāstu saptaṣaṣṭirdvisamacaturbāhukasya cāyāmaḥ, vyāsaścāṣṭatriṁśat kṣetrasyāsya trayastriṁśat.

15. Kṣetrasyāṣṭottaraśatadaṇḍā bāhutraye mukhe cāṣṭau, hastaistribhiryutāstattrisamacaturbāhukasya vada gaṇaka.

---

**12.** In the case of an equilateral quadrilateral figure, the sides and the opposite sides (whereof) are each 60 *daṇḍas* in measure, you tell me quickly, 0 friend, the resulting (quantitative) measure (of the area thereof).

**13.** In the case of a longish quadrilateral figure here, the length is 61 *daṇḍas*, the breadth is 32. Give out the practically approximate measure (of the area thereof).

**14.** In the case of a quadrilateral with two equal sides, the length (as measured along either of the equal sides) is 67 *daṇḍas*, the breadth of this figure is 38 *daṇḍas* (at the base) and 33 *daṇḍas* (at the top. What is the measure of the area of the figure?)

**15.** In the case of a quadrilateral figure with three equal sides, (each of these) three sides measures 108 *daṇḍas*, the (remaining side here called) mukha or top-side measures 8 *daṇḍaṣ* and 3 *hastas*. Accordingly, tell me, 0 mathematician (the measure of the area of this figure).

---

೧೨. ಒಂದು ಸಮಾಯಾತ (ವರ್ಗ) ದ ಸಂಬಂಧದಲ್ಲಿ, ಪತ್ರಿಯೊಂದು ಭುಜವೂ ೬೦ *ದಂಡ*ಗಳಾಗಿವೆ. ಎಲೈ ಮಿತ್ರನೇ, ಹೀಗೆ ದೊರೆತ ಕ್ಷೇತ್ರಫಲದ ಅಳತೆಯನ್ನು ಬೇಗನೆ ನನಗೆ ಹೇಳು.

೧೩. ಒಂದು ಆಯತ ಚತುರಶ್ರ ಕ್ಷೇತ್ರದ ಸಂಬಂಧದಲ್ಲಿ, ಉದ್ದವು ೬೧ *ದಂಡ*ಗಳು ಮತ್ತು ಅಗಲವು ೩೨ *ದಂಡ*ಗಳಾಗಿವೆ. ವ್ಯಾವಹಾರಿಕ ಕ್ಷೇತ್ರಫಲವನ್ನುತಿಳಿಸು.

೧೪. ಎರಡು ಸಮಬಾಹುಗಳುಳ್ಳ ಚತುರ್ಭುಜದ ಪ್ರತಿಯೊಂದು ಭುಜದ ಉದ್ದವು ೬೭ *ದಂಡ*ಗಳು. ಈ ಆಕೃತಿಯ ಅಗಲವು ೩೮ *ದಂಡ*ಗಳು (ಪಾದದಿಂದ) ಮತ್ತು (ಮೇಲೆ) ೩೩ *ದಂಡ*ಗಳಾಗಿವೆ. ಕ್ಷೇತ್ರಫಲದ ಅಳತೆಯೇನು?

೧೫. ಮೂರು ಸಮಬಾಹುಗಳುಳ್ಳ ಒಂದು ಚತುರ್ಭುಜದಲ್ಲಿ ಪ್ರತಿಯೊಂದು ಸಮಬಾಹುವು ೧೦೮ *ದಂಡ*ಗಳಾಗಿವೆ. ಶೇಷ (ಮುಖ ಅಥವಾ ಮೇಲ್ಬಾಹುವೆಂದು ಕರೆಯಲಾಗುವ) ಬಾಹುವು ೮ *ದಂಡ* ೩ *ಹಸ್ತ*ಗಳಾಗಿವೆ. ಎಲೈ ಗಣಿತಜ್ಞನೇ, ಈ ಆಕೃತಿಯ ಕ್ಷೇತ್ರಫಲದ ಅಳತೆಯನ್ನು ನನಗೆ ಬೇಗನೆ ಹೇಳು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



विषमक्षेत्रस्याष्टत्रिंशद्दण्डाः क्षितिर्मुखे द्वात्रिंशत् ।
पञ्चाशत्प्रति[2] बाहुः षष्टिस्त्वन्यः किमस्य चतुरश्रे ॥ १६ ॥
परिघादेरस्तु दण्डास्त्रिंशपृष्ठं शतत्रयं दृष्टम् ।
नवपञ्चगुणो व्यासो नेमिक्षेत्रस्य किं गणितम् ॥ १७ ॥
हस्तौ द्वौ विष्कम्भः पृष्ठेऽष्टाषष्टिरिह च सन्दृष्टाः ।
उदरे तु द्वात्रिंशद्बालेन्दोः किं फलं कथय ॥ १८ ॥

---

16. Viṣamakṣetrasyāṣṭatriṁśaddaṇḍāḥ kṣitirmukhe dvātriṁśat, pañcāśatpratibāhuḥ ṣaṣṭistvanyaḥ kimasya caturaśre.

17. Parighāderastu daṇḍāstriṁśatpṛṣṭaṁ śatatrayaṁ dṛṣṭam, navapañcaguṇo vyāso nemikṣetrasya kiṁ gaṇitam.

18. Hastau dau viṣkambaḥ pṛṣṭe'ṣṭāṣaṣṭiriha ca sandṛṣṭāḥ, udare tu dvātriṁśadbālendoḥ kiṁ phalaṁ kathaya.

---

**16.** In the case of a quadrilateral the sides of which are all unequal, the side forming the base measures 38 *daṇḍas*, the side forming the top is 32 *daṇḍas*, one of the lateral sides is 50 *daṇḍas* and the other is 60 *daṇḍas*. What is (the area) of this (figure)?

**17.** In an annulus, the inner circular boundary measures 30 *daṇḍas*; the outer circular boundary is seen to be 300. The breadth of the annulus is 45. What is the calculated measure of the area of (this) annulus?

**18.** In the case of a figure resembling the crescent moon, the breadth is seen to be 2 *hastas*, the outer curve 68 *hastas* and the inner curve 32 *hastas*. Say what the (resulting) area is.

---

೧೬. ವಿಷಮ ಚತುರ್ಭುಜದ ಪಾದವು ೩೮ *ದಂಡ*ಗಳು, ಮೇಲಿನ ಮುಖ ಭುಜವು ೩೨ *ದಂಡ*ಗಳು, ಪಕ್ಕದ ಒಂದು ಬಾಹುವು ೫೦ *ದಂಡ*ಗಳು ಮತ್ತು ಇನ್ನೊಂದು ೬೦ *ದಂಡ*ಗಳು. ಈ ಆಕೃತಿಯ ಕ್ಷೇತ್ರಫಲವೇನು?

೧೭. ಒಂದು ಉಂಗುರದಲ್ಲಿ, ಒಳವೃತ್ತಾಕಾರದ ಸೀಮೆಯು ೩೦ *ದಂಡ*ಗಳು, ಹೊರವೃತ್ತಾಕಾರದ ಸೀಮೆಯು ೩೦೦ *ದಂಡ*ಗಳು, ಉಂಗುರದ ಅಗಲವು ೪೫ *ದಂಡ*ಗಳಾಗಿವೆ. ಈ ಉಂಗುರದ (ನೇಮಿಕ್ಷೇತ್ರದ) ಕ್ಷೇತ್ರಫಲದ ಅಳತೆಯೇನು?

೧೮. ಬಾಲಚಂದ್ರನಿಗೆ ಹೋಲುವ ಆಕೃತಿಯ ಸಂಬಂಧದಲ್ಲಿ ಅಗಲವು ೨ *ಹಸ್ತ*ಗಳು, ಹೊರವಕ್ರವು ೬೮ *ಹಸ್ತ*ಗಳು ಮತ್ತು ಒಳವಕ್ರವು ೩೨ *ಹಸ್ತ*ಗಳಾಗಿವೆ. (ಈ ಆಕೃತಿಯ) ಕ್ಷೇತ್ರಫಲವೇನೆಂದು ಹೇಳು.

---

2. B reads देक for स्रति



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



वृत्तक्षेत्रफलानयनसूत्रम् -
त्रिगुणीकृतविष्कम्भः परिधिर्व्यासार्धवर्गराशिरयम् ।
त्रिगुणः फलं समेऽर्धे वृत्तेऽर्धं प्राहुराचार्याः ॥ १९ ॥

**अत्रोद्देशकः**

व्यासोऽष्टादश वृत्तस्य परिधिः कः फल च किम् ।
व्यासोऽष्टादश वृत्तार्धे गणितं किं वदाशु मे ॥ २० ॥

---

Vṛttakṣetraphalānayanasūtram-

19. Triguṇīkṛtaviṣkambhaḥ paridhirvyāsārdhavargarāśirayam, triguṇaḥ phalaṁ same'rdhe vṛtte'rdhaṁ prāhurācāryāḥ.

**Atroddeśakaḥ**

20. Vyāso'ṣṭādaśa vṛttasya paridhiḥ kaḥ phalaṁ ca kim, vyāso'ṣṭādaśa vṛttārdhe gaṇitaṁ kiṁ vadāśu me.

---

The rule for arriving at the (practically approximate value of the) area of the circle :

**19.** The (measure of the) diameter multiplied by three is the measure of the circumference and the number representing the square of half the diameter, if multiplied by three, gives the (resulting) area in the case of a complete circle. Teachers say that, in the case of a semicircle, half (of these) give (respectively) the measure (of the circumference and of the area).

***Examples in illustration thereof***

**20.** In the case of a circle, the diameter is 18. What is the circumference and what is the (resulting) area (thereof)? In the case of a semicircle, the diameter is 18 : tell me quickly what the calculated measure is (of the area as well as of the circumference).

---

ವೃತ್ತದ ವ್ಯಾವಹಾರಿಕ ಕ್ಷೇತ್ರಫಲವನ್ನು ಪಡೆಯಲು ನಿಯಮ :

೧೯. ಒಂದು ಪೂರ್ಣ ವೃತ್ತದ ಸಂಬಂಧದಲ್ಲಿ ವ್ಯಾಸದ ಅಳತೆಯನ್ನು ಮೂರರಿಂದ ಗುಣಿಸಿದರೆ, ಪರಿಧಿಯ ಅಳತೆಯಾಗುತ್ತದೆ ಮತ್ತು ವ್ಯಾಸದ ಅರ್ಧಭಾಗದ ವರ್ಗವನ್ನು ನಿರೂಪಿಸುವ ಸಂಖ್ಯೆಯನ್ನು ಮೂರರಿಂದ ಗುಣಿಸಿದರೆ, ಬೇಕಾದ ಕ್ಷೇತ್ರಫಲವಾಗುತ್ತದೆ. ಒಂದು ಅರ್ಧವೃತ್ತದ ಸಂಬಂಧದಲ್ಲಿ (ಇವುಗಳ) ಅರ್ಧಭಾಗಗಳು, ಕ್ರಮವಾಗಿ ಪರಿಧಿಯ ಮತ್ತು ಕ್ಷೇತ್ರಫಲದ ಅಳತೆಯಾಗುತ್ತದೆ ಎಂದು ಆಚಾರ್ಯರು ಹೇಳುತ್ತಾರೆ.

**ಉದಾಹರಣೆಗಳಿಂದ ವಿಶ್ಲೇಷಣ**

೨೦. ಒಂದು ವೃತ್ತದ ವ್ಯಾಸವು ೧೮ ಆಗಿದೆ. ಅದರ ಪರಿಧಿಯೇನು ಮತ್ತು ಕ್ಷೇತ್ರಫಲವೇನು? ಒಂದು ಅರ್ಧವೃತ್ತದ ವ್ಯಾಸವು ೧೮ ಆಗಿದೆ. ಇದರ ಕ್ಷೇತ್ರಫಲ ಮತ್ತು ಪರಿಧಿ ಏನೆಂದು ಬೇಗನೆ ಹೇಳು.

---

19. The approximate character of the measure of the circumference as well as of the area as given here is due to the value of $\pi$ being taken as 3.

೧೯. $\pi$ನ ಬೆಲೆಯನ್ನು ೩ ಎಂದು ತೆಗೆದುಕೊಂಡಿರುವ ಕಾರಣದಿಂದ ಇಲ್ಲಿ ಕೊಡಲಾಗಿರುವ ಪರಿಧಿ ಹಾಗೂ ಕ್ಷೇತ್ರಫಲಗಳ ಅಳತೆಯು ಕರಾರುವಾಕ್ಕಾಗಿಲ್ಲ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



आयतवृत्तक्षेत्रफलानयनसूत्रम् -
व्यासार्धयुतो द्विगुणित आयतवृत्तस्य परिधिरायामः ।
विष्कम्भचतुर्भागः परिवेषहतो भवेत्सारम् ॥ २१ ॥

**अत्रोद्देशकः**

क्षेत्रस्यायतवृत्तस्य विष्कम्भो द्वादशैव तु ।
आयामस्तत्र षट्त्रिंशत् परिधिः कः फलं च किम् ॥ २२ ॥

---

Āyatavṛttakṣetraphalānayanasūtram-

21. Vyāsārdhayuto dviguṇita āyatavṛttasya paridhirāyāmaḥ, viṣkambhacaturbhāgaḥ pariveṣahato bhavetsāram.

**Atroddeśakaḥ**

22. Kṣetrasyāyatavṛttasya viṣkambho dvādaśaiva tu, āyāmastatra ṣaṭtriṁśat paridhiḥ kaḥ phalaṁ ca kim.

---

The rule for arriving at (the value of) the area of an elliptical figure :

**21.** The longer diameter, increased by half of the (shorter) diameter and multiplied by two, gives the measure of the circumference of the elliptical figure. One-fourth of the (shorter) diameter, multiplied by the circumference, gives rise to the (measure of the) area (thereof).

***An example in illustration thereof***

**22.** In the case of an elliptical figure the (shorter) diameter is 12 and the longer diameter is 36. What is the circumference and what is the (resulting) area (thereof)?

---

ಅಂಡಾಕೃತಿಯ ಕ್ಷೇತ್ರಫಲವನ್ನು ಪಡೆಯಲು ನಿಯಮ :

೨೧. ದೊಡ್ಡ ವ್ಯಾಸವನ್ನು ಚಿಕ್ಕ ವ್ಯಾಸದ ಅರ್ಧಭಾಗದಿಂದ ಹೆಚ್ಚಿಸಿ ಮತ್ತು ಎರಡರಿಂದ ಗುಣಿಸಿದರೆ, ಅಂಡಾಕೃತಿಯ ಪರಿಧಿಯು ದೊರೆಯುತ್ತದೆ. ಚಿಕ್ಕವ್ಯಾಸದ ನಾಲ್ಕನೆಯ ಒಂದು ಭಾಗವನ್ನು ಪರಿಧಿಯಿಂದ ಗುಣಿಸಿದರೆ (ಬೇಕಾದ) ಕ್ಷೇತ್ರಫಲದ ಅಳತೆಯು ಲಭಿಸುತ್ತದೆ.

**ಉದಾಹರಣೆಯಿಂದ ವಿಶ್ಲೇಷಣ**

೨೨. ಒಂದು ಅಂಡಾಕೃತಿಯ ಸಂಬಂಧದಲ್ಲಿ ಚಿಕ್ಕ ವ್ಯಾಸವು ೧೨ ಮತ್ತು ದೊಡ್ಡ ವ್ಯಾಸವು ೩೬ ಆಗಿದೆ. ಪರಿಧಿ ಮತ್ತು ಕ್ಷೇತ್ರಫಲಗಳೇನು?

---

**21.** The formula given for the circumference of an ellipse is evidently an approximation of a different kind. The area of an ellipse is $\pi\, a.b$, where $a$ and $b$ are the semi-axes. If $\pi$ is taken to be equal to 3, then $\pi\, a.b = 3\, a.b$. But the formula given in the stanza makes the area equal to $2ab + b^2$.

೨೧. ಅಂಡಾಕೃತಿಯ ಪರಿಧಿಗಾಗಿ ಕೊಟ್ಟಿರುವ ಸೂತ್ರವು ಒಂದು ಬೇರೆ ವಿಧದ ಅಂದಾಜೆಂಬುದು ಸ್ಪಷ್ಟವಾಗಿದೆ. ಅಂಡಾಕೃತಿಯ ಕ್ಷೇತ್ರಫಲವು $\pi$ ಅ.ಬ. ಆಗಿದೆ. ಇಲ್ಲಿ ಅ ಮತ್ತು ಬ ಗಳು ಅರ್ಧಾಕ್ಷಗಳಾಗಿವೆ. $\pi$ ನ ಬೆಲೆಯನ್ನು ೩ ಎಂದು ತೆಗೆದುಕೊಂಡಾಗ, $\pi$ ಅ. ಬ. = ೩. ಅ. ಬ ಆಗುತ್ತದೆ. ಆದರೆ ಈ ಶ್ಲೋಕದಲ್ಲಿ ಕೊಟ್ಟಿರುವ ಸೂತ್ರದಿಂದ ಕ್ಷೇತ್ರಫಲದ ಅಳತೆಯು ೨ ಅ ಬ + ಬ$^2$ ಆಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



शङ्खाकारवृत्तस्य फलानयनसूत्रम् -
वदनार्धोनो व्यासस्त्रिगुणः परिधिस्तु कम्बुकावृत्ते ।
वलयार्धकृतित्र्यंशो मुखार्धवर्गत्रिपादयुतः ॥ २३ ॥

---

Śaṅkhākāravṛttasya phalānayanasūtram -

**23.** Vadanārdhono vyāsastriguṇaḥ paridhistu kambukāvṛtte,
valayārdhakṛtitryaṁśo mukhārdhavargatripādayutaḥ.

---

The rule for arriving at the (resulting) area of a conchiform curvilinear figure:

**23.** In the case of a conchiform curvilinear figure, the measure of the (greatest) breadth diminished by half the measure of the mouth and multiplied by *three* gives the measure of the perimeter. One-third of the square of half (this) perimeter, increased by three-fourths of the square of half the measure of the mouth, (gives the area).

---

ಶಂಖಾಕಾರದ ವಕ್ರರೇಖೆಯ ಆಕೃತಿಯ ಪರಿಣಾಮೀ ಕ್ಷೇತ್ರಫಲವನ್ನು ಪಡೆಯಲು ನಿಯಮ :

೨೩. ಒಂದು ಶಂಖಾಕಾರದ ವಕ್ರರೇಖೆಯ ಆಕೃತಿಯ ಸಂಬಂಧದಲ್ಲಿ, ಎಲ್ಲಕ್ಕಿಂತ ದೊಡ್ಡದಾದ ಅಗಲವನ್ನು ಮುಖದ ಅರ್ಧಭಾಗದಿಂದ ಕಳೆದು ಮತ್ತು (ನಂತರ) ೩ ರಿಂದ ಗುಣಿಸುವುದರಿಂದ ಪರಿಧಿಯು ದೊರೆಯುತ್ತದೆ. ಈ ಪರಿಧಿಯ ಅರ್ಧಭಾಗದ ವರ್ಗದ ಮೂರನೆಯ ಒಂದು ಭಾಗವನ್ನು ಮುಖದ ಅರ್ಧಭಾಗದ ವರ್ಗದ ಮುಕ್ಕಾಲು ಭಾಗದಿಂದ ಹೆಚ್ಚಿಸಿದರೆ, ಕ್ಷೇತ್ರಫಲವು ಪ್ರಾಪ್ತವಾಗುತ್ತದೆ.

---

**23.** If $a$ is the diameter and m is the measure of the mouth, then $3(a - \frac{1}{2}m)$ is the measure of the circumference and $\left\{\frac{3(a - \frac{1}{2}m)}{2}\right\}^2 \times \frac{1}{3} + \frac{3}{4} \times \left(\frac{m}{2}\right)^2$ is the measure of the area. The exact shape of the figure is not clear from the description given; but from the values given for the circumference and the area, it may be conceived to consist of 2 unequal semicircles placed so that their diameters coincide in position as shown in figure 12, given in the foot-note to stanza 6, in this chapter.

೨೩. ಅ ವ್ಯಾಸವಾಗಿದ್ದು, ಮ ಮುಖದ ಅಳತೆಯಾಗಿದ್ದರೆ ೩ $\left(ಅ - \frac{ಮ}{೨}\right)$ ಪರಿಧಿಯ ಅಳತೆಯಾಗುತ್ತದೆ. ಮತ್ತು $\left\{\frac{೩\left(ಅ - \frac{ಮ}{೨}\right)}{೨}\right\}^೨ \times \frac{೧}{೩} + \frac{೩}{೪} \times \left(\frac{ಮ}{೨}\right)^೨$ ಕ್ಷೇತ್ರಫಲದ ಅಳತೆಯಾಗುತ್ತದೆ. ಕೊಟ್ಟಿರುವ ವಿವರಣೆಯಿಂದ ಆಕೃತಿಯ ಸರಿಯಾದ ಆಕಾರ ಸ್ಪಷ್ಟವಾಗಿಲ್ಲ. ಆದರೆ ಪರಿಧಿ ಮತ್ತು ಕ್ಷೇತ್ರಫಲಗಳಿಗೆ ಕೊಟ್ಟಿರುವ ಬೆಲೆಗಳಿಂದ ಅದು, ವ್ಯಾಸಗಳು ಒಂದೇ ಆಗುವಂತೆ ಜೋಡಿಸಿದ ಎರಡು ಅಸಮ ಅರ್ಧವೃತ್ತಗಳ ಆಕೃತಿ ಎಂದು ಪರಿಗಣಿಸಬಹುದು. ಇದನ್ನು ಈ ಅಧ್ಯಾಯದ ೬ ನೇ ಶ್ಲೋಕದ ಟಿಪ್ಪಣಿಯಲ್ಲಿ ಕೊಟ್ಟಿರುವ ಚಿತ್ರ ೧೨ ರಲ್ಲಿ ತೋರಿಸಲಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

व्यासोऽष्टादश हस्ता मुखविस्तारोऽयमपि च चत्वारः ।
कः परिधिः किं गणितं कथय त्वं कम्बुकावृत्ते ॥ २४ ॥
निम्नोन्नतवृत्तयोः फलानयनसूत्रम् -
परिधेश्च चतुर्भागो विष्कम्भगुणः स विद्धि गणितफलम् ।
चत्वाले कूर्मनिभे क्षेत्रे निम्नोन्नते तस्मात् ॥ २५ ॥

---

## Atroddeśakaḥ

**24.** Vyāso'ṣṭādaśa hastā mukhavistāro'yamapi ca catvāraḥ, kaḥ paridhiḥ kiṁ gaṇitaṁ kathaya tvaṁ kambukāvṛtte.

Nimnonnatavṛttayoḥ phalānayanasūtram -

**25.** Paridheśca caturbhāgo viṣkambhaguṇaḥ sa viddhi gaṇitaphalam, catvāle kūrmanibhe kṣetre nimnonnate tasmāt.

---

## *An example in illustration thereof*

**24.** In the case of a conchiform figure the breadth is 18 *hastas* and the measure of the mouth thereof is 4 (*hastas*). You tell me what the perimeter is and what the calculated area is.

The rule for arriving at the (resulting) area of the concave and convex circular surfaces :

**25.** Understand that one-fourth of the circumference multiplied by the diameter gives rise to the calculated (resulting) area. Thence, in the case of concave and convex areas like that of a sacrificial fire-pit and like that of (the back of) the tortoise, (the required result is to be arrived at).

---

## ಉದಾಹರಣೆಯಿಂದ ವಿಶ್ಲೇಷಣ

೨೪. ಒಂದು ಶಂಖಾಕಾರದ ಆಕೃತಿಯ ಸಂಬಂಧದಲ್ಲಿ ಅಗಲವು ೧೮ *ಹಸ್ತ*ಗಳು ಮತ್ತು ಮುಖದ ಅಳತೆಯು ೪ *ಹಸ್ತ*ಗಳು. ಅದರ ಪರಿಧಿ ಮತ್ತು ಕ್ಷೇತ್ರಫಲಗಳೇನೆಂದು ನನಗೆ ಹೇಳು.

ನಿಮ್ನ ಮತ್ತು ಉನ್ನತ ವರ್ತುಲ ತಳಗಳ ಕ್ಷೇತ್ರಫಲಗಳನ್ನು ಪಡೆಯುವ ನಿಯಮ :

೨೫. ಪರಿಧಿಯ ನಾಲ್ಕನೆಯ ಒಂದು ಭಾಗವನ್ನು ವ್ಯಾಸದಿಂದ ಗುಣಿಸುವುದರಿಂದ (ಬೇಕಾದ) ಕ್ಷೇತ್ರಫಲವು ಪ್ರಾಪ್ತವಾಗುತ್ತದೆಂದು ತಿಳಿ. ಈ ರೀತಿ ಹೋಮದ ಅಗ್ನಿಕುಂಡ ಮತ್ತು ಬೆನ್ನಿನಂತಿರುವ ನಿಮ್ನ ಮತ್ತು ಉನ್ನತ ಕ್ಷೇತ್ರಗಳ ಕ್ಷೇತ್ರಫಲವನ್ನು ಪಡೆಯಬೇಕಾಗುತ್ತದೆ.

---

**25.** The area here specified seems to be that of the surface of the segment of a sphere and the measure of the area is stated to be, when symbolically represented, equal to $\frac{c}{4} \times d$, where $c$ is the circumference of the sectional circle and $d$ is the diameter thereof. But the area of the surface of a spherical segment of this kind is equal to $2\pi.r.h$, where $r$ is the radius of the sectional circle and $h$ is the height of the spherical segment.

೨೫. ಇಲ್ಲಿ ನಿರ್ದಿಷ್ಟ ಕ್ಷೇತ್ರಫಲವು ಒಂದು ಗೋಳಾಕೃತಿಯ ಭಾಗದ್ದಾಗಿದೆ ಎಂದು ತಿಳಿಯುತ್ತದೆ. ಸಂಕೇತರೂಪದಲ್ಲಿ ಕ್ಷೇತ್ರಫಲವು $\frac{ಪ}{4} \times ವ$ಗೆ ಸಮವಾಗುತ್ತದೆ. ಇಲ್ಲಿ ಪ'ಛೇದೀಯ ವೃತ್ತದ ಪರಿಧಿ ಮತ್ತು ವ'ವ್ಯಾಸವಾಗಿದೆ. ಆದರೆ ಈ ಪ್ರಕಾರದ ಗೋಳಾಕೃತಿಯ ಭಾಗದ ತಳದ ಕ್ಷೇತ್ರಫಲವು $೨\pi.ತ್ರಿ.ಎ$ ಆಗುತ್ತದೆ. ಇಲ್ಲಿ $\pi$ = ಪರಿಧಿ/ವ್ಯಾಸ, ತ್ರಿ = ಕೇಂದ್ರೀಯ ವೃತ್ತದ ತ್ರಿಜ್ಯ ಮತ್ತು ಎ ಗೋಳಾಕೃತಿಯ ಎತ್ತರವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



### अत्रोद्देशकः

चत्वालक्षेत्रस्य व्यासस्तु भसङ्ख्यकः परिधिः ।
षट्पञ्चाशद्दृष्टं गणितं तस्यैव किं भवति ॥ २६ ॥

### कूर्मनिभस्योन्नतवृत्तस्योदाहरणम्

विष्कम्भः पञ्चदश दृष्टः परिधिश्च षट्त्रिंशत् ।
कूर्मनिभे क्षेत्रे किं तस्मिन् व्यवहारजं गणितम् ॥ २७ ॥

---

### Atroddeśakaḥ

**26.** Catvālakṣetrasya vyāsastu bhasaṅkhyakaḥ paridhiḥ, ṣaṭpañcāśaddṛṣṭaṁ gaṇitaṁ tasyaiva kiṁ bhavati.

### Kūrmanibhasyonnatavṛttasyodāharaṇam

**27.** Viṣkambhaḥ pañcadaśa dṛṣṭaḥ paridhiśca ṣaṭtriṁśat, kūrmanibhe kṣetre kiṁ tasmin vyavahārajaṁ gaṇitam.

---

### *An example in illustration thereof*

**26.** In the case of the area of a sacrificial fire-pit the measure of the diameter is 27 and the measure of the circumference is seen to be 56. What is the calculated measure of the area of that same (pit)?

### *An example about a convex circular surface resembling (the back) of a tortoise*

**27.** The diameter is 15 and the circumference is seen to be 36. In the case of this area resembling the (back of a) tortoise, what is the practically approximate measure as calculated?

---

### ಉದಾಹರಣೆಯಿಂದ ವಿಶ್ಲೇಷಣ

**೨೬.** ಹೋಮದ ಅಗ್ನಿಕುಂಡದ ಕ್ಷೇತ್ರಫಲದ ಸಂಬಂಧದಲ್ಲಿ ವ್ಯಾಸವು ೨೭ ಮತ್ತು ಪರಿಧಿಯು ೫೬ ಆಗಿದೆ. ಈ ಕುಂಡದ ಕ್ಷೇತ್ರಫಲವೇನು?

### ಆಮೆಯ ಬೆನ್ನನ್ನು ಹೋಲುವ ಉನ್ನತ ವರ್ತುಲತಲಕ್ಕೆ ಒಂದು ಉದಾಹರಣೆ

**೨೭.** ವ್ಯಾಸವು ೧೫ ಮತ್ತು ಪರಿಧಿಯು ೩೬. ಆಮೆಯ ಬೆನ್ನನ್ನು ಹೋಲುವ ಈ ಕ್ಷೇತ್ರದ ಸಂಬಂಧದಲ್ಲಿ ವ್ಯಾವಹಾರಿಕ ಕ್ಷೇತ್ರಫಲವೇನು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अन्तश्चक्रवालवृत्तक्षेत्रस्य बहिश्चक्रवालवृत्तक्षेत्रस्य च व्यवहारफलानयनसूत्रम् -
निर्गमसहितो व्यासस्त्रिगुणो निर्गमगुणो बहिर्गणितम् ।
रहिताधिगमव्यासादभ्यन्तरचक्रवालवृत्तस्य ॥ २८ ॥

**अत्रोद्देशकः**

व्यासोऽष्टादश हस्ताः पुनर्बहिर्निर्गतास्त्रयस्तत्र ।
व्यासोऽष्टादश हस्ताश्चान्तः पुनरधिगतास्त्रयः किं स्यात् ॥ २९ ॥

---

Antaścakravālavṛttakṣetrasya bahiścakravālavṛttakṣetrasya ca vyavahāraphalānayanasūtram -

**28.** Nirgamasahito vyāsastriguṇo nirgamaguṇo bahirgaṇitam,
rahitādhigamavyāsādabhyantaracakravālavṛttasya.

**Atroddeśakaḥ**

**29.** Vyāso'ṣṭādaśa hastāḥ punarbahirnirgatāstrayastatra, vyāso'ṣṭādaśa hastāścāntaḥ punaradhigatāstrayaḥ kiṁ syāt.

---

The rule for arriving at the practically approxiamte value of the area of an in-lying annular figure as well as of an out-reaching annular figure :

**28.** The (inner) diameter increased by the breadth (of the annular area) when multiplied by three and by the breadth (of the annular area) gives the calculated measure of the area of the out-reachig annular figure. (Similarly the measure of the calculated area) of the in-lying annular figure (is to be obtained) from the diameter as diminished by the breadth (of the annular area).

***Examples in illustration thereof***

**29.** The diameter is 18 *hastas* and the breadth of the out-reaching annular area is 3 in this case : the diameter is 18 *hastas* and again the breadth of the in-lying annular area is 3 *hastas*. What may be (the area of the annular figure in each case)?

---

ಒಳ ಉಂಗುರ ಮತ್ತು ಹೊರ ಉಂಗುರದ ಕ್ಷೇತ್ರಫಲದ ವ್ಯಾವಹಾರಿಕ ಬೆಲೆಯನ್ನು ಪಡೆಯಲು ನಿಯಮ:

೨೮. ಒಳ ವ್ಯಾಸವನ್ನು (ಉಂಗುರದ) ಅಗಲದಿಂದ ಹೆಚ್ಚಿಸಿ ಮೂರರಿಂದ ಮತ್ತು (ಉಂಗುರದ) ಅಗಲದಿಂದ ಗುಣಿಸಿದರೆ, ಹೊರ ಉಂಗುರದ ಕ್ಷೇತ್ರಫಲವು ಉತ್ಪನ್ನವಾಗುತ್ತದೆ. ಇದೇ ರೀತಿ, ಒಳ ಉಂಗುರದ ಕ್ಷೇತ್ರಫಲವನ್ನು (ಉಂಗುರದ) ಅಗಲದಿಂದ ಕಳೆದಂತಹ ವ್ಯಾಸದಿಂದ ಪಡೆಯುತ್ತೇವೆ.

**ಉದಾಹರಣೆಗಳಿಂದ ವಿಶ್ಲೇಷಣ**

೨೯. ವ್ಯಾಸವು ೧೮ *ಹಸ್ತ*ಗಳು ಮತ್ತು ಹೊರ ಉಂಗುರದ ಅಗಲವು ೩ *ಹಸ್ತ*ಗಳಾಗಿವೆ. ವ್ಯಾಸ ೧೮ *ಹಸ್ತ*ಗಳು ಮತ್ತು ಪುನಃ ಒಳ ಉಂಗುರದ ಅಗಲ ೩ *ಹಸ್ತ*ಗಳಾಗಿವೆ. ಪ್ರತಿಯೊಂದು ಪ್ರಕರಣದಲ್ಲಿ ಉಂಗುರದ ಕ್ಷೇತ್ರಫಲವೇನಾಗುತ್ತದೆ?

---

**28.** The shape of the अन्तश्चक्रवालवृत्तक्षेत्र as well as of the बहिश्चक्रवालकृत्तक्षेत्र is identical with the shape of the नेमिक्षेत्र mentioned in the note to stanza 7 in this chapter. Hence the rule given for arriving at the area of all these figures works out to be the same practically.

೨೮. ಅಂತಶ್ಚಕ್ರವಾಲ ವೃತ್ತಕ್ಷೇತ್ರ ಮತ್ತು ಬಹಿಶ್ಚಕ್ರವಾಲ ವೃತ್ತಕ್ಷೇತ್ರಗಳ ಆಕಾರವು, ೭ ನೇ ಶ್ಲೋಕದ ಟಿಪ್ಪಣಿಯಲ್ಲಿ ತಿಳಿಸಿರುವ ನೇಮಿಕ್ಷೇತ್ರಕ್ಕೆ ಸಮಾನವಾಗಿರುತ್ತದೆ. ಆದ್ದರಿಂದ ಈ ಎಲ್ಲ ಆಕೃತಿಗಳ ಕ್ಷೇತ್ರಫಲವನ್ನು ಕಂಡುಹಿಡಿಯಲು ಕೊಟ್ಟಿರುವ ಆ ನಿಯಮವು, ವ್ಯವಹಾರದಲ್ಲಿ ಸಮಾನವೆಂದು ಸಾಧಿತವಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



समवृत्तक्षेत्रस्य व्यावहारिकफलं च परिधिप्रमाणं च व्यासप्रमाणं च संयोज्य एतत्संयोगसङ्ख्यामेव स्वीकृत्य तत्संयोगप्रमाणराशेः सकाशात् पृथक् परिधिव्यासफलानां सङ्ख्यानयनसूत्रम् -
गणिते द्वादशगुणिते मिश्रप्रक्षेपकं चतुःषष्टिः। तस्य च मूलं कृत्वा परिधिः प्रक्षेपकपदोनः ॥ ३० ॥

---

Samavṛttakṣetrasya vyāvaharikaphalaṁ ca paridhipramāṇaṁ ca vyāsapramāṇaṁ ca saṁyojya etatsaṁyogasaṅkhyāmeva svīkṛtya tatsaṁyogapramāṇarāśeḥ sakāśāt pṛthak paridhivyāsaphalānāṁ saṅkhyānayanasūtram -

**30.** Gaṇite dvādaśaguṇite miśraprakṣepakaṁ catuḥṣaṣṭiḥ, tasya ca mūlaṁ kṛtvā paridhiḥ prakṣepakapadonaḥ.

---

The rule for arriving separately at the numerical measures of the circumference of the diameter and of the area of a circular figure, from the combined sum obtained by adding together the approximate measure of its area, the measure of the circumference and the measure of its diameter :

**30.** In relation to the combined sum (of the three quantities) as multiplied by 12, the quantity thrown in so as to be added is 64. Of this (second) sum the square root diminished by the square root of the quantity thrown in gives rise to the measure of the circumference.

---

ಒಂದು ವೃತ್ತಾಕೃತಿಯ ಕ್ಷೇತ್ರಫಲ, ಅದರ ಪರಿಧಿ ಮತ್ತು ವ್ಯಾಸಗಳ ಮಿಶ್ರಮೊತ್ತವನ್ನು ಕೊಟ್ಟಿದಾಗ, ಅದರ ಪರಿಧಿ, ವ್ಯಾಸ ಮತ್ತು ಕ್ಷೇತ್ರಫಲಗಳ ಸಂಖ್ಯಾತ್ಮಕ ಅಳತೆಗಳನ್ನು ಬೇರೆ ಬೇರೆಯಾಗಿ ಪಡೆಯಲು ನಿಯಮ :

೩೦. ೧೨ ರಿಂದ ಗುಣಿಸಲ್ಪಟ್ಟ ಮೇಲೆ ಹೇಳಿದ ಮೂರು ಸಂಖ್ಯೆಗಳ ಮಿಶ್ರಮೊತ್ತದಲ್ಲಿ ಪ್ರಕ್ಷೇಪಿತ ೬೪ ನ್ನು ಸೇರಿಸುತ್ತೇವೆ ಮತ್ತು ಈ ಮೊತ್ತದ ವರ್ಗಮೂಲವನ್ನು ಕಂಡುಹಿಡಿಯುತ್ತೇವೆ. ಈ (ಎರಡನೇ) ಮೊತ್ತದಿಂದ ಈ ವರ್ಗಮೂಲ ಸಂಖ್ಯೆಯನ್ನು ಪ್ರಕ್ಷೇಪಿತ ೬೪ ರ ವರ್ಗಮೂಲದಿಂದ ಕಳೆಯುವುದರಿಂದ ಪರಿಧಿಯ ಅಳತೆಯು ಲಭಿಸುತ್ತದೆ.

---

**30.** This rule will be clear from the following algebraical representation :

Let $c$ be the circumference of the circle. As $\pi$ is taken to be equal to 3, $\frac{c}{3}$ is the diameter and $3\,\frac{c^2}{36}$ is the area of the circle. If $m$ stands for the combined sum of the circumference, the diameter and the area of the circle, then the rule given in the stanza to the effect that $c = \sqrt{12m + 64} - \sqrt{64}$ may be easily arrived at from the quadratic equation containing the data in the problem : $c + \frac{c}{3} + 3\,\frac{c^2}{36} = m$.

೩೦. ಈ ನಿಯಮವು ಮುಂದೆ ತಿಳಿಸಿರುವ ಬೀಜಗಣಿತದ ನಿರೂಪಣೆಯಿಂದ ಸ್ಪಷ್ಟವಾಗುತ್ತದೆ :

ಪ ವು ವೃತ್ತದ ಪರಿಧಿಯಾಗಿರಲಿ. $\pi$ ನ್ನು ೩ ಎಂದು ತೆಗೆದುಕೊಂಡಿರುವುದರಿಂದ ವೃತ್ತದ ವ್ಯಾಸವು $\frac{\text{ಪ}}{೩}$ ಆಗುತ್ತದೆ ಮತ್ತು ಕ್ಷೇತ್ರಫಲವು $\frac{\text{ಪ}^2}{೩೬}$ ಆಗುತ್ತದೆ. ಮ ವು ವೃತ್ತದ ಪರಿಧಿ, ವ್ಯಾಸ ಮತ್ತು ಕ್ಷೇತ್ರಫಲಗಳ ಮಿಶ್ರಮೊತ್ತವಾದಾಗ ಶ್ಲೋಕದಲ್ಲಿ ಕೊಟ್ಟಿರುವ $\text{ಪ} = \sqrt{೧೨\,\text{ಮ} + ೬೪} - \sqrt{೬೪}$ ನಿಯಮವನ್ನು $\text{ಪ} + \frac{\text{ಪ}}{೩} + ೩\,\frac{\text{ಪ}^2}{೩೬} = \text{ಮ}$ ಸಮೀಕರಣದಲ್ಲಿರುವ ದತ್ತದಿಂದ ಸುಲಭವಾಗಿ ಪಡೆಯಬಹುದಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

परिधिव्यासफलानां मिश्रं षोडशशतं सहस्रयुतम् ।
कः परिधिः किं गणितं व्यासः को वा ममाचक्ष्व ॥ ३१ ॥
यवाकारमर्दलाकारपणवाकारवज्राकाराणां क्षेत्राणां व्यावहारिकफलानयनसूत्रम् -
यवमुरजपणवशक्रायुधसंस्थानप्रतिष्ठितानां तु। मुखमध्यसमासार्धं त्वायामगुणं फलं भवति ॥ ३२ ॥

---

## Atroddeśakaḥ

**31.** Paridhivyāsaphalānāṁ miśraṁ ṣoḍaśaśataṁ sahasrayutam, kaḥ paridhiḥ kiṁ gaṇitaṁ vyāsaḥ ko vā mamācakṣva.

Yavākāramardalākārapaṇavākāravajrākārāṇāṁ kṣetrāṇāṁ vyāvahārikaphalānayanasūtram -

**32.** Yavamurajapaṇavaśakrāyudhasaṁsthānapratiṣṭitānāṁ tu, mukhamadhyasamāsārdhaṁ tvāyāmaguṇaṁ phalaṁ bhavati.

---

## *An example in illustration thereof*

**31.** The combined sum of the measures of the circumference, of the diameter and of the area (of a circle) is 1116. Tell me what the (measure of the) circumference is, what (that of) the calculated area and what (of) the diameter is.

The rule for arriving at the practically approximate value of surface-areas, resembling (the longitudinal sections of) the *yava* grain, (of) the *mardala*, (of) the *paṇava* and (of) the *vajra* :

**32.** In the case of areas shaped in the form of the *yava* grain, of the *muraja*, of the *paṇava* and of the *vajra*, the (required measurement of) area is that which results by multiplying half the sum of the end measure and the middle measure by the length.

---

## ಉದಾಹರಣೆಯಿಂದ ವಿಶ್ಲೇಷಣ

೩೧. ಒಂದು ವೃತ್ತದ ಪರಿಧಿ, ವ್ಯಾಸ ಮತ್ತು ಕ್ಷೇತ್ರಫಲಗಳ ಮಿಶ್ರಮೊತ್ತವು ೧೧೧೬ ಆಗಿದೆ. ಆ ವೃತ್ತದ ಪರಿಧಿ, ಲೆಕ್ಕಾಚಾರಮಾಡಿದ ಕ್ಷೇತ್ರಫಲ ಮತ್ತು ವ್ಯಾಸಗಳೇನೆಂದು ನನಗೆ ಹೇಳು.

ಉದ್ದದ ಕಡೆಯಿಂದ ಛೇದಿಸುವುದರಿಂದ ಪ್ರಾಪ್ತವಾದ *ಯವಧಾನ್ಯ, ಮರ್ದಲ, ಪಣವ* ಮತ್ತು *ವಜ್ರ* ಆಕಾರಗಳ ವಸ್ತುಗಳ ವ್ಯಾವಹಾರಿಕ ಕ್ಷೇತ್ರಫಲವನ್ನು ಪಡೆಯಲು ನಿಯಮ :

೩೨. *ಯವಧಾನ್ಯ, ಮುರಜ, ಪಣವ* ಮತ್ತು *ವಜ್ರ*ಗಳ ಆಕಾರದ ಕ್ಷೇತ್ರಫಲಗಳ ಸಂಬಂಧದಲ್ಲಿ ಕಡೆಯ ಮತ್ತು ಮಧ್ಯದ ಅಳತೆಗಳ ಮೊತ್ತದ ಅರ್ಧಭಾಗವನ್ನು ಉದ್ದದಿಂದ ಗುಣಿಸುವುದರಿಂದ ಬೇಕಾದ ಕ್ಷೇತ್ರಫಲದ ಅಳತೆಯು ಪ್ರಾಪ್ತವಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**32.** *Muraja* means the same thing as *mardala* and *mṛdaṅga*. The shape of the various figures mentioned in this stanza is as follows :

The measures of the area arrived at according to the rule given in this stanza are approximately correct in the case of all the figures, as the rule is based on the assumption that each of the bounding curved lines may be taken to be equal to the sum of two straight lines formed by joining the ends of the curves with the middle point thereof.

೩೨. *ಮುರಜ*, ಎಂದರೆ *ಮರ್ದಲ* ಮತ್ತು *ಮೃದಂಗ* ಎಂದರ್ಥವಾಗುತ್ತದೆ. ಈ ಶ್ಲೋಕದಲ್ಲಿ ತಿಳಿಸಿರುವ ವಿಭಿನ್ನ ಆಕೃತಿಗಳ ಆಕಾರಗಳು ಮುಂದೆ ತಿಳಿಸಿರುವಂತಿವೆ :

ಎಲ್ಲ ಆಕೃತಿಗಳ ಕ್ಷೇತ್ರಫಲದ ಅಳತೆಯು ಈ ಶ್ಲೋಕದಲ್ಲಿ ಕೊಟ್ಟಿರುವ ನಿಯಮದನುಸಾರವಾಗಿ ಅಂದಾಜಾಗಿದೆ. ಏಕೆಂದರೆ ನಿಯಮವು, ವಕ್ರಗಳ ತುದಿಗಳನ್ನು ಮಧ್ಯ ಬಿಂದುವಿನೊಂದಿಗೆ ಸೇರಿಸುವುದರಿಂದ ಉಂಟಾಗುವ ಸರಳರೇಖೆಗಳ ಮೊತ್ತಕ್ಕೆ ಸಮವಾಗಿ ಪ್ರತಿಯೊಂದು ಸೀಮಾವರ್ತೀ ವಕ್ರರೇಖೆಯನ್ನು ತೆಗೆದುಕೊಂಡಿರುವುದರ ಮೇಲೆ ಆಧಾರಿತವಾಗಿದೆ.



Yavākārakṣētra
ಯವಾಕಾರ ಕ್ಷೇತ್ರ



Murajākārakṣētra
ಮುರಜಾಕಾರ ಕ್ಷೇತ್ರ



Paṇavākārakṣētra
ಪಣವಾಕಾರ ಕ್ಷೇತ್ರ



Vajrākārakṣētra
ವಜ್ರಾಕಾರಕ್ಷೇತ್ರ



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

यवसंस्थानक्षेत्रस्यायामोऽशीतिरस्य विष्कम्भः । मध्यश्चत्वारिंशत्फलं भवोत्किं ममाचक्ष्व ॥ ३३ ॥
आयामोऽशीतिरयं दण्डा मुखमस्य विंशतिर्मध्ये । चत्वारिंशत्क्षेत्रे मृदङ्गसंथानके ब्रूहि ॥ ३४ ॥
पणवाकारक्षेत्रस्यायामः सप्तसप्ततिर्दण्डाः । मुखयोर्विस्तारोऽष्टौ मध्ये दण्डास्तु चत्वारः ॥ ३५ ॥

---

## Atroddeśakaḥ

**33.** Yavasaṁsthānakṣetrasyāyāmo'śītirasya viṣkambhaḥ, madhyaścatvāriṁśatphalaṁ bhavetkiṁ mamācakṣva.

**34.** Āyāmo'śītirayaṁ daṇḍā mukhamasya viṁśatirmadhye, catvāriṁśatkṣetre mṛdaṅgasaṁsthānake brūhi.

**35.** Paṇavākārakṣetrasyāyāmaḥ saptasaptatirdaṇḍāḥ, mukhayorvistāro'ṣṭau madhye daṇḍāstu catvāraḥ.

---

## Examples in illustration thereof

**33.** In the case of an area resembling the configuration of a *yava* grain, the length is 80 and the breadth in the middle is 40. Tell me, what may be the calculated measure of that area?

**34.** Tell (me what may be the calculated measure of the area) in relation to a field which has the outline configuration of the *mṛdaṅga* and of which the length is 80 *daṇḍas* the end measure is 20 and the middle measure is 40 *daṇḍas*.

**35.** In the case of a field having the outline of the *paṇava*, the length is 77 *daṇḍas*, the measure of each of the two ends is 8 *daṇḍas* and the measure in the middle is 4 *daṇḍas*. (What is the measure of the area?)

---

## ಉದಾಹರಣೆಗಳಿಂದ ವಿಶ್ಲೇಷಣ

೩೩. *ಯವ* ಧಾನ್ಯದ ಆಕಾರವನ್ನು ಹೋಲುವ ಒಂದು ಕ್ಷೇತ್ರದ ಸಂಬಂಧದಲ್ಲಿ, ಉದ್ದವು ೮೦ ಆಗಿದೆ ಮತ್ತು ಮಧ್ಯದಲ್ಲಿ ಅಗಲವು ೪೦ ಇದೆ. ಆ ಕ್ಷೇತ್ರದ ಕ್ಷೇತ್ರಫಲವೇನಾಗುತ್ತದೆ ಎಂದು ಹೇಳು.

೩೪. *ಮೃದಂಗದ* ಆಕಾರದಲ್ಲಿರುವ ಒಂದು ಕ್ಷೇತ್ರದ ಸಂಬಂಧದಲ್ಲಿ, ಉದ್ದವು ೮೦ *ದಂಡ*ಗಳು, ಕಡೆಯ ಅಳತೆ ೨೦ (*ದಂಡ*ಗಳು) ಮತ್ತು ಮಧ್ಯದ ಅಳತೆಯು ೪೦ *ದಂಡ*ಗಳು. ಆ ಕ್ಷೇತ್ರದ ಕ್ಷೇತ್ರಫಲವೇನಾಗುತ್ತದೆ ಎಂದು ಹೇಳು.

೩೫. *ಪಣವದ* ಆಕಾರವನ್ನು ಹೋಲುವ ಒಂದು ಕ್ಷೇತ್ರದ ಸಂಬಂಧದಲ್ಲಿ, ಉದ್ದವು ೭೭ *ದಂಡ*ಗಳು, ಎರಡೂ ಮುಖಗಳಲ್ಲಿ ಪ್ರತಿಯೊಂದರ ಅಳತೆಯು ೮ *ದಂಡ*ಗಳು ಮತ್ತು ಮಧ್ಯದ ಅಳತೆಯು ೪ *ದಂಡ*ಗಳಾಗಿವೆ. ಇದರ ಕ್ಷೇತ್ರಫಲದ ಅಳತೆಯನ್ನು ಹೇಳು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



वज्राकृतेस्तथास्य क्षेत्रस्य षडग्रनवतिरायामः ।
मध्ये सूचिर्मुखयोस्त्रयोदश त्र्यंशसंयुता दण्डाः ॥ ३६ ॥
उभयनिषेधादिक्षेत्रफलानयनसूत्रम् -
व्यासात्स्वायामगुणाद्विष्कम्भार्धघ्नदीर्घमुत्सृज्य । त्वं वद निषेधमुभयोस्तदर्धपरिहीणमेकस्य ॥ ३७ ॥

---

36. Vajrākṛtestathāsya kṣetrasya ṣaḍagranavatirāyāmaḥ, madhye sūchirmukhayostrayodaśa tryaṁśasaṁyutā daṇḍāḥ.

Ubhayaniṣedhādikṣetraphalānayanasūtram-

37. Vyāsātsvāyāmaguṇādviṣkambhārdhaghnadīrghamutsṛjya, tvaṁ vada niṣedhamubhayostadardhaparihīṇamekasya.

---

**36.** Similarly in the case of a field having the outline of the *vajra*, the length is 96 *daṇḍas*, in the middle there is the middle point and at the ends the measure is $13\frac{1}{2}$ *daṇḍas*. (What is the measure of the area?)

The rule for arriving at the measure of areas such as the *ubhaya-niṣēdha* or di-deficient area :

**37.** On subtracting the product of the length into half the breadth from the product of the length into the breadth, you declare the measure of the di-deficient area. That which is less (than the latter product here) by half of this (above-mentioned quantity to be subtracted) is the measure of the area of the uni-deficient figure.

---

೩೬. ಇದೇ ರೀತಿ, ಒಂದು *ವಜ್ರಾಕಾರ* ಕ್ಷೇತ್ರದ ಉದ್ದವು ೯೬ *ದಂಡ*ಗಳು, ಮಧ್ಯದಲ್ಲಿ ಕೇವಲ ಮಧ್ಯ ಬಿಂದುವಿದೆ ಮತ್ತು ಮುಖಗಳಲ್ಲಿ ಪ್ರತಿಯೊಂದರ ಅಳತೆಯು ೧೩ $\frac{1}{2}$ *ದಂಡ*ಗಳಿವೆ. ಇದರ ಕ್ಷೇತ್ರಫಲವೇನು?

*ಉಭಯ ನಿಷೇಧ* ಕ್ಷೇತ್ರದ ಕ್ಷೇತ್ರಫಲವನ್ನು ಪಡೆಯಲು ನಿಯಮ :

೩೭. ಉದ್ದದ ಮತ್ತು ಅಗಲದ ಗುಣಲಬ್ಧದಿಂದ, ಉದ್ದ ಮತ್ತು ಅಗಲದ ಅರ್ಧಭಾಗಗಳ ಗುಣಲಬ್ಧವನ್ನು ಕಳೆಯುವುದರಿಂದ *ಉಭಯ ನಿಷೇಧದ* ಕ್ಷೇತ್ರಫಲವು ಲಭಿಸುತ್ತದೆ. ಯಾವುದು ಉದ್ದದ ಮತ್ತು ಅಗಲದ ಅರ್ಧಭಾಗಗಳ ಗುಣಲಬ್ಧದಿಂದ (ಮೇಲೆ ತಿಳಿಸಿದ) ಕಳೆಯಬೇಕಾಗಿರುವ ಸಂಖ್ಯೆಯ ಅರ್ಧಭಾಗದಿಂದ ಕಳೆಯುವುದರಿಂದ ಪ್ರಾಪ್ತವಾಗುತ್ತದೋ, ಅದು *ಏಕನಿಷೇಧ* ಆಕೃತಿಯ ಕ್ಷೇತ್ರಫಲವಾಗುತ್ತದೆ.

---

**37.** The figures mentioned in this stanza are those given below :

These are looked upon as being derived from a quadrilateral figure which is divided into four triangles by means of its diagonals crossing each other. The di-deficient figure is that in which any two of the opposite triangles out of the four making up the quadrilateral are left out of consideration, the uni-deficient figure being that in which only one out of the four triangles is neglected.



೩೭. ಈ ಶ್ಲೋಕದಲ್ಲಿ ತಿಳಿಸಿರುವ ಆಕೃತಿಗಳನ್ನು ಇಲ್ಲಿ ಕೊಡಲಾಗಿದೆ.

ಈ ಆಕೃತಿಗಳನ್ನು ಒಂದು ಚತುರ್ಭುಜವನ್ನು ಅದರ ಎರಡು ಕರ್ಣಗಳ ಮೂಲಕ ನಾಲ್ಕು ತ್ರಿಭುಜಗಳಾಗಿ ಭಾಗವಾಗಿರುವಂತೆ ನೋಡಲಾಗುತ್ತದೆ. *ಉಭಯ ನಿಷೇಧ* ಆಕೃತಿಯು, ಈ ಚತುರ್ಭುಜದ ಎರಡು ಸಮ್ಮುಖ ತ್ರಿಭುಜಗಳನ್ನು ತೆಗೆಯುವುದರಿಂದ ಪ್ರಾಪ್ತವಾಗುತ್ತದೆ ಮತ್ತು *ಏಕನಿಷೇಧ* ಆಕೃತಿಯು ಇಂತಹ ಕೇವಲ ಒಂದು ತ್ರಿಭುಜವನ್ನು ತೆಗೆಯುವುದರಿಂದ ಲಭಿಸುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

आयामः षट्त्रिंशद्विस्तारोऽष्टादशैव दण्डास्तु ।
उभयनिषेधे किं फलमेकनिषेधे च किं गणितम् ॥ ३८ ॥
बहुविधवज्राकाराणां क्षेत्राणां व्यावहारिकफलानयनसूत्रम् -
रज्ज्वर्धकृतित्र्यंशो बाहुविभक्तो निरेकबाहुगुणः ।
सर्वेषामश्रवतां फलं हि बिम्बान्तरे चतुर्थांशः ॥ ३९ ॥

---

## Atroddeśakaḥ

**38.** Āyāmaḥ ṣaṭtriṁśadvistāro'ṣṭādaśaiva daṇḍāstu, ubhayaniṣedhe kiṁ phalamekaniṣedhe ca kiṁ gaṇitam.

Bahuvidhavajrākārāṇāṁ kṣetrāṇāṁ vyāvahārikaphalānayanasūtram -

**39.** Rajjvardhakṛtitryaṁśo bāhuvibhakto nirekabāhuguṇaḥ, sarveṣāmaśravatāṁ phalaṁ hi bimbāntare caturthāṁśaḥ.

---

## *An example in illustration thereof*

**38.** The length is 36 and the breadth is only 18 *daṇḍas*. What is the resulting measure of the area in the case of a di-deficient area and what in the case of the uni-deficient area?

The rule for arriving at the practically approximate measure of the area of fields resembling the outline of a multiplex *vajra* :

**39.** One-third of the square of half the perimeter, divided by the number of sides and (then) multiplied by the number of sides as diminished by one, gives indeed in the result the value of the area of all figures made up of sides. In the case of the area included between circles (in contact), one-fourth (of the result thus arrived at gives the required measure).

---

## ಉದಾಹರಣೆಯಿಂದ ವಿಶ್ಲೇಷಣ

೩೮. ಉದ್ದವು ೩೬ ಮತ್ತು ಅಗಲವು ಕೇವಲ ೧೮ *ದಂಡ*ಗಳಿವೆ. *ಉಭಯನಿಷೇಧ* ಹಾಗೂ *ಏಕನಿಷೇಧ* ಕ್ಷೇತ್ರಗಳ ಕ್ಷೇತ್ರಫಲಗಳನ್ನು ಬೇರೆ ಬೇರೆಯಾಗಿ ಕಂಡುಹಿಡಿ.

ಬಹುವಿಧ *ವಜ್ರಾ*ಕಾರದ ರೂಪುರೇಖೆಯನ್ನುಳ್ಳ ಕ್ಷೇತ್ರಗಳ ವ್ಯಾವಹಾರಿಕ ಕ್ಷೇತ್ರಫಲದ ಅಳತೆಯನ್ನು ಕಂಡುಹಿಡಿಯಲು ನಿಯಮ :

೩೯. ಸುತ್ತಳತೆಯ ಅರ್ಧಭಾಗದ ವರ್ಗದ ಮೂರನೆಯ ಒಂದು ಭಾಗವನ್ನು ಭುಜಗಳ ಸಂಖ್ಯೆಯಿಂದ ಭಾಗಿಸಿದ ನಂತರ ಒಂದನ್ನು ಕಡಿಮೆಮಾಡಿದ ಭುಜಗಳ ಸಂಖ್ಯೆಯಿಂದ ಗುಣಿಸುವುದರಿಂದ (ಭುಜಗಳಿಂದ) ರಚಿತವಾದ ಎಲ್ಲ ಕ್ಷೇತ್ರಗಳ (*ವಜ್ರಾ*ಕಾರ) ಕ್ಷೇತ್ರಫಲದ ಅಳತೆಯು ದೊರೆಯುತ್ತದೆ. ಈ ಫಲದ ನಾಲ್ಕನೆಯ ಒಂದು ಭಾಗವು (ಒಂದಕ್ಕೊಂದು ಸ್ಪರ್ಶಿಸಿರುವ) ವೃತ್ತಗಳ ಮಧ್ಯದ ಕ್ಷೇತ್ರದ ಕ್ಷೇತ್ರಫಲವಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**39.** The rule stated in this stanza gives the area of figures made up of any number of sides. If $s$ is half the sum of the measures of the sides and $n$ the number of sides, the area is said to be equal to $\frac{s^2}{3} \times \frac{n-1}{n}$. This formula is found to give the approximate value of the area in the case of a triangle, a quadrilateral, a hexagon and a circle conceived as a figure of infinite number of sides. The other part of the rule deals with the interspace bounded by parts of circles in contact and the value of the area arrived at according to the rule here given is also approximate. The figure below shows an interspace so bounded by four touching circles.

೩೯. ಈ ಶ್ಲೋಕದಲ್ಲಿ ತಿಳಿಸಿರುವ ನಿಯಮವು ಯಾವುದೇ ಸಂಖ್ಯೆಯ ಭುಜಗಳಿಂದ ರಚಿತವಾದ ಆಕೃತಿಗಳ ಕ್ಷೇತ್ರಫಲವನ್ನು ಕೊಡುತ್ತದೆ. ಭುಜಗಳ ಅಳತೆಗಳ ಮೊತ್ತದ ಅರ್ಧಭಾಗವು *ಯ* ಆಗಿದ್ದರೆ ಮತ್ತು ಭುಜಗಳ ಸಂಖ್ಯೆಯು *ನ* ಆಗಿದ್ದರೆ, ಆಗ ಕ್ಷೇತ್ರಫಲವು $\frac{\text{ಯ}^2}{೩} \times \frac{\text{ನ}-೧}{\text{ನ}}$ ಆಗುತ್ತದೆ. ಈ ಸೂತ್ರವು ತ್ರಿಭುಜ, ಚತುರ್ಭುಜ, ಷಟ್‌ಭುಜ ಮತ್ತು ವೃತ್ತಗಳನ್ನು ಅನಂತಭುಜಗಳ ಆಕೃತಿಗಳೆಂದು ಪರಿಗಣಿಸಿ, ಅವುಗಳ ಸಂಬಂಧದಲ್ಲಿ ವ್ಯಾವಹಾರಿಕ ಕ್ಷೇತ್ರಫಲದ ಅಳತೆಯನ್ನು ಕೊಡುತ್ತದೆ. ನಿಯಮದ ಇನ್ನೊಂದು ಭಾಗವು, ಒಂದನ್ನೊಂದು ಸ್ಪರ್ಶಿಸಿರುವ ವೃತ್ತಗಳಿಂದ ಸುತ್ತುವರೆದಿರುವ ಕ್ಷೇತ್ರದ ವಿಷಯವಾಗಿದೆ.





CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

षड्बाहुकस्य बाहोर्विष्कम्भः पञ्च चान्यस्य । व्यासस्त्रयो भुजस्य त्वं षोडशबाहुकस्य वद ॥ ४० ॥
त्रिभुजक्षेत्रस्य भुजः पञ्च प्रतिबाहुरपि च सप्त धरा षट् ।
अन्यस्य षडश्रस्य ह्येकादिषडन्तविस्तारः ॥ ४१ ॥
मण्डलचतुष्टयस्य हि नवविष्कम्भस्य मध्यफलम् । षट्पञ्चतुर्व्यासा वृत्तत्रितयस्य मध्यफलम् ॥४२॥

---

## Atroddeśakaḥ

40. Ṣaḍbāhukasya bāhorviṣkambhaḥ pañca cānyasya, vyāsastrayo bhujasya tvaṁ ṣoḍaśabāhukasya vada.

41. Tribhujakṣetrasya bhujaḥ pañca pratibāhurapi ca sapta dharā ṣaṭ, anyasya ṣaḍaśrasya hyekādiṣaḍantavistāraḥ.

42. Maṇḍalacatuṣṭayasya hi navaviṣkambhasya madhyaphalam, ṣaṭpañcacaturvyāsā vṛttatritayasya madhyaphalam.

---

## *Examples in illustration thereof*

**40.** In the case of a six-sided figure the measure of a side is 5 and in the case of another figure of 16 sides the measure of a side is 3. Give out (the measure of the area in each case.)

**41.** In the case of a trilateral figure one of the sides is 5, the opposite (i.e., the other) side is 7 and the base is 6. In the case of another hexalateral figure the sides are in measure from 1 to 6 in order. (Find out the value of the area in each case).

**42.** (Give out) the value of the interspace included inside four (equal) circles (in contact) having a diameter which is 9 in measure and (give out) the value of the area of the interspace included inside three circles having diameters measuring 6,5 and 4 (respectively).

---

## ಉದಾಹರಣೆಗಳಿಂದ ವಿಶ್ಲೇಷಣ

೪೦. ಆರು ಭುಜಗಳಿರುವ ಆಕೃತಿಯ ಒಂದು ಭುಜವು ೫ ಆಗಿದೆ ಮತ್ತು ೧೬ ಭುಜಗಳಿರುವ ಆಕೃತಿಯ ಒಂದು ಭುಜವು ೩ ಆಗಿದೆ. ಪ್ರತಿಯೊಂದು ಪ್ರಕರಣದಲ್ಲಿ ಕ್ಷೇತ್ರಫಲವನ್ನು ತಿಳಿಸು.

೪೧. ತ್ರಿಭುಜದ ಸಂಬಂಧದಲ್ಲಿ ಒಂದು ಭುಜವು ೫ ಆಗಿದೆ, ಸಮ್ಮುಖ (ಅಂದರೆ ಇನ್ನೊಂದು) ಭುಜವು ೭ ಆಗಿದೆ ಮತ್ತು ಪಾದವು ೬ ಆಗಿದೆ. ಇನ್ನೊಂದು ಆರು ಭುಜಗಳಿರುವ ಆಕೃತಿಯಲ್ಲಿ ಭುಜಗಳು ಕ್ರಮವಾಗಿ ೧ ರಿಂದ ೬ ರ ವರೆಗಿದೆ. ಪ್ರತಿಯೊಂದು ಪ್ರಕರಣದಲ್ಲಿ ಕ್ಷೇತ್ರಫಲವನ್ನು ಕಂಡುಹಿಡಿ.

೪೨. ಪ್ರತಿಯೊಂದರ ವ್ಯಾಸವು ೯ ಆಗಿರುವ ನಾಲ್ಕು ಸಮಾನವಾಗಿರುವ ಹಾಗೂ ಒಂದನ್ನೊಂದು ಸ್ಪರ್ಶಿಸಿರುವ ವೃತ್ತಗಳೊಳಗಿರುವ ಕ್ಷೇತ್ರದ ಕ್ಷೇತ್ರಫಲವನ್ನು ತಿಳಿಸು. ಮೂರು ಒಂದನ್ನೊಂದು ಸ್ಪರ್ಶಿಸಿರುವ ಹಾಗೂ ಕ್ರಮವಾಗಿ ೬, ೫ ಮತ್ತು ೪ ಅಳತೆಯ ವ್ಯಾಸಗಳಿರುವ ವೃತ್ತಗಳೊಳಗಿರುವ ಕ್ಷೇತ್ರದ ಕ್ಷೇತ್ರಫಲವನ್ನೂ ಸಹ ಕಂಡುಹಿಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



धनुराकारक्षेत्रस्य व्यावहारिकफलानयनसूत्रम् -
कृत्वेषुगुणसमासं बाणार्धगुणं शरासने गणितम्। शरवर्गात्पञ्चगुणाज्ज्यावर्गयुतात्पदं काष्ठम् ॥४३॥

---

Dhanurākārakṣetrasya vyāvahārikaphalānayanasūtram -
43. Kṛtveṣuguṇasamāsaṁ baṇārdhaguṇaṁ śarāsane gaṇitam,
śaravargātpañcaguṇājjyāvargayutātpadaṁ kāṣṭam.

---

The rule for arriving at the practically approximate area of a field resembling a bow in outline :

**43.** In the case of a bow-shaped field the calculated measure (of the area) is obtained by adding together (the measure of) the arrow and (that of) the string and multiplying the sum by half (the measure) of the arrow. The square root of the square of the (measure of the) arrow as multiplied by 5 and (then) as combined with the square of the (measure of the) string gives the (measure of the bent) stick (of the bow).

---

ಧನಸ್ಸಿನಾಕಾರದ ರೂಪುರೇಖೆಯನ್ನುಳ್ಳ ಕ್ಷೇತ್ರದ ವ್ಯಾವಹಾರಿಕ ಕ್ಷೇತ್ರಫಲವನ್ನು ಪಡೆಯಲು ನಿಯಮ :

೪೩. ಬಾಣ ಮತ್ತು ಹಗ್ಗದ ಅಳತೆಗಳನ್ನು ಕೂಡಿಸಿ, ಬಂದ ಮೊತ್ತವನ್ನು ಬಾಣದ ಅಳತೆಯ ಅರ್ಧಭಾಗದಿಂದ ಗುಣಿಸಿದರೆ ಧನಸ್ಸಿನಾಕಾರ ಕ್ಷೇತ್ರದ ಕ್ಷೇತ್ರಫಲವು ಪ್ರಾಪ್ತವಾಗುತ್ತದೆ. ಬಾಣದ ಅಳತೆಯ ವರ್ಗವನ್ನು ೫ ರಿಂದ ಗುಣಿಸಿದ ನಂತರ ಅದರೊಂದಿಗೆ ಹಗ್ಗದ ವರ್ಗವನ್ನು ಸೇರಿಸುವುದರಿಂದ ಬಂದ ಸಂಖ್ಯೆಯ ವರ್ಗಮೂಲವು ಧನುಸ್ಸಿನ (ಧನಸ್ಸಿನಾಕಾರದ) ಕಡ್ಡಿಯ ಉದ್ದವಾಗಿರುತ್ತದೆ.

---

**43.** The field resembling a bow in outline is in fact the segment of a circle, the bow forming the arc, the bow-string forming the chord and the arrow measuring the greatest perpendicular distance between the arc and the chord. If $a$, $c$ and $p$ represent the lengths of these three lines, then, according to the rules given in stanzas 43 and 45

$$\text{Area} = (c + p) \times \frac{p}{2}$$

$$\text{Length of bow} = \sqrt{5p^2 + c^2}$$

$$\text{Length of arrow} = \frac{\sqrt{a^2 - c^2}}{5}$$

$$\text{Length of bow-string} = \sqrt{a^2 - 5p^2}$$

For accurate value see stanzas $73\frac{1}{2}$ and $74\frac{1}{2}$ in this chapter.

೪೩. ಧನಸ್ಸಿನಾಕಾರದ ಕ್ಷೇತ್ರವು ರೂಪುರೇಖೆಯಲ್ಲಿ ವಾಸ್ತವದಲ್ಲಿ ವೃತ್ತದ ಒಂದು ಖಂಡದಂತಿದೆ. ಇಲ್ಲಿ ಧನುಸ್ಸು ಚಾಪವಾಗಿರುತ್ತದೆ. ಧನುಸ್ಸಿನ ಹಗ್ಗವು ಜ್ಯಾ ಆಗಿರುತ್ತದೆ ಮತ್ತು ಬಾಣವು ಚಾಪ ಮತ್ತು ಜ್ಯಾಗಳ ನಡುವಣ ಮಹತ್ತರ ಲಂಬರೂಪದ ಅಳತೆಯಾಗಿರುತ್ತದೆ. ಚ, ಕ ಮತ್ತು ಲ ಗಳು, ಈ ಮೂರು ರೇಖೆಗಳ ಉದ್ದಗಳನ್ನು ನಿರೂಪಿಸಿದರೆ, ಆಗ ೪೩ ಮತ್ತು ೪೫ ನೇ ಶ್ಲೋಕಗಳಲ್ಲಿ ಕೊಟ್ಟಿರುವ ನಿಯಮದ ಪ್ರಕಾರ -

$$\text{ಕ್ಷೇತ್ರಫಲ} = (\text{ಕ} + \text{ಲ}) \times \frac{\text{ಲ}}{೨}$$

$$\text{ಧನುಸ್ಸಿನ ಉದ್ದ} = \sqrt{೫\ \text{ಲ}^೨ + \text{ಕ}^೨}$$

$$\text{ಬಾಣದ ಉದ್ದ} = \frac{\sqrt{\text{ಚ}^೨ - \text{ಕ}^೨}}{೫}$$

$$\text{ಧನುಸ್ಸಿನ ಹಗ್ಗದ ಉದ್ದ} = \sqrt{\text{ಚ}^೨ - ೫\ \text{ಲ}^೨}$$

ಕರಾರುವಾಕ್ಕಾದ ಬೆಲೆಗಳಿಗಾಗಿ ಈ ಅಧ್ಯಾಯದ ೭೩$\frac{೧}{೨}$ ಮತ್ತು ೭೪$\frac{೧}{೨}$ ಶ್ಲೋಕಗಳನ್ನು ನೋಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

ज्या षड्विंशतिरेषा त्रयोदशेषुश्च कार्मुकं दृष्टम् ।
किं गणितमस्य काष्ठं किं वाचक्ष्वाशु मे गणक ॥ ४४ ॥

बाणगुणप्रमाणानयनसूत्रम् -

गुणचापकृतिविशेषात् पञ्चहृतात्पदमिषुः समुद्दिष्टः ।
शरवर्गात्पञ्चगुणादूना धनुषः कृतिः पदं जीवा ॥ ४५ ॥

---

### Atroddeśakaḥ

**44.** Jyā ṣaḍviṁśatireṣā trayodaśeṣuśca kārmukaṁ dṛṣṭam, kiṁ gaṇitamasya kāṣṭaṁ kiṁ vācakṣvāśu me gaṇaka.

Bāṇaguṇapramāṇānayanasūtram-

**45.** Guṇacāpakṛtiviśeṣāt pañcahṛtātpadamiṣuḥ samuddiṣṭaḥ,
śaravargātpañcaguṇādūnā dhanuṣaḥ kṛtiḥ padaṁ jīvā.

---

### *An example in illustration thereof*

**44.** A bow-shaped field is seen whereof the string-measure is 26 and the arrow-measure is 13. Tell me quickly, O mathematician, what the calculated measure of this (area) is and what the measure of this (bent) stick (curve).

The rule for arriving at the arrow-measure as well as the string-measure (in relation to a bow-shaped field) :

**45.** The difference between the squares of the string and of the bent bow is divided by 5. The square root (of the resulting quotient) gives the intended measure of the arrow. The square of the arrow is multiplied by 5 and (this product) is subtracted from the square (of the arc) of the bow. The square root (of the resulting quantity) gives the measure corresponding to the string.

---

### ಉದಾಹರಣೆಯಿಂದ ವಿಶ್ಲೇಷಣ

೪೪. ಒಂದು ಧನಸ್ಸಿನಾಕಾರದ ಕ್ಷೇತ್ರದಲ್ಲಿ ಹಗ್ಗದ ಅಳತೆಯು ೨೬ ಮತ್ತು ಬಾಣದ ಅಳತೆಯು ೧೩ ಎಂದು ನೋಡಲಾಯಿತು. ಎಲೈ ಗಣಕನೇ, ಈ ಕ್ಷೇತ್ರದ ಕ್ಷೇತ್ರಫಲ ಮತ್ತು ಈ (ಬಾಗಿದ)ಕಡ್ಡಿಯ (ವಕ್ರದ) ಅಳತೆಗಳೇನೆಂದು ನನಗೆ ಬೇಗನೆ ಹೇಳು.

ಒಂದು ಧನಸ್ಸಿನಾಕಾರದ ಕ್ಷೇತ್ರದ ಸಂಬಂಧದಲ್ಲಿ ಬಾಣದ ಅಳತೆ ಹಾಗೂ ಹಗ್ಗದ ಅಳತೆಗಳನ್ನು ಪಡೆಯಲು ನಿಯಮ :

೪೫. ಹಗ್ಗದ ಮತ್ತು ಬಾಗಿದ ಧನುಸ್ಸಿನ ವರ್ಗಗಳ ವ್ಯತ್ಯಾಸವನ್ನು ೫ ರಿಂದ ಭಾಗಿಸಲಾಗುತ್ತದೆ. ಹೀಗೆ ದೊರೆತ ಭಾಗಲಬ್ಧದ ವರ್ಗಮೂಲವು ಉದ್ದೇಶಿತ ಬಾಣದ ಅಳತೆಯಾಗಿರುತ್ತದೆ. ಬಾಣದ ವರ್ಗವನ್ನು ೫ ರಿಂದ ಗುಣಿಸಲಾಗುತ್ತದೆ ಮತ್ತು ಈ ಗುಣಲಬ್ಧವನ್ನು ಧನುಸ್ಸಿನ ಚಾಪದ ವರ್ಗದಿಂದ ಕಳೆಯಲಾಗುತ್ತದೆ. (ಈ ರೀತಿ ಲಭಿಸಿದ ಸಂಖ್ಯೆಯ) ವರ್ಗಮೂಲವು ಹಗ್ಗಕ್ಕೆ ಸಂಬಂಧಿಸಿದ ಅಳತೆಯಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

अस्य धनुःक्षेत्रस्य शरोऽत्र न ज्ञायते परस्यापि। न ज्ञायते च मौर्वी तद्वयमाचक्ष्व गणितज्ञ ॥४६॥

बहिरन्तश्चतुरश्रकवृत्तस्य व्यावहारिकफलानयनसूत्रम् -

बाह्ये वृत्तस्येदं क्षेत्रस्य फलं त्रिसंगुणं दलितम् । अभ्यन्तरे तदर्धं विपरीते तत्र चतुरश्रे ॥ ४७ ॥

---

## Atroddeśakaḥ

**46.** Asya dhanuḥkṣetrasya śaro'tra na jñāyate parasyāpi, na jñāyate ca maurvī taddvayamācakṣva gaṇitajña.

Bahirantaścaturaśrakavṛttasya vyāvahārikaphalānayanasūtram-

**47.** Bāhye vṛttasyedaṁ kṣetrasya phalaṁ trisaṁguṇaṁ dalitam, abhyantare tadardhaṁ viparīte tatra caturaśre.

---

## *Examples in illustration thereof*

**46.** In the case of this (already given bow-shaped) field the measure of the arrow is not known and in the case of another (similar field) the measure of the string is not known. O you who know calculation, give out both these measures.

The rule for arriving at the practically approximate value of the area of the circle which is circumscribed about or inscribed within a four-sided figure :

**47.** Half of three times (the measure of the area of the inscribed quadrilateral figure) gives the measure of the area of the circle in the case in which it is circumscribed outside. In the case where it is inscribed within and the quadrilateral is the other way (i.e., escribed), half of the above measure (is the required quantity).

---

## ಉದಾಹರಣೆಗಳಿಂದ ವಿಶ್ಲೇಷಣ

೪೬. (ಈಗಾಗಲೇ ತಿಳಿಸಲಾಗಿರುವ) ಧನಸ್ಸಿನಾಕಾರ ಕ್ಷೇತ್ರದ ಸಂಬಂಧದಲ್ಲಿ ಬಾಣದ ಅಳತೆಯು ಗೊತ್ತಿಲ್ಲ ಮತ್ತು ಇಂತಹುದೇ ಇನ್ನೊಂದು ಕ್ಷೇತ್ರದ ಸಂಬಂಧದಲ್ಲಿ ಹಗ್ಗದ ಅಳತೆಯು ತಿಳಿದಿಲ್ಲ. ಎಲೈ ಗಣಿತಜ್ಞನೇ, ಈ ಎರಡೂ ಅಳತೆಗಳನ್ನು ತಿಳಿಸು.

ಚತುರ್ಭುಜದ ಹೊರಗೆ ಮತ್ತು ಒಳಗೆ ರಚಿತವಾದ ವೃತ್ತದ ಕ್ಷೇತ್ರಫಲದ ವ್ಯಾವಹಾರಿಕ ಬೆಲೆಯನ್ನು ಪಡೆಯಲು ನಿಯಮ :

೪೭. ಒಳರೇಖಿತವಾದ ಚತುರ್ಭುಜದ ಕ್ಷೇತ್ರಫಲದ ಅಳತೆಯ ಮೂರರಷ್ಟರ ಅರ್ಧಭಾಗವು ಹೊರರಚಿತವಾದ ವೃತ್ತದ ಕ್ಷೇತ್ರಫಲದ ಅಳತೆಯಾಗಿರುತ್ತದೆ. ವೃತ್ತವು ಒಳರೇಖಿತವಾಗಿದ್ದಾಗ ಮತ್ತು ಚತುರ್ಭುಜವು ಬಹಿವೃತ್ತವಾಗಿದ್ದಾಗ ಮೇಲೆ ದೊರೆತ ಅಳತೆಯ ಅರ್ಧಭಾಗವು ಬೇಕಾದ ಸಂಖ್ಯೆಯಾಗಿರುತ್ತದೆ.

---

**47.** The formula here given may be seen to be accurate in the case of a square, but only approximate in the case of other quadrilaterals, if 3 be taken to be the correct value of $\pi$.

೪೭. ೩ ನ್ನು $\pi$ ನ ಸರಿಯಾದ ಬೆಲೆ ಎಂದು ತೆಗೆದುಕೊಂಡರೆ ಇಲ್ಲಿ ಕೊಟ್ಟಿರುವ ಸೂತ್ರವು ವರ್ಗದ ಸಂಬಂಧದಲ್ಲಿ ಕರಾರುವಾಕ್ಕಾಗಿರುತ್ತದೆ. ಆದರೆ ಇತರ ಚತುರ್ಭುಜಗಳ ಸಂಬಂಧದಲ್ಲಿ ಇದು ಕೇವಲ ಅಂದಾಜಾಗಿರುತ್ತದೆ ಎಂದು ನೋಡಬಹುದು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

पञ्चदशबाहुकस्य क्षेत्रस्याभ्यन्तरं बहिर्गणितम्। चतुरश्रस्य च वृत्तव्यवहारफलं ममाचक्ष्व ॥ ४८ ॥

**इति व्यावहारिकगणितं समाप्तम् ।**

**अथ सूक्ष्मगणितम्**

इतः परं क्षेत्रगणिते सूक्ष्मगणितव्यवहारमुदाहरिष्यामः । तद्यथा[1] -

आबाधावलम्बकानयनसूत्रम् -

---

Atroddeśakaḥ

**48.** Pañcadaśabāhukasya kṣetrasyābhyantaraṁ bahirgaṇitam, caturaśrasya ca vṛttavyavahāraphalaṁ mamācakṣva.

Iti vyāvahārikagaṇitam samāptam.

Atha Sūkṣmagaṇitam

Itaḥ paraṁ kṣetragaṇitaṁ sukṣmagaṇitavyavahāramudāhariṣyāmaḥ. Tadyathā-

Ābādhāvalambakānayanasūtram-

---

***An example in illustration thereof***

**48.** In relation to a quadrilateral figure, each of whose sides is 15 (in measure), tell me the practically approximate value of the inscribed and the escribed circles.

**Thus ends the calculation of practically approximate value in relation to areas.**

**The Minutely Accurate Calculation of the Measure of Areas**

Hereafter in the calculation regarding the measurement of areas we shall expound the subject of treatment known as minutely accurate calculation. And that is as follows :

The rule for arriving at the measure of the perpendicular (from the vertex to the base of a given triangle) and (also) of the segments into which the base is thereby divided) :

---

**ಉದಾಹರಣೆಯಿಂದ ವಿಶ್ಲೇಷಣ**

೪೮. ಒಂದು ಚತುರ್ಭುಜಾಕೃತಿಯ ಸಂಬಂಧದಲ್ಲಿ ಪ್ರತಿಯೊಂದು ಭುಜವೂ ೧೫ ಆಗಿದೆ. ಅಂತರ್ಗತ ಮತ್ತು ಬರ್ಹಿಗತ ವೃತ್ತಗಳ ವ್ಯಾವಹಾರಿಕ ಕ್ಷೇತ್ರಫಲಗಳ ಅಳತೆಯನ್ನು ನನಗೆ ಹೇಳು.

**ಈ ರೀತಿ ಕ್ಷೇತ್ರ ಗಣಿತ ವ್ಯವಹಾರದಲ್ಲಿ ವ್ಯಾವಹಾರಿಕ ಗಣಿತವೆಂಬ ಹೆಸರಿನ ಪ್ರಕರಣವು ಸಮಾಪ್ತಿಯಾಯಿತು.**

**ಸೂಕ್ಷ್ಮ ಗಣಿತ**

ಇನ್ನುಮುಂದೆ ನಾವು ಗಣಿತದಲ್ಲಿ ಕ್ಷೇತ್ರಫಲಗಳ ಅಳತೆಯ ಸಂಬಂಧದ ಸೂಕ್ಷ್ಮಗಣಿತವೆಂಬ ಹೆಸರಿನ ವಿಷಯವನ್ನು ವಿವರಿಸುತ್ತೇವೆ. ಅದು ಈ ರೀತಿ ಇದೆ :

ಯಾವುದಾದರೂ ಕೊಟ್ಟಿರುವ ತ್ರಿಭುಜದ (ಯಾವುದರಿಂದ ಪಾದವು ಭಾಗವಾಗುತ್ತದೋ ಅಂತಹ) ಖಂಡಗಳ ಮತ್ತು (ಶೃಂಗದಿಂದ ಕೊಟ್ಟಿರುವ ತ್ರಿಭುಜದ ಪಾದದವರೆಗಿರುವ) ಲಂಬದ ಅಳತೆಯನ್ನು ಪಡೆಯಲು ನಿಯಮ:



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



भुजकृत्यन्तरभूहृतभूसङ्क्रमणं त्रिबाहुकाबाधे। तद्भुजवर्गान्तरपदमवलम्बकमाहुराचार्याः ॥ ४६ ॥

---

49. Bhujakṛtyantarabhūhṛtabhūsaṅkramaṇam tribāhukābādhe, tadbhujavargāntarapadamavalambakamāhurācāryāḥ.

---

**49.** The process of *saṅkramaṇa* carried out between the base and the difference between the squares of the sides as divided by the base gives rise to the values of the two segments (of the base) of the triangle. Learned teachers say that the square root of the difference between the squares of (either of) these (segments) and of the (corresponding adjacent) side gives rise to the measure of the perpendicular.

---

೪೯. ಭುಜಗಳ ವರ್ಗವನ್ನು ಪಾದದಿಂದ ಭಾಗಿಸುವುದರಿಂದ ದೊರೆತ ಸಂಖ್ಯೆ ಮತ್ತು ಪಾದದ ನಡುವೆ *ಸಂಕ್ರಮಣ* ಕ್ರಿಯೆಯನ್ನು ಮಾಡುವುದರಿಂದ, ತ್ರಿಭುಜದ ಪಾದದ ಖಂಡಗಳ ಅಳತೆಗಳು ಪ್ರಾಪ್ತವಾಗುತ್ತವೆ. ಈ ಖಂಡಗಳಲ್ಲಿ ಒಂದರ ವರ್ಗ ಮತ್ತು ಅನುಗುಣವಾದ ಸಮೀಪಸ್ಥ ಭುಜದ ವರ್ಗಗಳ ವ್ಯತ್ಯಾಸದ ವರ್ಗಮೂಲವು ಲಂಬದ ಅಳತೆಯಾಗಿರುತ್ತದೆ ಎಂದು ಆಚಾರ್ಯರು ಹೇಳುತ್ತಾರೆ.

---

1. After this M adds the following:- त्रिभुजक्षेत्रस्य भुजद्वयसंयोगस्थानमारभ्य अधस्थितभूमिसंस्पृक्ष्टरेखाया नाम अवलम्बकः स्यात् ।

**49.** Algebraically represented :

$$c_1 = \left( c + \frac{a^2 - b^2}{c} \right) \times \frac{1}{2} ;$$

$$c_2 = \left( c - \frac{a^2 - b^2}{c} \right) \times \frac{1}{2} ;$$




$p = \sqrt{a^2 - c_1^2}$ or $\sqrt{b^2 - c_2^2}$. Here $a$, $b$, $c$ represent the measures of the sides of a triangle, $c_1$, $c_2$ the measures of the segments of the base whose total length is $c$ and $p$ represents the length of the perpendicular.

೪೯. ಬೀಜಗಣಿತರೂಪದಲ್ಲಿ ನಿರೂಪಿಸಿದರೆ

$$ಸ_೧ = \left( ಸ + \frac{ಅ^2 - ಬ^2}{ಸ} \right) \times \frac{೧}{೨}$$

$$ಸ_೨ = \left( ಸ - \frac{ಅ^2 - ಬ^2}{ಸ} \right) \times \frac{೧}{೨}$$

$ಲ = \sqrt{ಅ^2 - ಸ_೧^2}$ ಅಥವಾ $\sqrt{ಬ^2 - ಸ_೨^2}$ ಆಗುತ್ತದೆ. ಇಲ್ಲಿ ಅ, ಬ, ಸಗಳು ತ್ರಿಭುಜದ ಭುಜಗಳನ್ನು ನಿರೂಪಿಸುತ್ತವೆ. ಒಟ್ಟು ಸ ಉದ್ದವಾಗಿರುವಂತಹ ಪಾದದ ಎರಡು ಖಂಡಗಳ ಅಳತೆಗಳು $ಸ_೧$, $ಸ_೨$ ಗಳಾಗಿವೆ ಮತ್ತು ಲ ಲಂಬವಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



सूक्ष्मगणितानयनसूत्रम् -
भुजयुत्यर्धचतुष्काद्भुजहीनाद्घातितात्पदं सूक्ष्मम् ।
अथवा मुखतलयुतिदलमवलम्बगुणं न विषमचतुरश्रे ॥ ५० ॥

**अत्रोद्देशकः**

त्रिभुजक्षेत्रस्याष्टौ दण्डा भूर्बाहुकौ समस्य त्वम् ।
सूक्ष्मं वद गणितं मे गणितविदवलम्बकाबाधे ॥ ५१ ॥

---

Sūkṣmagaṇitānayanasūtram -

**50.** Bhujayutyardhacatuṣkādbhujahīnāddhātitātpadaṁ sūkṣmam, athavā mukhatalayutidalamavalambaguṇaṁ na viṣamacaturaśre.

**Atroddeśakaḥ**

**51.** Tribhujakṣetrasyāṣṭau daṇḍā bhūrbāhukau samasya tvam, sūkṣmaṁ vada gaṇitaṁ me gaṇitavidavalambakābādhe.

---

The rule for arriving at the minutely accurate measurement of the area (of trilateral and quadrilateral figures) :

**50.** Four quantities represented (respectively) by half the sum of the sides as diminished by (each of) the sides (taken in order) are multiplied together and the square root (of the product so obtained) gives the minutely accurate measure (of the area of the figure). Or the measure of the areas may be arrived at by multiplying by the perpendicular (from the top to the base) half the sum of the top measure and the base measure. (The latter rule does) not (hold good) in the case of an inequi-lateral quadrilateral figure.

***Examples in illustration thereof***

**51.** In the case of an equilateral triangle, 8 *daṇḍas* give the measure of the base as also of each of the two sides. You, who know calculation, tell me the accurate value of the area (thereof) and also of the perpendicular (to the base) as well as of the segments (of the base caused thereby).

---

ತ್ರಿಭುಜ ಮತ್ತು ಚತುರ್ಭುಜ ಕ್ಷೇತ್ರಗಳ ಕ್ಷೇತ್ರಫಲಗಳ ಸೂಕ್ಷ್ಮವಾದ ಅಳತೆಯನ್ನು ಪಡೆಯಲು ನಿಯಮ:

೫೦. ಭುಜಗಳ ಮೊತ್ತದ ಅರ್ಧಭಾಗದಿಂದ ಕ್ರಮವಾಗಿ ಪ್ರತಿಯೊಂದು ಭುಜವನ್ನು ಕಳೆಯುವುದರಿಂದ ಲಭಿಸುವ ನಾಲ್ಕು ಸಂಖ್ಯೆಗಳನ್ನು ಒಟ್ಟಿಗೆ ಗುಣಿಸಲಾಗುತ್ತದೆ. ಹೀಗೆ ದೊರೆತ ಗುಣಲಬ್ಧದ ವರ್ಗಮೂಲವು ಕ್ಷೇತ್ರಫಲದ ಸೂಕ್ಷ್ಮವಾದ ಅಳತೆಯಾಗಿರುತ್ತದೆ ಅಥವಾ ಕ್ಷೇತ್ರಫಲದ ಅಳತೆಯನ್ನು ಮೇಲಿನಿಂದ ಪಾದಕ್ಕೆ ಎಳೆದಿರುವ ಲಂಬವನ್ನು ಪಾದ ಮತ್ತು ಮೇಲಿನ ಭುಜದ ಮೊತ್ತದ ಅರ್ಧಭಾಗದಿಂದ ಗುಣಿಸಿ ಪಡೆಯಬಹುದಾಗಿದೆ. ಆದರೆ ಈ ಕೊನೆಯ ನಿಯಮವು ವಿಷಮ ಚತುರ್ಭುಜಕ್ಕೆ ಅನ್ವಯವಾಗುವುದಿಲ್ಲ.

**ಉದಾಹರಣೆಗಳಿಂದ ವಿಶ್ಲೇಷಣ**

೫೧. ಸಮಬಾಹುತ್ರಿಭುಜದ ಪ್ರತಿಯೊಂದು ಭುಜವು ೮ *ದಂಡ*ಗಳಾಗಿವೆ. ಎಲೈ ಗಣಿತಜ್ಞನೇ, ಅದರ ಕ್ಷೇತ್ರಫಲದ ಸೂಕ್ಷ್ಮವಾದ ಅಳತೆ ಹಾಗೂ ಶೃಂಗದಿಂದ ಪಾದದ ಮೇಲೆ ಎಳೆದ ಲಂಬ ಮತ್ತು ಈ ರೀತಿ ಪ್ರಾಪ್ತವಾದ ಪಾದದ ಖಂಡಗಳ ಸೂಕ್ಷ್ಮವಾದ ಬೆಲೆಗಳನ್ನು ಹೇಳು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**50.** Algebraically represented:

Area of a trilateral figure = $\sqrt{s(s-a)(s-b)(s-c)}$; where $s$ is half the sum of the sides, $a$, $b$, $c$ the respective measures of the sides of the trilateral figure

or = $\frac{c}{2} \times p$, where $p$ is the perpendicular distance of the vertex from the base.

Area of a quadrilateral figure = $\sqrt{(s-a)(s-b)(s-c)(s-d)}$ where $s$ is half the sum of the sides and $a$, $b$, $c$, $d$ the measures of the respective sides of the quadrilateral figure

or = $\frac{b+d}{2} \times p$ (except in the case of an inequilateral) where $p$ is the measure of either of the perpendiculars drawn to the base from the extremities of the top side.

The formulas here given for trilateral figures are correct; but those given for quadrilateral figures hold good only in the case of cyclic quadrilaterals, as in these formulas sight is lost of the fact that for the same measure of the sides the value of the area as well as of the perpendicular may vary.

೫೦. ಬೀಜಗಣಿತರೂಪದಲ್ಲಿ ನಿರೂಪಿಸಿದರೆ,

ಒಂದು ತ್ರಿಭುಜದ ಕ್ಷೇತ್ರಫಲ = $\sqrt{\text{ಯ}(\text{ಯ}-\text{ಅ})(\text{ಯ}-\text{ಬ})(\text{ಯ}-\text{ಸ})}$

ಇಲ್ಲಿ ಅ, ಬ, ಸ ಗಳು ತ್ರಿಭುಜದ ಭುಜಗಳಾಗಿವೆ ಮತ್ತು ಯ ವು ಭುಜಗಳ ಮೊತ್ತದ ಅರ್ಧಭಾಗವಾಗಿದೆ. ಅಥವಾ, ಕ್ಷೇತ್ರಫಲ = $\frac{\text{ಸ}}{೨} \times$ ಲ, ಇಲ್ಲಿ, ಲ ವು ಶೃಂಗದಿಂದ ಪಾದಕ್ಕೆ ಎಳೆದ ಲಂಬದ ಅಳತೆಯಾಗಿದೆ.

ಚತುರ್ಭುಜ ಕ್ಷೇತ್ರದ ಕ್ಷೇತ್ರಫಲ = $\sqrt{(\text{ಯ}-\text{ಅ})(\text{ಯ}-\text{ಬ})(\text{ಯ}-\text{ಸ})(\text{ಯ}-\text{ದ})}$

ಇಲ್ಲಿ ಯ ವು ಭುಜಗಳ ಮೊತ್ತದ ಅರ್ಧಭಾಗವಾಗಿದೆ ಮತ್ತು ಅ, ಬ, ಸ, ದ ಗಳು ಚತುರ್ಭುಜ ಕ್ಷೇತ್ರದ ಭುಜಗಳ ಅಳತೆಗಳಾಗಿವೆ. ಅಥವಾ, ಕ್ಷೇತ್ರಫಲ = $\frac{\text{ಬ}+\text{ದ}}{೨} \times$ ಲ (ಚತುರ್ಭುಜವು ವಿಷಮವಾಗಿದ್ದ ಪ್ರಕರಣವನ್ನು ಬಿಟ್ಟು), ಇಲ್ಲಿ ಲ ವು ಮೇಲಿನ ಭುಜದ ತುದಿಗಳಿಂದ ಪಾದದ ಮೇಲೆ ಎಳೆದ ಲಂಬಗಳಲ್ಲಿ ಯಾವುದಾದರೂ ಒಂದರ ಅಳತೆಯಾಗಿರುತ್ತದೆ.

ತ್ರಿಭುಜ ಕ್ಷೇತ್ರಗಳಿಗಾಗಿ ಕೊಟ್ಟಿರುವ ಸೂತ್ರಗಳು ಸರಿಯಾಗಿವೆ. ಆದರೆ ಚತುರ್ಭುಜ ಕ್ಷೇತ್ರಗಳಿಗಾಗಿ ಕೊಟ್ಟಿರುವ ಸೂತ್ರಗಳು ಕೇವಲ ಚಕ್ರೀಯ ಚತುರ್ಭುಜಗಳ ಸಂಬಂಧದಲ್ಲಿ ಸರಿಯಾಗಿವೆ. ಏಕೆಂದರೆ ಭುಜಗಳ ಅದೇ ಅಳತೆಗಳಿಗೆ ಕ್ಷೇತ್ರಫಲ ಹಾಗೂ ಲಂಬದ ಅಳತೆಗಳು ಬದಲಾಗಬಹುದು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



द्विसमत्रिभुजक्षेत्रे त्रयोदश स्युर्भुजद्वये दण्डाः ।
दश भूरस्याबाधे अथावलम्बं च सूक्ष्मफलम् ॥ ५२ ॥
विषमत्रिभुजस्य भुजा त्रयोदश प्रतिभुजा तु पञ्चदश ।
भूमिश्चतुर्दशास्य हि किं गणितं चावलम्बकाबाधे ॥ ५३ ॥

---

52. Dvisamatribhujakṣetre trayodaśa syurbhujadvaye daṇḍāḥ, daśa bhūrasyābādhe athāvalambaṁ ca sukṣmaphalam.

53. Viṣamatribhujasya bhujā trayodaśa pratibhujā tu pañcadaśa, bhūmiścaturdaśāsya hi kiṁ gaṇitaṁ cāvalambakābādhe.

---

**52.** In the case of an isosceles triangle (each of the) two (equal) sides measures 13 *daṇḍas* and the base measures 10. (What is) the accurate measure of the area thereof and of the perpendicular (to the base) as also of the segments (of the base caused thereby)?

**53.** In the case of a scalene triangle one of the sides is 13 (in measure), the opposite side is 15 and the base is 14. What indeed is the calculated measure (of the area of this figure) and what of the perpendicular (to the base) and of the basal segments?

---

೫೨. ಒಂದು ಸಮದ್ವಿಬಾಹು ತ್ರಿಭುಜದ ಸಮವಾದ ಭುಜಗಳಲ್ಲಿ ಪ್ರತಿಯೊಂದೂ ೧೩ *ದಂಡ*ಗಳು ಮತ್ತು ಪಾದದ ಅಳತೆಯು ೧೦ ಆಗಿದೆ. ಕ್ಷೇತ್ರಫಲ, ಲಂಬ ಮತ್ತು ಪಾದದ ಖಂಡಗಳ ಸೂಕ್ಷ್ಮವಾದ ಅಳತೆಗಳು ಏನಾಗುತ್ತವೆ?

೫೩. ವಿಷಮ ತ್ರಿಭುಜದ ಒಂದು ಭುಜವು ೧೩, ಸಮ್ಮುಖ ಭುಜವು ೧೫ ಮತ್ತು ಪಾದವು ೧೪ ಆಗಿದೆ. ಈ ಕ್ಷೇತ್ರದ ಕ್ಷೇತ್ರಫಲ, ಲಂಬ ಮತ್ತು ಪಾದದ ಖಂಡಗಳ ಸೂಕ್ಷ್ಮವಾದ ಅಳತೆಗಳೇನು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



इतः परं पञ्चप्रकाराणां चतुरश्रक्षेत्राणां कर्णानयनसूत्रम् -
क्षितिहतविपरीतभुजौ मुखगुणभुजमिश्रितौ गुणच्छेदौ ।
छेदगुणौ प्रतिभुजयोः संवर्गयुतेः पदं कर्णौ ॥ ५४ ॥

---

Itaḥ paraṁ pañcaprakārāṇāṁ caturaśrakṣetrāṇāṁ karṇānayanasūtram -

54. Kṣitihataviparītabhujau mukhaguṇabhujamiśritau guṇacchedau,
chedaguṇau pratibhujayoḥ saṁvargayuteḥ padaṁ karṇau.

---

Hereafter (we give) the rule for arriving at the value of the diagonal of the five varieties of quadrilateral figures :

**54.** The two quantities obtained by multiplying the basal side by the (larger and the smaller of the right and the left) sides are (respectively) combined with the two (other) quantities obtained by multiplying the top side by the (smaller and the larger of the right and the left) sides. The (resulting) two sums constitute the multiplier and the divisor as also the divisor and the multiplier in relation to the sum of the products of the opposite sides. The square roots (of the quantities so obtained) give the required measures of the diagonals.

---

ಇನ್ನುಮುಂದೆ ಐದು ಪ್ರಕಾರಗಳ ಚತುರ್ಭುಜ ಕರ್ಣಗಳ ಬೆಲೆಗಳನ್ನು ಪಡೆಯುವ ನಿಯಮ :

೫೪. ಪಾದವನ್ನು ಬಲಗಡೆಯ ಮತ್ತು ಎಡಗಡೆಯ ದೊಡ್ಡದಾದ ಮತ್ತು ಚಿಕ್ಕದಾದ ಭುಜಗಳಿಂದ ಗುಣಿಸುವುದರಿಂದ ಬಂದ ಸಂಖ್ಯೆಗಳನ್ನು, ಕ್ರಮವಾಗಿ ಮೇಲಿನ ಭುಜವನ್ನು ಬಲಗಡೆಯ ಮತ್ತು ಎಡಗಡೆಯ ಚಿಕ್ಕದಾದ ಮತ್ತು ದೊಡ್ಡದಾದ ಭುಜಗಳಿಂದ ಗುಣಿಸುವುದರಿಂದ ಬರುವ ಎರಡು ಸಂಖ್ಯೆಗಳೊಂದಿಗೆ ಸೇರಿಸುತ್ತೇವೆ. ಹೀಗೆ ದೊರೆಯುವ ಎರಡು ಮೊತ್ತಗಳು, ಗುಣಕ ಮತ್ತು ಭಾಜಕ ಹಾಗೂ ಸಮ್ಮುಖ ಭುಜಗಳ ಗುಣಲಬ್ಧಗಳ ಮೊತ್ತದ ಸಂಬಂಧದ ಭಾಜಕ ಮತ್ತು ಗುಣಕಗಳಾಗಿರುತ್ತವೆ. ಈ ರೀತಿ ಲಭಿಸಿದ ಸಂಖ್ಯೆಗಳ ವರ್ಗಮೂಲಗಳು, ಕರ್ಣಗಳ ಬೇಕಾದ ಅಳತೆಗಳಾಗಿರುತ್ತವೆ.

---

**54.** Algebraically represented the measure of the diagonal of a quadrilateral figure as given here is

$$\sqrt{\frac{(ac + bd)\,(ab + cd)}{ad + bc}} \quad \text{or} \quad \sqrt{\frac{(ac + bd)\,(ad + bc)}{ab + cd}}$$

These formulae also are correct only for cyclic quadrilaterals. Bhāskarācārya is aware of the futility of attempting to give the measure of the area of a quadrilateral without previously knowing the values of the perpendicular or of the diagonals. *Vide* the following stanza from his *Līlāvatī* :

೫೪. ಬೀಜಗಣಿತರೂಪದಲ್ಲಿ ನಿರೂಪಿಸಿದರೆ ಚತುರ್ಭುಜ ಕ್ಷೇತ್ರದ ಕರ್ಣದ ಅಳತೆಯು ಇದಾಗುತ್ತದೆ.

$$\sqrt{\frac{(\text{ಅಸ} + \text{ಬದ})\,(\text{ಅಬ} + \text{ಸದ})}{\text{ಅದ} + \text{ಬಸ}}} \quad \text{ಅಥವಾ} \quad \sqrt{\frac{(\text{ಅಸ} + \text{ಬದ})\,(\text{ಅದ} + \text{ಬಸ})}{\text{ಅಬ} + \text{ಸದ}}}$$

ಈ ಸೂತ್ರಗಳು ಕೇವಲ ಚಕ್ರೀಯ ಚತುರ್ಭುಜಗಳಿಗೆ ಮಾತ್ರ ಸರಿಯಾಗಿವೆ. ಲಂಬ ಅಥವಾ ಕರ್ಣಗಳ ಬೆಲೆಗಳು ಮೊದಲೇ ತಿಳಿಯದಿದ್ದರೂ, ಚತುರ್ಭುಜದ ಕ್ಷೇತ್ರಫಲವನ್ನು ಪಡೆಯುವ ಪ್ರಯತ್ನದಲ್ಲಿ ಭಾಸ್ಕರಾಚಾರ್ಯರು ಪರಿಚಿತರಾಗಿದ್ದರು. ಇದು ಕೆಳಗೆ ತಿಳಿಸಿರುವ ಅವರ *ಲೀಲಾವತೀ* ಗ್ರಂಥದ ಶ್ಲೋಕದಿಂದ ಪ್ರಕಟವಾಗುತ್ತದೆ.

लम्बयोः कर्णयोर्वैकमनिर्दिश्यापरान् कथम् ।
पृच्छत्यनियतत्वेऽपि नियतं चापि तत्फलम् ।।
स पृच्छकः पिशाचो वा वक्ता वा नितरां ततः ।
यो न वेत्ति चतुर्बाहुक्षेत्रस्यानियतां स्थितम् ।।



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

समचतुरश्रस्य त्वं समन्ततः पञ्चबाहुकस्याशु ।
कर्णं च सूक्ष्मफलमपि कथय सखे गणिततत्त्वज्ञ ॥ ५५ ॥
आयतचतुरश्रस्य द्वादश बाहुश्च कोटिरपि पञ्च ।
कर्णः कः सूक्ष्मं किं गणितं चाचक्ष्व मे शीघ्रम् ॥ ५६ ॥
द्विसमचतुरश्रभूमिः षट्त्रिंशद्बाहुरेकषष्टिश्च ।
सोऽन्यश्चतुर्दशास्यं कर्णः कः सूक्ष्मगणितं किम् ॥ ५७ ॥

---

## Atroddeśakaḥ

55. Samacaturaśrasya tvaṁ samantataḥ pañcabāhukasyāśu, karṇaṁ ca sūkṣmaphalamapi kathaya sakhe gaṇitatattvajña.

56. Āyatacaturaśrasya dvādaśa bāhuśca koṭirapi pañca, karṇaḥ kaḥ sūkṣmaṁ kiṁ gaṇitaṁ cācakṣva me śīghram.

57. Dvisamacaturaśrabhūmiḥ ṣaṭtriṁśadbāhurekaṣaṣṭiśca, so'nyaścaturdaśāsyaṁ karṇaḥ kaḥ sūkṣmagaṇitaṁ kim.

---

## *Examples in illustration thereof*

**55.** In the case of an equilateral quadrilateral which has all around a side measure of 5, tell me quickly, O friend who know the secret of calculation, the value of the diagonal and also the accurate value of the area.

**56.** In the case of a longish quadrilateral, the (horizontal) side is 12 in measure and the perpendicular side is 5 in measure. Tell me quickly what the measure of the diagonal is and what the accurate measure of the area.

**57.** The basal side of an equi-bilateral is 36. One of the sides is 61 and the other also is the same. The top side is 14. What is the diagonal and what is the accurate measure of the area?

---

## ಉದಾಹರಣೆಗಳಿಂದ ವಿಶ್ಲೇಷಣ

೫೫. ಯಾವುದರ ನಾಲ್ಕೂ ಕಡೆ ಪ್ರತಿಯೊಂದು ಭುಜದ ಅಳತೆಯು ೫ ಆಗಿದೆಯೋ ಅಂತಹ ಸಮಭುಜ ಚತುರ್ಭುಜದ ಸಂಬಂಧದಲ್ಲಿ, ಎಲೈ ಗಣಿತತತ್ವಜ್ಞನೇ, ಕರ್ಣದ ಬೆಲೆಯನ್ನು ಮತ್ತು ಕ್ಷೇತ್ರಫಲದ ಸೂಕ್ಷ್ಮವಾದ ಬೆಲೆಯನ್ನು ಬೇಗನೆ ನನಗೆ ಹೇಳು.

೫೬. ಆಯತ ಕ್ಷೇತ್ರದ ಸಂಬಂಧದಲ್ಲಿ, ಕ್ಷಿತಿಜ ಭುಜವು ಅಳತೆಯಲ್ಲಿ ೧೨ ಇದೆ ಮತ್ತು ಲಂಬರೂಪದ ಭುಜವು ಅಳತೆಯಲ್ಲಿ ೫ ಇದೆ. ಕರ್ಣದ ಅಳತೆ ಮತ್ತು ಕ್ಷೇತ್ರಫಲದ ಸೂಕ್ಷ್ಮವಾದ ಅಳತೆಗಳೇನೆಂದು ನನಗೆ ಬೇಗನೆ ಹೇಳು.

೫೭. ಸಮದ್ವಿಬಾಹು ಚತುರ್ಭುಜ (ಸಮಲಂಬ ಚಕ್ರೀಯ ಚತುರ್ಭುಜ) ದ ಆಧಾರ ಭುಜವು ೩೬ ಇದೆ. ಒಂದು ಭುಜವು ೬೧ ಇದೆ ಮತ್ತು ಇನ್ನೊಂದೂ ಕೂಡ ಅಷ್ಟೇ ಇದೆ. ಮೇಲಿನ ಭುಜವು ೧೪ ಇದೆ. ಕರ್ಣವೇನು? ಕ್ಷೇತ್ರಫಲದ ಸೂಕ್ಷ್ಮವಾದ ಅಳತೆಯೇನು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



वर्गस्त्रयोदशानां त्रिसमचतुर्बाहुके पुनर्भूमिः ।
सप्त चतुश्शतयुक्तं कर्णाबाधावलम्बगणितं किम् ॥ ५८ ॥
विषमचतुरश्रबाहू त्रयोदशाभ्यस्तपञ्चदशविंशतिकौ ।
पञ्चघनो वदनमधस्त्रिशतं कान्यत्र कर्णमुखफलानि ॥ ५९ ॥

---

**58.** Vargastrayodaśānāṁ trisamacaturbāhuke punarbhūmiḥ, sapta catuśśatayuktaṁ karṇābādhāvalambagaṇitaṁ kim.

**59.** Viṣamacaturaśrabāhū trayodaśābhyastapañcadaśaviṁśatikau, pañcaghano vadanamadhastriśataṁ kānyatra karṇamukhaphalāni.

---

**58.** In the case of an equi-trilateral quadrilateral, the square of 13 (gives the measure of an equal side); the base, however, is 407 in measure. What is the value of the diagonal, of the basal segments, of the perpendicular and of the area?

**59.** The (right and the left) sides of an inequilateral quadrilateral are 13 X 15 and 13 X 20 (respectively in measure); the top side is $5^3$ and the side below is 300. What are all the values here beginning with that of the diagonal?

---

೫೮. ಸಮತ್ರಿಬಾಹು ಚತುರ್ಭುಜ (ಚಕ್ರೀಯ ಸಮತ್ರಿಬಾಹು ಚತುರ್ಭುಜ)ದ ಸಂಬಂಧದಲ್ಲಿ, ೧೩ ರ ವರ್ಗವು ಸಮಾನ ಭುಜಗಳಲ್ಲಿ ಒಂದರ ಅಳತೆಯಾಗಿರುತ್ತದೆ. ಪಾದವು ಅಳತೆಯಲ್ಲಿ ೪೦೭ ಇದೆ. ಕರ್ಣದ, ಪಾದದ ಖಂಡಗಳ, ಲಂಬದ ಮತ್ತು ಕ್ಷೇತ್ರಫಲದ ಅಳತೆಗಳೇನು?

೫೯. ಒಂದು ವಿಷಮ ಚತುರ್ಭುಜದ ಬಲಗಡೆಯ ಮತ್ತು ಎಡಗಡೆಯ ಭುಜಗಳು ಅಳತೆಯಲ್ಲಿ ಕ್ರಮವಾಗಿ ೧೩ x ೧೫ ಮತ್ತು ೧೩ x ೨೦ ಆಗಿವೆ. ಮೇಲಿನ ಭುಜವು ೫³ ಇದೆ ಮತ್ತು ಕೆಳಗಿನ ಭುಜವು ೩೦೦ ಇದೆ. ಕರ್ಣದಿಂದ ಆರಂಭವಾಗುವ ಉಳಿದ ಎಲ್ಲದರ ಅಳತೆಗಳೇನು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



इतः परं वृत्तक्षेत्राणां सूक्ष्मफलानयनसूत्राणि । तत्र समवृत्तक्षेत्रस्य सूक्ष्मफलानयनसूत्रम् -
वृत्तक्षेत्रव्यासो दशपदगुणितो भवेत्परिक्षेपः। व्यासचतुर्भागगुणः परिधिः फलमर्धमर्धे तत् ॥ ६० ॥

---

Itaḥ paraṁ vṛttakṣetrāṇāṁ sūkṣmaphalānayanasūtrāṇi. Tatra samavṛttakṣetrasya sūkṣmaphalānayanasūtram-

**60.** Vṛttakṣetravyāso daśapadaguṇito bhavetparikṣepaḥ,
vyāsacaturbhāgaguṇaḥ paridhiḥ phalamardhamardhe tat.

---

Hereafter (are given) the rules for arriving at the minutely accurate values relating to curvilinear figures. Among them the rule for arriving at the minutely accurate values relating to a circular figure is as follows :

**60.** The diameter of the circular figure multiplied by the square root of 10 becomes the circumference (in measure). The circumference multiplied by one-fourth of the diameter gives the area. In the case of a semicircle this happens to be half (of what it is in the case of the circle).

---

ಇನ್ನುಮುಂದೆ ವಕ್ರರೇಖಾಕೃತಿಗಳ ಸಂಬಂಧದಲ್ಲಿ, ಸೂಕ್ಷ್ಮಬೆಲೆಗಳನ್ನು ಪಡೆಯಲು ನಿಯಮಗಳನ್ನು ಕೊಡಲಾಗುತ್ತದೆ. ಅವುಗಳಲ್ಲಿ ಸಮವೃತ್ತಕ್ಷೇತ್ರದ ಸಂಬಂಧದಲ್ಲಿ ಸೂಕ್ಷ್ಮವಾದ ಬೆಲೆಯನ್ನು ಪಡೆಯಲು ನಿಯಮವು ಮುಂದೆ ತಿಳಿಸಿರುವಂತಿದೆ :

೬೦. ವೃತ್ತದ ವ್ಯಾಸವನ್ನು ೧೦ ರ ವರ್ಗಮೂಲದಿಂದ ಗುಣಿಸುವುದರಿಂದ ಪರಿಧಿಯು ಉತ್ಪನ್ನವಾಗುತ್ತದೆ. ಪರಿಧಿಯನ್ನು ವ್ಯಾಸದ ನಾಲ್ಕನೆಯ ಒಂದು ಭಾಗದಿಂದ ಗುಣಿಸುವುದರಿಂದ ಕ್ಷೇತ್ರಫಲವು ಪ್ರಾಪ್ತವಾಗುತ್ತದೆ. ಅರ್ಧವೃತ್ತದ ಸಂಬಂಧದಲ್ಲಿ ಇದು ಅದರ ಅರ್ಧಭಾಗವಾಗಿರುತ್ತದೆ.

---

**60.** The value of $\pi$ given in this stanza is $\sqrt{10}$, which is equal to 3.16.....compare this with the more approximate value $\frac{62832}{2000}$ (=3.1416) given by Āryabhaṭa. Bhāskarācārya also gives to it the same value and represents it in reduced terms as $\frac{3927}{1250}$.

೬೦. ಈ ಶ್ಲೋಕದಲ್ಲಿ ಕೊಟ್ಟಿರುವ $\pi$ ನ ಬೆಲೆಯು $\sqrt{೧೦}$ ಆಗಿದೆ. ಇದು ೩.೧೬ ...ಗೆ ಸಮವಾಗಿದೆ. ಇದನ್ನು ಆರ್ಯಭಟ ಕೊಟ್ಟಿರುವ ಇನ್ನೂ ಹೆಚ್ಚಿನ ಅಂದಾಜು ಬೆಲೆಯಾದ $\frac{೬೨೮೩೨}{೨೦೦೦}$ ( = ೩.೧೪೧೬) ಗೆ ಹೋಲಿಸಿ ನೋಡಿ.

ಭಾಸ್ಕರಾಚಾರ್ಯರೂ ಕೂಡ ಇದೇ ಬೆಲೆಯನ್ನೇ ಕೊಡುತ್ತಾರೆ ಮತ್ತು ಇದನ್ನು $\frac{೩೯೨೭}{೧೨೫೦}$ ಗೆ ರೂಪಾಂತರಗೊಳಿಸುತ್ತಾರೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

समवृत्तव्यासोऽष्टादश विष्कम्भश्च षष्टिरन्यस्य ।
द्वाविंशतिरपरस्य क्षेत्रस्य हि के च परिधिफले ॥ ६१ ॥
द्वादशविष्कम्भस्य क्षेत्रस्य हि चार्धवृत्तस्य। षट्त्रिंशद्व्यासस्य कः परिधिः किं फलं भवति ॥ ६२ ॥
आयतवृत्तक्षेत्रस्य सूक्ष्मफलानयनसूत्रम् -
व्यासकृतिष्पङ्गुणिता द्विसङ्गुणायामकृतियुता (पदं) परिधिः ।
व्यासचतुर्भागगुणश्चायतवृत्तस्य सूक्ष्मफलम् ॥ ६३ ॥

---

## Atroddeśakaḥ

**61.** Samavṛttavyāso'ṣṭādaśa viṣkambhaśca ṣaṣṭiranyasya, dvāviṁśatiraparasya kṣetrasya hi ke ca paridhiphale.

**62.** Dvādaśaviṣkambhasya kṣetrasya hi cārdhavṛttasya, ṣaṭtriṁśadvyāsasya kaḥ paridhiḥ kiṁ phalaṁ bhavati.

Āyatavṛttakṣetrasya sūkṣmaphalānayanasūtram-

**63.** Vyāsakṛtiṣṣaḍguṇitā dvisaṅguṇāyāmakṛtiyutā (padaṁ) paridhiḥ, vyāsacaturbhāgaguṇaścāyatavṛttasya `sūkṣmaphalam.

---

## *Examples in illustration thereof*

**61.** In the case of one (circular) field the diameter of the circle is 18; in the case of another it is 60; in the case of yet another it is 22. What are the circumferences and the areas?

**62.** In the case of a semicircular field of a diameter measuring 12 and of (another) field having a diameter of 36 in measure what is the circumference and what is the area?

The rule for arriving at the minutely accurate values relating to an elliptical figure :

**63.** The square of the (shorter) diameter is multiplied by 6 and the square of twice the length (as measured by the longer diameter) is added to this. (The square root of this sum gives) the measure of the circumference. This measure of the circumference multiplied by one-fourth of the (shorter) diameter gives the minutely accurate measure of the area of an elliptical figure.

---

## ಉದಾಹರಣೆಗಳಿಂದ ವಿಶ್ಲೇಷಣ

೬೧. ಒಂದು ವೃತ್ತಾಕಾರ ಕ್ಷೇತ್ರದ ಸಂಬಂಧದಲ್ಲಿ ವ್ಯಾಸವು ೧೮ ಆಗಿದೆ. ಇನ್ನೊಂದರ ಸಂಬಂಧದಲ್ಲಿ ಅದು ೬೦ ಆಗಿದೆ. ಮತ್ತಿನ್ನೊಂದರ ಸಂಬಂಧದಲ್ಲಿ ಅದು ೨೨ ಆಗಿದೆ. ಪರಿಧಿಗಳು ಮತ್ತು ಕ್ಷೇತ್ರಫಲಗಳು ಏನೇನಾಗುತ್ತವೆ?

೬೨. ಅರ್ಧವೃತ್ತಾಕಾರ ಕ್ಷೇತ್ರದ ವ್ಯಾಸವು ೧೨ ಆಗಿದೆ. ಇನ್ನೊಂದು ಕ್ಷೇತ್ರದ ವ್ಯಾಸವು ೩೬ ಆಗಿದೆ. ಪರಿಧಿ ಏನು ಮತ್ತು ಕ್ಷೇತ್ರಫಲವೇನು?

ಒಂದು ದೀರ್ಘವೃತ್ತಾಕಾರದ ಸಂಬಂಧದಲ್ಲಿ ಸೂಕ್ಷ್ಮವಾದ ಬೆಲೆಗಳನ್ನು ಪಡೆಯಲು ನಿಯಮ :

೬೩. ಚಿಕ್ಕವ್ಯಾಸದ ವರ್ಗವನ್ನು ೬ ರಿಂದ ಗುಣಿಸಲಾಗುತ್ತದೆ ಮತ್ತು ದೊಡ್ಡ ವ್ಯಾಸದ ಎರಡರಷ್ಟರ ವರ್ಗವನ್ನು ಇದರೊಂದಿಗೆ ಸೇರಿಸಲಾಗುತ್ತದೆ. ಈ ಮೊತ್ತದ ವರ್ಗಮೂಲವು ಪರಿಧಿಯ ಅಳತೆಯಾಗಿರುತ್ತದೆ. ಪರಿಧಿಯ ಈ ಅಳತೆಯನ್ನು ಚಿಕ್ಕ ವ್ಯಾಸದ ನಾಲ್ಕನೆಯ ಒಂದು ಭಾಗದಿಂದ ಗುಣಿಸುವುದರಿಂದ ದೀರ್ಘವೃತ್ತಾಕೃತಿಯ ಸೂಕ್ಷ್ಮಕ್ಷೇತ್ರಫಲವು ಪ್ರಾಪ್ತವಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**63.** If $a$ represents the measure of the longer diameter and $b$ that of the shorter diameter of an ellipse, then, according to the rule given here, the circumference is $\sqrt{6b^2+4a^2}$ and the area is $\frac{1}{4}b \times \sqrt{6b^2+4a^2}$. It may be noted that this stanza, as found in the MSS., omits to mention that the square root of the quantity is to be taken for arriving at the value of the circumference. The formula for the area given here is only an approximation and seems to be based on the analogy of the area of a circle as represented by $\pi d \times \frac{d}{4}$, where $d$ is the diameter and $\pi d$ is the circumference.

೬೩. ಒಂದು ದೀರ್ಘವೃತ್ತದ ದೊಡ್ಡ ವ್ಯಾಸವನ್ನು ಲ ಮತ್ತು ಚಿಕ್ಕ ವ್ಯಾಸವನ್ನು ಬ ಗಳು ನಿರೂಪಿಸಿದಾಗ, ಇಲ್ಲಿ ಕೊಟ್ಟಿರುವ ನಿಯಮದ ಪ್ರಕಾರ ಪರಿಧಿಯು $\sqrt{೬ಬ^2+೪ಲ^2}$ ಮತ್ತು ಕ್ಷೇತ್ರಫಲವು $\frac{೧}{೪}$ ಬ x $\sqrt{೬ಬ^2+೪ಲ^2}$ ಆಗುತದೆ. ಈ ಶ್ಲೋಕದಲಿ (ಹಸ್ತಪ್ರತಿಯಲ್ಲಿ) ಪರಿಧಿಯನ್ನು ಪಡೆಯಲು (ದೊರೆತ) ಸಂಖ್ಯೆಯ ವರ್ಗಮೂಲವನ್ನು ತೆಗೆಯುವ ವಿಷಯವನ್ನು ಹೇಳುವುದು ಬಿಟ್ಟುಹೋಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕು. ಇಲ್ಲಿ ಕೊಟ್ಟಿರುವ ಕ್ಷೇತ್ರಫಲದ ಸೂತ್ರವು ಕೇವಲ ಅಂದಾಜಾಗಿದೆ ಮತ್ತು ಅದು ವೃತ್ತದ ಕ್ಷೇತ್ರಫಲದ ಸಾಮ್ಯತೆಯ ಮೇಲೆ ಆಧಾರಿತವಾಗಿದೆ. ಇದು $\pi \times ಬ \times \frac{ಬ}{ಲ}$ ದಿಂದ ನಿರೂಪಿತವಾಗಿದೆ. ಇಲ್ಲಿ ಬ ವ್ಯಾಸವಾಗಿದೆ ಮತ್ತು $\pi$ ಬ ಪರಿಧಿಯಾಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

आयतवृत्तायामः षट्त्रिंशद्द्वादशास्य विष्कम्भः ।
कः परिधिः किं गणितं सूक्ष्मं विगणय्य मे कथय ॥ ६४ ॥
शङ्खाकारक्षेत्रस्य सूक्ष्मफलानयनसूत्रम् -
वदनार्धोनो व्यासो दशपदगुणितो भवेत्परिक्षेपः ।
मुखदलरहितव्यासार्धवर्गमुखचरणकृतियोगः ॥ ६५ ॥
दशपदगुणितः क्षेत्रे कम्बुनिभे सूक्ष्मफलमेतत् ॥ ६५$\frac{1}{2}$॥

---

## Atroddeśakaḥ

64. Āyatavṛttāyāmaḥ ṣaṭtriṁśaddvādaśāsya viṣkambhaḥ, kaḥ paridhiḥ kiṁ gaṇitaṁ sūkṣmaṁ vigaṇayya me kathaya.

Saṅkhākārakṣetrasya sūkṣmaphalānayanasūtram-

65. Vadanārdhono vyāso daśapadaguṇito bhavetparikṣepaḥ, mukhadalarahitavyāsārdhavargamukhacaraṇakṛtiyogaḥ.

65$\frac{1}{2}$. Daśapadaguṇitaḥ kṣetre kambunibhe sūkṣmaphalametat.

---

## *An example in illustration thereof*

**64.** In the case of an elliptical figure, the length (as measured by the longer diameter) is 36 and the breadth (as measured by the shorter diameter) is 12. Tell me, after calculation, what the measure of the circumference is and what the minutely accurate measure of the area.

The rule for arriving at the minutely accurate values in relation to a conchiform figure :

**65$\frac{1}{2}$.** The (maximum measure of the) breadth (of the figure), diminished by half (the measure of the breadth) of the mouth and (then) multiplied by the square root of 10, gives rise to the measure of the perimeter. The square of half the (maximum) breadth (of the figure) as diminished by half the (breadth of the) mouth and the square of one-fourth of the (breadth of the) mouth are added together and the resulting sum is multiplied by the square root of 10. This gives rise to the minutely accurate measure of the area in the case of the conchiform figure.

---

## ಉದಾಹರಣೆಯಿಂದ ವಿಶ್ಲೇಷಣ

೬೪. ಒಂದು ದೀರ್ಘವೃತ್ತಾಕಾರದ ಸಂಬಂಧದಲ್ಲಿ ದೊಡ್ಡ ವ್ಯಾಸದ ಉದ್ದವು ೩೬ ಮತ್ತು ಚಿಕ್ಕ ವ್ಯಾಸವು ೧೨ ಆಗಿದೆ. ಲೆಕ್ಕಾಚಾರ ಮಾಡಿದ ನಂತರ ಪರಿಧಿಯ ಅಳತೆಯೇನು ಮತ್ತು ಸೂಕ್ಷ್ಮ ಕ್ಷೇತ್ರಫಲವೇನೆಂದು ಹೇಳು.

ಶಂಖಾಕಾರ ಆಕೃತಿಯ ಸಂಬಂಧದಲ್ಲಿ ಸೂಕ್ಷ್ಮ ಬೆಲೆಗಳನ್ನು ಪಡೆಯಲು ನಿಯಮ :

೬೫ $\frac{1}{2}$. ಆಕೃತಿಯ ಅಗಲದ ಅತ್ಯಧಿಕ ಅಳತೆಯನ್ನು, ಮುಖದ ಅಗಲದ ಅರ್ಧಭಾಗದಿಂದ ಕಳೆದ ನಂತರ ೧೦ ರ ವರ್ಗಮೂಲದಿಂದ ಗುಣಿಸಿದರೆ, ಪರಿಧಿಯ ಅಳತೆಯು ಉತ್ಪನ್ನವಾಗುತ್ತದೆ. ಆಕೃತಿಯ ಮಹತ್ತರ ಅಗಲದ ಅಳತೆಯ ಅರ್ಧಭಾಗದ ವರ್ಗವನ್ನು ಮುಖದ ಅಗಲದ ಅರ್ಧಭಾಗದಿಂದ ಕಳೆದು, ಬಂದ ಸಂಖ್ಯೆಯೊಂದಿಗೆ ಮುಖದ ಅಗಲದ ನಾಲ್ಕನೆಯ ಒಂದು ಭಾಗದ ವರ್ಗವನ್ನು ಸೇರಿಸುತ್ತೇವೆ. ಹೀಗೆ ದೊರೆತ ಮೊತ್ತವನ್ನು ೧೦ ರ ವರ್ಗಮೂಲದಿಂದ ಗುಣಿಸುತ್ತೇವೆ. ಈ ರೀತಿ ಲಭಿಸಿದ ಸಂಖ್ಯೆಯು ಶಂಖಾಕೃತಿಯ ಸೂಕ್ಷ್ಮ ಕ್ಷೇತ್ರಫಲವಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**65$\frac{1}{2}$.** Algebraically,

circumference = $(a - \frac{1}{2}m) \times \sqrt{10}$;

area = $\left\{\left\{(a - \frac{1}{2}m) \times \frac{1}{2}\right\}^2 + \left(\frac{m}{4}\right)^2\right\} \times \sqrt{10}$;

where $a$ is the measure of the maximum breadth and m the measure of the mouth of a conchiform figure. As observed in the note relating to stanza 23 of this chapter, the figure intended is obviously made up of two unequal semicircles.

**೬೫$\frac{೧}{೨}$.** ಬೀಜಗಣಿತರೂಪದಲ್ಲಿ,

ಪರಿಧಿ = $\left(ಅ - \frac{೧}{೨}\ ಮ\right) \times \sqrt{೧೦}$

ಕ್ಷೇತ್ರಫಲ = $\left\{\left\{\left(ಅ - \frac{೧}{೨}ಮ\right) \times \frac{೧}{೨}\right\}^೨ + \left(\frac{ಮ}{೪}\right)^೨\right\} \times \sqrt{೧೦}$

ಇಲ್ಲಿ ಅ ಮಹತ್ತರ ಅಗಲದ ಅಳತೆಯಾಗಿದೆ ಮತ್ತು ಮ ಶಂಖದ ಮುಖದ ಅಗಲವಾಗಿದೆ. ಈ ಅಧ್ಯಾಯದ ೨೩ ನೇ ಶ್ಲೋಕದ ಟಿಪ್ಪಣಿಯಲ್ಲಿ ಗಮನಿಸಿರುವಂತೆ, ಉದ್ದೇಶಿತ ಆಕೃತಿಯು ಎರಡು ಅಸಮಾನ ಅರ್ಧವೃತ್ತಗಳಿಂದ ರಚಿಸಲ್ಪಟ್ಟಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



### अत्रोद्देशकः

व्यासोऽष्टादश दण्डा मुखविस्तारोऽयमपि च चत्वारः ।
कः परिधिः किं गणितं सूक्ष्मं तत्कम्बुकावृत्ते ॥ ६६$\frac{1}{2}$॥
बहिश्चक्रवालवृत्तक्षेत्रस्य चान्तश्चक्रवालवृत्तक्षेत्रस्य च सूक्ष्मफलानयनसूत्रम् -
निर्गमसहितो व्यासो दशपदनिर्गमगुणो बहिर्गणितम् ।
रहितोऽधिगमेनासावभ्यन्तरचक्रवालवृत्तस्य ॥ ६७$\frac{1}{2}$॥

---

### Atroddeśakaḥ

**66$\frac{1}{2}$.** Vyāso'ṣṭādaśa daṇḍā mukhavistāro'yamapi ca catvāraḥ, kaḥ paridhiḥ kiṁ gaṇitaṁ sūkṣmaṁ tatkambukāvṛtte.

Bahiścakravālavṛttakṣetrasya cāntaścakravālavṛttakṣetrasya ca sūkṣmaphalānayanasūtram-

**67$\frac{1}{2}$.** Nirgamasahito vyāso daśapadanirgamaguṇo bahirgaṇitam, rahito'dhigamenāsāvabhyantaracakravālavṛttasya.

---

### *An example in illustration thereof*

**66$\frac{1}{2}$.** In the case of a conchiform curvilinear figure the (maximum) breadth is 18 *daṇḍas* and the breadth of the mouth is 4 (*daṇḍas*). What is the measure of the perimeter and what is the minutely accurate measure of the area as calculated?

The rule for arriving at the minutely accurate measures in relation to outreaching and inlying annular figures :

**67$\frac{1}{2}$.** The (inner) diameter, to which the breadth (of the annulus) is added, is multiplied by the square root of 10 and by the breadth (of the annulus). This gives rise to the value of the area of the out-reaching annulus. The (outer) diameter as diminished by the breadth (of the annulus) gives rise (on being treated in the same manner as above) to the value of the area of the inlying annular figure.

---

### ಉದಾಹರಣೆಯಿಂದ ವಿಶ್ಲೇಷಣ

೬೬ $\frac{೧}{೨}$. ಶಂಖಾಕೃತಿಯ ವಕ್ರರೇಖಾಕ್ಷೇತ್ರದ ಸಂಬಂಧದಲ್ಲಿ, ಮಹತ್ತರ ಅಗಲವು ೧೮ *ದಂಡ*ಗಳಾಗಿವೆ ಮತ್ತು ಮುಖದ ಅಗಲವು ೪ *ದಂಡ*ಗಳಾಗಿವೆ. ಇದರ ಪರಿಮಿತಿ (ಸುತ್ತಳತೆ) ಮತ್ತು ಸೂಕ್ಷ್ಮಕ್ಷೇತ್ರಫಲದ ಅಳತೆಗಳೇನು?

ಉಂಗುರದ ಹೊರವಲಯ ಮತ್ತು ಒಳವಲಯ (ಬಹಿಶ್ಚಕ್ರವಾಲ ಮತ್ತು ಅಂತಶ್ಚಕ್ರವಾಲ) ಗಳ ಸಂಬಂಧದಲ್ಲಿ ಸೂಕ್ಷ್ಮವಾದ ಅಳತೆಗಳನ್ನು ಪಡೆಯಲು ನಿಯಮ :

೬೭ $\frac{೧}{೨}$. ಒಳವ್ಯಾಸಕ್ಕೆ (ಉಂಗುರದ) ಅಗಲವನ್ನು ಸೇರಿಸಿ, ಬಂದ ಸಂಖ್ಯೆಯನ್ನು ೧೦ ರ ವರ್ಗಮೂಲ ಮತ್ತು ಉಂಗುರದ ಅಗಲದಿಂದ ಗುಣಿಸುತ್ತೇವೆ. ಇದರಿಂದ ಬಹಿಶ್ಚಕ್ರವಾಲ ವೃತ್ತದ ಕ್ಷೇತ್ರಫಲವು ಪ್ರಾಪ್ತವಾಗುತ್ತದೆ. ಹೊರವ್ಯಾಸದಿಂದ (ಉಂಗುರದ) ಅಗಲವನ್ನು ಕಳೆಯುತ್ತೇವೆ. ಲಭಿಸಿದ ಸಂಖ್ಯೆಯನ್ನು ೧೦ ರ ವರ್ಗಮೂಲ ಹಾಗೂ ಉಂಗುರದ ಅಗಲದಿಂದ ಗುಣಿಸುವುದರಿಂದ ಅಂತಶ್ಚಕ್ರವಾಲ ವೃತ್ತದ ಕ್ಷೇತ್ರಫಲವು ದೊರೆಯುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

व्यासोऽष्टादश दण्डाः पुनर्बहिर्निर्गतास्त्रयो दण्डाः ।
सूक्ष्मगणितं वद त्वं बहिरन्तश्चक्रवालवृत्तस्य ॥ ६८$\frac{1}{2}$॥
व्यासोऽष्टादश दण्डा अन्तःपुनरधिगताश्च चत्वारः ।
सूक्ष्मगणितं वद त्वं चाभ्यन्तरचक्रवालवृत्तस्य ॥ ६९$\frac{1}{2}$॥

---

### Atroddeśakaḥ

**68$\frac{1}{2}$.** Vyāso'ṣṭādaśa daṇḍāḥ punarbahirnirgatāstrayo daṇḍāḥ, sūkṣmagaṇitaṁ vada tvaṁ bahirantaścakravālavṛttasya.

**69$\frac{1}{2}$.** Vyāso'ṣṭādaśa daṇḍā antaḥpunaradhigatāśca catvāraḥ, sūkṣmagaṇitaṁ vada tvaṁ cābhyantaracakravālavṛttasya.

---

### *Examples in illustration thereof*

**68$\frac{1}{2}$.** Eighteen *daṇḍas* measure the (inner or the outer) diameter of the annulus (as the case may be); the breadth of the annulus is, however, 3 (*daṇḍas*). You give out the minutely accurate value of the area of the outreaching as well as the inlying annular figure.

**69$\frac{1}{2}$.** The (outer) diameter is 18 *daṇḍas* and the breadth of the inlying annulus is 4 *daṇḍas*. You give out the minutely accurate value of the area of the inlying annular figure.

---

### ಉದಾಹರಣೆಗಳಿಂದ ವಿಶ್ಲೇಷಣ

೬೮$\frac{೧}{೨}$. ಉಂಗುರದ ಒಳ ಅಥವಾ ಹೊರ ವ್ಯಾಸವು ೧೮ ***ದಂಡ***ಗಳಾಗಿವೆ. ಉಂಗುರದ ಅಗಲವು ೩ ***ದಂಡ***ಗಳಾಗಿವೆ. ಬಹಿಶ್ಚಕ್ರವಾಲ ವೃತ್ತದ ಹಾಗೂ ಅಂತಶ್ಚಕ್ರವಾಲ ವೃತ್ತದ ಸೂಕ್ಷ್ಮವಾದ ಅಳತೆಯನ್ನು ತಿಳಿಸು.

೬೯$\frac{೧}{೨}$. ಹೊರವ್ಯಾಸವು ೧೮ ***ದಂಡ***ಗಳು ಮತ್ತು ಅಂತಶ್ಚಕ್ರವಾಲ ವೃತ್ತದ ಅಗಲವು ೪ ***ದಂಡ***ಗಳಾಗಿವೆ. ಅಂತಶ್ಚಕ್ರವಾಲ ವೃತ್ತದ ಸೂಕ್ಷ್ಮಕ್ಷೇತ್ರಫಲವನ್ನು ಕಂಡುಹಿಡಿ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



यवाकारक्षेत्रस्य च धनुराकारक्षेत्रस्य च सूक्ष्मफलानयनसूत्रम् -
इषुपादगुणश्च गुणो दशपदगुणितश्च भवति गणितफलम् ।
यवसंस्थानक्षेत्रे धनुराकारे च विज्ञेयम् ॥ ७० $\frac{1}{2}$॥

---

Yavākārakṣetrasya ca dhanurākārakṣetrasya ca sūkṣmaphalānayana - sūtram-

**70$\frac{1}{2}$**. Iṣupādaguṇaśca guṇo daśapadaguṇitaśca bhavati gaṇitaphalam, yavasaṁsthānakṣetre dhanurākāre ca vijñeyam.

---

The rule for arriving at the minutely accurate values relating to a figure resembling (the longitudinal section of) the yava grain and also to a figure having the outline of a bow :

**70$\frac{1}{2}$**. It should be known that the measure of the string (chord) multiplied by one-fourth of the measure of the arrow and then multiplied by the square root of 10, gives rise to the (accurate) value of the area in the case of a figure having the outline of a bow as also in the case of a figure resembling the (longitudinal) section of a *yava* grain.

---

ಯವಾಕಾರ ಹಾಗೂ ಧನುಸ್ಸಿನಾಕಾರ ಕ್ಷೇತ್ರದ ಸಂಬಂಧದಲ್ಲಿ ಸೂಕ್ಷ್ಮ ಬೆಲೆಗಳನ್ನು ಪಡೆಯಲು ನಿಯಮ:

೭೦ $\frac{೧}{೨}$. ಧನುಸ್ಸಿನ ಹಗ್ಗವನ್ನು, ಬಾಣದ ನಾಲ್ಕನೆಯ ಒಂದು ಭಾಗದಿಂದ ಗುಣಿಸುತ್ತೇವೆ. ಈ ರೀತಿ ದೊರೆತ ಸಂಖ್ಯೆಯನ್ನು ೧೦ ರ ವರ್ಗಮೂಲದಿಂದ ಗುಣಿಸುವುದರಿಂದ ಧನುಸ್ಸಿನಾಕಾರ ಹಾಗೂ ಯವಾಕಾರ ಕ್ಷೇತ್ರಗಳ ಸಂಬಂಧದ ಕ್ಷೇತ್ರಫಲದ ಸೂಕ್ಷ್ಮರೂಪದ ಕರಾರುವಾಕ್ಕಾದ ಬೆಲೆಯು ಪ್ರಾಪ್ತವಾಗುತ್ತದೆ.

---

**70$\frac{1}{2}$**. The figure resembling a bow is obviously the segment of a circle. The area of the segment as given here = $c \times \frac{p}{4} \times \sqrt{10}$.

This formula is not accurate. It seems to be based on the analogy of the rule for obtaining the area of a semi-circle, which area is evidently equal to the product of, the diameter and one-fourth of the radius, i.e., $\pi \times 2r \times \frac{r}{4}$.




The figure resembling the longitudinal section of a *yava* grain may be easily seen to be made up of two similar and equal segments of a circle applied to each other so as to have a common chord. It is evident that in this case the value of the arrow-line becomes doubled. Thus the same formula is made to hold good here also.

೭೦$\frac{೧}{೨}$. ಧನುಸ್ಸನ್ನು ಹೋಲುವ ಆಕೃತಿಯು, ವೃತ್ತದ ಒಂದು ಖಂಡ (ಛೇದ) ವೆಂಬುದು ಸ್ಪಷ್ಟವಾಗಿದೆ. ಇಲ್ಲಿ ಕೊಟ್ಟಿರುವಂತೆ ಖಂಡದ ಕ್ಷೇತ್ರಫಲವು $ಕ \times \frac{ಲ}{ಳ} \times \sqrt{೧೦}$ ಆಗಿದೆ. ಈ ಸೂತ್ರವು ಕರಾರುವಾಕ್ಕಾಗಿಲ್ಲ. ಏಕೆಂದರೆ, ಈ ನಿಯಮವು ಅರ್ಧವೃತ್ತದ ಕ್ಷೇತ್ರಫಲವನ್ನು ಪಡೆಯಲು ಇರುವ ನಿಯಮದ ಸಾಮ್ಯತೆಯ ಮೇಲೆ ಆಧಾರಿತವಾಗಿರುವಂತಿದೆ. ಅರ್ಧವೃತ್ತದ ಕ್ಷೇತ್ರಫಲವು $\pi$, ವ್ಯಾಸ ಮತ್ತು ತ್ರಿಜ್ಯದ ನಾಲ್ಕನೆಯ ಒಂದು ಭಾಗದ ಗುಣಲಬ್ಧವಾಗಿದೆ. ಅಂದರೆ $\pi \times ೨ ತ್ರಿ \times \frac{ತ್ರಿ}{೪}$ ಆಗಿದೆ. ಇಲ್ಲಿ ತ್ರಿ ತ್ರಿಜ್ಯವಾಗಿದೆ..

ಒಂದು ವೃತ್ತದ ಒಂದೇ ರೀತಿಯ ಮತ್ತು ಸಮವಾದ ಎರಡು ಛೇದಗಳನ್ನು, ಸಾಮಾನ್ಯ ಜಾಪವಿರುವಂತೆ ಒಂದನ್ನೊಂದು ಸೇರಿಸುವುದರಿಂದ ಯವಾಕಾರ ಆಕೃತಿಯು ಉಂಟಾಗುತ್ತದೆ. ಈ ಪ್ರಕರಣದಲ್ಲಿ ಬಾಣದ ಅಳತೆಯು ದ್ವಿಗುಣವಾಗುತ್ತದೆ ಎಂಬುದು ಸ್ಪಷ್ಟವಾಗಿದೆ. ಹೀಗಾಗಿ ಈ ಸೂತ್ರವು ಇದಕ್ಕೂ ಕೂಡ ಪ್ರಯೋಜನವಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**अत्रोद्देशकः**

द्वादशदण्डायामो मुखद्वयं सूचिरपि च विस्तारः ।
चत्वारो मध्येऽपि च यवसंस्थानस्य किं तु फलम् ॥ ७१$\frac{1}{2}$॥
धनुराकारसंस्थाने ज्या चतुर्विंशतिः पुनः । चत्वारोऽस्येषुरुद्दिष्टस्सूक्ष्मं किं तु फलं भवेत् ॥ ७२$\frac{1}{2}$॥

---

**Atroddeśakaḥ**

**71$\frac{1}{2}$.** Dvādaśadaṇḍāyāmo mukhadvayaṁ sūcirapi ca vistāraḥ, catvāro madhye'pi ca yavasaṁsthānasya kiṁ tu phalam.

**72$\frac{1}{2}$.** Dhanurākārasaṁsthāne jyā caturviṁśatiḥ punaḥ,
catvāro'syeṣuruddiṣṭassūkṣmaṁ kiṁ tu phalaṁ bhavet.

---

***Examples in illustration thereof***

**71$\frac{1}{2}$.** In the case of a figure resembling (the longitudinal) section of the *yava* grain, the (maximum) length is 12 *daṇḍas*; the two ends are needle points and the breadth in the middle is 4 *daṇḍas*. What is the area?

**72$\frac{1}{2}$.** In the case of a figure having the outline of a bow, the string is 24 in measure and its arrow is taken to be 4 in measure. What may be the minutely accurate value of the area?

---

**ಉದಾಹರಣೆಗಳಿಂದ ವಿಶ್ಲೇಷಣ**

೭೧$\frac{೧}{೨}$. *ಯವಧಾನ್ಯವನ್ನು* ಮಧ್ಯದಲ್ಲಿ ಛೇದಿಸುವುದರಿಂದ ಪ್ರಾಪ್ತವಾಗುವ ಕ್ಷೇತ್ರದ ಆಕೃತಿಯ ಮಹತ್ತರ ಉದ್ದವು ೧೨ *ದಂಡ*ಗಳು. ಎರಡು ತುದಿಗಳು ಸೂಜಿಬಿಂದುಗಳು ಮತ್ತು ಮಧ್ಯದಲ್ಲಿ ಅಗಲವು ೪ *ದಂಡ*ಗಳಾಗಿವೆ. ಕ್ಷೇತ್ರಫಲವೇನು?

೭೨$\frac{೧}{೨}$. ಧನುಸ್ಸಿನಾಕಾರದ ರೂಪುರೇಖೆಯನ್ನುಳ್ಳ ಆಕೃತಿಯ ಸಂಬಂಧದಲ್ಲಿ ಹಗ್ಗವು ೨೪ ಹಾಗೂ ಬಾಣವು ೪ ಇದೆ. ಕ್ಷೇತ್ರಫಲದ ಸೂಕ್ಷ್ಮ ಅಳತೆ ಏನಾಗಬಹುದು?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



धनुराकारक्षेत्रस्य धनुःकाष्टबाणप्रमाणानयनसूत्रम् -

शरवर्गः षड्गुणितो ज्यावर्गसमन्वितस्तु यस्तस्य । मूलं धनुर्गुणेषुप्रसाधने तत्र विपरीतम् ॥ ७३$\frac{1}{2}$॥

विपरीतक्रियायां सूत्रम् -

गुणचापकृतिविशेषात्तर्कहृतात्पदमिषुः समुद्दिष्टः ।

शरवर्गात् षड्गुणितादूनं[1] धनुषः कृतेः पदं जीवा ॥ ७४$\frac{1}{2}$॥

---

Dhanurākārakṣetrasya dhanuḥkāṣṭabāṇapramāṇānayanasūtram-

**73$\frac{1}{2}$.** S'aravargaḥ ṣaḍguṇito jyāvargasamanvitastu yastasya, mūlaṁ dhanurguṇeṣuprasādhane tatra viparītam.

Viparītakriyāyāṁ sūtram-

**74$\frac{1}{2}$.** Guṇacāpakṛtiviśeṣāttarkahṛtātpadamiṣuḥ samuddiṣṭaḥ, śaravargāt ṣaḍguṇitādūnaṁ dhanuṣaḥ kṛteḥ padaṁ jīvā.

---

The rule for arriving at the measure of the (bent) stick of the bow as well as of the arrow, in the case of a figure having the outline of a bow :

**73$\frac{1}{2}$.** The square of the arrow measure is multiplied by 6. To this is added the square of the string measure. The square root of that (which happens to be the resulting sum here) gives rise to the measure of the (bent) bow-stick. In the case of finding out the measure of the string and the measure of the arrow, a course converse to this is adopted.

The rule relating to the process according to the converse (here mentioned):

**74$\frac{1}{2}$.** The measure of the arrow is taken to be the square root of one-sixth of the difference between the square of the string and the square of the (bent stick of the) bow. And the square root of the remainder, after subtracting six times the square of the arrow from the square of the (bent stick of the) bow, gives rise to the measure of the string.

---

ಧನುಸ್ಸಿನ (ಬಾಗಿದ) ಕಡ್ಡಿ ಹಾಗೂ ಬಾಣದ ಅಳತೆಗಳನ್ನು ಪಡೆಯಲು ನಿಯಮ :

೭೩ $\frac{೧}{೨}$. ಬಾಣದ ಅಳತೆಯ ವರ್ಗವನ್ನು ೬ ರಿಂದ ಗುಣಿಸಲಾಗುತ್ತದೆ. ಇದಕ್ಕೆ ಹಗ್ಗದ ಅಳತೆಯ ವರ್ಗವನ್ನು ಸೇರಿಸಲಾಗುತ್ತದೆ. (ಹೀಗೆ ದೊರೆತ ಸಂಖ್ಯೆಯ) ವರ್ಗಮೂಲವು ಧನುಸ್ಸಿನ (ಬಾಗಿದ) ಕಡ್ಡಿಯ ಅಳತೆಯಾಗಿರುತ್ತದೆ. ಹಗ್ಗದ ಮತ್ತು ಬಾಣದ ಅಳತೆಗಳನ್ನು ಕಂಡುಹಿಡಿಯುವ ಸಂಬಂಧದಲ್ಲಿ ಇದರ ವಿರುದ್ಧ ಕ್ರಿಯೆಯನ್ನು ಮಾಡಲಾಗುತ್ತದೆ.

ವಿರುದ್ಧ ಕ್ರಿಯೆಯ ಸಂಬಂಧದ ನಿಯಮ :

೭೪ $\frac{೧}{೨}$. ಹಗ್ಗದ ವರ್ಗ ಮತ್ತು ಧನುಸ್ಸಿನ ಬಾಗಿದ ಕಡ್ಡಿಯ ವರ್ಗಗಳ ವ್ಯತ್ಯಾಸದ ಆರನೆಯ ಒಂದು ಭಾಗದ ವರ್ಗಮೂಲವು, ಬಾಣದ ಅಳತೆಯಾಗಿರುತ್ತದೆ. ಧನುಸ್ಸಿನ (ಬಾಗಿದ) ಕಡ್ಡಿಯ ವರ್ಗದಿಂದ ಬಾಣದ ವರ್ಗದ ಆರರಷ್ಟನ್ನು ಕಳೆಯುವುದರಿಂದ ಲಭಿಸುವ ಶೇಷದ ವರ್ಗಮೂಲವು, ಹಗ್ಗದ ಅಳತೆಯಾಗಿರುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



1. The reading in both B and M is as given above; but षड्गुणिताद्दनाया धनुष्कृतेः पदं जीवा gives the required meaning.

**$73\frac{1}{2}$.-$74\frac{1}{2}$.** Algebraically,

arc = $\sqrt{6p^2 + c^2}$;

perpendicular = $\frac{a^2 - c^2}{\sqrt{6}}$

chord = $\sqrt{a^2 - 6p^2}$.

In giving the rule for the measure of the arc in terms of the chord and the largest perpendicular distance between the arc and the chord, the arc forming a semicircle is taken as the basis and the formula obtained for it is utilized for arriving at the value of the arc of any segment. The semicircular arc = $r \times \sqrt{10} = \sqrt{10r^2} = \sqrt{6r^2 + 4r^2}$ : based on this is the formula for any arc; where $p$ = the largest perpendicular distance between the arc and the chord and $c$ = the chord.

೭೩ $\frac{\Omega}{೨}$ - ೭೪ $\frac{\Omega}{೨}$. ಬೀಜಗಣಿತರೂಪದಲ್ಲಿ,

ಚಾಪ = $\sqrt{೬ \text{ ಲ}^೨ + \text{ಕ}^೨}$,

ಲಂಬ = $\frac{\text{ಚ}^೨ - \text{ಕ}^೨}{\sqrt{೬}}$

ಮತ್ತು ಜ್ಯಾ = $\sqrt{\text{ಚ}^೨ - ೬ \text{ ಲ}^೨}$

ಜ್ಯಾ ಮತ್ತು ಬಾಣಗಳ ಮುಖಾಂತರ ಚಾಪದ ಬೆಲೆಯನ್ನು ಸಮೀಕರಣರೂಪದಲ್ಲಿ ಕೊಡಲು ಚಾಪವನ್ನುಂಟುಮಾಡುವ ಅರ್ಧವೃತ್ತವನ್ನು ಆಧಾರವಾಗಿ ತೆಗೆದುಕೊಳ್ಳಲಾಗಿದೆ. ಇದಕ್ಕಾಗಿ ಪಡೆದ ಸೂತ್ರವನ್ನು ಯಾವುದೇ ಭೇದದ ಚಾಪದ ಬೆಲೆಯನ್ನು ಪಡೆಯಲು ಉಪಯೋಗಿಸಲಾಗುತ್ತದೆ.

ಅರ್ಧವೃತ್ತೀಯ ಚಾಪ = ತ್ರಿ x $\sqrt{೧೦}$ = $\sqrt{೧೦ \text{ ತ್ರಿ}^೨}$ = $\sqrt{೬ \text{ ತ್ರಿ}^೨ + ೪ \text{ ತ್ರಿ}^೨}$

ಈ ಸಿದ್ಧಾಂತದ ಮೇಲೆ ಆಧಾರವಾಗಿರುವ ಈ ಸೂತ್ರವು ಯಾವುದೇ ಚಾಪಕ್ಕಾಗುತ್ತದೆ. ಇಲ್ಲಿ ಲ = ಬಾಣ (ಚಾಪ ಹಾಗೂ ಜ್ಯಾಗಳ ನಡುವಿನ ಮಹತ್ತರ ದೂರ) ಮತ್ತು ಕ = ಜ್ಯಾ ಆಗಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



अत्रोद्देशकः

धनुराकारक्षेत्रे ज्या द्वादश षट् शरः काष्ठम्। न ज्ञायते सखे त्वं का जीवा कश्शरस्तस्य ॥ ७५ ½ ॥

मृदङ्गनिभक्षेत्रस्य च पणवाकारक्षेत्रस्य च वज्राकारक्षेत्रस्य च सूक्ष्मफलानयनसूत्रम् -

मुखगुणितायामफलं स्वधनुःफलसंयुतं मृदङ्गनिभे ।

तत्पणववज्रनिभयोर्धनुःफलोनं तयोरुभयोः ॥ ७६ ½ ॥

---

Atroddeśakaḥ

75½. Dhanurākārakṣetre jyā dvādaśa ṣaṭ śaraḥ kāṣṭam, na jñāyate sakhe tvaṁ kā jīvā kaśśarastasya.

Mṛdaṅganibhakṣetrasya ca paṇavākārakṣetrasya ca vajrākārakṣetrasya ca sūkṣmaphalānayanasūtram-

76½. Mukhaguṇitāyāmaphalaṁ svadhanuḥphalasaṁyutaṁ mṛdaṅganibhe, tatpaṇavavajranibhayordhanuḥphalonaṁ tayorubhayoḥ.

---

***An example in illustration thereof***

**75½.** In the case of a figure having the outline of a bow, the string-measure is 12 and the arrow-measure is 6. The measure of the bent stick is not known. You (find it out), O friend. (In the case of the same figure) what will be the string-measure (when the other quantities are known) and what its arrow-measure (when similarly the other requisite quantities are known)?

The rule for arriving at the minutely accurate result in relation to figures resembling a *Mṛdaṅga* and having the outline of a *Paṇava* and of a *Vajra :*

**76½.** To the resulting area, obtained by multiplying the (maximum) length with (the measure of the breadth of), the mouth, the value of the areas of its associated bow-shaped figures is added. The resulting sum gives the value of the area of a figure resembling (the longitudinal section of) a *Mṛdaṅga*. In the case of those two (other) figures which resemble (the longitudinal section of) the *Paṇava* and (of) the *Vajra*, that (same resulting area, which is obtained by multiplying the maximum length with the measure of the breadth of the mouth), is diminished by the measure of the areas of the associated bow-shaped figures. (The remainder gives required measure of the area concerned).

---

ಉದಾಹರಣೆಯಿಂದ ವಿಶ್ಲೇಷಣ

೭೫ ½. ಧನುಸ್ಸಿನಾಕಾರಾದ ಆಕೃತಿಯ ಹಗ್ಗವು ೧೨ ಮತ್ತು ಬಾಣವು ೬ ಆಗಿದೆ. ಬಾಗಿದ ಕಡ್ಡಿಯ ಅಳತೆಯು ಗೊತ್ತಿಲ್ಲ. ಎಲೈ ಸ್ನೇಹಿತನೇ, ಅದನ್ನು ನೀನು ಕಂಡುಹಿಡಿ. (ಅದೇ ಆಕೃತಿಯ ಸಂಬಂಧದಲ್ಲಿ ಹಗ್ಗದ ಅಳತೆಯೇನು ಮತ್ತು ಬಾಣದ ಅಳತೆಯೇನು? ಬೇರೆ ಎಲ್ಲಾ ಆವಶ್ಯಕ ಸಂಖ್ಯೆಗಳು ತಿಳಿದಿದ್ದಾಗ,)

*ಮೃದಂಗಾ*ಕಾರ, *ಪಣವಾ*ಕಾರ ಮತ್ತು *ವಜ್ರಾ*ಕಾರ ಆಕೃತಿಗಳ ಸಂಬಂಧದಲ್ಲಿ, ಸೂಕ್ಷ್ಮ ಫಲಗಳನ್ನು ಪಡೆಯಲು ನಿಯಮ :

೭೬ ½. ಮಹತ್ತರ ಉದ್ದವನ್ನು ಮುಖದ ಅಗಲದಿಂದ ಗುಣಿಸಿದರೆ ಬರುವ ಕ್ಷೇತ್ರಫಲಕ್ಕೆ, ಅದಕ್ಕೆ ಸಂಬಂಧಿಸಿದ ಧನುಸ್ಸಿನಾಕಾರದ ಆಕೃತಿಗಳ ಕ್ಷೇತ್ರಫಲಗಳ ಬೆಲೆಗಳನ್ನು ಸೇರಿಸುತ್ತೇವೆ. ಹೀಗೆ ಲಭಿಸಿದ ಮೊತ್ತವು *ಮೃದಂಗಾ*ಕಾರದ ಆಕೃತಿಯ ಕ್ಷೇತ್ರಫಲದ ಬೆಲೆಯಾಗಿರುತ್ತದೆ. *ಪಣವ* ಮತ್ತು *ವಜ್ರ*ದ ಆಕೃತಿಗಳ ಕ್ಷೇತ್ರಫಲಗಳನ್ನು ಪಡೆಯಲು ಮಹತ್ತರ ಉದ್ದ ಮತ್ತು ಮುಖದ ಅಗಲಗಳ ಗುಣಲಬ್ಧದಿಂದ ದೊರೆತ ಕ್ಷೇತ್ರಫಲವನ್ನು ಧನುಸ್ಸಿನಾಕೃತಿಯ ಸಂಬಂಧದ ಕ್ಷೇತ್ರಫಲಗಳ ಅಳತೆಗಳಿಂದ ಕಳೆಯುತ್ತೇವೆ. ಶೇಷವು ಬೇಕಾದ ಕ್ಷೇತ್ರಫಲವಾಗಿರುತ್ತದೆ.

---

**76½.** The rationale of the rule here given will be clear from the figures given in the note under stanza 32 above.

೭೬ ½. ಇಲ್ಲಿ ಕೊಟ್ಟಿರುವ ನಿಯಮದ ತತ್ವವು, ೩೨ ನೇ ಶ್ಲೋಕದ ಟಿಪ್ಪಣಿಯಲ್ಲಿ ಕೊಟ್ಟಿರುವ ಚಿತ್ರಗಳಿಂದ ಸ್ಪಷ್ಟವಾಗುತ್ತದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



## अत्रोद्देशकः

चतुर्विंशतिरायामो विस्तारोऽष्टौ मुखद्वये । क्षेत्रे मृदङ्गसंस्थाने मध्ये षोडश किं फलम् ॥ ७७$\frac{1}{2}$॥
चतुर्विंशतिरायामस्तथाष्टौ मुखयोर्द्वयोः । चत्वारो मध्यविष्कम्भः किं फलं पणवाकृतौ ॥ ७८$\frac{1}{2}$॥
चतुर्विंशतिरायामस्तथाष्टौ मुखयोर्द्वयोः । मध्ये सूचिस्तथाचक्ष्व वज्राकारस्य किं फलम् ॥ ७९$\frac{1}{2}$॥

---

## Atroddeśakaḥ

**77$\frac{1}{2}$.** Caturviṁśatirāyāmo vistāro'ṣṭau mukhadvaye, kṣetre mṛdaṅgasaṁsthāne madhye ṣoḍaśa kiṁ phalam.

**78$\frac{1}{2}$.** Caturviṁśatirāyāmastathāṣṭau mukhayordvayoḥ, catvāro madhyaviṣkambhaḥ kiṁ phalaṁ paṇavākṛtau.

**79$\frac{1}{2}$.** Caturviṁśatirāyāmastathāṣṭau mukhayordvayoḥ, madhye sūcistathācakṣva vajrākārasya kiṁ phalam.

---

## *Examples in illustration thereof*

**77$\frac{1}{2}$.** In the case of a figure having the outline configuration of a *Mṛdaṅga*, the (maximum) length is 24; the breadth of (each of) the two mouths is 8 and the (maximum) breadth in the middle is 16. What is the area?

**78$\frac{1}{2}$.** In the case of a figure having the outline of a *Paṇava*, the (maximum) length is 24; similarly the measure(of the breadth of either) of the two mouths is 8 and the central breadth is 4. What is the area?

**79$\frac{1}{2}$.** In the case of a figure having the outline of a *Vajra*, the (maximum) length is 24; the measure (of the breadth of either) of the two mouths is 8 and the centre is a point. Give out as before what the area is.

---

## ಉದಾಹರಣೆಗಳಿಂದ ವಿಶ್ಲೇಷಣ

೭೭$\frac{೧}{೨}$. *ಮೃದಂಗಾ*ಕಾರದ ಆಕೃತಿಯ ಸಂಬಂಧದಲ್ಲಿ ಮಹತ್ತರ ಉದ್ದವು ೨೪ ಇದೆ. ಎರಡು ಮುಖಗಳಲ್ಲಿ ಪ್ರತಿಯೊಂದು ಮುಖದ ಅಳತೆಯು ೮ ಇದೆ. ಮಧ್ಯದಲ್ಲಿ ಮಹತ್ತರ ಅಗಲವು ೧೬ ಇದೆ. ಕ್ಷೇತ್ರಫಲವೇನು?

೭೮$\frac{೧}{೨}$. *ಪಣವಾ*ಕೃತಿಯ ಸಂಬಂಧದಲ್ಲಿ ಮಹತ್ತರ ಉದ್ದವು ೨೪ ಇದೆ. ಇದೇ ರೀತಿ ಪ್ರತಿಯೊಂದು ಮುಖದ ಅಗಲವು ೮ ಮತ್ತು ಕೇಂದ್ರದಲ್ಲಿ ಅಗಲವು ೪ ಇದೆ. ಕ್ಷೇತ್ರಫಲವೇನು?

೭೯$\frac{೧}{೨}$. *ವಜ್ರಾ*ಕಾರದ ಆಕೃತಿಯ ಸಂಬಂಧದಲ್ಲಿ, ಮಹತ್ತರ ಉದ್ದವು ೨೪ ಇದೆ. ಎರಡು ಮುಖಗಳಲ್ಲಿ ಪ್ರತಿಯೊಂದು ಮುಖದ ಅಗಲವು ೮ ಇದೆ ಮತ್ತು ಕೇಂದ್ರವು ಕೇವಲ ಒಂದು ಬಿಂದುವಾಗಿದೆ. ಹಿಂದಿನಂತೆಯೇ, ಕ್ಷೇತ್ರಫಲವನ್ನು ತಿಳಿಸು.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



नेमिक्षेत्रस्य च बालेन्द्वाकारक्षेत्रस्य च इभदन्ताकारक्षेत्रस्य च सूक्ष्मफलानयनसूत्रम् -

पृष्ठोदरसंक्षेपः षड्भक्तो व्यासरूपसङ्गुणितः ।
दशमूलगुणो नेमेर्बालेन्द्विभदन्तयोश्च तस्यार्धम् ॥ ८० $\frac{1}{2}$ ॥

**अत्रोद्देशकः**

पृष्ठं चतुर्दशोदरमष्टौ नेम्याकृतौ भूमौ । मध्ये चत्वारि च तद्बालेन्दोः किमिभदन्तस्य ॥ ८१ $\frac{1}{2}$ ॥

---

Nemikṣetrasya ca bālendvākārakṣetrasya ca ibhadantākārakṣetrasya ca sūkṣmaphalānayanasūtram-

**80** $\frac{1}{2}$. Pṛṣṭodarasaṁkṣepaḥ ṣaḍbhakto vyāsarūpasaṅguṇitaḥ, daśamūlaguṇo nemerbālendvibhadantayośca tasyārdham.

**Atroddeśakaḥ**

**81** $\frac{1}{2}$. Pṛṣṭaṁ caturdaśodaramaṣṭau nemyākṛtau bhūmau, madhye catvāri ca tadbālendoḥ kimibhadantasya.

---

The rule for arriving at the minutely accurate value of the areas of figures resembling (the annulus making up) the rim of a wheel, (resembling) the crescent moon and the (longitudinal) section of the tusk of an elephant :

**80** $\frac{1}{2}$**.** In the case of (a circular annulus resembling) the rim of a wheel, the sum of the measures of the inner and the outer curves is divided by 6, multiplied by the measure of the breadth of the annulus and again multiplied by the square root of 10. (The result gives the value of the required area). Half of this is the (required) value of the area in the case of figures resembling the crescent moon or (the longitudinal section of) the tusk of an elephant.

***Examples in illustration thereof***

**81** $\frac{1}{2}$**.** In the case of a field resembling (the circular annulus forming) the rim of a wheel, the outer curve is 14 in measure and the inner 8 and the (breadth in the) middle is 4. (What is the area?) What is it in the case of a figure resembling the crescent moon and in the case of a figure resembling (the longitudinal section of) the tusk of an elephant (the measures requisite for calculation being the same as above)?

---

ನೇಮಿಕ್ಷೇತ್ರ ಮತ್ತು ಬಾಲಚಂದ್ರನನ್ನು ಹೋಲುವ ಕ್ಷೇತ್ರದ (ಆನೆಯ ದಂತದ ಉದ್ದ ಛೇದದಾಕೃತಿಯ) ಸೂಕ್ಷ್ಮಕ್ಷೇತ್ರಫಲಗಳನ್ನು ಪಡೆಯಲು ನಿಯಮ :

೮೦ $\frac{೧}{೨}$. ನೇಮಿಕ್ಷೇತ್ರದ ಸಂಬಂಧದಲ್ಲಿ ಒಳ ಮತ್ತು ಹೊರವಕ್ರಗಳ ಅಳತೆಗಳ ಮೊತ್ತವನ್ನು ೬ ರಿಂದ ಭಾಗಿಸುತ್ತೇವೆ. ಇದನ್ನು ಉಂಗುರದ ಅಗಲದಿಂದ ಗುಣಿಸಿ ಮತ್ತೆ ೧೦ ರ ವರ್ಗಮೂಲದಿಂದ ಗುಣಿಸುತ್ತೇವೆ. ಫಲವು ಬೇಕಾದ ಕ್ಷೇತ್ರಫಲವಾಗಿರುತ್ತದೆ. ಇದರ ಅರ್ಧಭಾಗವು ಬಾಲಚಂದ್ರನಿಗೆ ಹೋಲುವ ಕ್ಷೇತ್ರದ ಅಥವಾ ಆನೆಯ ದಂತದ ಉದ್ದ ಛೇದದಾಕೃತಿಯ ಕ್ಷೇತ್ರಫಲವಾಗಿರುತ್ತದೆ.

**ಉದಾಹರಣೆಗಳಿಂದ ವಿಶ್ಲೇಷಣ**

೮೧ $\frac{೧}{೨}$. ನೇಮಿಕ್ಷೇತ್ರದ ಸಂಬಂಧದಲ್ಲಿ ಹೊರವಕ್ರವು ೧೪ ಇದೆ ಮತ್ತು ಒಳ ವಕ್ರವು ೮ ಇದೆ ಮತ್ತು ಮಧ್ಯದಲ್ಲಿ ಅಗಲವು ೪ ಇದೆ. ಕ್ಷೇತ್ರಫಲವೇನು? (ಲೆಕ್ಕಾಚಾರಕ್ಕೆ ಅವಶ್ಯಕವಾದ ಎಲ್ಲ ಅಳತೆಗಳೂ ಮೇಲಿನಂತೆಯೇ ಇರುವಾಗ) ಬಾಲಚಂದ್ರನಿಗೆ ಹೋಲುವ ಕ್ಷೇತ್ರದ ಆನೆಯ ದಂತದ ಉದ್ದ ಛೇದದಾಕೃತಿಗಳ ಕ್ಷೇತ್ರಫಲಗಳು ಏನಾಗುತ್ತವೆ?



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



**80½.** The rule given for the area of an annulus, if expressed algebraically, comes to be $\frac{a_1 + a_2}{6} \times p \times \sqrt{10}$, where $a_1$ and $a_2$ are the measures of the two circumferences and $p$ is the measure of the breadth of the annulus. On a comparison of this value of the area of the annulus with the approximate value of the same as given in stanza 7 above (vide note thereunder), it will be evident that the formula here does not give the accurate value, the value mentioned in the rule in stanza 7 being itself the accurate value. The mistake seems to have arisen from a wrong notion that in the determination of the value of this area, π is involved even otherwise than in the values of $a_1$ and $a_2$.

೮೦ $\frac{೧}{೨}$. ಉಂಗುರದ ಕ್ಷೇತ್ರಫಲಕ್ಕಾಗಿ ಇಲ್ಲಿ ಕೊಟ್ಟಿರುವ ನಿಯಮವು, ಬೀಜಗಣಿತರೂಪದಲ್ಲಿ ನಿರೂಪಿಸಿದರೆ ಈ ರೀತಿ ಆಗುತ್ತದೆ : $\frac{ಪ_೧ + ಪ_೨}{೬} \times ಲ\sqrt{೧೦}$, ಇಲ್ಲಿ ಪ೧, ಪ೨ ಗಳು ಎರಡು ಪರಿಧಿಗಳ ಅಳತೆಯಾಗಿವೆ ಮತ್ತು ಲ ವು ನೇಮಿಕ್ಷೇತ್ರದ ಅಗಲವಾಗಿದೆ. ಈ ನೇಮಿಕ್ಷೇತ್ರದ ಕ್ಷೇತ್ರಫಲವನ್ನು ೭ ನೇ ಶ್ಲೋಕದ ಟಿಪ್ಪಣಿಯಲ್ಲಿ ತಿಳಿಸಿರುವ ಅಂದಾಜು ಬೆಲೆಗೆ ಹೋಲಿಸಿ ನೋಡಿದಾಗ, ಇಲ್ಲಿನ ಸೂತ್ರವು ಕರಾರುವಾಕ್ಕಾದ ಬೆಲೆಯನ್ನು ಕೊಡುವುದಿಲ್ಲವೆಂದೂ, ೭ ನೇ ಶ್ಲೋಕದ ನಿಯಮದಲ್ಲಿ ತಿಳಿಸಿರುವ ಬೆಲೆಯೇ ಕರಾರುವಾಕ್ಕಾಗಿದೆಯೆಂದೂ ಸ್ಪಷ್ಟವಾಗುತ್ತದೆ. ಈ ಕ್ಷೇತ್ರಫಲದ ಬೆಲೆಯನ್ನು ಕಂಡುಹಿಡಿಯುವಾಗ, ಪ೧ ಮತ್ತು ಪ೨ ಗಳ ಬೆಲೆಗಳಿಗಿಂತ, ಇಲ್ಲಿ ಉಪಯೋಗಿಸಿರುವ π ನ ಬೆಲೆಯ ದೋಷದಿಂದ, ಈ ತಪ್ಪು ಕಂಡುಬರುತ್ತಿದೆ.



CC-0. Gurukul Kangri Collection, Haridwar

Digitized by Arya Samaj Foundation Chennai and eGangotri



चतुर्मण्डलमध्यस्थितक्षेत्रस्य सूक्ष्मफलानयनसूत्रम् -

विष्कम्भवर्गराशेर्वृत्तस्यैकस्य सूक्ष्मफलम् । त्यक्त्वा समवृत्तानामन्तरजफलं चतुर्णां स्यात् ॥ ८२$\frac{1}{2}$॥

**अत्रोद्देशकः**

गोलकचतुष्टयस्य हि परस्परस्पर्शकस्य मध्यस्य ।

सूक्ष्मं गणितं किं स्याच्चतुष्कविष्कम्भयुक्तस्य ॥ ८३$\frac{1}{2}$॥

---

Caturmaṇḍalamadhyasthitakṣetrasya sūkṣmaphalānayanasūtram-

